# ಪಶುರೋಗಸಂಬಂಧದ ಜಾಗ್ರತಿ.

ಲೇಖಕರು

[illegible]

ಗ್ರಂಥ [illegible]

[illegible]

ನವಜೀವನ ಗ್ರಂಥ ಭಾಂಡಾರ ಗ್ರಂಥ ೫.

# ಏಷಿಯಾಖಂಡದ ಜಾಗೃತಿ.

ಶ್ರೀ. ಸಾಂ. ಅ. ರಾಮಸ್ವಾಮಿ ಅಯ್ಯಂಗಾರ್ಯ,

ಎಂ. ಎ., ಬಿ. ಎಲ್., ಅಡ್ವೋಕೇಟ್,

ಮೈಸೂರು.

ಸಂಪಾದಕರು ಮತ್ತು ಪ್ರಕಾಶಕರು

ಶ್ರೀ. ಆಲೂರ ವೆಂಕಟರಾಯರು, ಬಿ. ಎ. ಎಲ್‌ಎಲ್. ಬಿ.

ಧಾರವಾಡ

(ಧಾರವಾಡ ನವಜೀವನ ಸಂಘದ ಪರವಾಗಿ).

ಬೆಲೆ ೧ ರೂ. ] [ ೧೯೨೭.

ಇದರ ಎಲ್ಲ ಹಕ್ಕು ಬಾಧ್ಯತೆಗಳು
ಶ್ರೀ. ಆಲೂರ ವೆಂಕಟರಾಯರಿಗೆ ಸೇರಿವೆ.

ಮುದ್ರಕರು :—ಶ್ರೀ. ವೆಂಕಟೇಶ ಮಾಧವ ಜೋಶಿ.

ಮುದ್ರಣಸ್ಥಳ :—ವಸಂತ ಮುದ್ರಣಾಲಯ, ಧಾರವಾಡ.

ಪ್ರಕಾಶಕರು :—ಶ್ರೀ. ಆಲೂರ ವೆಂಕಟರಾಯರು.

ಪ್ರಕಾಶಸ್ಥಳ :—ನವಜೀವನ ಗ್ರಂಥಭಾಂಡಾರ, ಧಾರವಾಡ.

## ೪ನೆಯ ಗ್ರಂಥ ಖಾದಿಶಾಸ್ತ್ರ ಮತ್ತು ೫ನೆಯ ಗ್ರಂಥ ಏಷಿಯಾಖಂಡದ ಜಾಗ್ರತಿ ಇವುಗಳ ಬಗ್ಗೆ

# ಸಂಪಾದಕರ ಮುನ್ನುಡಿ.

ನವಜೀವನ ಗ್ರಂಥಭಾಂಡಾರದ ಮೊದಲಿನ ಮೂರು ಗ್ರಂಥಗಳು ಹೊರಬಿದ್ದಬಳಿಕ ಮುಂದಿನ ಗ್ರಂಥಗಳು ಇದುವರೆಗೂ ಹೊರಡದಿರುವದನ್ನು ನೋಡಿ ನಮ್ಮ ಚಂದಾದಾರರು ನಮ್ಮನ್ನು ಪರಿಪರಿಯಾಗಿ ದೂಷಿಸುತ್ತಿರುವದು ಸಹಜವಿದೆ. ಆದರೆ, ಈ ಮಧ್ಯಂತರದಲ್ಲಿ ನಮಗೊದಗಿದ ಅಪರಿಹಾರ್ಯವಾದ ತೊಂದರೆಗಳು ಅವರಿಗೆ ಗೊತ್ತಾದರೆ ಅವರು ನಮ್ಮನ್ನು ಮನಃಪೂರ್ವಕವಾಗಿ ಕ್ಷಮಿಸುವರೆಂದು ನಮಗೆ ಭರವಸವುಂಟು. ಮೂರು ಗ್ರಂಥಗಳು ಮುದ್ರಿತವಾದ ಬಳಿಕ ೪ನೆಯ ಗ್ರಂಥವಾದ ಖಾದಿಶಾಸ್ತ್ರವನ್ನು ಮುದ್ರಿಸಲಿಕ್ಕೆ ಕೊಟ್ಟೆವು. ಗ್ರಂಥವು ಅರ್ಧ ಮುದ್ರಿತವಾಗಿತ್ತು. ಇಷ್ಟರಲ್ಲಿ ಒಂದು ದಿವಸ ಅಕಸ್ಮಾತವಾಗಿ, ಅದು ಮುದ್ರಿತವಾಗುತ್ತಿರುವ ವಿಜಯ ಮುದ್ರಣಾಲಯಕ್ಕೆ ಆರ್ಡಿನನ್ಸ ಪ್ರಕಾರ ಬೀಗಮೋಹರುಗಳು ಬಿದ್ದವು. ಆಯಿತು; ನಮ್ಮ ಕೆಲಸವು ಅಲ್ಲಿಗೇ ನಿಂತಿತು. ವಿಜಯ ಮುದ್ರಣಾಲಯಕ್ಕೊದಗಿದ ಆ ಗ್ರಹಣವು ತೀವ್ರ ದೂರಾಗಬಹುದೆಂದು ದಾರಿ ನೋಡಿದ್ದಾಯಿತು. ಆದರೆ ಅದು ದೂರಾಗಲಿಲ್ಲ. ಆಗ ಹೊಸದೊಂದು ಮುದ್ರಣಾಲಯವನ್ನು ಹುಡುಕಿದೆವು. ವಸಂತ ಮುದ್ರಣಾಲಯದವರು ಮುದ್ರಿಸಿಕೊಡುವದಕ್ಕೆ ಒಪ್ಪಿಕೊಂಡರು. ಕೆಲಸವು ಪುನಃ ಪ್ರಾರಂಭವಾಯಿತು. ಆದರೆ, ಅಷ್ಟರಲ್ಲಿ ಅಂದರೆ ಈಗ ೭-೮ ತಿಂಗಳ ಹಿಂದೆ ಒಂದು ದಿವಸ ಅಕಸ್ಮಾತವಾಗಿ ನಾವೂ ಆರ್ಡಿನನ್ಸ ಪ್ರಕಾರ ಹಿಡಿಯಲ್ಪಟ್ಟು ಈಗ ಕಲಘಟಗಿಯ ಸೆರೆಮನೆಯಲ್ಲಿ ಕೆಲವು ನಿರ್ಬಂಧಗಳಿಗೊಳಪಟ್ಟು ಇಡಲ್ಪಟ್ಟಿರುವೆವು. ಈ ಗ್ರಾಮ ಬಿಟ್ಟು ಅಗಲಲಿಕ್ಕೆ ನಿರ್ಬಂಧ; ಪತ್ರವ್ಯವಹಾರ ಮಾಡುವುದಕ್ಕೆ ತೊಂದರೆ. ಹೀಗಾಗಿ ನವಜೀವನ ಗ್ರಂಥಭಾಂಡಾರದ ಕೆಲಸಕ್ಕೆ ದೊಡ್ಡ ವಿಘ್ನವುಂಟಾಯಿತು. ಆದರೂ ನಾವು ಶಕ್ಯವಾದಷ್ಟು ಅದನ್ನು ಮುಂದೆ

ಸಾಗಿಸುವುದಕ್ಕೆ ಪ್ರಯತ್ನ ಮಾಡಿದ್ದರಿಂದ ಈಗ ಎರಡು ಗ್ರಂಥಗಳು ಹೊರಬೀಳಲಿಕ್ಕೆ ಅವಕಾಶವಾಗಿದೆ. ೩ನೆಯ ಗ್ರಂಥವೂ ಶೀಘ್ರ ಹೊರಡುವದು. ಚಂದಾದಾರರಿಗೆ ಕಳಿಸಲಿಕ್ಕೆ ನಮಗೆ ವೇಳೆ ಇರದ್ದರಿಂದ ಇಷ್ಟು ದಿವಸ ಮೌನ ತಾಳಿದ್ದೆವು. ಈಗ ಪುನಃ ತಲೆಯೆತ್ತಲಿಕ್ಕೆ ಧೈರ್ಯವುಂಟಾಗಿದೆ. ಮೊದಲಿನ ವರ್ಷದ ಮುಕ್ಕ ಮೂರೂ ಗ್ರಂಥಗಳನ್ನು ಚಂದಾದಾರರಿಗೆ ಮುಟ್ಟಿಸಿ, ಅವರ ಋಣದಿಂದ ಮುಕ್ತರಾಗುವುದು ನಮ್ಮ ಎಲ್ಲಕ್ಕೂ ಮೊದಲಿನ ಕೆಲಸ.

**ಮುಂದಿನ ವ್ಯವಸ್ಥೆ**:—ನವಜೀವನ ಗ್ರಂಥಭಾಂಡಾರದ ಮುಂದಿನ ಗತಿಯೇನೆಂದು ಕನ್ನಡಿಗರು ಕೇಳುವುದು ಸ್ವಾಭಾವಿಕವಿದೆ. ಆದರೆ ಈಗಿನ ನಮ್ಮ ಸ್ಥಿತಿಯಲ್ಲಿ ಸಮರ್ಪಕವಾದ ಉತ್ತರ ಕೊಡುವುದೂ ಕಠಿಣ ಕೆಲಸ. ಏಕೆಂದರೆ, ಮೂರು-ನಾಲ್ಕು ವರ್ಷಗಳ ಹಿಂದೆ, ಸಾವಿರಾರು ರೂಪಾಯಿ ಸಾಲ ಮಾಡಿ ಈ ಸಾಹಸದ ಕಾರ್ಯಕ್ಕೆ ನಾವು ಕೈಹಾಕಿದ್ದು. ಸಾಲವು ಬೆಳೆದಾಗ, ಕೆಲವು ಮಿತ್ರರ ಸಹಾಯಾಶ್ರಯದಿಂದ ಅಂತೂ ಇಂತೂ ಮೊದಲಿನ ವರ್ಷದ ಆರು ಗ್ರಂಥಗಳನ್ನು ಈಗ ಪೂರ್ಣ ಮುಗಿಸಿದ್ದು, ಈಗಲೂ ಈ ಸೆರೆಯೊಳಲ್ಲಿ ಸಿಕ್ಕುಬಿದ್ದಿರುವೆವು. ಅಂದಬಳಿಕ ಮುಂದಿನದನ್ನು ಹೇಳುವುದು ಹೇಗೆ? ಸಾಲವು ಮಿತಿಮೀರಿ ಬೆಳೆಯುತ್ತಿದೆ; ಮತ್ತು ಇನ್ನು ಮೇಲೆ ಮಿತ್ರರಿಗೆ ಹಣದ ಸಲುವಾಗಿ ತೊಂದರೆ ಕೊಡಲು ನಾವು ಇಚ್ಛಿಸುವದಿಲ್ಲ. ಅಲ್ಲದೆ, ಚಂದಾದಾರರಿಂದ ಮುಂಗಡ ಹಣವನ್ನು ತೆಗೆದುಕೊಂಡು ಅವರನ್ನು ಸಂದೇಹಸ್ಥಿತಿಯಲ್ಲಿಡುವುದಕ್ಕೂ ನಮ್ಮ ಮನಸ್ಸು ಹಿಂಜರಿಯುತ್ತದೆ. **ಆದಕಾರಣ, ಕನ್ನಡಿಗರೆಲ್ಲರೂ ನಮಗೆ ಧೈರ್ಯ ಕೊಟ್ಟರೆ, ಆರು ತಿಂಗಳಿಗೆ ಒಮ್ಮೆಲೆ ಮೂರು ಗ್ರಂಥಗಳನ್ನು ಹೊರಡಿಸಿ, ಈ ಗ್ರಂಥಮಾಲೆಯನ್ನು ಮುಂದುವರಿಸುವ ಯೋಜನೆಯುಂಟು.**

**ಕನ್ನಡಿಗರ ಸಹಾಯ**:—ಈಗ ಆರು ಗ್ರಂಥಗಳು ಕನ್ನಡಿಗರ ಕಣ್ಣು ಮುಂದೆ ಇರುವವು. ಈ ಮಾದರಿಯ ಗ್ರಂಥಗಳ ಕೊರತೆಯು ಕನ್ನಡಭಾಷೆಗೆ ಉಂಟೆಂದು ಕನ್ನಡಿಗರ ಅಭಿಪ್ರಾಯವಿದ್ದರೆ, ಅವರು ನಮಗೆ

ಸಾಧ್ಯವಾದಷ್ಟು ಸರ್ವ ರೀತಿಯಿಂದಲೂ ಸಹಾಯ ಮಾಡಬೇಕು. “ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾಃ” ಎಂಬಂತೆ ನಮ್ಮ ಈ ಮೊದಲ ಪ್ರಯತ್ನಗಳಲ್ಲಿ ದೋಷಗಳಿಲ್ಲವೆಂತಿಲ್ಲ. ಆದರೆ ಕನ್ನಡಿಗರು ಅವುಗಳನ್ನು ದೂರ ಮಾಡುವ ಬಗ್ಗೆ ನಮಗೆ ಸಲಹೆ ಕೊಟ್ಟು ದೂರಮಾಡಿಸಿಕೊಳ್ಳಬೇಕು. ಮೊದಲ್ನುಡಿಗಳೆಲ್ಲವೂ ತೊದಲ್ನುಡಿಗಳೇ. ಕನ್ನಡಿಗರು ಕೊಟ್ಟ ಸಲಹೆಗಳನ್ನು ಶಕ್ಯವಾದ ಮಟ್ಟಿಗೆ ವ್ಯವಹಾರದಲ್ಲಿ ತರಲು ಪ್ರಯತ್ನಿಸುತ್ತೇವೆಂದು ನಾವು ಆಶ್ವಾಸನ ಕೊಡುತ್ತೇವೆ.

ಈ ಅವಧಿಯಲ್ಲಿ ನಮ್ಮ ಮಿತ್ರರಾದ ಶ್ರೀ. ನಾರಾಯಣರಾವ **ಲೋಕೂರ,** ಬಿ. ಎ., ಎಲ್. ಎಲ್., ಬಿ. ಡಿಸ್ಟ್ರಿಕ್ಟ ಜಜ್ಜ, ಅಹಮ್ಮದಾಬಾದ, **ಇವರು** ೧೫೦ ರೂಪಾಯಿಗಳನ್ನು ಕಳಿಸಿಯೂ ಮತ್ತು ನಮ್ಮ ಮಿತ್ರರಾದ ಶ್ರೀ. ವಿಶ್ವನಾಥರಾವ **ಜೋಗ,** ಬಿ. ಎ., ಎಲ್. ಎಲ್., ಬಿ. ಎಮ್. ಎಲ್. ಸಿ., ವಕೀಲ, ಧಾರವಾಡ, ಇವರು ಒಂದುನೂರು ರೂಪಾಯಿಗಳನ್ನು ಕೊಟ್ಟು ನವಜೀವನ ಗ್ರಂಥಭಾಂಡಾರಕ್ಕೆ ಸಹಾಯ ಮಾಡಿದುದಕ್ಕಾಗಿ ನಾವು ಅಂತಃಕರಣಪೂರ್ವಕವಾಗಿ ಅವರ ಉಪಕಾರವನ್ನು ಸ್ಮರಿಸುತ್ತೇವೆ.

ಅದೇ ಮೇರೆಗೆ ಈ ಗ್ರಂಥಗಳನ್ನು ಬರೆದುಕೊಟ್ಟ ಗ್ರಂಥಕರ್ತರಿಗೂ ಮುದ್ರಿಸಿ ಕೊಟ್ಟ ಮುದ್ರಕರಿಗೂ ನಮ್ಮ ಮನಃಪೂರ್ವಕವಾದ ವಂದನೆಗಳು.

**ಶಿಂಘಟಿಗಿ.**
೨೭—೩—೧೯೨೩.

**ಆಲೂರ ವೆಂಕಟರಾಯ,**
ಸಂಪಾದಕ,
ನವಜೀವನ ಗ್ರಂಥಭಾಂಡಾರ.

# ಪೀಠಿಕೆ.

ಏಷಿಯಾ ದೇಶೀಯರಾದ ನಮ್ಮಲ್ಲಿ ಬಹುಮಂದಿಗೆ ಯೂರೋಪು ಅಮೇರಿಕಾಖಂಡಗಳಿಗಿಂತಲೂ ನಮ್ಮ ಖಂಡದ ಸ್ಥಿತಿಗತಿ ಇತಿಹಾಸಗಳು ಅಧಿಕ ಅಪರಿಚಿತವಾಗಿವೆ. ಈ ಕೊರತೆಯನ್ನು ನೀಗಿಸಲು ಈ ಸಣ್ಣ ಗ್ರಂಥವು ಸ್ವಲ್ಪ ದೂರ ಪ್ರಯತ್ನಿಸಿದೆ. ಇದರ ಪ್ರತಿಯೊಂದು ಅಧ್ಯಾಯವನ್ನೂ ಒಂದೊಂದು ದೊಡ್ಡ ಗ್ರಂಥವಾಗಿ ವಿಸ್ತರಿಸಲು ಸಾಧ್ಯ. ಆದರೂ ಮುಖ್ಯಮುಖ್ಯವಾದ ವಿಷಯಗಳಾವುವನ್ನೂ ಬಿಡದೆ ಒಂದು ಪೂರ್ಣ ಚಿತ್ರವನ್ನು ವಾಚಕರ ಮುಂದಿಡಲು ಸಾಹಸಪಡಲಾಗಿದೆ.

ಗ್ರಂಥದಲ್ಲಿ ಅಂಗೀಕರಿಸಲ್ಪಟ್ಟಿರುವ ಅಪರೂಪವಾದ ಉಚ್ಚಾರಣಾ ಕ್ರಮದ ಕಾರಣವನ್ನು ಒಂದು ಪಂಕ್ತಿಯು ಸ್ವಲ್ಪಮಟ್ಟಿಗೆ ಹೊರಪಡಿಸುವುದು. ಪರಕೀಯ ನಾಮಗಳನ್ನು ನಾವು ಪರಿಗ್ರಹಿಸುವಾಗ ಅವುಗಳ ಇಂಗ್ಲಿಷು ರೂಪಾಂತರಗಳಿಗಿಂತಲೂ ಮೂಲರೂಪದಿಂದ ಉಚ್ಚಾರಣಾ ರೂಪವನ್ನು ನಾವು ಉದ್ಧರಿಸಿಕೊಳ್ಳುವುದು ಉತ್ತಮ. ಉದಾಹರಣೆಗಾಗಿ, ಫಲೆಸ್ತಿ ಎಂಬ ಹೆಸರು ಪ್ಯಾಲೆಸ್ಟೈನ್ ಎಂದಾಗಿದೆ. ಮೂಲರೂಪವು ನಮ್ಮ ಭಾಷೆಯ ಉಚ್ಚಾರಕ್ಕೆ ಇಂಗ್ಲಿಷ ರೂಪಕ್ಕಿಂತಲೂ ಹೆಚ್ಚು ಯೋಗ್ಯವಾಗಿದೆ. ಈಜಿಪ್ಟ್ ಎಂಬುದರಿಂದ ಐಗುಪ್ತ ಎಂದು ಕಲ್ಪಿಸಿಕೊಳ್ಳುವದಕ್ಕಿಂತಲೂ ಮೂಲರೂಪವಾದ ಹಿಕ-ಪ್ತ ಎಂಬುದರಿಂದ ಈಗುಪ್ತ ಎಂದು ಉಚ್ಚರಿಸಿಕೊಳ್ಳುವುದು ಉತ್ತಮ. ತಿರುವಾಂಕೂರು ಎಂಬ ಮೂಲರೂಪವನ್ನರಿಯದೆ ಕೆಲವರು ಅದರ ಇಂಗ್ಲಿಷ ರೂಪಾಂತರವಾದ ಟ್ರಾವನ್ ಕೋರ್ ಎಂಬುದರಿಂದ ಟ್ರಾವಣಕೋರ ಎಂದು ಉದ್ಧರಿಸುವರು ! ಕ್ರಿಸ್ಟಸ್ ಎಂಬ ಪದವೂ ಕೃಷ್ಣ ಎಂಬ ಪದವೂ ರೂಪಾಂತರಗಳೆಂದು ಅನೇಕರು ವಾದಿಸುತ್ತಿರುವರು. ಈ ಭಾವವನ್ನು ತಡೆಯಬೇಕಾದರೆ ಮೊದಲನೆಯ ಪದವನ್ನು ಕ್ರಿಸ್ತ ಎಂದು ಬರೆಯುವುದಕ್ಕೆ ಪ್ರತಿಯಾಗಿ ಕ್ರಸ್ತ ಎಂದು ಬರೆಯುವುದು ಉತ್ತಮ. ಚೀಣ ಎಂದು ಸಂಸ್ಕೃತದ ಹೆಸರು ಇರುವಾಗ ಚೈನಾ

ಎಂಬ ಇಂಗ್ಲಿಷ ದೂಷಣವು ಬೇಕಿಲ್ಲ. ಈ ಉಚ್ಚಾರಣಾ ದೋಷಗಳನ್ನು ಕುರಿತು ನಾಮನಿಘಂಟು ಎಂಬ ಸಣ್ಣ ಗ್ರಂಥವನ್ನು ಬರೆಯಬೇಕೆಂದು ಈ ಲೇಖಕನು ಆಶಿಸಿರುವನು.

ಈ ಪುಸ್ತಕವನ್ನು ಬರೆದಂದಿನಿಂದೀಚೆಗೆ ಏಷಿಯಾಖಂಡದಲ್ಲಿ ನಡೆದಿರುವ ಘಟನಾವಳಿಗಳನ್ನು ಪತ್ರಿಕೆಗಳು ತಿಳಿಸುತ್ತವೆ. ಅವುಗಳಲ್ಲಿ ಅತಿ ಮುಖ್ಯ ಸಂಗತಿಗಳಾವುವೆಂದರೆ--(೧) ಜಪಾನವು ಮಂಚೂರಿಯವನ್ನು ಚೀನಾ ದಿಂದ ಸ್ವತಂತ್ರ ರಾಜ್ಯವೆಂದು ತನ್ನ ಆಶ್ರಯದಲ್ಲಿ ಸ್ಥಾಪಿಸಿರುವದು. ಇದರ ಗಡಿಯಲ್ಲಿರುವ ಉತ್ತರಚೀನಾ ಪ್ರಾಂತ್ಯವನ್ನು ಈಚೆಗೆ ಜಹೋಲ ಕಣಿವೆವರೆಗೂ ಜಯಿಸಿ ಮಂಗೋಲದೇಶದ ಕಡೆಗೆ ಆಕ್ರಮಿಸುವದು. (೨) ಇರಾಕ ದೇಶವು ಸರ್ವಜನಾಂಗಮಂಡಲಿಯ ಸ್ವತಂತ್ರ ಸದಸ್ಯತ್ವವನ್ನು ಪಡೆದಿದೆ. ಆದರೆ ಬ್ರಿಟಿಷರ ಆಧಿಪತ್ಯವು ಇದರಿಂದ ಕೊನೆಗಂಡಿಲ್ಲ. (೩) ಇರಾಣರು ತಮ್ಮಿಂದ ಬ್ರಿಟಿಷರು ಹಿಂದೆ ಪಡೆದುಕೊಂಡಿದ್ದ ಪೆಟ್ರೋಲ ಕೈಗಾರಿಕೆಯ ಗುತ್ತಿಗೆಯನ್ನು ನಿವರ್ತಿಸಿ ಸುಖಾಗಲಿಕ್ಕೆ ಹೆಚ್ಚಿರುವದು.

ಈ ಗ್ರಂಥವು ಏಷಿಯಾಖಂಡದ ವಿಷಯದಲ್ಲಿ ಉತ್ತರೋತ್ತರವಾಗಿ ವ್ಯಾಸಂಗ ಮಾಡುವಂತೆ ವಾಚಕರಿಗೆ ಅಭಿರುಚಿ ಹುಟ್ಟಿಸಲು ಸಹಕಾರಿ ಯಾದರೆ ಗ್ರಂಥಕರ್ತನಿಗೆ ಸಾರ್ಥಕವಾಗುವದು.

ಮೈಸೂರು.
೧೪—೬—೧೯೩೩. }

ಮ. ಆ. ದೊರೆಸ್ವಾಮಿ ಅಯ್ಯಂಗಾರ್ಯ.

# ಅನುಕ್ರಮಣಿಕೆ.


| ಅಧ್ಯಾಯ. | ವಿಷಯ. | ಪುಟ. |
|---|---|---|
| ೧. | ಏಷಿಯಾಖಂಡದ ಸಮಸ್ಯೆ. | ೧—೬ |
| ೨. | ಏಷಿಯದ ಜಾಗೃತಿಯ ಅಂಕುರಗಳು. | ೬—೧೯ |
| ೩. | ವಿವಿಧ ಜನಮಂಡಲ ಸಂಪತ್ತು ಚಳವಳಿಗಳು. | ೧೯—೩೭ |
| ೪. | ಚೀನರ ನವಚೈತನ್ಯ ಶಕ್ತಿ. | ೩೭—೪೯ |
| ೫. | ಜಪಾನದ ಅಭ್ಯುದಯ. | ೪೯—೫೫ |
| ೬. | ಪೂರ್ವಖಂಡ. (ಸಯಾಮ, ಬರ್ಮಾ, ಚೀನ, ಮಂಗೋಲಿಯಾ, ಮಂಚೂರಿಯ, ಟಿಬೆಟ, ಕೊರಿಯ). | ೫೬—೬೬ |
| ೭. | ತುರಾಣ ಪ್ರದೇಶ. (ರಷ್ಯಾಧೀನ ತುರ್ಕಸ್ಥಾನ, ಉಸ್ಮಾನಿ ತುರ್ಕ ರಾಜ್ಯ). | ೬೬—೭೭ |
| ೮. | ಇಸ್ಲಾಮಿಕ ಜಗತ್ತು. (ಅರೇಬಿಯಾ, ಅಫಘಾನಿಸ್ಥಾನ, ಇರಾಕ, ಸಿರಿಯಾ, ಪ್ಯಾಲೆಸ್ತೈನ). | ೭೭—೯೭ |
| ೯. | ಆರ್ಯಲೋಕ. (ಪರ್ಶಿಯಾ, ಇರಾಣ). | ೯೭—೧೦೪ |
| ೧೦. | ಭಾರತದ ಸ್ವರಾಜ್ಯಸಾಧನೆ. | ೧೦೪—೧೦೮ |

ಪರಿಶಿಷ್ಟ.

| | | |
|---|---|---|
| ೧. | ನಾಮನಿರ್ದೇಶ. | ೧೧೩—೧೧೭ |
| ೨. | ಆಧಾರ ಗ್ರಂಥಗಳು. | ೧೧೮ |

# ಏಷಿಯಾ ಖಂಡದ ಜಾಗೃತಿ.

## ೧ ನೆಯ ಅಧ್ಯಾಯ

### ಏಷಿಯಾ ಖಂಡದ ಸಮಸ್ಯೆ

ಏಷಿಯಾ ಮಹಾಖಂಡವು ಯೂರೋಪಿಗಿಂತ ಐದರಷ್ಟು ವಿಸ್ತೀರ್ಣವನ್ನೂ ಎರಡರಷ್ಟು ಜನಸಂಖ್ಯೆಯನ್ನೂ ಪಡೆದಿದೆ. ವಾಸಕ್ಕೆ ಅಯೋಗ್ಯವಾಗಿರುವ ಇದರ ಶೀತಪ್ರದೇಶವನ್ನೂ ಮರುಭೂಮಿಯನ್ನೂ ಪರ್ವತಸಾಲೆಗಳನ್ನೂ ಬಿಟ್ಟರೆ, ನಾಗರಿಕತೆಗೆ ಕ್ಷೇತ್ರವಾಗಬಹುದಾದ ಪ್ರದೇಶವು ಏಷಿಯಾದಲ್ಲಿ ಯೂರೋಪುಖಂಡದಷ್ಟು ಮಾತ್ರವೇ ವಿಸ್ತಾರವುಳ್ಳದ್ದಾಗಿರುವುದು.

ಮನುಷ್ಯಜಾತಿಯೂ ನಾಗರಿಕತೆಯೂ ಮತಧರ್ಮಗಳೂ ಏಷಿಯಾ ಖಂಡದಲ್ಲಿ ಹುಟ್ಟಿ ಲೋಕದ ಇತರ ಭಾಗಗಳಿಗೆ ಹರಡಿದವು. ನಾಗರಿಕತೆಯು ತರಂಗತರಂಗವಾಗಿ ಏಷಿಯದಿಂದ ಯೂರೋಪಿಗೆ ಪ್ರವೇಶಿಸಿರುವುದು. ಮನುಷ್ಯನ ಚರಿತ್ರೆಯು ಏಷಿಯದಲ್ಲಿ ಆರಂಭಿಸುವುದು. ಯೂರೋಪಿನ ನಾಗರಿಕತೆಗೂ ಆರ್ಯಭಾಷೆಗಳಿಗೂ ಗೌರವರ್ಣದ ಕುಲಗಳಿಗೂ ಕ್ರಿಸ್ತಮತಕ್ಕೂ ಏಷಿಯವೇ ಮಾತೃಭೂಮಿಯು. ಪ್ರಾಚೀನ ಇಗುಪ್ತರೂ ಗ್ರೀಕರೂ ರೋಮನರೂ ಏಷಿಯದ ಸಹಾಯದಿಂದ ಏಳಿಗೆಯನ್ನು ಪಡೆದು ಮೆರೆದರು. ಮಧ್ಯಯುಗದ ಐರೋಪ್ಯರಿಗೆ ಅರಬರು ವಿದ್ಯಾಗುರುಗಳಾಗಿದ್ದರು. ಕ್ರಿ. ಶ. ೧೮ನೆಯ ಶತಮಾನದವರೆಗೆ ಏಷಿಯವು ಅತ್ಯಂತ ಸಂಪದ್ಭರಿತವಾಗಿತ್ತು. ಐರೋಪ್ಯರು ಏಷಿಯಾ ದೇಶೀಯ

ದೊಡನೆ ವ್ಯಾಪಾರ ಭೂಮಿ ಮಳಿಗೆಯನ್ನು ಪಡೆಯಬೇಕೆಂದು ತಹತಹ ಪಡುತ್ತಿದ್ದರು.

ಆದರೆ ಕಳೆದ ಮೂರು ಶತಮಾನಗಳಲ್ಲಿ ನಾಗರಕತೆಯು ಯೂರೋಪಿನಲ್ಲಿ ಅದ್ಭುತವಾಗಿ ಅಭಿವೃದ್ಧಿ ಪಡೆದು ಏಷಿಯದಲ್ಲಿ ಕ್ಷೀಣಿಸಿತು. ಐರೋಪ್ಯರು ಈ ಖಂಡಕ್ಕೆ ಧಾಳಿಯಿಟ್ಟು ಇದರ ಅಪಾರವಾದ ಸಂಪತ್ತನ್ನು ದೋಚಿ ಇದರಲ್ಲಿ ಅರ್ಧ ಮುಕ್ಕಾಲು ಭಾಗವನ್ನು ಸಾಕ್ಷಾತ್ತಾಗಿ ತಮ್ಮ ರಾಜ್ಯಕ್ಕೆ ಸೇರಿಸಿಕೊಂಡು ಆಳುತ್ತಿರುವರು. ಮಧ್ಯ ಏಷಿಯದಲ್ಲಿ ಶೀತವೂ ಮರಳ್ಗಾಡೂ ಹಬ್ಬುತ್ತಿವೆ. ಹಿಂದೆ ಐರೋಪ್ಯರಿಂದ ಪೂಜೆಯನ್ನು ಪಡೆಯುತ್ತಿದ್ದ ಏಷಿಯಾಖಂಡವು ನಾಗರಕತೆ, ವಿದ್ಯೆ, ರಾಜಾಧಿಕಾರ, ಐಶ್ವರ್ಯ ಮೊದಲಾದ ಸಕಲಾಂಶಗಳಲ್ಲೂ ಯೂರೋಪಿನ ಸಾಮಂತ ರಾಜ್ಯವಾಗಿ ಪರಿಣಮಿಸಿದೆ.

ಏಷಿಯಾ ಖಂಡಕ್ಕೆ ಈಗ ಪ್ರಾಪ್ತವಾಗಿರುವ ಕ್ಷೀಣದಶೆಯೂ ದಾಸ್ಯವೂ ಪರಿಹಾರ್ಯವೇ ಅಥವಾ ಅಪರಿಹಾರ್ಯವೇ? ಎಂಬ ಪ್ರಶ್ನೆಯು ಏಷಿಯಾಖಂಡದ ಸಮಸ್ಯೆ ಎನ್ನಿಸಿದೆ. ಇದು ಅಪರಿಹಾರ್ಯವೆಂದು ಬಹು ಮಂದಿ ಐರೋಪ್ಯರು ಹೇಳುತ್ತಿರುವರು. ಪರಿಹಾರ್ಯವೆಂದು ನಮ್ಮವರು ಹೇಳುವರು. ಇವರಿಬ್ಬರಲ್ಲಿ ಯಾರ ಮಾತು ನಿಜ?

ಪ್ರಗತಿಯು ಯೂರೋಪಿನ ಲಕ್ಷಣವೆಂದೂ ನಿಶ್ಚಲತ್ವವೂ ಕ್ಷಯವೂ ಏಷಿಯದ ಲಕ್ಷಣವೆಂದೂ ಮೊದಲನೆಯ ಪಕ್ಷದವರು ಹೇಳುವರು. ಇದಕ್ಕೆ ಕಾರಣವನ್ನು ವಿಚಾರಿಸುವ ನೆಪದಲ್ಲಿ ಹಲವು ವಿಚಿತ್ರ ವಾದಗಳು ಹುಟ್ಟಿವೆ. ಈ ವಾದಗಳು ಏಷಿಯಾ ದೇಶೀಯರನ್ನು ಅಲ್ಲಗಳೆದು ಐರೋಪ್ಯರನ್ನು ಅಟ್ಟಕ್ಕೇರಿಸಿ ಅವರ ಸಾಮ್ರಾಜ್ಯಾಧಿಪತ್ಯವನ್ನು ಶಾಶ್ವತವಾಗಿ ಸಂರಕ್ಷಿಸುವ ನೀಚೋದ್ದೇಶದಿಂದ ಕಲ್ಪಿತವಾಗಿವೆ. ಇವುಗಳಲ್ಲಿ ಮುಖ್ಯವಾದ ಕೆಲವನ್ನು ನೋಡಬಹುದು.

(೧) ಐರೋಪ್ಯ ಭೂಮಹಿಮೆಯವಾದ (Europeanism):— ಯೂರೋಪಿನ ನೆಲದಲ್ಲೇ ಒಂದು ಅಪೂರ್ವಶಕ್ತಿ ಇರುವುದಂತೆ; ಅಲ್ಲಿ ಎಂಥಾ ಕಾಡು ಕುರುಬರನ್ನು ತಂದಿರಿಸಿದರೂ ಅವರು ದೇವತಾ ಸದೃಶರಾಗುವರಂತೆ! ಕ್ಷಯವು ಏಷಿಯದ ಪ್ರಕೃತಿಗುಣವಂತೆ! ಅವೆ

ರವಕ್ಕೂ ಪ್ರಕೃತಿಯೇ ಈ ಕಲಹವನ್ನು ಗಂಟಿಕ್ಕಿರುವುದು; ಯೂರೋಪಿಗೂ ಏಷಿಯಕ್ಕೂ ಎಂದಿಗೂ ಮೇಳವೊಂದಾಗದು; ಅನಾದಿಯಾಗಿ ಯೂರೋಪು ಏಷಿಯಾವನ್ನು ಸೋಲಿಸುತ್ತಾ ಬಂದು ಲೋಕಕ್ಕೆ ನಾಗರಿಕತೆಯನ್ನು ಉಳಿಸಿರುವುದು; ಏಷಿಯದಲ್ಲಿ ಯಾವಾಗಲಾದರೂ ಮಿನುಗಿದ ನಾಗರಿಕತೆಯು ಪ್ರಕಾಶಕ್ಕೆ ಯೂರೋಪಿನ ಅನುಗ್ರಹವೇ ಕಾರಣವು; ಹಿಂದೂಗಳು ತಮ್ಮ ಸಂಸ್ಕೃತ ಭಾಷೆಯನ್ನೂ ವಿದ್ಯೆಗಳನ್ನೂ ನಾಗರಿಕತೆಯನ್ನೂ ಗ್ರೀಕರಿಂದ ಕಲಿತು ಬೆಳೆಸಿಕೊಂಡರು-ಎಂದು ಡುಗಾಲ್ಡ ಸ್ಟುವರ್ಟ ಎಂಬವನು ವಾದಿಸಿದ್ದನು.

(೨) ಕ್ರಿಸ್ತ ಮತದ ಮಹಿಮೆಯ ವಾದ:—ಕ್ರಿಸ್ತ ಮತಸ್ಥವಾದಿಗಳು ಐರೋಪ್ಯರ ಅಭಿವೃದ್ಧಿಗೂ ಸಾಮ್ರಾಜ್ಯಪ್ರಾಪ್ತಿಗೂ ಕ್ರಿಸ್ತ ಮತವೇ ಕಾರಣವೆಂದೂ ಆ ಕಲ್ಪವೃಕ್ಷದ ಆಶ್ರಯವಿಲ್ಲದವರಿಗೆಲ್ಲ ಕ್ಷೀಣಾವಸ್ಥೆಯೇ ಗತಿಯೆಂದೂ ವಾದಿಸುವರು.

(೩) ಗೌರ ವರ್ಣದ ಮಹಿಮೆಯ ವಾದ (Whitemanism):—ಬಿಳಿಯ ಬಣ್ಣದ ತೊಗಲನ್ನು ತಾವು ಮಾತ್ರವೇ ಪಡೆದಿರುವಂತೆಯೂ ಅದೇ ತಮ್ಮ ಏಳಿಗೆಗೆ ಕಾರಣವಾದುದೆಂದೂ ಅದನ್ನು ಪಡೆಯದೆ ಇರುವ ಏಷಿಯನರು ಪ್ರಗತಿಪರರೆಂದೂ ಬಹು ಮಂದಿ ಐರೋಪ್ಯರು ವಾದಿಸುತ್ತಿರುವರು.

(೪) ಆರ್ಯಕುಲಮಹಿಮೆಯವಾದ:—ಮನುಷ್ಯರಲ್ಲಿ ಆರ್ಯರು ಸರ್ವಶ್ರೇಷ್ಠರೆಂದೂ ಅವರು ಇತರರಂತೆ ವಾನರೋದ್ಭವರಲ್ಲವೆಂದೂ ನಾಗರಿಕತೆಗೆ ಅವರು ಮಾತ್ರವೇ ಕರ್ತರೆಂದೂ ಮಾಕ್ಸಮುಲ್ಲರನು ವಾದಿಸುತ್ತಿದ್ದನು. ಐರೋಪ್ಯರು ಮಾತ್ರವೇ ಅಂಥಾ ಪವಿತ್ರ ಆರ್ಯ ಸಂತಾನರೆಂದೂ ಏಷಿಯವು ಅನಾರ್ಯಖಂಡವೆಂದೂ ಅನೇಕರು ವಾದಿಸುವರು. ಇವರಲ್ಲಿ ಕೆಲವರು ಭರತಖಂಡದಲ್ಲಿ ಸಹ ಆರ್ಯಸಂತತಿ ಇಲ್ಲವೆಂದು ಹೇಳಿದರು. ಸರ್ಕಾರದವರು ಹೇರಳವಾಗಿ ಹಣವನ್ನು ಮುಟ್ಟಿಸಿ ೧೯೦೧ರಲ್ಲಿ ಈ ಮಾತಿನ ನಿಜಾನಿಜವನ್ನು ರಿಸ್ಲೇ ಎಂಬವನಿಂದ ಪರೀಕ್ಷೆ ಮಾಡಿಸಿದರು. ಈ ಮಹಾನುಭಾವನು, ಆರ್ಯರಕ್ತವು ಭರತಭೂಮಿಯಲ್ಲಿ ಅಲ್ಪಸ್ವಲ್ಪ ಮಂದಿಯಲ್ಲಿ ಕಂಡುಬರುವುದರಿಂದ ಅದು ತೀರ ಇಲ್ಲವೇ ಇಲ್ಲವೆನ್ನಲಾಗುವುದಿಲ್ಲವೆಂದು ದಯೆಯಿಂದ ನಿರೂಪಿಸಿದನು.

ಈ ವಾದಗಳೆಲ್ಲಾ ಸತ್ಯವಾದರೆ ಏಷಿಯಾಖಂಡದ ಕ್ಷೀಣದಶೆಯು ರಕ್ತಗತವಾದ, ಸಹಜವಾದ, ಅಪರಿಹಾರ್ಯವಾದ ರೋಗವಾಗಿದೆ, ಎಂದು ಹೇಳಬೇಕಾಗುವುದು. ಹಾಗಾದರೆ ಮನುಷ್ಯಜಾತಿಯಲ್ಲಿ ಅರ್ಧಕ್ಕಿಂತಲೂ ಹೆಚ್ಚುಮಂದಿ ಜನರು ಹೀಗೆ ಅಪಚಿಕಿತ್ಸ್ಯಕವಾದ ಕ್ಷೀಣದಾರಿದ್ರ್ಯ ಪೀಡಿತರಾಗಿ ಮರಣೋನ್ಮುಖರಾಗಿದ್ದರೆ ಅವರನ್ನು ಲೋಕವು ಹೇಗೆ ಹೊತ್ತುಬದುಕಬೇಕು ? ಇವರಿಗೆ ರೋಗ ಬಾಧೆಯನ್ನು ಕಡಿಮೆ ಮಾಡಿ ಔಷಧೋಪಚಾರ ಮಾಡುವ ಕಾರ್ಯವನ್ನು ಐರೋಪ್ಯರು ಅವ್ಯಾಜಕರುಣೆಯಿಂದ ಕೈಕೊಂಡಿರುವರು. ಏಷಿಯಾಖಂಡವು ಬಿಳಿಯ ಜನರ ತಲೆಗೆ ಕಟ್ಟಿರುವ ದೊಡ್ಡ ಹೊರೆಯಂತೆ! ಐರೋಪ್ಯರು ಈ ಖಂಡದ ಆಳ್ವಿಕೆಯನ್ನು ಕೈಕೊಳ್ಳದಿದ್ದರೆ ನಾಳೆ ನಾಯಕನ್ನ ಏಷಿಯವು ಇಂದೇ ನಾಶವಾಗಿ ಬಿಡುವುದಂತೆ!

ಈ ದುರ್ವಾದಗಳ ಅಸತ್ಯವನ್ನು ತೋರಪಡಿಸಲು ಕಷ್ಟವೇನೂ ಇಲ್ಲ. ಏಷಿಯದ ಈಗಿನ ಕ್ಷೀಣದಶೆಯು ತಾತ್ಕಾಲಿಕವೇ ಹೊರತು ನಿತ್ಯವಾದುದಲ್ಲ. ಈ ಖಂಡದ ಪ್ರಗತಿಯ ಚರಿತ್ರೆಯು ಬಹುಕಾಲದಿಂದ ಅನೂಚಾನವಾಗಿ ನಡೆದುಬಂದಿರುವುದು. ಏಷಿಯಾಖಂಡದಲ್ಲಿ ಹುಟ್ಟಿದುವಷ್ಟು ಮತಧರ್ಮಗಳೂ ದರ್ಶನಗಳೂ ಮತ್ತೆಲ್ಲೂ ಇಲ್ಲ. ಇಸ್ಲಾಂ ಮತ್ತು ಬೌದ್ಧ ಮತಗಳ ದಿಗ್ವಿಜಯ, ಹೂಣರು ತಾತರು ( Tartar ) ಮೊದಲಾದವರ ಸಾಮ್ರಾಜ್ಯಸ್ಥಾಪನೆ ಇವುಗಳಿಗೆ ಸಮನಾದ ಉದ್ವೇಲ ಕಲ್ಲೋಲಗಳು ಯುರೋಪಿನ ಇತಿಹಾಸದಲ್ಲಿ ಕಾಣಿಸಲಾರವು. ಏಷಿಯನರು ಯಾವುದನ್ನೂ ಸುಸ್ಥಿರವಾಗಿ ಕಟ್ಟಿಕೊಂಡು ಬಾಳಲಾರರೆಂದೂ ತಮ್ಮ ರಾಜ್ಯಗಳನ್ನೂ ವಸತಿಗಳನ್ನೂ ಧರ್ಮಗಳನ್ನೂ ಏಸಗೆಟ್ಟಲೆ ಮಾರ್ಪಡಿಸುತ್ತಿರುವರೆಂದೂ ಐರೋಪ್ಯರು ಆಕ್ಷೇಪಿಸುವುದುಂಟು. ಇದೆಲ್ಲಾ ಏಷಿಯದ ನಿತ್ಯ ಲಕ್ಷಣಕ್ಕೆ ಸಾಕ್ಷ್ಯವೇ ? ಬಹುಕಾಲದವರೆಗೆ ಲೋಕದ ಸಂಪತ್ತು ವ್ಯಾಪಾರ ಕೇಂದ್ರವೂ ಈ ಖಂಡದಲ್ಲಿ ನೆಲೆಸಿರಬೇಕಾದರೆ ಅಲ್ಲಿ ಸುವ್ಯವಸ್ಥೆಯೂ ಶಾಂತಿಯೂ ಪರಂಪರಪ್ರಗತಿಯೂ ಇಲ್ಲದಿದ್ದರೆ ಹೇಗೆ ಸಾಧ್ಯವು ? ಏಷಿಯವು ತನ್ನ ಸಾವಿರಾರು ವರ್ಷಗಳ ಕಷ್ಟಾರ್ಜನೆಯನ್ನೆಲ್ಲಾ ಕಳೆದ ಮೂರು ಶತಮಾನಗಳಲ್ಲಿ ಕಳೆದುಕೊಂಡು ಅತಿ ವೇಗವಾಗಿ ಕ್ಷೀಣಿಸುತ್ತಾ ಬಂದಿದೆ. ಈ ಕ್ಷಯವು ನಿಶ್ಚಲವಾಗಿರಲಾರದು. ಏಷಿಯಾಖಂಡದ

ಒಡಲಿನಲ್ಲಿ ಪ್ರಾಣವಾಯು ಬೇಕಾದಷ್ಟು ತುಂಬಿದೆ. ಅದಕ್ಕೆ ಮೇಲು ಮುಖವಾಗಿ ಸಂಚರಿಸಲು ಅಶಕ್ಯವಾದರೆ ಕೆಳಮುಖವಾಗಿ ನುಗ್ಗುವ ಹೊರತು ನಿಶ್ಚಲವಾಗಿರದು.

ಇನ್ನು ಯುರೋಪಿನ ನೆಲದಲ್ಲಿ ಅಪೂರ್ವಮಹಿಮೆ ಇರುವುದು ನಿಜವಾದರೆ ಅದು ಸಾವಿರಾರು ವರ್ಷಗಳಿಂದಲೂ ಮುಚ್ಚಿ ಹೋಗಿದ್ದು ಈಗ ನಾಲ್ಕು ಶತಮಾನಗಳಿಂದ ಮಾತ್ರವೇ ಹೊರಕ್ಕೆ ಬರಲು ಕಾರಣ ವೇನು? ಚರಿತ್ರೆಯ ಆದಿಯಿಂದಲೂ ಏಷಿಯದ ಜನಗಳಾದ ಆರ್ಯರು, ಶಕರು, ಹೂಣರು, ಮಗರು, (Magyars) ಅರಬರು, ತಾತರು,(Tartars) ತುರುಕರು, ಬಲ್ಗಾರರು (Bulgars) ಮೊದಲಾದವರು ಯುರೋಪಿಗೆ ಪುನಃ ಪುನಃ ಧಾಳಿಯಿಟ್ಟು ರಾಜ್ಯಗಳನ್ನು ಕಟ್ಟಿ ಐರೋಪ್ಯರಾಗಿ ಪರಿಣಮಿಸಿ ಅಲ್ಲಿನ ನಾಗರಿಕತೆಗೆ ಕಾರಣರಾಗಿರುವರು. ಐರೋಪ್ಯರ ಸೌಭಾಗ್ಯ ಯುಗದಲ್ಲಿ ಸಹ ತುರುಕರು ಬಾಲ್ಕನ ದೇಶವನ್ನು ವಶಪಡಿಸಿಕೊಂಡು ತಮ್ಮ ಚಂಡಸಾಹಸದಿಂದ ಐರೋಪ್ಯರಿಗೆ ಪದೇ ಪದೇ ತೇಜೋಭಂಗ ಮಾಡಿರುವರು.

ಕ್ರಿಸ್ತ ಮತವು ಯುರೋಪಿನಲ್ಲಿ ತನ್ನ ಸಹಜವಾದ ಧಾರ್ಮಿಕ ಸ್ವರೂಪವನ್ನು ಕಳೆದುಕೊಂಡು ರಾಜಕೀಯ ಸಂಸ್ಥೆಯಾಗಿ ಪರಿಣಮಿಸಿದೆ. ಈ ಮತವು ಈ ಖಂಡದ ನಾಗರಿಕತೆಯ ಏಳಿಗೆಗೆ ವೈರಿಯಾಗಿ ನಿಂತು ಈ ನಾಗರಿಕತೆಯ ನಿರ್ಮಾಪಕರನ್ನೆಲ್ಲ ರಾಕ್ಷಸವರ್ತನೆಯಿಂದ ಹಿಂಸಿಸಿದೆ. ಯುರೋಪು ಖಂಡವು ತನ್ನ ದೇಶದಲ್ಲಿ ಈ ಮತವನ್ನು ನಿಷ್ಪ್ರಾಯವಾಗಿ ಮಾಡಿ ಮೂಲೆಗೆ ತಳ್ಳಿ ಪರದೇಶಗಳ ದಿಗ್ವಿಜಯಕ್ಕೆ ಸಾಧನವಾಗಿ ಮಾತ್ರ ಉಪಯೋಗಿಸಲಾರಂಭಿಸಿದೆ. ಈ ಮತವು ತಲೆ ಹಾಕಿದ ಕಡೆಗಳಲ್ಲೆಲ್ಲಾ ಯುದ್ಧವನ್ನೂ ಐರೋಪ್ಯರ ಆಧಿಪತ್ಯವನ್ನೂ ಕಲ್ಪಿಸುತ್ತಾ ಬರುತ್ತಿದೆ. ಕ್ರಿಸ್ತಮತಕ್ಕೆ ಪುನಃ ಧಾರ್ಮಿಕ ಸ್ವರೂಪ ವನ್ನು ಕಲ್ಪಿಸಬೇಕಾದರೆ ಯುರೋಪು ಖಂಡವು ಏಷಿಯದ ಮರೆ ಹೊಗದೆ ತೀರದು.

ದೇಹದ ವರ್ಣಕ್ಕೂ ಏಳಿಗೆಗೂ ಯಾವ ಸಹಜ ಸಂಬಂಧವೂ ಇಲ್ಲ. ಐರೋಪ್ಯರೆಲ್ಲರೂ ಏಕವರ್ಣದವರಾಗಿಲ್ಲ. ಏಷಿಯದ ಹಿಂದೂಗಳು,

ಇರಾಣಿಯರು, ತುರುಕರು, ಜಾರ್ಜಿಯಾ ದೇಶೀಯರು ಮೊದಲಾದವರು ಗೌರ ವರ್ಣದ ಕುಲಕ್ಕೆಯೇ ಸೇರಿರುವರು. ಅನ್ಯ ವರ್ಣದ ಕುಲಕ್ಕೆ ಸೇರಿದ ಜಪಾನರು ಈಗ ಯಾವ ಯುರೋಪ್ಯರಿಗೆ ಕಡಿಮೆಯಾಗಿರುವರು? ಆರ್ಯ ಕುಲವು ಭಾಷಾ ಕುಲವೇ ಹೊರತು ಜನ್ಯಕುಲವಲ್ಲ. ಸಂಸ್ಕೃತ, ಲ್ಯಾಟಿನ್ ಪರ್ಶಿಯನ್ ಮುಂತಾದ ಭಾಷೆಗಳಿಗೆ ಆರ್ಯಭಾಷೆಗಳೆಂದು ಹೆಸರುಂಟು. ಆರ್ಯಭಾಷೆಗಳನ್ನಾಡತಕ್ಕವರು ಆರ್ಯರು. ಇವರು ಜನ್ಯತಃ ವಿವಿಧ ಕುಲಕ್ಕೆ ಸೇರಿರುವರು. ಅಮೇರಿಕಾ ದೇಶದಲ್ಲಿ ಇಂಗ್ಲೀಷು ಎಂಬ ಆರ್ಯ ಭಾಷೆಯನ್ನು ಆಡುತ್ತಿರುವ ನಿಗ್ರೋ ಜನರು ಸಹ "ಆರ್ಯ ಕುಲ" ದವರೇ ಆಗಿರುವರು. ಆರ್ಯ ಎಂಬ ಜನ್ಯಕುಲವೇ ಇಲ್ಲದಿರುವಾಗ ಆರ್ಯ ಕುಲದ ಮಹಿಮೆಯನ್ನು ಕುರಿತು ಬಡಬಡಿಸುವದು ಹುಚ್ಚುತನವೇ ಸರಿ. ಯುರೋಪಿನ ಜನರಲ್ಲಿ ಬಹುಭಾಗದವರು ಆರ್ಯಭಾಷೆಗಳನ್ನಾಡುವದು ನಿಜ. ಆದರೆ ಅಷ್ಟೇ ಸಂಖ್ಯೆಯ "ಆರ್ಯರು" ಏಷಿಯಾದಲ್ಲಿ ದೊರೆಯುವದು.

ಏಷಿಯದ ಈಗಿನ ಕ್ಷೀಣಾವಸ್ಥೆಯು ಶಾಶ್ವತವಾದುದಲ್ಲ; ಅಜನ್ಮಸಿದ್ಧವಾದುದಲ್ಲ; ಸ್ವಾಭಾವಿಕವಾದ ಗುಣವಲ್ಲ; ಸಾರ್ವಕಾಲಿಕವಾದ ಲಕ್ಷಣವಲ್ಲ. ಅದು ಇತ್ತೀಚೆಗೆ ಪ್ರತಿಕೂಲ ಪರಿಸ್ಥಿತಿಯಿಂದ ಹುಟ್ಟಿರುವ ಸಂಗತಿಯು. ಯುರೋಪ್ಯರು ತಮ್ಮ ನವೀನ ನಾಗರಿಕತೆಯ ಪ್ರಭಾವವನ್ನು ಸ್ವಾರ್ಥಿಕ ರೂಪದಿಂದ ಹೊರಪಡಿಸಿ ಏಷಿಯಾ ಖಂಡಕ್ಕೆ ಧಾಳಿ ಇಟ್ಟು ಅಲ್ಲಿನ ಜನರ ಸರ್ವ ಸತ್ವವನ್ನು ಅಪಹರಿಸಿದ್ದರಿಂದ ಈ ಕ್ಷೀಣಸ್ಥಿತಿಯು ಹುಟ್ಟಿದೆ. ಈ ಜನರ ದಾಸ್ಯವು ತಪ್ಪಿತೆಂದರೆ ಅವರ ಕ್ಷೀಣಸ್ಥಿತಿಯೂ ಮಾಯವಾಗುವದು. ಏಷಿಯಾಖಂಡದಲ್ಲಿ ಸರ್ವತ್ರ ಕಂಡುಬರುತ್ತಿರುವ ಜಾಗೃತಿಯು ಇದಕ್ಕೆ ಪ್ರಮಾಣವಾಗಿದೆ. ಈ ಜಾಗೃತಿಯ ಅಂಕುರಗಳನ್ನೂ ಚಳವಳಿಗಳನ್ನೂ ಪ್ರತಿಯೊಂದು ದೇಶದಲ್ಲೂ ಅದು ನಡೆಯುತ್ತಿರುವ ಪ್ರಕಾರವನ್ನೂ ನೋಡಿದರೆ ಇದು ಸ್ಪಷ್ಟವಾಗುವುದು.

# ೨ ನೆಯ ಅಧ್ಯಾಯ

## ಏಷಿಯದಾದ ಜಾಗೃತಿಯ ಅಂಕುರಗಳು.

ಏಷಿಯಾ ಖಂಡಕ್ಕೆ ಯುರೋಪ್ಯರು ಕಲ್ಪಿಸಿರುವ ದಾಸ್ಯಕ್ಕೆ ಸ್ಥಿರತ್ವವನ್ನು ಪ್ರಕೃತಿಸನ್ನಿವೇಶವೂ ಲೋಕದ ಪರಿಸ್ಥಿತಿಯೂ ಏರ್ಪಡಿಸಿ ಬಿಗಿದುಹಾಕುತ್ತಲಿವೆ. ಈ ಖಂಡದ ದಾಸ್ಯವ್ಯವಸ್ಥೆಯನ್ನು ಮುರಿದು ಅಲ್ಲಿ ಜಾಗೃತಿಯ ಅಂಕುರಗಳನ್ನು ಬೆಳೆಸುತ್ತಿರುವ ಕಾರಣಾಂತರಗಳನ್ನು ಸಂಗ್ರಹವಾಗಿ ನೋಡಬೇಕು.

### ೧ ಏಷಿಯಾ ಖಂಡದ ಭೂಗುಣ ಮತ್ತು ವಾಯುಗುಣ

ಈ ಖಂಡದ ಉತ್ತರ ಮತ್ತು ಮಧ್ಯ ಭಾಗಗಳು ಶೀತದಿಂದ ಮುಚ್ಚಿ ಮರುಭೂಮಿಯಿಂದ ತುಂಬಿ ವಾಸಾಯೋಗ್ಯವಾಗಿರುವುದರಿಂದ ಇಲ್ಲಿನ ಜನರು ಸಮಶೀತೋಷ್ಣಪ್ರದೇಶಕ್ಕಾಗಿ ವರ್ಷವಾದ್ಯಂತವೂ ಆಹಾರ ಬೆಳೆಯತಕ್ಕ ಪ್ರದೇಶಗಳನ್ನು ಹುಡುಕುತ್ತ ಪರಿಭ್ರಮಿಸುತ್ತಿರುವರು. ಏಷಿಯದಲ್ಲಿ ಇಂಡಿಯಾ ಮತ್ತು (ಹಿಂದೂ ಚೀಣ ಸಮೇತವಾದ) ಚೀಣಾ ದೇಶಗಳು ಮಾತ್ರವೇ ಇಂಥಾ ಸೌಭಾಗ್ಯವನ್ನು ಪಡೆದಿರುವುದರಿಂದ ಈ ಖಂಡದ ಜನತೆಯೆಲ್ಲಕ್ಕೂ ಈ ದೇಶಗಳಲ್ಲಿ ಹೋಗಿ ಸೇರಿ ನೆಲಸುವುದೇ ಗುರಿಯಾಗಿದೆ. ಈಗಿನ ಯುರೋಪ್ಯರ ಧಾಳಿ ಸಹ ಇದೇ ಮುಖವಾಗಿ ಪ್ರವಹಿಸಿದೆ.

ಆದರೆ ಯುರೋಪ್ಯರ ಧಾಳಿಯಿಂದ ಏಷಿಯಾದಲ್ಲಿ ಕಲ್ಪಿತವಾಗಿರತಕ್ಕ ರಾಜಾಧಿಕಾರ ವ್ಯವಸ್ಥೆಯು ಆ ಖಂಡದ ಭೂಪರಿಸ್ಥಿತಿಯ ನಿಯಮಕ್ಕೆ ವಿರುದ್ಧವಾಗಿ ನಡೆದಿರುವುದರಿಂದ ಈ ವ್ಯವಸ್ಥೆಯನ್ನು ಮುರಿಯಲು ನಾಲ್ಕು ಕಡೆಯಿಂದಲೂ ಪ್ರಯತ್ನ ನಡೆಯುತ್ತಿದೆ.

ಯುರೋಪು ಖಂಡದಲ್ಲಿ ಜನರಿಗೆ ಸಾಕಾದಷ್ಟು ಆಹಾರ ಬೆಳೆಯದಿದ್ದರೂ ಜನಸಂಖ್ಯೆ ಹೆಚ್ಚುತ್ತ ಬರುತ್ತಿರುವುದರಿಂದ ಜನರು ವ್ಯಾಪಾರ ಕೈಗಾರಿಕೆಗಳಿಂದ ಜೀವಿಸಬೇಕಾಗಿದೆ. ಇದಕ್ಕಾಗಿ ಪ್ರಾಚೀನ ಕಾಲದಿಂದ ಯುರೋಪ್ಯರು ಏಷಿಯದ ವ್ಯಾಪಾರವನ್ನು ವಶಪಡಿಸಿಕೊಳ್ಳಲು ತವಕಪಟ್ಟು ಈಗ ಈ ಖಂಡವನ್ನು ತಮ್ಮ ಅಧೀನ ಮಾಡಿಕೊಂಡಿರುವರು.

ಆದರೆ ಈ ಕೊಳ್ಳೆಯು ಎಲ್ಲರಿಗೂ ಸಮವಾಗಿ ದೊರೆಯಲಿಲ್ಲ. ಕೆಲಸಕ್ಕೆ ಬಾರದ ಪ್ರದೇಶಗಳು ರುಷ್ಯರಿಗೆ (Russians) ದೊರೆಕಿದುದರಿಂದ ಅವರು ಸಮಾಧಾನವಿಲ್ಲದೆ ತಮ್ಮ ಕಾಲನ್ನು ಚಾಚಿಸಿಕೊಳ್ಳಲು ಸಾಹಸ ಪಡುತ್ತಿರುವರು. ಫ್ರೆಂಚರಿಗೆ ಸಾಕಾದಷ್ಟು ದೊರೆತರೂ ಉಳಿದ ಭಾಗವೆಲ್ಲವೂ ಪ್ರಾಯಶವಾಗಿ ಬ್ರಿಟಿಷರ ಪಾಲಿಗೆ ಬಂದಿದೆ. ಬ್ರಿಟಿಷರು ಭರತಖಂಡದಲ್ಲಿ ತಮ್ಮ ಸಾಮ್ರಾಜ್ಯವನ್ನು ಭದ್ರವಾಗಿ ಸಂರಕ್ಷಿಸಿಕೊಳ್ಳುವುದಕ್ಕಾಗಿ ಜಿಬ್ರಾಲ್ಟರ್, ಮಾಲ್ಟಾ, ಐಗುಪ್ತದೇಶ, ರೋಡ್ಸ್, ಸೈಪ್ರಸ್, ಸುಯೆಜ ಕಾಲುವೆ, ಪ್ಯಾಲೆಸ್ತ ದೇಶ (Palestine), ಏಡನ್, ದಕ್ಷಿಣಆಫ್ರಿಕ, ಸಿಂಹಳ, ಪೂರ್ವ ಆಫ್ರಿಕ, ಇರಾಕ, ಪಾರಸಿಕ ಕೊಲ್ಲಿ, (Persian gulf) ಬರ್ಮ, ಸಿಂಗಪೂರ ಮೊದಲಾದ ಪ್ರದೇಶಗಳನ್ನೆಲ್ಲಾ ಆಕ್ರಮಿಸಿಕೊಂಡಿರುವರು. ಇದರಿಂದ ಇವರಿಗೆ ಶತ್ರುಮಂಡಲಿಯು ಬಹಳ ಹೆಚ್ಚಿರುವುದು. ಭರತಖಂಡವು ಇವರಿಗೆ ಕೈತಪ್ಪುವುದರಿಂದ ಈ ಇತರ ಪ್ರದೇಶಗಳೆಲ್ಲದರ ಬಂಧವಿಮೋಚನೆಯಾಗುವ ಸಂಭವವಿದೆ. ಯೂರೋಪಿನಲ್ಲಿ ಸಾವಕಾಶವಾಗಿ ದೊಡ್ಡ ರಾಜ್ಯವಾಗಿ ಅಭಿವೃದ್ಧಿ ಹೊಂದಿದ ಇಟಲಿ ಜರ್ಮನಿ ದೇಶಗಳು ಏಷಿಯದ ಕೊಳ್ಳೆಯಲ್ಲಿ ತಾವು ಭಾಗವನ್ನು ಪಡೆಯಲಾಗದೆ ಹೋದುದರಿಂದ ಹಿಂದೆ ಲೂಟಿಗಾರರಾಗಿರುವವರ ಅಧಿಕಾರವನ್ನು ಸಡಲಿಸಿ ತಾವು ಲಾಭ ಪಡೆಯಲು ಪ್ರಯತ್ನಿಸಿದವು. ಜರ್ಮನರ ಉರವಣೆಯಿಂದ ಆ ಕಾರ್ಯಕ್ಕೆ ಗುರಿಯಾಗಿದ್ದ ಬ್ರಿಟಿಷರೂ ರುಷ್ಯರೂ ಜಪಾನರೂ ಸೇರಿ ಕಳೆದ ಐರೋಪ್ಯ ಯುದ್ಧದಲ್ಲಿ ಅವರನ್ನು ಸದೆಬಡಿದರೂ ಇಟಲಿಯವರು ಏಷಿಯದಲ್ಲಿ ಸಾಮ್ರಾಜ್ಯವನ್ನು ಕಟ್ಟುವ ಆಶೆಯನ್ನು ಇನ್ನೂ ಬಿಟ್ಟಿಲ್ಲ. ಈಚೆಗೆ ಅಮೇರಿಕದವರು ಕ್ರಮಕ್ರಮವಾಗಿ ಈ ಖಂಡದಲ್ಲಿ ಪ್ರಾಬಲ್ಯ ಪಡೆಯಲಾರಂಭಿಸಿರುವರು.

ಏಷಿಯಾ ಖಂಡದಲ್ಲಿ ಬ್ರಿಟಿಷರ ಸಾಮ್ರಾಜ್ಯಕ್ಕೆ ಭಯವನ್ನು ಕಲ್ಪಿಸತಕ್ಕವರು ರುಷ್ಯರು. ರುಷ್ಯರ ರಾಜ್ಯಕ್ಕೆ ಸ್ವಾಭಾವಿಕ ವ್ಯವಸ್ಥೆ ಇನ್ನೂ ಬಂಧವಾಗಿಲ್ಲ. ಅದು ಭೂಖಂಡಾಂತರವಾಗಿ ಹಬ್ಬಿದ್ದರೂ ಅದಕ್ಕೆ ವ್ಯಾಪಾರಕ್ಕೂ, ಜಲಸಂಪರ್ಕಕ್ಕೂ ತಕ್ಕ ಸೌಕರ್ಯಗಳು ಇಲ್ಲ. ಇದರ ಪೂರ್ವ ಪಶ್ಚಿಮೋತ್ತರ ತೀರಗಳು ಶೀತದಿಂದ ಮುಚ್ಚಿಹೋಗಿವೆ, ಇದರ ರಾಜ

ಧಾನಿ ಇದ್ದ ಬಾಲ್ಟಿಕ ಕಡಲಿನಲ್ಲಿ ವರ್ಷಕ್ಕೆ ಹಲವು ತಿಂಗಳು ಹಿಮವು ಮುಸ್ಕಿ ಹಡಗುಗಳ ಸಂಚಾರವನ್ನು ಆತಂಕಪಡಿಸುವುದು. ಅಲ್ಲದೆ ಕಿಷ್ಕಿಂಧವಾದ ಈ ಸಮುದ್ರದ ಸುತ್ತಲು ಹಲವು ಪ್ರಬಲ ರಾಜ್ಯಗಳು ಇರುವುದರಿಂದ, ರುಷ್ಯರು ಫಿನ್ಲ ದೇಶ, ಸ್ಕಾಂಡಿನೇವಿಯಾ,ಡೆನ್ಮಾರ್ಕ್, ಜರ್ಮನಿ, ಹಾಲೆಂಡು, ಪೋಲೆಂಡು ದೇಶಗಳನ್ನೆಲ್ಲಾ ವಶಪಡಿಸಿಕೊಂಡ ಹೊರತು ರುಷ್ಯರಿಗೆ ನಿರಾತಂಕವಾದ ಸಮುದ್ರ ತೀರವು ದೊರೆಯುವ ಹಾಗಿಲ್ಲ. ಪೂರ್ವದಿಕ್ಕಿನಲ್ಲಿ ವ್ಲಾಡಿವೊಸ್ಟಾಕ ನಗರವು ವರ್ಷದಲ್ಲಿ ಮೂರ್ತಾಲು ಕಾಲ ಹಿಮದಿಂದ ಮುಚ್ಚಿ ಹೋಗುವುದು. ಹಿಮಾಲಯದಿಂದ ಕೆಳಕ್ಕೆ ವರ್ಷವಾದ್ಯಂತವೂ ಹಿಮಮುಕ್ತವಾಗಿದ್ದ ಆರ್ಥರ್ ರೇವು ನಗರವನ್ನು ಇವರು ಸಂಪಾದಿಸಿದ್ದರು. ಜಪಾನರು ಇದನ್ನು ಕಿತ್ತುಕೊಂಡರಲ್ಲದೆ ೧೯೦೫ ರಲ್ಲಿ ಉತ್ತರಮಂಚೂರಿಯಾವನ್ನು ಹಿಡಿದು, ವ್ಲಾಡಿವೊಸ್ಟಾಕಿಗೆ ಹೋಗಿ ಬರತಕ್ಕ ದಾರಿಯನ್ನು ಸಹ ಮುಚ್ಚುತ್ತಿರುವರು. ರುಷ್ಯದ ರಾಜ್ಯದ ಭೂಸರಹದ್ದು ದುರ್ಗಮವಾದ ಕಾಡುಗಳಿಂದಲೂ ಮರುಭೂಮಿಗಳಿಂದಲೂ ಪರ್ವತಗಳಿಂದಲೂ ಆವೃತವಾಗಿದೆ. ರುಷ್ಯರು ನಿರ್ವಾಹವಿಲ್ಲದೆ ತಮ್ಮ ನೌಕಾಬಲವನ್ನು ದಕ್ಷಿಣದಲ್ಲಿರುವ ಕಪ್ಪು ಕಡಲಿನಲ್ಲಿ ಇಟ್ಟಿರುವರು. ಆದರೆ ಈ ಕಡಲಿನ ಮುಖಪ್ರದೇಶದಲ್ಲಿ ತುರುಕರು ಲೋಕದಲ್ಲೆಲ್ಲಾ ಅತ್ಯಂತ ಬಲವಾದ ಜಲದುರ್ಗವನ್ನು ಕಟ್ಟಿಕೊಂಡು ಕುಳಿತಿದ್ದರು. ಈ ಕಾನಸ್ಟಾಂಟಿನೋಪಲ್ ನಗರವನ್ನು ಹೇಗಾದರೂ ಮಾಡಿ ಸಂಪಾದಿಸಬೇಕೆಂದು ರುಷ್ಯರು ಒಂದು ಶತಮಾನದಿಂದಲೂ ಸಾಹಸಮಾಡಿದರು. ಆದರೆ ಅವರ ವೈರಿಗಳೆಂದರೆ ಬ್ರಿಟಿಷರು, ತಮಗೆ ಏಷಿಯಾ ಆಫ್ರಿಕಾ ಖಂಡಗಳಲ್ಲಿ ಒಂದು ಶ್ರೇಯುಗಲ ಸ್ಥಳ ಸಹ ಆರಗಳಿಗೆಯೂ ಉಳಿಯಬಾರದೆಂದು ಹದರಿ ರುಷ್ಯರ ಸರ್ವಪ್ರಯತ್ನಗಳನ್ನೂ ವಿರೋಧಿಸಿ ಭಂಗಪಡಿಸುತ್ತ ಬಂದರು. ಕಳೆದ ಯುರೋಪ್ಯ ಯುದ್ಧಕಾಲದಲ್ಲಿ ಬ್ರಿಟಿಷರು ಫ್ರೆಂಚರ ನಿರ್ಬಂಧದಿಂದ ಈ ನಗರವನ್ನು ರುಷ್ಯರು ಜಯಿಸಲು ಒಪ್ಪಿದ್ದರು. ಆದರೆ ರುಷ್ಯರ ರಾಜ್ಯ ವಿಪ್ಲವವೂ ಮುಸ್ತಫಾ ಕಮಾಲನ ಶೌರ್ಯವೂ ಈ ವಿಚಾರವನ್ನು ಭಂಗಪಡಿಸಿದವು. ರುಷ್ಯರು ಇರಾಣ ಮತ್ತು ಅರಬ ಸಮುದ್ರಗಳ ತೀರದವರೆಗೆ ಹಬ್ಬಲು ಅನೇಕ ಪ್ರಯತ್ನಗಳನ್ನು ನಡೆಸಿ

ದರು. ಬ್ರಿಟಿಷರು ಅರಬ ಇರಾಣ ಪಠಾಣ ದೇಶಗಳಲ್ಲಿ ತಮ್ಮ ಅಧಿಕಾರಕೋಟೆಯನ್ನು ಕಟ್ಟಿ ಅದಕ್ಕೆ ಅವಕಾಶ ಕೊಡಲಿಲ್ಲ. ಕಳೆದ ಮಹಾಯುದ್ಧದನಂತರ ಬ್ರಿಟಿಷರು ಇರಾಕ, ಇರಾಣ, ಕಾಕೇಸಸ ದೇಶಗಳನ್ನೆಲ್ಲಾ ನುಂಗಲು ಪ್ರಯತ್ನಪಟ್ಟರು. ಆಶೆಯ ಎರಡು ತುತ್ತುಗಳು ಅವರಿಗೆ ದಕ್ಕಲಿಲ್ಲ. ಜನಸಾಂದ್ರತೆಯಿಂದಲೂ ಬಲ ಪರಾಕ್ರಮಗಳಿಂದಲೂ ಮೆರೆಯುತ್ತಿರುವ ರುಷ್ಯರಿಗೆ ಮೂಗುಬ್ಬಸವಾಗುವಂತೆ ಬ್ರಿಟಿಷರು ಕಟ್ಟಿರುವ ದಿಗ್ಬಂಧನವನ್ನು ಅವರು ಒಡೆದುಹಾಕಲು ಸರ್ವಪ್ರಯತ್ನಗಳನ್ನು ಮಾಡುತ್ತಿರುವರು. ಇವರಿಬ್ಬರಿಗೂ ಹುಟ್ಟಿರುವ ಸ್ಪರ್ಧೆಯಿಂದ ಏಷಿಯದ ರಾಜಾಧಿಕಾರ ವ್ಯವಸ್ಥೆಗೆ ಸ್ಥಿರತ್ವವು ತಪ್ಪಿಹೋಗಿರುವುದು.

ಈ ವ್ಯವಸ್ಥೆಗೆ ಇದೇ ತರಹದ ಕಾರಣಗಳಿಂದ ಜಪಾನರು ಮತ್ತೊಂದು ಕಡೆ ಭಂಗವನ್ನು ತರುತ್ತಿರುವರು. ಜಪಾನದಲ್ಲಿ ಜನಸಂಖ್ಯೆ ಅತಿ ಹೆಚ್ಚಿದೆ; ವಲಸೆಗೆ ಸ್ಥಳವಿಲ್ಲ; ಸಾಕಾದಷ್ಟು ಆಹಾರವಾಗಲಿ ಹತ್ತಿ ಮುಂತಾದ ಕೈಗಾರಿಕೆಯ ಬೆಳಸುಗಳಾಗಲಿ ಇಲ್ಲಿ ಬೆಳೆಯುವುದಿಲ್ಲ. ಕಬ್ಬಿಣ ಕಲ್ಲಿದ್ದಲು ಕಲ್ಲೆಣ್ಣೆಗಳೂ ಇಲ್ಲ. ಆದರೆ ಇವೆಲ್ಲವೂ ಪಕ್ಕದಲ್ಲಿರುವ ಚೀಣಾದೇಶದಲ್ಲಿ ಅಖಂಡವಾಗಿ ದೊರೆಯುವುವು. ಅವುಗಳನ್ನು ವಶಪಡಿಸಿಕೊಳ್ಳಲು ಪಾಶ್ಚಾತ್ಯರು ಅಡ್ಡಿಪಡಿಸುತ್ತಿರುವರು. ಈ ಅಡ್ಡಿಯನ್ನು ಮುರಿಯಲು ಜಪಾನರು ವಿಪರೀತ ಗಲಭೆ ಹಚ್ಚಿರುವರು.

## ೨ ಪಾಶ್ಚಾತ್ಯರ ಪರಸ್ಪರ ಅಸೂಯಾ ಸ್ಪರ್ಧೆ

ಪಾಶ್ಚಾತ್ಯರು ಒಬ್ಬರು ಮತ್ತೊಬ್ಬರ ಲಾಭವನ್ನು ಮುರಿಯಲು ಏಷಿಯದ ದೇಶಗಳನ್ನು ಎತ್ತಿಕಟ್ಟುತ್ತ ನಾನಾ ವಿಧವಾಗಿ ಕಿರುಕುಳ ನಡೆಸುತ್ತಿರುವರು. ಇದರಿಂದ ಈ ಖಂಡದಲ್ಲಿ ಒಂದು ವಿಧವಾದ ಜಾಗೃತಿ ಹುಟ್ಟಲು ಅವಕಾಶವುಂಟಾಗಿದೆ. ತುರ್ಕಿ ಚೀನಾ ಮೊದಲಾದ ರಾಜ್ಯಗಳು ಸಂಪೂರ್ಣವಾಗಿ ನಿರ್ಬಲವಾಗದೆ ಹೋದುದಕ್ಕೆ ಇವರ ಪರಸ್ಪರ ಅಸೂಯೆಯೇ ಕಾರಣವಾಗಿದೆ. ಬೋಲಷಿವಿಕರ ಒಳಸಹಾಯವು ಏಷಿಯಾ ಖಂಡದಲ್ಲಿ ಮಂಡಿಸಿರುವ ಸಕಲಸಾಮ್ರಾಜ್ಯವ್ಯವಸ್ಥೆಗಳನ್ನೂ ಮುರಿಯಲು ಹವಣಿಸುತ್ತಿದೆ.

## ೨. ಜಪಾನರ ಅಭ್ಯುದಯ

ಅಜೇಯರೆಂದು ಸಾರಿಕೊಳ್ಳುತ್ತಿದ್ದ ಯುರೋಪ್ಯರಲ್ಲಿ ವೀರಾಧಿವೀರರೆನ್ನಿಸಿದ್ದ ರುಶ್ಯರನ್ನು ಮುಂದುವರೆಯದ, ಮಂಗೋಲಿನ, ಗಿಡ್ಡ ದೇಹದ, ಸಸ್ಯಾಹಾರದ ಜಪಾನರು ಲೀಲಾಜಾಲವಾಗಿ ಸೋಲಿಸಿಬಿಟ್ಟರು. ಈ ವಿಜಯವು ಏಶಿಯನರ ಮನೋಭಾವದಲ್ಲಿ ವಿಪ್ಲವವನ್ನು ಹುಟ್ಟಿಸಿತು. ಯುರೋಪ್ಯ ಪ್ರಭುಗಳಲ್ಲಿ ಇವರು ಇಟ್ಟುಕೊಂಡಿದ್ದ ಭಕ್ತಿವಿಶ್ವಾಸಭೀತಿಗಳು ಅರಗಳಿಗೆಯಲ್ಲಿ ಮಾಯವಾಗಿ ಸಕಲರೂ ಸ್ವರಾಜ್ಯಕ್ಕಾಗಿ ಚಳವಳಿ ಪ್ರಾರಂಭಮಾಡಿದರು. ಆ ಪರಾಜಯದಿಂದ ಮುಂಗಾಣದಿದ್ದ ರುಶ್ಯ ಸರಕಾರದ ವಿರುದ್ಧ ಅಲ್ಲಿನ ಪ್ರಜಾಪಕ್ಷದವರು ದಂಗೆಯೆಬ್ಬಿಸಿ ರಾಜಕೀಯ ಸುಧಾರಣೆಗಳನ್ನು ಕಸಿದುಕೊಂಡರು (೧೯೦೫). ಇದೇ ರೀತಿ ತುರ್ಕಿ ಇರಾಣ, ಚೀನಾ, ಇಂಡಿಯಾ, ಕೊರಿಯಾ ದೇಶಗಳಲ್ಲಿ ಪ್ರಜೆಗಳು ನಿರಂಕುಶ ಪ್ರಭುತ್ವದ ವಿರುದ್ಧ ದಂಗೆಯೆಬ್ಬಿಸಿ ಧಾಂದಲೆ ಮಾಡಿದರು. ಜಪಾನರ ವಿಜಯಕ್ಕೆ ಪಾಶ್ಚಾತ್ಯ ನಾಗರಕತೆಯ ಪರಿಗ್ರಹವೇ ಕಾರಣವೆಂದು ತಿಳಿದು ಏಶಿಯದ ಸಕಲ ದೇಶಗಳವರೂ ಈ ನಾಗರಕತೆಯನ್ನು ಪಡೆಯಲು ಸುಧಾರಣೆಗಳನ್ನು ಕೈಕೊಂಡರು.

ಏಶಿಯದ ಸಕಲ ಜನರೂ ಜಪಾನರನ್ನು ತಮ್ಮ ಮುಖಂಡರೆಂದು ಗೌರವಿಸಲಾರಂಭಿಸಿದರು. ಮುಸಲ್ಮಾನರು ಅವರಿಗೆ ತಮ್ಮ ಮತದೀಕ್ಷೆ ಕೊಟ್ಟು ಯುರೋಪ್ಯರನ್ನು ಧ್ವಂಸಮಾಡಬೇಕೆಂದು ಚಳವಳಿ ಮಾಡಿದರು. ಏಶಿಯದ ಕೆಲಸಗಾರರಿಗೆ ಬಿಳಿಯ ಜನರು ಕೊಡುತ್ತಿದ್ದ ಹಿಂಸೆಯನ್ನೂ ಅಪಮಾನವನ್ನೂ ಇದುವರೆಗೂ ಯಾರೂ ಕೇಳುತ್ತಿರಲಿಲ್ಲ. ಆದರೆ ೧೯೦೬ರಲ್ಲಿ ಅಮೇರಿಕಾದೇಶದಲ್ಲಿ ಕೆಲ ಜಪಾನರನ್ನು ಬಿಳಿಯರು ತುಚ್ಛವಾಗಿ ಕಾಣಲು, ಜಪಾನರು ಸಮಸ್ತ ಏಶಿಯಾ ಖಂಡದವರನ್ನೆಲ್ಲ ಕರೆಕಳಿಸಿ ಅವರಿಗೆ ತಾವು ರಕ್ಷಕರಂತೆ ವ್ಯವಹರಿಸಿ ಬಿಳಿಯರಿಗೆ ಉಬ್ಬಸವನ್ನುಂಟುಮಾಡಿದರು. ಜಪಾನರ ಅನೇಕ ಮುಖ್ಯ ಪುರುಷರು ಯುರೋಪ್ಯರ ಆಳಿಕೆಯನ್ನು ತಪ್ಪಿಸಿ ಏಶಿಯಾಖಂಡವನ್ನು ಉದ್ಧರಿಸುವದು ಜಪಾನಿನ ಧರ್ಮವೆಂದು ಸಾರತೊಡಗಿ ಈ ಖಂಡದಲ್ಲಿ ಜನಜಾಗೃತಿಯನ್ನು ಹಲವು ವಿಧದಲ್ಲಿ ಉಂಟುಮಾಡಿದರು. ಒಕುಮಾ ಎಂಬ ಮಹಾಪುರುಷನು

೧೯೦೭ ರಲ್ಲಿ ಭರತಖಂಡದ ಪ್ರವಾಸವಾಗಿ ಬಂದು ಭಾಷಣದಲ್ಲಿ ಈ ರೀತಿ ಹೇಳಿದನು. “ ಹಿಂದೂ ದೇಶದ ೩೦ ಕೋಟಿ ಜನರು ಐರೋಪ್ಯರಿಂದ ಹಿಂಸೆಪಟ್ಟು, ಜಪಾನಿನ ಸಹಾಯವನ್ನು ಎದುರು ನೋಡುತ್ತಿರುವರು. ಐರೋಪ್ಯರ ವ್ಯಾಪಾರಕ್ಕೆ ಬಹಿಷ್ಕಾರ ಹಾಕಲು ಅವರು ತೊಡಗಿರುವರು. ಆದ್ದರಿಂದ ಜಪಾನರು ಈ ಅವಕಾಶವನ್ನು ತಿಳಿದುಕೊಂಡು ಹಿಂದುಸ್ಥಾನಕ್ಕೆ ಹೋಗದಿದ್ದರೆ ಆ ದೇಶೀಯರು ನಿರಾಶರಾಗುವರು......ಆ ದೇಶದ ಜನರು ಜಪಾನರನ್ನು ಎದುರು ನೋಡುತ್ತಿರುವಾಗ ಜಪಾನರು ಅತ್ತಕಡೆ ಏತಕ್ಕೆ ಕೈಹಾಕಬಾರದು ? ” *

ಜಪಾನರು ಕೊರಿಯವನ್ನು ನುಂಗಿ, ಚೀನಾವನ್ನು ಹಿಂಸಿಸುತ್ತ, ಪಾಶ್ಚಾತ್ಯರೊಡನೆ ಸೇರಿಕೊಂಡು ಏಷಿಯದ ಹಿತಕ್ಕೆ ವಿರೋಧವಾಗಿ ಆಚರಿಸುತ್ತ ಬರಲಾರಂಭಿಸಿದಾಗ ಏಷಿಯನರಿಗೆ ಅವರ ಮೇಲೆ ಕೋಪ ಹುಟ್ಟಿದ್ದು ನಿಜ. ಆದರೂ ಜಪಾನರ ಅಭ್ಯುದಯವು ಈ ಖಂಡದ ಈಗಿನ ಜಾಗೃತಿಗೆ ಅತಿಮುಖ್ಯವಾದ ಕಾರಣವಾಗಿದೆಂಬುದು ಮಾತ್ರ ಸುಳ್ಳಲ್ಲ.

### ೪ ಪಾಶ್ಚಾತ್ಯ ನಾಗರಿಕತೆಯ ಮೋಹ.

ಪಾಶ್ಚಾತ್ಯರು ತಮ್ಮ ಅಧೀನ ದೇಶಗಳಲ್ಲಿ ವ್ಯಾಪಾರ ಲಾಭವನ್ನು ಹೆಚ್ಚಿಸಿಕೊಳ್ಳುವುದಕ್ಕೂ ರಾಜಾಧಿಕಾರವನ್ನು ಭದ್ರಪಡಿಸುವುದಕ್ಕೂ ತಾವು ಮಹಾ ವೈಭವದಿಂದ ಮೆರೆಯುವುದಕ್ಕೂ ರಸ್ತೆ, ರೈಲು, ನೌಕೆ, ನೀರಾವರಿ ಕೆಲಸಗಳು ಮೊದಲಾದವುಗಳನ್ನು ಕಲ್ಪಿಸಬೇಕಾಯಿತು, ಅಲ್ಲಿನ ಜನರು ತಮ್ಮ ಮೂಗಿನ ನೇರಕ್ಕೆ ನಡೆಯುವಂತೆ ಮಾಡುವುದಕ್ಕೂ ತಮ್ಮ ವೈಭವವನ್ನು ತೋರಿಸುವುದಕ್ಕೂ ಅವರಿಗೆ ಹೊಸಕ್ರಮದಲ್ಲಿ ತಮ್ಮ ಭಾಷೆಯಲ್ಲಿ ವಿದ್ಯೆ ಹೇಳಿಸಲಾರಂಭಿಸಿದರು. ಇದರಿಂದ ಈ ದೇಶದ ಜನಗಳಲ್ಲಿ ವಿದೇಶೀ ನಡೆನುಡಿಗಳಲ್ಲಿ ಮೋಹವೂ ಸ್ವದೇಶೀ ನಡೆನುಡಿಗಳಲ್ಲಿ ವೈಮನಸ್ಯವೂ ಹುಟ್ಟಿದವು.

ವಿದೇಶೀ ಮೋಹವನ್ನು ಹೆಚ್ಚಾಗಿ ಪಡೆದವರು ವಿದೇಶೀ ನಾಗರಿಕತೆಯನ್ನು ತಂದು ಬಳಸಿಕೊಂಡು ದೇಶೀಯ ನಡೆನುಡಿಗಳನ್ನು ತಿದ್ದಿಕೊಳ್ಳಬೇಕೆಂದು ಸುಧಾರಣಾ ಚಳವಳಿಯನ್ನು ಕಲ್ಪಿಸಿದರು. ಸ್ವದೇಶೀ

---

* ಫ್ರಾಂಕ್ಸ್ ನಮಸ್ತೆ (೧೯೨೧), ೬೬-೭ (ಉದಾಹೃತ)

ವೈಮುಖ್ಯವನ್ನು ಅಧಿಕವಾಗಿ ಪಡೆದವರು ಎಲ್ಲದರಲ್ಲೂ ಔದಾಸೀನ್ಯವನ್ನು ಪಡೆದು ಯಾವುದನ್ನೂ ನಂಬದೆ ಖಂಡಿಸತಕ್ಕ ಶೂನ್ಯಬುದ್ಧಿಯನ್ನು ಪಡೆದರು. ಇಂಥವರು ತಮ್ಮ ದೇಶದ ಸಾಮಾಜಿಕ ಮತ್ತು ಧಾರ್ಮಿಕ ವಿಚಾರಗಳಲ್ಲಿ ಹಳೆಯ ಕ್ರಮಗಳೆಲ್ಲವೂ ಸನಿಸಿದ ಗಳಿಗೆಯಲ್ಲಿ ಧ್ವಂಸವಾಗಿ ಬಿಡಬೇಕೆಂದು ಬಯಸಿ ವಿಪ್ಲವಚಳವಳಿಯನ್ನು ಪ್ರಾರಂಭಿಸುವುದು ಸಹಜ. ಸ್ವಲ್ಪ ಕಾಲಾನಂತರ ಈ ಚಳವಳಿಯು ರಾಜಕೀಯ ರಂಗವನ್ನೂ ಹೊಕ್ಕು ಸಕ್ರಮವಾದ ಸಾಂಘಿಕ ಸುಧಾರಣೆಯನ್ನು ವಿರೋಧಿಸುವುದು. ಈ ಕ್ರಾಂತಿಪಕ್ಷದವರ ಸ್ವರಾಜ್ಯವಾಂಛೆಯನ್ನು ವಿದೇಶಪ್ರಭುವರ್ಗದವರು ಎದುರಿಸಲು ಅಶಕ್ತರಾಗುವರು. ಆದ್ದರಿಂದ ಅಧೀನ ಜನಕೋಟಿಗೆ "ಆಸ್ತಿಕ" ವಾದ ಅಂದರೆ ತಮ್ಮ ಪ್ರಭುತ್ವದಲ್ಲಿ ವಿಶ್ವಾಸ ಹುಟ್ಟಿಸುವ ವಿದ್ಯೆಯನ್ನು ಮಾತ್ರ ಕೊಡಬೇಕೆಂದು ಅನೇಕ ಪಾಶ್ಚಾತ್ಯ ಸಾಮ್ರಾಜ್ಯವಾದಿಗಳು ಹೇಳತೊಡಗಿರುವರು.

ಪಾಶ್ಚಾತ್ಯರ ವಿದ್ಯಾಪ್ರಸಾರದಿಂದ ಅವರಲ್ಲಿ ಕಂಡುಬರುವ ವರ್ಣದ್ವೇಷ, ಮತವೈಷಮ್ಯ, ಭೋಗಲಾಲಸತೆ, ಪರಸ್ವಾಪಹರಣವೃತ್ತಿ ಮೊದಲಾದ ದುರ್ಗುಣಗಳು ಸಹ ಈ ಬಂಡಕ್ಕೆ ಹರಿದು ನಾನಾ ವಿಧವಾದ ಗಲಭೆಯನ್ನು ಹುಟ್ಟಿಸುತ್ತವೆ.

## ೫. ಸುಧಾರಣೆಯ ಚಳವಳಿಗಳು

ಏಷಿಯದ ಜನರಿಗೆ ತಮ್ಮ ಹೀನದಶೆಯು ಮನದಟ್ಟಾದಾಗ ಅದಕ್ಕೆ ತಮ್ಮಲ್ಲಿ ಹುಟ್ಟಿರುವ ದೋಷಗಳೇ ಕಾರಣವೆಂದೂ ಅವುಗಳನ್ನು ಸರಿಪಡಿಸಿ ಮುಂದುವರಿಯಬೇಕೆಂದೂ ಬುದ್ಧಿ ಹುಟ್ಟುವುದು ಸಹಜ. ಈ ಸುಧಾರಣಾ ಪ್ರವೃತ್ತಿಯು ಎರಡು ಮುಖವಾಗಿ ಪ್ರವಹಿಸುವುದು. ಕೆಲವರು ತಮ್ಮ ಹೀನದಶೆಯು ತಾತ್ಕಾಲಿಕವಾದುದೆಂದೂ ತಮ್ಮ ಚರಿತ್ರೆಯಲ್ಲೂ ಒಂದು ದಿವ್ಯಯುಗವಿದ್ದಿತೆಂದೂ ಆ ಯುಗದ ಸನಾತನ ಸದಾಚಾರಗಳನ್ನು ಪುನಃ ಸಂಪಾದಿಸಿದರೆ ತಾವು ಉದ್ಧಾರವಾಗಬಹುದೆಂದೂ ಅಭಿಪ್ರಾಯಪಟ್ಟು ವಿದೇಶೀ ವೈಮುಖ್ಯವನ್ನು ಕೊಂಡಾಡುವರು. ಈ ಚಳವಳಿಯು ಜನರಲ್ಲಿ ಸ್ವಸ್ವರೂಪ ಜ್ಞಾನವನ್ನೂ ಆತ್ಮಗೌರವವನ್ನೂ ಐಕಮತ್ಯ ಬುದ್ಧಿಯನ್ನೂ ಸ್ವದೇಶಾಭಿಮಾನವನ್ನೂ ಹುಟ್ಟಿಸುವುದು. ಈ

ಪಕ್ಷದವರು " ಸಾಂಪ್ರದಾಯಿಕ ಅಥವಾ ಸನಾತನ ಸುಧಾರಕರು '' ಎನ್ನಿಸುವರು. ಇವರ ಚಳವಳಿಯು ಐರೋಪ್ಯರ ವಿಜಯಕ್ಕಿಂತಲೂ ಮುಂಚಿನಿಂದ ನಡೆದು ಬಂದಿದ್ದರೂ ಆ ವಿಜಯದಿಂದ ಅತ್ಯಂತ ಪ್ರಾಬಲ್ಯವನ್ನು ಪಡೆಯಿತು. ಈ ವಿಜಯಾನಂತರ ವಿದೇಶೀ ಮೋಹವು ತಲೆಯೆತ್ತಿಕೊಂಡಾಗ ಕೆಲವರು ಪಾಶ್ಚಾತ್ಯ ನಾಗರಕತೆಯ ಸಾರವಾದ ಅಂಶಗಳನ್ನೆಲ್ಲಾ ಹೊಸದಾಗಿ ತಾವು ಪರಿಗ್ರಹಿಸಿ ಮುಂದುವರಿಯಬೇಕೆಂದು ಅಭಿಪ್ರಾಯಪಟ್ಟರು. ಇವರು " ನವೀನ ಅಥವಾ ಆಧುನಿಕ ಸುಧಾರಕರು '' ಎನ್ನಿಸುವರು. ಹಿಂದೂ ದೇಶದಲ್ಲಿ ಮೊದಲನೆಯ ಪಕ್ಷಕ್ಕೆ ದಯಾನಂದ ಸರಸ್ವತಿ ವಿವೇಕಾನಂದರನ್ನೂ ಎರಡನೆಯದಕ್ಕೆ ರಾನಡೆ ಸೈಯದ ಅಹಮ್ಮದರನ್ನೂ ಉದಾಹರಣೆಯಾಗಿ ಹೇಳಬಹುದು. ಏಷಿಯದ ಸಕಲ ದೇಶಗಳಲ್ಲೂ ಸುಧಾರಣಾ ಪ್ರವೃತ್ತಿಯು ಈ ಎರಡು ಮುಖವಾಗಿಯೂ ಹರಿದು ಕಡೆಗೆ ಸಂಗಮವಾಗಿರುವುದು.

ಸಮಾಜದಲ್ಲಿ ಸುಧಾರಣೆಯು ಸರ್ಕಾರದ ಸಹಾಯದಿಂದ ಹೊರತಾಗಿ ಬರಿಯ ಕೂಗಾಟದಿಂದ ಜಯಪ್ರದವಾಗಲಾರದೆಂದು ಉಭಯ ಪಕ್ಷದ ಸುಧಾರಕರೂ ಸ್ವಲ್ಪದರಲ್ಲೇ ಕಂಡುಕೊಳ್ಳುವರು. ಆದರೆ ಏಷಿಯದ ಸ್ವದೇಶೀ ( ಉದಾ.- ತುರ್ಕಿ, ಇರಾಣ, ಜಪಾನ, ಚೀನಾ ) ಅಥವಾ ವಿದೇಶೀ ( ಉದಾ:– ಹಿಂದುಸ್ಥಾನ ) ಸರ್ಕಾರಗಳೆಲ್ಲವೂ ಶುದ್ಧ ನಿರಂಕುಶವಾಗಿದ್ದುದರಿಂದ ಪ್ರಜಾಪಕ್ಷದವರಿಗೆ ಅವುಗಳ ಸಹಾಯವು ದೊರೆಯುವಂತಿರಲಿಲ್ಲ. ಆದ್ದರಿಂದ ಸುಧಾರಣೆಯು ಎಲ್ಲಾ ಕಡೆಯಲ್ಲೂ ಸಾಂಕುಶ ರಾಜ್ಯ ಭಾರವನ್ನು ಬಯಸಿ ರಾಜಕೀಯ ಸುಧಾರಣೆಯನ್ನು ಮುಂದು ಮಾಡಿಕೊಂಡು ಕೆಲಸ ಮಾಡತೊಡಗಿತು.

ಸ್ವಲ್ಪದರಲ್ಲೇ ಈ ನಿರಂಕುಶ ಸರ್ಕಾರದ ಪ್ರಭುಗಳೂ ಐರೋಪ್ಯರೂ ಈ ಸಕ್ರಮವಾದ ಸಾಂಕುಶ ರಾಜಕೀಯ ಚಳವಳಿಯನ್ನು ಅತಿಕ್ರೂರ ವರ್ತನೆಯಿಂದ ಅಡಗಿಸಿಬಿಟ್ಟರು. ಇದರಿಂದ ಜನರಿಗೆ ಪಾಶ್ಚಾತ್ಯರಲ್ಲಿ ಉತ್ಕಟದ್ವೇಷವೂ ಸಾಂಕುಶ ಸುಧಾರಣೆಯಲ್ಲಿ ತಾತ್ಸಾರವೂ ಹುಟ್ಟಿದವು. ಸುಧಾರಕರು ಕ್ರಮವಾಗಿ ಜನಾಂಗವಾದಿ ( nationalist ) ಗಳ ಪಕ್ಷದಲ್ಲಿ ಸೇರಿ ಲೀನವಾಗಿ ಹೋದರು.

## ೬. ಸ್ವಜನಾಭಿಮಾನಜನ್ಯವಾದ ತಿರಸ್ಕಾರ

ಪಾಶ್ಚಾತ್ಯರು ತಮ್ಮ ಸಾಮ್ರಾಜ್ಯವನ್ನು ಕಟ್ಟಿ ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಳ್ಳುವ ಸಲುವಾಗಿ ದೇಶೀಯ ಜನಗಳು ಅತಿ ಪವಿತ್ರವೆಂದು ಭಾವಿಸಿದ್ದ ಸಂಸ್ಥೆಗಳನ್ನು ಶತಸಂಖ್ಯೆಯಲ್ಲಿ ಮುರಿದು ಹಾಕಿದ್ದರಿಂದ ಮಾನಧನರೂ ಅಭಿಮಾನಿಗಳೂ ಆದ ಈ ಖಂಡದವರಿಗೆ ಮನಸ್ಸು ನೊಂದು ಪಾಶ್ಚಾತ್ಯರ ಮೇಲೆ ಬಹಳ ತಿರಸ್ಕಾರ ಹುಟ್ಟಿತು. ಈ ತಿರಸ್ಕಾರವನ್ನು ಬಹಿರಂಗವಾಗಿ ಹೆಚ್ಚಿಸಿ ಹರಡಲು ಅಸಾಧ್ಯವಾದ್ದರಿಂದ ಅನೇಕರು ಅತಿವಿಶಿಷ್ಟವಾದ ಮಾರ್ಗಗಳನ್ನು ಹಿಡಿಯುತ್ತಿದ್ದರು. ಉದಾಹರಣೆಗಾಗಿ, ರೈಲು ಎಂಬುದು ಭೂಮಾತೆಗೆ ಹಾಕಿರುವ ಸರಿ, ಸಿಡುಬು ಸ್ಟೈಲಿ ಎಂಬುದು ಜನರನ್ನು ನಿರಾಯಾಸವಾಗಿ ಕೊಂದು ಪಾಶ್ಚಾತ್ಯರು ತಮ್ಮ ವಲಸೆಗೆ ಸ್ಥಳ ಮಾಡಿಕೊಳ್ಳುವ ಉಪಾಯ ಎಂಬಿವೇ ಮೊದಲಾದ ಮೂಢಾಭಿಪ್ರಾಯಗಳಿಗೆ ಅನುವು ದೊರೆಕಿತ್ತು. ಲೋಕಮಾನ್ಯತಿಲಕರು ೧೨ ವಯಸ್ಸಿನೊಳಗಿನ ನಿಷೇಕವನ್ನು ನಿಷೇಧಿಸಲು ತಂದ ಶಾಸನವನ್ನು ವಿರೋಧಿಸಿದರಷ್ಟೇ. ವಿಧರ್ಮಿಗಳಾದ ವಿದೇಶೀಯರು ಶಸ್ತ್ರಬಲದಿಂದ ಕಟ್ಟಿರುವ ಸರ್ಕಾರದ ಸಹಾಯದಿಂದ ತಮ್ಮ ಪವಿತ್ರಾಚಾರಗಳಿಗೆ ಕೈ ಹಾಕುವುದು ಹಿಂದೂ ಜನಾಂಗಕ್ಕೆ ತುಂಬಾ ಅಪಮಾನಕರವೆಂದು ಇವರು ವಾದಿಸಿ ಈ ಶಾಸನವನ್ನು ವಿರೋಧಿಸುವ ನಿಮಿತ್ತದಿಂದ ಜನತೆಯಲ್ಲಿ ಸ್ವಜನಾಭಿಮಾನವನ್ನೂ ಪಾಶ್ಚಾತ್ಯರ ಬಗ್ಗೆ ತಿರಸ್ಕಾರವನ್ನೂ ಹುಟ್ಟಿಸಲು ಬಗೆದರು. ಅಲ್ಪದೃಷ್ಟಿಗಳಾದ ಗೊತ್ತು ಸುಧಾರಕರಿಗೆ ಈ ಬಗೆಯ ನಡತೆಯು ಹಿಡಿಸುತ್ತಿರಲಿಲ್ಲ. ಆದರೆ ಸರ್ಕಾರದವರು ಸುಧಾರಕರನ್ನು ಹುಗ್ಗ ಹಿಡಿದಾಗ ಅವರ ಪಕ್ಷದವರೆಲ್ಲರೂ ಜನಾಂಗವಾದಿಗಳಾಗಿ ಪರಿಣಮಿಸಿದರು.

ಜನಾಂಗವಾದಿಗಳಲ್ಲಿ ಕೆಲವರು ಮುಂದೆ ಕ್ರಾಂತಿಪಕ್ಷದವರಾಗಿರುವರು. ವಿದೇಶೀಯರ ಮೇಲೆ ಹುಟ್ಟುವ ದ್ವೇಷವು ಸರ್ಕಾರದ ದಂಡನೀತಿಯಿಂದ ಕಡುನೊಂದಾಗ ತಾಳ್ಮೆತಪ್ಪಿದ ಕೆಲ ತರುಣರಲ್ಲಿ ರಾಜಕೀಯ ಹತ್ಯಾವ್ರತವನ್ನು ಪ್ರೇರಿಸುವುದು. ಈ ತರಹದ ಮನೋಭಾವವನ್ನು ಕೆಲ ಭಾರತ ಹತ್ಯಾವ್ರತಿಗಳ ಮಾತುಗಳಿಂದ ಉದಾಹರಿಸಿ ತೋರಿಸಬಹುದು. "( ಈ ಪತ್ರಿಕೆಗೆ ) ಬೇಕಾದ ಚಂದಾದ್ರವ್ಯವು ಪ್ರತಿಯೊಬ್ಬ ವಾಚಕನೂ

ಬಿಟ್ಟು ಐರೋಪ್ಯರ ತಳಿಯನ್ನು ತಂದುಕೊಡುವುದು ಮಾತ್ರವಾಗಿದೆ.'' (ಯುಗಾಂತರ ಪತ್ರಿಕೆ) "ರಾಜಕೀಯ ಶಕ್ತಿಯು ಕೋವಿಯಾರ ನಲ್ಲಿ" (ಶ್ಯಾಮಜಿ ಕೃಷ್ಣವರ್ಮ) "ಪರದೇಶೀಯರ ಶಸ್ತ್ರಗಳಿಂದ ತುಳಿಯಲ್ಪಟ್ಟಿರುವ ಜನಾಂಗವು ಶಾಶ್ವತವಾದ ಯುದ್ಧಾವಸ್ಥೆ (State of war) ಯಲ್ಲಿ ಇದೆ ಎಂದು ನಾನು ನಂಬುತ್ತೇನೆ." "ಈಗಿನ ಅಸ್ವಾಭಾವಿಕವಾದ ಸಂಬಂಧವು ನಿವೃತ್ತವಾಗದಿದ್ದರೆ ಹಿಂದೂ ಮತ್ತು ಇಂಗ್ಲೀಷು ಜನ ಮತ್ತು ಕುಲಗಳು ಲೋಕದಲ್ಲಿ ಇರುವವರೆಗೂ ಈ ಯುದ್ಧವು ನಡೆಯುವುದು.'' (ಧಿಂಗ್ರನ ವಧಾಪೂರ್ವಸಂದೇಶ). ಅಸ್ವಾಭಾವಿಕವಾದ ಈ ಹತ್ಯಾಮಾರ್ಗವು ಅಪಾರ ದಮನೀಯವೇ ಹೊರತು ಯಾವ ಶಾಶ್ವತ ಫಲಗಳನ್ನೂ ಕಲ್ಪಿಸಲಾರದೆಂಬುದು ಈಗ ಹಿಂದೀ ಜನರಿಗೆ ಮನವರಿಕೆಯಾಗಿರುವುದರಿಂದ ಈ ಪಕ್ಷವು ಕುಗ್ಗಿಹೋಗಿದೆ.

### ೭. ಜನಮಂಡಲದ ಸಮಷ್ಟಿ ಚಳವಳಿಗಳು

ವಿದೇಶೀಯರ ಬಲವನ್ನು ಒಪ್ಪೊಟ್ಟದೇ ನಮ್ಮುಳಿವು ಅಸಾಧ್ಯವೆಂದರಿತು ಏಷಿಯಾ ದೇಶೀಯರು ಒಟ್ಟೊಟ್ಟಾಗಿ ಸೇರಬೇಕೆಂದು ಪ್ರಯತ್ನಪಟ್ಟರು. ಹಲವು ದೇಶಗಳಲ್ಲೂ ರಾಜ್ಯಗಳಲ್ಲೂ ಹರಡಿ ಹೋಗಿರುವ ಮುಸಲ್ಮಾನರು, ಅರಬರು, ತುರಾಣರು, ಸೀಕ ಕುಲದವರು ಇವರುಗಳು ತಾವು ಒಂದು ಸಮಷ್ಟಿಕೂಟವಾಗಿ ಸೇರಲು ಬಯಸಿದರು. ಈ ಸಂಬಂಧವಾದ ಚಳವಳಿಯಿಂದ ಏಷಿಯಾದ ಜನತೆಯಲ್ಲಿ ಒಂದು ವಿಧವಾದ ಹುರುಪೂ ಐಕ್ಯಮತ್ಯವೂ ಹುಟ್ಟಿದೆ.

### ೮. ಐರೋಪ್ಯ ಮಹಾಯುದ್ಧ

ಈ ಯುದ್ಧವು ಯೂರೋಪಿಗಿಂತಲೂ ಹೆಚ್ಚಾಗಿ ಏಷಿಯಾದ ಆರ್ಥಿಕ ಮತ್ತು ರಾಜಕೀಯ ಸ್ಥಿತಿಗಳನ್ನು ಮಾರ್ಪಡಿಸಿತು. ಯೂರೋಪಿನಲ್ಲಿ ಆರು ರಾಜ್ಯಗಳು ಯುದ್ಧಕ್ಕೆ ಸೇರದೆ ತಪ್ಪಿಸಿಕೊಂಡವು. ಏಷಿಯಾದಲ್ಲಿ ಇರಾಣ ಸಿಯಾಮ ದಕ್ಷಿಣಪಾದದಲ್ಲಿರುವ ರಾಜ್ಯಗಳನ್ನುಳಿದು ಇತರ ರಾಜ್ಯಗಳೆಲ್ಲವೂ ಇದರಲ್ಲಿ ಭಾಗಿಯಾಗಿ ಧನಜನಗಳನ್ನು ಅಪಾರವಾಗಿ ಕಳೆದುಕೊಂಡು

---

* ಸ್ಟೇಟ್ಸ್‌ಮನ್ — ಇನ್ನೂರರ ನವವರ್ಷಾಂಕ (೧೯೨೫), ೨೧೧-೧೨ (ಅನುವಾದಿತ)

ಮಹಾ ಕ್ಷೋಭವನ್ನು ಪಡೆದವು. ಈ ಮೂರು ದೇಶಗಳಲ್ಲೂ ಜರ್ಮನಿಯ ಗುಪ್ತ ಸಂಧಿಗಳಿಂದಲೂ ಅದರ ಶತ್ರುಗಳ ಉರವಣೆಯಿಂದಲೂ ಯುದ್ಧಕ್ಕೆ ಸೇರಿದಕ್ಕಿಂತಲೂ ಹೆಚ್ಚಾದ ಕಷ್ಟ ನಷ್ಟಗಳು ಸಂಭವಿಸಿದವು.

ಯುದ್ಧದ ದೆಸೆಯಿಂದ ಏಷಿಯಾದಲ್ಲಿ ಜರ್ಮನಿಯ ಅಧಿಕಾರವು ಕೊನೆಗಂಡಿತು; ಮುಸ್ಲಿಮರ ಮೈತ್ರಿಯಾತ್ರಾಭೀತಿ ತಪ್ಪಿತು. ಐರೋಪ್ಯರು ತುರುಕಸಾಮ್ರಾಜ್ಯವನ್ನು ಒಡೆದು ಹಂಚಿಕೊಂಡು ಬಿಟ್ಟರು. ಇರಾಣರ ಸ್ವಾತಂತ್ರ್ಯವೂ ಮಾಯವಾಯಿತು. ಜಪಾನರು ಚೀನರನ್ನು ಕೊಳ್ಳೆ ಹೊಡೆದು ತಮ್ಮ ಸಂಪತ್ತನ್ನು ಅಪಾರವಾಗಿ ಹೆಚ್ಚಿಸಿಕೊಂಡು ಪೂರ್ವ ಶಿಬಿರ ದೇಶವನ್ನು ಆಕ್ರಮಿಸಿಕೊಂಡರು.

ತಕ್ಕ ಶಿಕ್ಷಣಪಡೆದ ಏಷಿಯದ ಸೈನಿಕರು ಪಾಶ್ಚಾತ್ಯರಿಗೆ ತಲೆಬಾಗಿಸಬೇಕಾಗಿಲ್ಲವೆಂದು ಈ ಖಂಡದವರು ತಿಳಿದುಕೊಂಡರು. ಯುದ್ಧರಂಗದಿಂದ ಏಷಿಯಾವಿಗೆ ಹಿಂತಿರುಗಿದ ಲಕ್ಷಾಂತರ ಸೈನಿಕರೂ ಕೂಲಿಕಾರರೂ ಐರೋಪ್ಯರ ದೌರ್ಬಲ್ಯಗಳನ್ನೆಲ್ಲ ಅರಿತು ತಮ್ಮತಮ್ಮ ದೇಶಗಳಲ್ಲಿ ತಿಳಿಯಪಡಿಸಿ ಅಲ್ಲಿನ ಜನ ಜಾಗೃತಿಗೆ ಕಾರಣರಾದರು. ಏಷಿಯದವರಿಗೆ ಪಾಶ್ಚಾತ್ಯರಲ್ಲಿದ್ದ ಮೂಢ ಭೀತಿಯೂ ಮೋಹವೂ ಗೌರವ ಭಾವವೂ ಮಾಯವಾದವು. ಯುದ್ಧದ ದೆಸೆಯಿಂದ ಹೊಸ ಹೊಸ ಅಭಿಪ್ರಾಯಗಳೂ ಚಳವಳಿಗಳೂ ತಲೆದೋರಿದವು. ಐರೋಪ್ಯರ ಸರ್ವಮಾನ್ಯವಾಗಿದ್ದ ಎಷ್ಟೋ ಕೈಗಾರಿಕೆಗಳೂ ಈ ಖಂಡದಲ್ಲಿ ನೆಲೆಸಿದವು.

ಅರಬರೂ ಹಿಂದೂ ದೇಶೀಯರೂ ಸ್ವರಾಜ್ಯಕ್ಕಾಗಿ ಬಹು ಬಲವಾದ ಚಳವಳಿ ನಡಿಸಿದರು. ಅವರ ಪ್ರಭುಗಳು ಇದನ್ನು ತಡೆಹಿಡಿಸಲಾರದೆ ತಮ್ಮ ಸ್ವಾಧೀನತ್ವವನ್ನು ಸ್ವಲ್ಪ ಮಟ್ಟಿಗೆ ಬಿಡಬೇಕಾಯಿತು.

ಯುದ್ಧಾನಂತರ ನಡೆದ ಸಂಧಿ ನಾಟಕದಲ್ಲಿ ಐರೋಪ್ಯರು ನಿರ್ಲಜ್ಜೆಯಿಂದ ತಮ್ಮ ಮಾತನ್ನು ಮೀರಿ ಅರಬರನ್ನೂ ಚೀನರನ್ನೂ ಇರಾಣರನ್ನೂ ಮೋಸಪಡಿಸಿದರು. ಇದರಿಂದ ಏಷಿಯಾಖಂಡದವರಿಗೆ ಐರೋಪ್ಯರ ಮೇಲೆ ಅಳಿಸಲಸಾಧ್ಯವಾದ ದ್ವೇಷಾನಲವು ಹುಟ್ಟಿತು. ಈ ಸಂಧಿ ಸಭೆಯಲ್ಲಿ ಹಲವು ಏಷಿಯಾ ದೇಶೀಯರು ಪಾಶ್ಚಾತ್ಯರು ಆಚರಿಸುತ್ತಿದ್ದ ಕುಟಿಲ ನೀತಿಯನ್ನು ಕಲಿತು ಅವರ ಮೇಲೆ ಅದನ್ನೇ ಪ್ರಯೋಗಿಸ

ಆರಂಭಿಸಿದರು. ಈ ಸಂಧಿಸಭೆಯವರು ರುಷ್ಯದೇಶದಲ್ಲಿ ಬೋಲ್ಷೆವಿಕ ಸರಕಾರವು ಕೆಲತಿಂಗಳುಗಳಲ್ಲೇ ಶಿಥಿಲವಾಗುವುದೆಂದು ಎಣಿಸಿ ಅದನ್ನು ಲೆಕ್ಕಕ್ಕೆ ತಾರದೆ ನಾನಾವ್ಯವಸ್ಥೆಗಳನ್ನು ಕಲ್ಪಿಸಿದರು. ಈ ಎಣಿಕೆಯು ಅನ್ಯಥಾವಾದ್ದರಿಂದ ತದಾಧಾರವಾದ ವಿಚಾರಗಳೆಲ್ಲವೂ ಸಡಿಲವಾಗಿ ಕಳಚಿ ಬೀಳುತ್ತ ಬರುತ್ತಿವೆ.

## ೯ ವಿಲ್ಸನನ ಪ್ರಾಬಲ್ಯ

ಅಮೇರಿಕಾ ರಾಜ್ಯದ ಅಧ್ಯಕ್ಷನಾದ ವಿಲ್ಸನನು ಲೋಕದ ಸಕಲ ಜನರಿಗೂ ತಂತಮ್ಮ ಗತಿಯನ್ನು ಸ್ವಯಂನಿರ್ಣಯ ಮಾಡಿಕೊಳ್ಳತಕ್ಕ ಅಧಿಕಾರವಿದೆ ಎಂದು ಸಾರಿದನು. ಈ ಸ್ವಯಂನಿರ್ಣಯತತ್ತ್ವಕ್ಕೆ ಏಷಿಯಾಖಂಡದ ಮನಸ್ಸು ಎಳೆಯಲ್ಪಟ್ಟು, ಜನರು ಎಲ್ಲೆಲ್ಲೂ ಅದರ ಹೆಸರು ಹೇಳಿಕೊಂಡು ಸ್ವಾತಂತ್ರ್ಯವನ್ನು ಬಯಸುವವರಾದರು. ಇದರಿಂದ ಜನಜಾಗೃತಿ ಬಹಳವಾಗಿ ಹೆಚ್ಚಿತು.

## ೧೦ ಮಹಾತ್ಮಾ ಗಾಂಧಿಯವರ ಪ್ರಾಬಲ್ಯ

ಗಾಂಧಿಯವರ ಅಸಹಕಾರ ಮತ್ತು ಸತ್ಯಾಗ್ರಹ ಚಳವಳಿಗಳು ಭರತಖಂಡದಲ್ಲಿ ಹಿಂದೆ ಎಂದೆಂದಿಗೂ ಕಂಡು ಕೇಳಿಲ್ಲದಷ್ಟು ಜನಜಾಗೃತಿಯನ್ನು ಹುಟ್ಟಿಸುವುದರ ಜತೆಗೆ ಏಷಿಯದ ಸಕಲರಿಗೂ ಉತ್ಸಾಹವನ್ನೂ ಮೇಲ್ಪಂಕ್ತಿಯನ್ನೂ ಕಲ್ಪಿಸಿದವು.

## ೧೧ ಬೋಲ್ಷೆವಿಕ ಸಿದ್ಧಾಂತದ ಪ್ರಾಬಲ್ಯ

ರುಷ್ಯರು ರಕ್ತದಲ್ಲೂ ಗುಣಸ್ವಭಾವದಲ್ಲೂ ಅರ್ಧಪಾಲು ಏಷಿಯಾದವರಾಗಿರುವುದರಿಂದ ಇಲ್ಲಿಯ ಜನರೊಡನೆ ಇತರ ಪಾಶ್ಚಾತ್ಯರಿಗಿಂತಲೂ ಹೆಚ್ಚು ಎರಕದಿಂದ ಇರಬಲ್ಲರು. ಇವರ ಪ್ರಳಯಕಾರಕವಾದ ಬೋಲ್ಷೆವಿಕ ಸಿದ್ಧಾಂತವು ದೀನರಾಗಿ ದೆಸೆಗೆಟ್ಟಿರತಕ್ಕ ಜನರನ್ನು ಮುಗ್ಧ ಮಾಡುವುದರಲ್ಲಿ ಬಹಳ ಶಕ್ತವಾಗಿರುವುದು. ಅವರ ಮುಖಂಡರು ಅದನ್ನು ಉನ್ಮಾದಾವೇಶದಿಂದ ಎಲ್ಲೆಲ್ಲೂ ಹರಡುತ್ತಿರುವುದರಿಂದ ಅದು ಏಷಿಯದಲ್ಲಿ ಅತ್ಯಂತ ಪ್ರಾಬಲ್ಯವನ್ನು ಪಡೆದು ವಿದೇಶಿ ಸಾಮ್ರಾಜ್ಯಗಳನ್ನು ಧ್ವಂಸಮಾಡಲು ಜನಕೋಟಿಯನ್ನು ಎತ್ತಿ ಕಟ್ಟುತ್ತಿದೆ.

### ೧೨. ನವಜನಾಂಗೋದಯ

ಮುಸ್ತಫಾ ಕಮಾಲನು ತುರುಕರಾಜ್ಯವನ್ನು ಸರ್ವಾರಿಷ್ಟಗಳಿಂದಲೂ ಉದ್ಧರಿಸಿ ಅದನ್ನು ಅತ್ಯಂತ ಪ್ರಗತಿಸಂಪನ್ನವಾಗಿ ಮಾಡುತ್ತಿರುವ ಸಾಹಸ ಪ್ರಯತ್ನದ ದೃಶ್ಯವು ಏಷಿಯಾಖಂಡದವರಿಗೆ ಬಹು ಉತ್ತೇಜಕವಾಗಿ ಪರಿಣಮಿಸಿದೆ. ಹೀಗೆಯೇ ಚೀನಾ, ಇರಾಣ, ಸಯಾಮ ದೇಶಗಳಲ್ಲಿ ಸ್ವಲ್ಪ ಮಟ್ಟಿಗೆ ನಡೆಯುತ್ತಿದ್ದ ಪ್ರಯತ್ನಗಳೂ ಜಪಾನರ ಮೇಲ್ಪಂಕ್ತಿಯೂ ಈ ಖಂಡದವರಲ್ಲಿ ವಿಶೇಷ ಜಾಗೃತಿಯನ್ನು ಕಲ್ಪಿಸಲು ಕಾರಣವಾದವು.

# ೩ನೆಯ ಅಧ್ಯಾಯ

## ವಿವಿಧ ಜನಮಂಡಲ ಸಮಷ್ಟಿ ಚಳವಳಿಗಳು



ಷಿಯದ ಜನಜಾಗೃತಿಗೆ ಫಲವಾಗಿ ಪ್ರತಿದೇಶದಲ್ಲಿಯೂ ಹುಟ್ಟಿರುವ ಚಳವಳಿಗಳನ್ನು ವಿಚಾರಮಾಡುವದಕ್ಕೆ ಮೊದಲು, ದೇಶಭೇದವನ್ನು ಗಣಿಸದೆ ಪಂಥ, ಮತ, ಕುಲ ಇವುಗಳ ಸಾಮಾನ್ಯತ್ವವನ್ನು ಮುಖ್ಯವಾಗಿ ಭಾವಿಸಿ ಜನರು ದೇಶಾತೀತವೂ ಜನಾಂಗಾತೀತವೂ ಆದ ಜನಮಂಡಲಕೂಟಗಳನ್ನು ಕಟ್ಟಿ ಕೆಲಸ ಮಾಡಲು ಪ್ರಯತ್ನ ಪಟ್ಟಿರುವ ಸಮಷ್ಟಿ ಚಳವಳಿಗಳನ್ನು ಸ್ವಲ್ಪಮಟ್ಟಿಗೆ ಪರೀಕ್ಷಿಸಬಹುದು.

### ೧ ಅಖಿಲ ಏಷಿಯಾ ಜನಮಂಡಲ ಸಮಷ್ಟಿ (Pan-Asianism)

ಅಖಿಲ ಏಷಿಯನರನ್ನೂ ಏಕವಾಗಿ ಸೇರಿಸಿ ಬಲವನ್ನು ಪಡೆದು ಅಭಿವೃದ್ಧಿಯಾಗಬೇಕೆಂದು ಕೆಲ ಜಪಾನರು ಹಲವು ಸಂಘಗಳನ್ನು ಸ್ಥಾಪಿಸಿ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಪ್ರಕಟಿಸಿ ಚಳವಳಿ ನಡೆಸುತ್ತಿರುವರು. ೧೯೨೬ರಲ್ಲಿ ನಾಗಸಾಕಿಯಲ್ಲಿ ಒಂದು ಅಖಿಲ ಏಷಿಯಾ ಜನಪರಿಷತ್ತು ಸೇರಿದ್ದಿತು. ೧೯೩೦ರಲ್ಲಿ ಕಾಶಿನಗರದಲ್ಲಿ ಅಖಿಲ ಏಷಿಯಾ ವಿದ್ಯಾಭ್ಯಾಸಪರಿಷತ್ತು ಸಮಾವೇಶವಾಗಿತ್ತು. ಸರ್ವಜನಾಂಗ

ಮಂಡಲಿ (League of Nations) ಯು ತುರುಷ್ಕರನ್ನು ಬಹಿಷ್ಕರಿಸಿ ಐರೋಪ್ಯರ ಹಿತವನ್ನೇ ಸಾಧಿಸುತ್ತಿರುವುದರಿಂದ ತುರುಷ್ಕರೂ ಜಪಾನರೂ ಸಹ ಏಷಿಯಾದ ರಾಜ್ಯಗಳನ್ನು ಗುಂಪುಕಟ್ಟಿ ಐರೋಪ್ಯರ ಹಸ್ತವನ್ನು ಅಡಗಿಸಲು ಹಲವು ಪ್ರಯತ್ನಗಳನ್ನು ನಡೆಸಿರುವರು. ಆದರೆ ಈ ಸಮಷ್ಟಿ ಚಳವಳಿಯು ಈಗಿನ ಸ್ಥಿತಿಯಲ್ಲಿ ಐರೋಪ್ಯ ದ್ವೇಷವನ್ನು ಜಾಗೃತಿಗೊಳಿಸುವುದು ಹೊರತಾಗಿ ಮತ್ತಾವ ಪ್ರಯೋಜನವನ್ನೂ ಕಲ್ಪಿಸಲು ಸಮರ್ಥವಾಗಿಲ್ಲ.

## ೨. ಹಿಂದೂಜನಮಂಡಲ ಸಮಷ್ಟಿ

ಹಿಂದೂಧರ್ಮದಲ್ಲಿರುವಷ್ಟು ಭೇದಗಳೂ ಒಳಕಲಹಗಳೂ ಮತ್ತೆಲ್ಲೂ ಇಲ್ಲ. ಇದರಲ್ಲಿ ಹುಟ್ಟತಕ್ಕವರಿಗೆ ಪ್ರಗತಿಯೂ ಸುಧಾರಣೆಗಳೂ ಅಸಾಧ್ಯ ವಿಷಯಗಳಾಗಿವೆ. ಆದ್ದರಿಂದ ಪ್ರಗತಿಪರರೂ ಸುಧಾರಕರೂ ಆದ ಶೀಖರು, ಬ್ರಾಹ್ಮರು, ಆರ್ಯ ಸಮಾಜದವರು ಮುಂತಾದವರು ಹಿಂದೂಗಳೆಂದು ಹೇಳಿಕೊಳ್ಳಲು ಅನುಮಾನಿಸುತ್ತಿದ್ದರು. ಮತಾಂತರದಿಂದ ಹಿಂದೂಮತಕ್ಕೆ ಸೇರುವ ಪದ್ಧತಿ ಬಿಟ್ಟುಹೋಗಿ ಸಾವಿರಾರು ವರ್ಷಗಳಾಗಿದ್ದವು. ಹಿಂದೂ ಧರ್ಮದಿಂದ ಪರಧರ್ಮಕ್ಕೆ ವರ್ಷಕ್ಕೆ ಹಲವು ಲಕ್ಷ ಜನರು ಸೇರುತ್ತಿದ್ದರೂ ಹಿಂದೂ ಧರ್ಮದ ಮುಖಂಡರು ಉದಾಸೀನರಾಗಿರುತ್ತಿದ್ದರು. ಹಿಂದೂ ನಾಮವು ಹೇಡಿತನಕ್ಕೆ ಹೆಸರಾಗಿತ್ತು. ಹತ್ತು ಜನ ಮುಸಲ್ಮಾನ ಗೂಂಡರಲ್ಲಿ ಹತ್ತು ಸಾವಿರ ಹಿಂದೂಗಳನ್ನು ನಡುಗಿಸುವಷ್ಟು ಸಾಮರ್ಥ್ಯವಿತ್ತು.

ಆದರೆ ಈಗ ನಮ್ಮ ಕಣ್ಣೆದುರಿಗೆ ಹಿಂದೂ ಜನರಲ್ಲಿ ಒಂದು ವಿಸ್ಮಯಕರವಾದ ಕ್ರಾಂತಿಯು ಹುಟ್ಟಿದೆ. ಪರಮತದಿಂದ ಈ ಧರ್ಮಕ್ಕೆ ಸೇರಿಸಿಕೊಳ್ಳುವ ಶುದ್ಧೀಕ್ರಮವು ಸರ್ವರಿಂದಲೂ ಅಂಗೀಕರಿಸಲ್ಪಟ್ಟು ಪ್ರತಿವರ್ಷವೂ ಸಾವಿರಗಟ್ಟಲೆ ಜನರು ಹಿಂದೂಗಳಾಗುತ್ತಿರುವರು. ಹಿಂದೂ ಧರ್ಮದಿಂದ ಹೊರಕ್ಕೆ ಹೋಗುವ ಪದ್ಧತಿಯು ಕಡಿಮೆಯಾಗಿದೆ. ಅಖಿಲ ಹಿಂದೂ ಮಹಾ ಸಭೆ ಎಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟು ಭಾರತ ದೇಶ ಜನ್ಯವಾದ ಜೈನ ಬೌದ್ಧಾದಿ ಮತಗಳನ್ನೆಲ್ಲಾ ತನ್ನ ಅಂಗವಾಗಿ ಮಾಡಿಕೊಂಡು ಹಿಂದೂ ಸಮಾಜದಲ್ಲಿ ಪ್ರಳಯಸದೃಶವಾದ ಸುಧಾರಣೆ

ಗಳನ್ನು ಕಲ್ಪಿಸುತ್ತ ಹಿಂದೂ ಜನರಲ್ಲಿ ಹಿಂದೆ ಎಂದೂ ಗೋಚರಿಸದ ಐಕಮತ್ಯವನ್ನು ಹುಟ್ಟಿಸಿದೆ. ಅಸ್ಪೃಶ್ಯತಾ ನಿವಾರಣೆಯು ಸರ್ವತ್ರ ಜಯವನ್ನು ಪಡೆಯುತ್ತಿದೆ. ಭಗವದ್ಗೀತೆಯು ಈಗ ಪಡೆದಿರುವಷ್ಟು ಪ್ರಾಬಲ್ಯವನ್ನು ಚರಿತ್ರೆಯಲ್ಲಿ ಯಾವಾಗಲೂ ಪಡೆದಿರಲಿಲ್ಲ. ಹಿಂದೂ ವಿದ್ಯೆಯ ಉಜ್ವಲ ಕೀರ್ತಿಯು ದಿಗಂತವಾಗಿ ಹಬ್ಬಿದೆ. ಹಿಂದೂ ಗಳ ಶೋಷಿತನವು ಹಳೆಯ ಕಥೆಯಾಗುತ್ತಿದೆ. ಪರದೇಶಗಳಲ್ಲಿ ನೆಲಸಿರುವ ಹಿಂದೂ ದೇಶೀಯರ ಹಿತವನ್ನು ನೋಡಿಕೊಳ್ಳುವ ಬುದ್ಧಿಯು ಈ ದೇಶದಲ್ಲಿ ಬಹಳ ಜಾಗೃತಿಯನ್ನು ಪಡೆದಿದೆ.

ಹಿಂದೂ ಸಮಷ್ಟಿ ಚಳವಳಿಯು ಭಾರತ ಜನಾಂಗ ಸಮಷ್ಟಿಗೆ ವೈರಿಯಾಗಿಲ್ಲವಾದರೂ ಈ ದೇಶದ ಮುಸಲ್ಮಾನರಲ್ಲಿ ತುಂಬಾ ಭೀತಿಯನ್ನು ಹುಟ್ಟಿಸಿದೆ. ಈ ಭೀತಿಯಿಂದ ಒಂದು ಶಾಖೆಯ ಮುಸಲ್ಮಾನರು ಭಾರತ ಸ್ವರಾಜ್ಯಕ್ಕೆ ಅಹಿತವನ್ನು ಬಯಸಲು ತೊಡಗಿರುವರು.

## (೩) ಯೂದ ಜನಮಂಡಲ ಸಮಷ್ಟಿ

ಯೂದ ಜನರು ಪೆಲೆಸ್ತಿ ಜನರ ದೇಶವನ್ನು ಬಹು ಕಾಲಕ್ಕೆ ಹಿಂದೆ ಜಯಿಸಿ ತಮ್ಮ ಮಾತೃ ದೇಶವಾಗಿ ಮಾಡಿಕೊಂಡು ಸುಮಾರು ಎರಡು ಸಾವಿರ ವರ್ಷ ಅಲ್ಲಿ ಮೆರೆದರು. ಬೈಬಲಿನ ಪೂರ್ವಾರ್ಧವು ಇವರ ಚರಿತ್ರೆಯನ್ನು ತಿಳಿಸುವದು. ಈ ಜನರು ಪದೇ ಪದೇ ಶತ್ರುಗಳಿಂದ ಭಂಗ ಪಟ್ಟರು. ಕಡೆಗೆ ಒಂದನೆಯ ಶತಮಾನದಲ್ಲಿ ರೋಮಕರ ದುರಾಗ್ರಹಕ್ಕೆ ಬಲಿಯಾಗಿ ಸ್ವದೇಶವನ್ನು ಪರಿತ್ಯಜಿಸಿ ಯುರೋಪಿನಲ್ಲಿ ನಾನಾ ದೇಶಗಳಲ್ಲಿ ನೆಲೆಸಿದರು. ಯುರೋಪಿನ ಕ್ರಿಸ್ತರು ತಮ್ಮ ಗುರುದೇವನನ್ನು ಯೂದರು ಕೊಲ್ಲಿಸಿದರೆಂಬ ತಪ್ಪಿತಕ್ಕಾಗಿ ಇವರನ್ನು ಸರ್ವದಾ ಅತಿ ಕ್ರೂರವಾಗಿ ಹಿಂಸಿಸುತ್ತ ಬಂದಿರುವರು. ಕ್ರಿ. ಶ. ೧೯ನೆಯ ಶತಮಾನದ ಅಂತ್ಯ ಭಾಗದಲ್ಲಿ ಈ ಹಿಂಸೆಯು ಶನೈಃ ವಿಪರೀತವಾಗಿ ಮರುಕಳಿಸಿತು. ಆಗ ಥಿಯೋಡೋರ ಹರ್ಜಲ್ (Horzl) ಎಂಬ ಯೂದ ಮನುಷ್ಯನು ತಮ್ಮ ಜನರನ್ನು ಸ್ವದೇಶವಾದ ಪೆಲೆಸ್ತಿ ದೇಶಕ್ಕೆ ಕರೆದುಕೊಂಡು ಹೋಗಿ ನೆಲೆಗೊಳಿಸಿ ಸಂರಕ್ಷಿಸಬೇಕೆಂದು ಒಂದು ಚಳವಳಿಯನ್ನು ಪ್ರಾರಂಭಿಸಿದನು. ಜರುಸಲೇಮ್ ನಗರದ ಒಂದು ಪುಣ್ಯ ಕ್ಷೇತ್ರವಾದ ಜಯಾನ್ (Zion)

ಎಂಬುವರ ಅಂಕಿತದಿಂದ ಈ ಚಳವಳಿಕಾರರು ಜಯೊನ್ ಪಕ್ಷದವರು ಎಂದು ಪ್ರಸಿದ್ಧರಾದರು. ಇವರು ೧೮೯೭ರಲ್ಲಿ ಒಂದು ಪರಿಷತ್ತನ್ನು ಕೂಡಿಸಿದ್ದರು. ಪ್ಯಾಲೆಸ್ತ ದೇಶದ ಸಮ್ರಾಟನಾಗಿದ್ದ ಅಬ್ದುಲ್ ಹಾಮೀದನು ಇವರಲ್ಲಿ ಸಹಾನುಭೂತಿ ತೋರಿಸಿದಂತೆ ನಟಿಸಿದರೂ ಕಾರ್ಯತಃ ಏನೂ ಸಹಾಯ ಮಾಡಲಿಲ್ಲ. ಆದರೆ ಪ್ಯಾಲೆಸ್ತ ದೇಶವನ್ನು "ಯೂದಜನಾಂಗ ವಾಸಭೂಮಿ"ಯಾಗಿ ಮಾಡಲು ಈ ಜಯೊನ್ ಪಕ್ಷದ ಕಾರ್ಯನಿರ್ವಾಹಕ ಸಂಸ್ಥೆಯು ಚಳವಳಿ ನಡೆಸುತ್ತಾ ಬಂದು ಕಳೆದ ಐರೋಪ್ಯ ಯುದ್ಧ ಕಾಲದಲ್ಲಿ ಬ್ರಿಟಿಷರ ಸಹಾಯದಿಂದ ತನ್ನ ಇಷ್ಟಾರ್ಥವನ್ನು ಪಡೆಯಿತು. ೧೯೧೭ನೇ ನವೆಂಬರ ೨ರಲ್ಲಿ ಬ್ರಿಟಿಷರ ವಿದೇಶ ಮಂತ್ರಿಯಾದ ಬಾಲ್ಫರನು ಹೀಗೆ ಮಾಡಲು ಯೂದರಿಗೆ ಭರವಸೆ ಕೊಟ್ಟನು. ಇದು "ಬಾಲ್ಫರನ ಭರವಸೆ" (Balfour Declaration) ಎಂದು ಪ್ರಸಿದ್ಧವಾಗಿದೆ.

ಈ ವಿಜ್ಞಾಪನೆಯಂತೆ ಸಾವಿರಾರು ಮಂದಿ ಯೂದರು ಪ್ಯಾಲೆಸ್ತ ದೇಶಕ್ಕೆ ಹೋಗಿ ನೆಲಸಿದರು. ಇದು ಅಲ್ಲಿನ ಅರಬರಿಗೂ ಮುಸಲ್ಮಾನರಿಗೂ ಸಹನವಾಗದೆ ಅವರು ಆ ದೇಶದಲ್ಲಿ ಯೂದರನ್ನು ನಿರ್ನಾಮ ಮಾಡಲು ಬಹಿರಂಗವಾಗಿ ಪ್ರಯತ್ನಿಸುತ್ತಿರುವರು. ೧೯೩೦ರಲ್ಲಿ ಪ್ರಾಪ್ತವಾದ ಆರ್ಥಿಕ ಮುಗ್ಗಟ್ಟಿನಿಂದ ಸಹ ಅಲ್ಲಿನ ಯೂದರಿಗೆ ತುಂಬಾ ಕಷ್ಟನಷ್ಟಗಳು ಸಂಭವಿಸಿವೆ.

ನಾನಾ ಜನಾಂಗಗಳಲ್ಲಿ ಚದರಿ ಹೋಗಿರುವ ಯೂದರು ಒಂದು ಪ್ರತ್ಯೇಕ ವಾಸ ಭೂಮಿಯನ್ನು ಸಂಪಾದಿಸಿ ಅಲ್ಲಿ ನೆಲೆಸಿ ತಾವೂ ಒಂದು ಸ್ವತಂತ್ರ ಜನಾಂಗ ರಾಜ್ಯವನ್ನು ಕಟ್ಟಬೇಕೆಂದು ಆಶೆ ಪಡುತ್ತಿದ್ದರು. ಜಯೊನ್ ಪಕ್ಷದವರಲ್ಲದ ಇತರ ಯೂದರು ಬೆಂಗಾಡು ಕೊಂಪೆಯಾಗಿ, ಒರಟರಾದ ಅರಬರಿಂದ ತುಂಬಿರುವ ಪ್ಯಾಲೆಸ್ತ ದೇಶವನ್ನು ಬಿಟ್ಟು ಅಮೇರಿಕಾ ಅಥವಾ ದಕ್ಷಿಣ ಆಫ್ರಿಕಾದಲ್ಲಿ ಬಿಡುವಾಗಿರುವ ಒಂದು ಪ್ರದೇಶವನ್ನು ತಮ್ಮ ಜನಾಂಗದ ವಾಸಭೂಮಿಯಾಗಿ ಪಡೆಯಬೇಕೆಂದು ಹೇಳುತ್ತಿದ್ದರು. ಜಯೊನರು ದುಡುಕಿ ಪ್ಯಾಲೆಸ್ತ ದೇಶವನ್ನು ಆರಿಸಿ ಬಿಟ್ಟರು. ಯೂದರಿಗೆ ಈ ದೇಶದ ರಾಜ್ಯಾಧಿಕಾರವು ದೊರೆಯಲಿಲ್ಲ. ಬ್ರಿಟಿಷರು ಅದನ್ನು ತಮ್ಮ ವಶಪಡಿಸಿಕೊಂಡು ತಮ್ಮ ಲಾಭಾರ್ಥ ಯೂದರ ಸಹಾ

ಯುವನ್ನು ಬಳಸಿಕೊಂಡರು. ಆರ್ಥಿಕ ಮುಗ್ಗಟ್ಟಿನಿಂದಲೂ ಮುಸಲ್ಮಾನರ ಅತ್ಯಾಚಾರದಿಂದಲೂ ನೊಂದ ಜೂದರು ಆ ದೇಶದಲ್ಲಿ ತಮಗೆ ಉಳಿಗಾಲ ವಿಲ್ಲವೆಂದು ತಿಳಿಯುತ್ತಿರುವರು. ಅಮೇರಿಕಾ ಯುರೋಪು ಖಂಡಗಳಲ್ಲಿ ಸರ್ವತ್ರ ಕೀರ್ತಿಶ್ರೇಷ್ಠರಾಗಿ ಅಸಾಧಾರಣ ಪ್ರತಿಭಾಸಂಪನ್ನರಾಗಿ ಮೆರೆಯುತ್ತಿರುವ ಜೂದರು ಈ ಪ್ರದೇಶದಲ್ಲಿ ತಮ್ಮ ಶಕ್ತಿಸಾಮರ್ಥ್ಯಗಳನ್ನು ಪ್ರಕಟಿಸಲು ಸಾಧ್ಯವಿಲ್ಲ.

ಜೂದರ ಈ ಚಳವಳಿಯಿಂದ ಏಷಿಯಾ ಖಂಡದ ಮೇಲೆ ಆಗುವ ಪರಿಣಾಮವನ್ನು ಪ್ಯಾಲೆಸ್ತ ದೇಶದ ವಿವರಣೆಯಲ್ಲಿ ತಿಳಿಯಬಹುದು.

## (೪) ಪೀತ ಜನ ಮಂಡಲ ಸಮಷ್ಟಿ

ಏಷಿಯದ ಜನರನ್ನು 'ಆರ್ಯ' 'ಶ್ಯಾಮಕ' ಅಥವಾ 'ಸೆಮಿತಿಕ' 'ಮಂಗೋಲ' ಎಂದು ಮೂರು ಮಹಾಕುಲಗಳಾಗಿ ವಿಭಾಗಿಸುವುದು ರೂಢಿ. ಹಿಂದೂಗಳು, ಪಠಾಣರು, ಇರಾಣಿಯರು, ಕುರುದರು(Kurds) ಜಾರ್ಜಿಯೂನರು ಇವರು ಇಲ್ಲಿನ ಮುಖ್ಯ ಆರ್ಯಕುಲದವರು. ಅರಬರೂ ಜೂದರೂ ಆರ್ಮೇನಿಯನರೂ ಶ್ಯಾಮಕರು. ಮಂಗೋಲರಲ್ಲಿ ಪೂರ್ವ ಪಶ್ಚಿಮ ಎಂದು ಎರಡು ದೊಡ್ಡ ಶಾಖೆಗಳುಂಟು. ಪೂರ್ವ ಶಾಖೆಯವರು ಪೀತಕುಲದವರು. ಇವರು ಚೀನಾ ಸಾಮ್ರಾಜ್ಯ ಜಪಾನ, ಹಿಂದೂ ಚೀಣಾ, ಮಲಯ ದೇಶಗಳನ್ನೆಲ್ಲ ಆವರಿಸಿರುವರು. ಪಶ್ಚಿಮ ಶಾಖೆಯ ಮಂಗೋಲರು ತುರಾಣರು. ಅವರಲ್ಲಿ ತಾತರು(Tartars or Tatars) ತುರುಕರು, ತಾಜಿಕರು, ಬಲ್ಗಾರರು, ಹಂಗೇರಿಯ ಮಗರು ಮುಖ್ಯರು.

ಜನಸಂಖ್ಯೆಯಲ್ಲಿ ಅಧಿಕವಾಗಿರುವ ಪೀತಕುಲದವರು ಒಗ್ಗಟ್ಟಾಗಿ ಸೇರಿ ಕೈಮಾಡಿದರೆ ಬಿಳಿಯ ಜನರನ್ನು ತಗಣೆಯಂತೆ ಒರಸಬಲ್ಲರಾದ್ದರಿಂದ ಬಿಳಿಯರು ಈ "ಮಂಗೋಲ ಗಂಡಾಂತರ" ಅಥವಾ (Yellow Peril)"ಪೀತ ಭೀತಿ"ಯನ್ನು ಪರಿಹರಿಸಿಕೊಳ್ಳಲು ಈಗಲಿಂದಲೂ ಅಣಿಮಾಡಿಕೊಳ್ಳಬೇಕೆಂದು ಕೆಲ ಪಾಶ್ಚಾತ್ಯ ಪಂಡಿತರು ಉಪೇಕ್ಷೆ ಎಬ್ಬಿಸಿರುವರು. ಇದು ನಿರಾಧಾರವಾದ ಅಪವಾದವೇ ಸರಿ. ಈ ದೇಶಗಳವರು ವಿವಿಧ ಉಪಕುಲಗಳಿಗೆ ಸೇರಿ ನಡೆ ನುಡಿ ಚರಿತ್ರೆ, ನಾಗರಿಕ

ಶೆಗಳಲ್ಲಿ ತೀರ ಭಿನ್ನರಾಗಿರುವರು. ಇವರೆಲ್ಲರೂ ಎಂದಿಗೂ ಒಂದೇ ಜನಾಂಗವಾಗಿ ಸೇರಲಾರರು. ಅತ್ಯಂತ ದೀನ ಸ್ಥಿತಿಯಲ್ಲಿರುವ ಈ ದೇಶಗಳು ಪಾಶ್ಚಾತ್ಯರನ್ನು ಸೋಲಿಸಬೇಕಾದರೆ ಅದು ಅಸಾಧ್ಯವಾದ ಪ್ರಗತಿಯನ್ನು ಪಡೆಯದೆ ಆಗಲಾರದು. ಯುದ್ಧ ಜಯಕ್ಕೆ ಜನಸಂಖ್ಯೆ ಕಾರಣವಾಗುವುದಿಲ್ಲ; ಈ ಜನರಿಗೆ ಶಸ್ತ್ರೋಪಕರಣದ ಉಪಪತ್ತಿ ಸುಲಭವಾಗಿ ದೊರೆಯಲಾರದು. ಇವರಿಗೆ ತಮ್ಮ ಸ್ವಾತಂತ್ರ್ಯದ ಉಪಾಸನೆಯೇ ಮುಖ್ಯ ಪುರುಷಾರ್ಥವಾಗಿರುವುದೇ ಹೊರತು ಪಾಶ್ಚಾತ್ಯ ಶಾಸನವಲ್ಲ. ಬಿಳಿಯರು ತಮಗೆ ವಿಧಿಸಿರುವ ದಾಸ್ಯವನ್ನು ಒಡೆಯಲು ಈ ಜನರು ನಡೆಸುವ ಪ್ರಯತ್ನಕ್ಕೆ ಮರುಳರಾದ ಯುರೋಪ್ಯರು ಪೀತ ಭೀತಿ ಎಂದು ಹೆಸರಿಟ್ಟು ಅದನ್ನು ಅಡಗಿಸಬೇಕೆಂದು ತಮ್ಮ ಜನರನ್ನು ಹುರಿದುಂಬಿಸುತ್ತಿರುವರು. ಪೀತ ಜನಕುಲ ಸಮಷ್ಟಿ ಭಾವವು ಪಾಶ್ಚಾತ್ಯರ ಮನಸ್ಸಿನ ಬೇಳಂಬವೇ ಹೊರತು ಮತ್ತೇನೂ ಇಲ್ಲ. ೧೯೨೪ರಲ್ಲಿ ಅಮೇರಿಕದವರು ಚೀನಾಜಪಾನರನ್ನು ತಮ್ಮ ದೇಶಕ್ಕೆ ಬರಕೂಡದೆಂದು ಬಹಿಷ್ಕರಿಸಿದಾಗಲೂ ೧೯೩೭–೩೮ರಲ್ಲಿ ಚೀನಿರಿಗೂ ಅಮೇರಿಕಾ ಮತ್ತು ಬ್ರಿಟಿಶ ಜನರಿಗೂ ದ್ವೇಷ ಹುಟ್ಟಿದ್ದಾಗಲೂ ಜಪಾನ ಚೀನಾ ದೇಶಗಳಲ್ಲಿ ಈ ಸಮಷ್ಟಿವಾದವು ಸ್ವಲ್ಪ ತಲೆಯೆತ್ತಿಕೊಂಡಿತ್ತು. ೧೯೩೧-೩೨ರಲ್ಲಿ ಈ ಎರಡು ದೇಶಗಳಿಗೂ ಅತ್ಯಸ್ಪಷ್ಟವಾದ ವೈರವು ಪ್ರಾಪ್ತವಾಗಿದೆ. ಪೀತಕುಲಸಮಷ್ಟಿಯು ಎಂದಿಗೂ ಕಾರ್ಯಕಾರಿಯಲ್ಲ. ಅದಕ್ಕಾಗಿ ಯಾರೂ ಸಾಹಸ ಪಡುತ್ತಿಲ್ಲ.

### (ಬ) ತುರಾಣಿ ಜನಸಂಘಟನ ಸಮಷ್ಟಿ (Pan-Turanianism)

ತುರಾಣ ಕುಲದವರಲ್ಲಿ ಪ್ರಧಾನರಾದ ತುರುಕರು ಮಂಗೋಲಿಯದಿಂದ ಪಶ್ಚಿಮಕ್ಕೆ ಮಧ್ಯ ಏಷಿಯಾದಲ್ಲಿ ಹರಡಿದರು. ಈ ದೇಶವು ಇದರಿಂದ ತುರ್ಕಸ್ಥಾನ ಎನ್ನಿಸಿಕೊಂಡಿತು. ಈಗ ಇದರ ಪೂರ್ವಾರ್ಧವು ಚೀನಾ ಸಾಮ್ರಾಜ್ಯಕ್ಕೂ ಪಶ್ಚಿಮಾರ್ಧವು ರಷ್ಯದ ಸಾಮ್ರಾಜ್ಯಕ್ಕೂ ಸೇರಿದೆ. ಈ ತುರುಕರಲ್ಲಿ ಉಸ್ಮಾನಿ- ತುರುಕರು (Osmanli or Ottoman Turks), ತುರುಕಮಾನರು (Turkomans), ತಾತರರು ಎಂಬ ಪ್ರಭೇದಗಳಿವೆ. ಮೊದಲನೆಯವರು ಅಂಗೋರದಲ್ಲಿ ಆಳ

ತ್ತಿರುವರು, ತುರ್ಕರು ಮಧ್ಯಏಷಿಯಾದಲ್ಲಿರುವರು. ತುರುಕರನ್ನು ಆಕ್ಸಸ ನದಿಯಿಂದ ಪಶ್ಚಿಮಕ್ಕೆ ಬಿಡದಂತೆ ಇರಾಣ ರಾಜರೂ ಆ ಬಳಿಕ ಬಗದಾದಿನ ಖಲೀಫರೂ ತಡೆಗಟ್ಟಿದ್ದರು. ಈ ಜನರು ಕ್ರಮವಾಗಿ ಖಲೀಫರ ಆಶ್ರಯವನ್ನು ಪಡೆದು ಇಸ್ಲಾಮ ಧರ್ಮವನ್ನವಲಂಬಿಸಿ ಕ್ರಿ. ಶ. ೧೦೦೦ರಿಂದ ಖಲೀಫರ ಸಾಮ್ರಾಜ್ಯವನ್ನು ತಮ್ಮ ವಶಪಡಿಸಿಕೊಂಡು ಹಂಚಿಕೊಂಡು ಮುಸಲ್ಮಾನ ಪ್ರಪಂಚಕ್ಕೆ ಒಡೆಯರಾದರು. ಈ ಅಧಿಪತ್ಯವು ಇದುವರೆಗೂ ೯ ಶತಮಾನಕಾಲ ನಡೆದುಬಂದಿತು. ಮುಸಲ್ಮಾನ ಪ್ರಪಂಚಕ್ಕೆ ನಾಲ್ಕು ಶತಮಾನ ಅಧೀಶ್ವರರಾಗಿದ್ದ ಅರಬರು ತುರುಕರ ಅಧೀನ ಪ್ರಜೆಗಳಾದರು.

ಪೂರ್ವದೇಶದಲ್ಲಿ ಉಳಿದಿದ್ದ ತಾತರ ಜನರು ೧೩-೧೪ನೆಯ ಶತಮಾನದಲ್ಲಿ ಪಶ್ಚಿಮಮುಖವಾಗಿ ಧಾಳಿ ಹೊರಟು ತುರುಕರ ಮತ್ತು ಅರಬ ಖಲೀಫರ ರಾಜ್ಯಗಳನ್ನು ನಾಶಮಾಡಿ ಕೋಟ್ಯಂತರ ಜನರನ್ನು ಕೊಂದು ಯೂರೋಪಿನ ರಷ್ಯಾ ದೇಶವನ್ನು ವಶಪಡಿಸಿಕೊಂಡು ಹಲವು ಮಹಾ ಸಾಮ್ರಾಜ್ಯಗಳನ್ನು ಕಟ್ಟಿ ಮೆರೆದು ಅಸ್ತರಾದರು. ಕ್ರಮವಾಗಿ ಇವರೂ ಮುಸಲ್ಮಾನರಾದರು. ತಾತ ಕುಲದವರು ಈಗ ಯೂರೋಪಿನ ದಕ್ಷಿಣ ರಷ್ಯಾದೇಶದಲ್ಲೂ ಶಿಬಿರ ದೇಶದಲ್ಲೂ ಮಂಗೋಲಿಯದಲ್ಲೂ ಅಸರಬೈಜಾನದಲ್ಲೂ ತುಂಬಿರುವರು. ಇವುಗಳಿಗೆ ದಕ್ಷಿಣಕ್ಕಿರುವ ದೇಶಗಳಲ್ಲಿ ತಾತರು ಇತರರೊಡನೆ ಬೆರೆತುಹೋಗಿರುವರು.

ಮಗರರೂ (Magyars) ಬುಲ್ಗೇರರೂ ಓಸ್ಮಾನಿ ತುರುಕರೂ ತಕ್ಕಷ್ಟು ಪರರೊಡನೆ ಬೆರೆತು ದೇಹಗುಣ ಮನೋಗುಣಗಳಲ್ಲಿ ಯುರೋಪ್ಯರಂತೆ ಆಗಿರುವರು. ಈ ಮೂವರೂ ಯೂರೋಪಿನಲ್ಲಿ ಬಾಲ್ಕನ ದೇಶದಲ್ಲಿ ತುಂಬಿರುವ ಸ್ಲಾವ ಜನರನ್ನು ಜಯಿಸಿ ಆಳುತ್ತಿದ್ದರು.

ತುರಾಣ ಸಮಷ್ಟಿಭಾವನೆ ಯೂರೋಪಿನಲ್ಲಿ ಹುಟ್ಟಿ ಏಷಿಯಾ ಖಂಡಕ್ಕೆ ಹರಡಿತು. ಯೂರೋಪಿನ ಪೂರ್ವಾರ್ಧದಲ್ಲಿ ತುಂಬಿರತಕ್ಕ ಸ್ಲಾವ ಜನರನ್ನು ಜರ್ಮನರೂ [illegible] ತುರಾಣರೂ ಅಡಗಿಸಿ ಅಧೀನಪಡಿಸಿಕೊಂಡಿದ್ದರು. ಸ್ಲಾವರಲ್ಲಿ ವಿದ್ಯೆಯನ್ನು ಪಡೆದ ಮುಖ್ಯಕರು ತಮ್ಮ ಕುಲದವರ ಉದ್ಧಾರವನ್ನು ಬಗೆದು ಸ್ಲಾವ ಜನಮಂಡಲ

ಸಮಷ್ಟಿ (Pan-Slavism) ಯ ಚಳವಳಿಯನ್ನು ಹುಟ್ಟಿಸಿದರು. ಅದನ್ನು ಎದುರಿಸುವುದಕ್ಕಾಗಿ ತುರಾಣ ಜನಸಮುಂಪಲಸಮಷ್ಟಿಯ ಚಳವಳಿಯನ್ನು ಕಲ್ಪಿಸಿದರು. ೧೯೧೨ರ ಬಾಲ್ಕನ ಯುದ್ಧದಲ್ಲಿ ಸ್ಲಾವರು ಜಯಶೀಲರಾದರು. ೧೯೧೪ರಲ್ಲಿ ರುಸ್ಯರು ಸ್ಲಾವರಾದ ಸರ್ವಿಯದವರನ್ನು ಉಳಿಸುವ ಸಲುವಾಗಿ ಯುದ್ಧಕ್ಕೆ ಹೋದರು. ತುರಾಣಜಾತಿಯ ತುರುಕರೂ ಬಲ್ಗಾರರೂ ಜರ್ಮನರ ಪಕ್ಷವನ್ನು ವಹಿಸಿದರು.

ದಕ್ಷಿಣ ರುಸ್ಯದ ದೇಶದ ತಾತರಕುಲದವನಾದ ಯೂಸುಫ ಬೇ ಅಕ್ಷ್ಯುರಿಯಾ ಓಗ್ಲು ಎಂಬಾತನು ಕಾನಸ್ಟಾಂಟಿನೋಪಲಿನಲ್ಲಿ ತುರಾಣ ಸಮಷ್ಟಿಯ ಪ್ರಥಮ ಸಂಘವನ್ನು ಸ್ಥಾಪಿಸಿ "ಮೂರು ರಾಜನೀತಿಯ ಕ್ರಮಗಳು" ಎಂಬ ಗ್ರಂಥವನ್ನು ಬರೆದನು. ತುರಾಣಸಮಷ್ಟಿವಾದಿಗಳು ಈ ಪುಸ್ತಕವನ್ನು ತಮ್ಮ ವೇದವೆಂದು ಭಾವಿಸುವರು. ಅಹಮ್ಮದ್ ಬೇ ಅಗಯೆಫ ಎಂಬ ಮತ್ತೊಬ್ಬ ರುಸ್ಯದ ತಾತರಕುಲದವನು ತುರುಕ ಯೂರ್ದ (= ತುರುಕ ವಾಸಭೂಮಿ) ಎಂಬ ಪತ್ರಿಕೆಯನ್ನು ಹೊರಡಿಸಿ ಈ ಭಾವವನ್ನು ಬಹುವಾಗಿ ಪ್ರಚಾರ ಪಡಿಸಿದನು. ತುರುಕ ಸುಲ್ತಾನ ಅಬ್ದುಲ ಹಮೀದನು ಈ ಚಳವಳಿಯು ತನ್ನ ಅಖಿಲಇಸ್ಲಾಮಸಮಷ್ಟಿಯ ಚಳವಳಿಗೆ ಕಂಟಕಕಾರಿಯೆಂದು ತಿಳಿದು ವಿರೋಧಿಸಿದನು. ಆತನನ್ನು ಓಡಿಸಿ ೧೯೦೮ರಲ್ಲಿ ಅಧಿಕಾರಕ್ಕೆ ಬಂದ ಬಾಲ-ತುರುಕ ಪಕ್ಷ (Young-Turk Party) ದವರು ತುರಾಣ ಸಮಷ್ಟಿವಾದಿಗಳಾಗಿದ್ದುದರಿಂದ ತಮ್ಮ ಸಾಮ್ರಾಜ್ಯದಲ್ಲಿದ್ದ ಸ್ಲಾವರನ್ನೂ ಅರಬರನ್ನೂ ಆರ್ಮೇನಿಯರನ್ನೂ ಅಡಗಿಸಲು ಪ್ರಯತ್ನಿಸಿ ವಿಫಲರಾಗಿ ಭಂಗಪಟ್ಟರು. ೧೯೧೨ರಲ್ಲಿ ತುರುಕರು ಯೂರೋಪಿನಲ್ಲಿದ್ದ ತಮ್ಮ ರಾಜ್ಯವನ್ನು ಕಳೆದುಕೊಂಡದ್ದರಿಂದ, ಏಷಿಯಾದಲ್ಲಿ ಅಖಿಲತುರಾಣಖಂಡವನ್ನು ಗೆದ್ದು ಸೇರಿಸಿಕೊಳ್ಳಲು ಬಗೆದು ೧೯೧೪ರಲ್ಲಿ ರುಸ್ಯರ ಮೇಲೆ ಕೈಮಾಡಿದರು. ಆ ಕಾಲದಲ್ಲಿ ತುರ್ಕಿಯಲ್ಲಿ ಮಂತ್ರಿಗಳಾಗಿದ್ದ ತಲಾತ್ ಪಾಷಾ, ಅನ್ವರ ಪಾಷಾ, ಮತ್ತು ಮುಖ್ಯ ಸೇನಾಪತಿ ಜಮಾಲ್ ಪಾಷಾ ಇವರುಗಳು ಅತ್ಯುಗ್ರ ತುರಾಣ ಸಮಷ್ಟಿವಾದಿಗಳಾಗಿದ್ದರು.

ಈ ಯುದ್ಧದಲ್ಲಿ ಬ್ರಿಟಿಷರು ಮೆಸಪೊಟೇಮಿಯಾ ಪ್ಯಾಲೆಸ್ತ ದೇಶ

ಗಳಿಗೆ ದಂಡೆತ್ತಿ ಬಂದಾಗ ಈ ತುರುಕ ಪ್ರಧಾನರು ತಮ್ಮ ಸೇನೆಯನ್ನು ತುರಾಣಿ ಉದ್ದೇಶಕ್ಕೆ ವಿನಿಯೋಗಿಸದೆ ಈ ಅತುರಾಣಿದೇಶಗಳನ್ನು ಉಳಿಸಿಕೊಳ್ಳುವ ಸಮರ ಕಾರ್ಯಕ್ಕಾಗಿ ಪೋಲು ಮಾಡಬಾರದೆಂದು ಬಗೆದು ಕೇವಲ ಜರ್ಮನರ ನಿರ್ಬಂಧದಿಂದ ಬ್ರಿಟಿಷರನ್ನು ಎದುರಿಸಿದ ರಾಷ್ಟ್ರವಾದಿ ಈ ದೇಶಗಳನ್ನು ಕಳೆದುಕೊಂಡರು. ಇವರು ತಮಗೂ ತುರಾಣಿರಾದ ಅಸರ್ಬೈಜಾನೀಯರಿಗೂ ನಡುವೆ ಅಡ್ಡವಾಗಿ ಉಳಿದಿರುವ ಶ್ಯಾಮಲ ಕುಲದ ಕ್ರಿಸ್ತಮತದ ಆರ್ಮೇನಿಯರ ಮೇಲೆ ತಮ್ಮ ಸರ್ವ ಪ್ರತಾಪವನ್ನೂ ತೋರಿಸಿ ಬಹುಮಂದಿಯನ್ನು ಕೊಂದು, ಲಕ್ಷಾಂತರ ಜನರನ್ನು ಆ ಪ್ರಾಂತ್ಯದಿಂದ ಪರಸ್ಥಳಕ್ಕೆ ಸಾಗಿಸಿ ನಿರ್ಮೂಲನ ಮಾಡಿ ತುರಾಣಿಖಂಡವು ಏಕರೂಪವಾಗಿ ಉದ್ದಕ್ಕೂ ಹರಡಿರುವಂತೆ ಮಾಡಿದರು. ಆದರೆ ಇವರು ಟರ್ಕಿಗೆ ಸೇರದ ಉತ್ತರ ಆರ್ಮೇನಿಯವನ್ನು ಹೊಡೆದು ಬಿಡಲಾಗಲಿಲ್ಲ. ಮತ್ತು ಅಸರ್ಬೈಜಾನವನ್ನು ಸಹ ಕಾಷ್ಟ ಜಯಿಸಿ ಸೇರಿಸಿ ಕೊಳ್ಳಲಾಗಲಿಲ್ಲ.

ಈ ಯುದ್ಧದಲ್ಲಿ ತುರುಕರು ಸೋತೊಡನೆಯೇ ತಲಾತನು ಬರ್ಲಿನಿಗೆ ಓಡಿಹೋಗಿ ನಗರದಲ್ಲಿ ಹತ್ಯ ಮಾಡಲ್ಪಟ್ಟನು. ತುರ್ಕಿಯ ಸ್ವಾತಂತ್ರ್ಯ ಸಂರಕ್ಷಣೆಗಾಗಿ ಮುಸ್ತಫಾ ಕಮಾಲನು ಅಂಗೋರದಲ್ಲಿ ಸ್ವರಾಜ್ಯವನ್ನು ಸ್ಥಾಪಿಸಿ ಯುರೋಪ್ಯರನ್ನು ಎದುರಿಸಿದಾಗ ಅನ್ವರನೂ ಜಮಾಲನೂ ಅವನ ಸಹಾಯಕ್ಕೆ ನಿಂತರು. ತಾವು ಯುರೋಪ್ಯರನ್ನು ಸೋಲಿಸುವುದರ ಜತೆಗೆ ತುರಾಣಿ ಸಾಮ್ರಾಜ್ಯವನ್ನು ಕಟ್ಟಬೇಕೆಂದೂ ಅದಕ್ಕಾಗಿ ಕಮಾಲನು ಪಶ್ಚಿಮದಲ್ಲಿ ತುರ್ಕಿಯಲ್ಲೂ ಜಮಾಲನು ಮಧ್ಯದಲ್ಲಿ ಕಾಕಸಸ, ಉತ್ತರ ಇರಾಣ, ಉತ್ತರ ಇರಾಕಗಳಲ್ಲೂ ಅನ್ವರನು ಮಧ್ಯಏಷಿಯಾದಲ್ಲೂ ಆಳಬೇಕೆಂದೂ ಇವರಿಬ್ಬರೂ ಏರ್ಪಡಿಸಿದರು. ಆದರೆ ಸ್ವಲ್ಪದರಲ್ಲೇ ಜಮಾಲನು ಟಿಫ್ಲಿಸದಲ್ಲಿ ಕೊಲೆಯಾದನು. ಕಮಾಲನು ತುರುಕರನ್ನು ಒಂದು ಜನಾಂಗ ರಾಷ್ಟ್ರವಾಗಿ ಮಾತ್ರ ಕಟ್ಟಲು ಪ್ರಯತ್ನಿಸಿ ತುರಾಣಿ ಸಾಮ್ರಾಜ್ಯದ ಮರೀಚಿಕೆಯನ್ನು ಧಿಕ್ಕರಿಸಿದನು. ಇದರಿಂದ ಅನ್ವರನು ಕ್ರುದ್ಧನಾಗಿ ಕಾಕಸಸ ಮತ್ತು ತುರುಕ ಸ್ಥಾನಗಳಲ್ಲಿ ಕಮಾಲನ ಮೇಲೆ ದಂಗೆ ಎಬ್ಬಿಸಿದನು. ಆದರೆ ಬೋಲಶೆವಿಕರು ಕಮಾಲನ ಸಹಾಯಕ್ಕೆ ನಿಂತು

ಇವನನ್ನು ಅಲ್ಲಿಂದ ಹೊರಡಿಸಿದರು. ಅನ್ವರನು ತಪ್ಪಿಸಿಕೊಂಡು ಬುಖಾರಾ ದೇಶಕ್ಕೆ ಹೋಗಿ ಸೇರಿ, ಅಮಾನುಲ್ಲನ ತಾಯಿಯ ಆಶ್ರಯವನ್ನು ಪಡೆದು ಮಧ್ಯ ಏಷಿಯಾದಲ್ಲಿ ತುರಾಣ ಸಮಷ್ಟಿಯ ಚಳವಳಿಯನ್ನು ನೂಡಿ ಬಸ್ಮಾಚಿ ಜನರ ಬಂಡಾಯಕ್ಕೆ ನಾಯಕನಾದನು. ಆದರೆ ಬೋಲಷೆವಿಕರು ಇವನನ್ನು ಸೋಲಿಸಿ ಕೊಂದು ದಂಗೆಯನ್ನು ಅಡಗಿಸಿದರು. ಇವನ ಗೋರಿಯು ಈಗ ತುರಾಣ ಕುಲದವರಿಗೆ ದೊಡ್ಡ ಯಾತ್ರಾಸ್ಥಳವಾಗಿ ಪರಿಣಮಿಸಿದೆ.

ತುರಾಣ ಸಮಷ್ಟಿವಾದಿಗಳು ಅರಬ ತುರಾಣ ಹಿಂದೂ ಕುಲದವರೆಲ್ಲರೂ ಅತಿ ಚಿಕಿತ್ಸಕವಾಗಿ ಶೋಧಿಸಿದುದರಿಂದಲೂ ಪಾಶ್ಚಾತ್ಯರು ಬೆಳೆದು ಬಂದಾಗಿರುವರೆಂದೂ ಆದ್ದರಿಂದ ಮುಂದಣ ಲೋಕಾಧಿಪತ್ಯವು ಸಾಹಸಿಗಳಾದ ತಮ್ಮ ಕುಲದವರಿಗೆ ಸರ್ವಮಾನ್ಯವಾಗಿದೆ ಎಂದೂ ಅತಿ ಹೆಮ್ಮೆಯಿಂದ ಕೊಚ್ಚಿಕೊಳ್ಳುತ್ತಿರುವರು. ತುರ್ಕಿಯಲ್ಲೂ ಅಜರ್ಬೈಜಾನದಲ್ಲೂ ಈಗ ಜನಾಂಗ ಭಾವನೆಯು ಈ ತುರಾಣ ಸಮಷ್ಟಿ ಭಾವನೆಯನ್ನು ಮೂಲೆಗೊತ್ತರಿಸಿದೆ. ಮಧ್ಯಏಷಿಯಾದವರಿಗೆ ಸಹ ಬೋಲಷೆವಿಕರ ಪ್ರಸಾದದಿಂದ ಸ್ವರಾಜ್ಯವು ದೊರೆತಿರುವುದರಿಂದ ಈ ಮತದಲ್ಲಿ ಶ್ರದ್ಧೆ ಹೋಗಿದೆ. ಆದರೂ ಈ ದೇಶದಲ್ಲಿ ತಾತರರನ್ನೂ ತುರುಕಮಾನರನ್ನೂ ಕಝಕರನ್ನೂ ಒಂದುಗೂಡಿಸಿ ಒಂದು ದೊಡ್ಡ ಜನಾಂಗ ಸಾಮ್ರಾಜ್ಯವು ಹುಟ್ಟಲು ಆಸ್ಪದವಿರುವುದರಿಂದ ಈ ತುರಾಣ ಸಮಷ್ಟಿಭಾವನೆಯು ಅಲ್ಲಿ ಈ ಕಾರ್ಯ ಸಾಧನೆಗೆ ಸಹಕಾರಿಯಾಗಬಹುದು.

## (ಇ) ಅರಬ ಜನಮಂಡಲ ಸಮಷ್ಟಿ

ಇಸ್ಲಾಮ ಧರ್ಮ ಹುಟ್ಟಿದ ಒಂದು ಶತಮಾನದೊಳಗೆ ಅರಬರು ಸಿಂಧೂ ತೀರದಿಂದ ಅಟ್ಲಾಂಟಿಕ ಸಾಗರದವರೆಗೂ ಜಯಿಸಿ ಹರಡಿದರು. ಇವರು ತಾವು ಜಯಿಸಿದ ದೇಶಗಳ ಜನರೊಡನೆ ತಡೆಯಿಲ್ಲದೆ ಬೆರೆತದ್ದರಿಂದ ಇರಾಕ, ಫೆಲೆಸ್ತೈನ, ಸಿರಿಯಾ ದೇಶಗಳವರು ಅರಬ ಸಂತಾನರಾಗಿ ಪರಿಣಮಿಸಿದರು. ಉತ್ತರ ಆಫ್ರಿಕಾ ದೇಶಗಳು ಬಹುವಾಗಿ ಅರಬ ಸಂತಾನದಿಂದ ತುಂಬಿದವು. ಮಲೆಯಾಳದ ಮಾಪಿಳ್ಳ ಜನರೂ ಕೊಂಕಣದ ತುಂಗಡೆಗಳೂ ಅರಬ ಸಂತಾನರು.

ಅರಬರು ಮುಸಲ್ಮಾನ ಪ್ರಪಂಚವನ್ನು ೭೦೦ ರಿಂದ ೧೦೦೦ರವರೆಗೆ ಏಕಚ್ಛತ್ರವಾಗಿ ಆಳಿದರು. ಇವರು ಗ್ರೀಕ, ರೋಮನ, ಜೂದ, ಕ್ರಿಸ್ತ, ಹಿಂದೂ, ಇರಾಣಿ ಮೂಲಗಳಿಂದ ಹುಟ್ಟಿ ಬಂದ ವಿದ್ಯೆಗಳನ್ನು ಸಂಗ್ರಹಿಸಿ, ಯುರೋಪಿನಲ್ಲಿ ಜ್ಞಾನ ಜ್ಯೋತಿಯನ್ನು ಹಚ್ಚಿಸಿ, ಜಗದೊಡನೆ ಸೌಹಾರ್ದದಿಂದ ಬಾಳುತ್ತ, ಶ್ರೇಷ್ಠವಾದ ನಾಗರಿಕತೆಯಿಂದ ಭೂಷಿತರಾಗಿ ಮೆರೆದರು. ಇಸ್ಲಾಮ ಧರ್ಮದ ವಿದ್ಯಾಸಂಸ್ಕೃತಿಯೂ ಶಾಸ್ತ್ರಕೋಟಿಯೂ ಇವರಿಂದಲೇ ಕಲ್ಪಿತವಾದುವು. ಯುರೋಪ್ಯರು ಈ ಅರಬರನ್ನು ಸಾರಸನರು (ಎಂದರೆ ಪೂರ್ವದವರು = ಪ್ರಾಚ್ಯರು) ಎಂದು ಕರೆಯುತ್ತಿದ್ದರು.

೧೦೦೦ದಿಂದ ಮುಂದಕ್ಕೆ ಅನಾಗರಿಕರೂ ಒರಟರೂ ಸ್ಥೂಲವಾದ ಬುದ್ಧಿಗಳೂ ಯುದ್ಧಪ್ರಿಯರೂ ಕಲಹಕಾರರೂ ಆದ ತುರುಕರು ಮುಸಲ್ಮಾನ ಪ್ರಪಂಚಕ್ಕೆ ಅಧಿಪತಿಗಳಾದರು. ಇವರಲ್ಲಿ ವಿದ್ಯಾಭಿರುಚಿಯೂ ಪರಮತಸಹಿಷ್ಣುತೆಯೂ ನಾಗರಿಕತೆಯ ಪ್ರೀತಿಯೂ ಇರಲಿಲ್ಲವಾದ್ದರಿಂದ ಹಿಂದೂಗಳನ್ನೂ ಹಳೆಯ ಮತದ ಇರಾಣಿಯರನ್ನೂ ಪ್ರಾಚ್ಯ ದೇಶದ ಕ್ರಿಸ್ತ ಯಾತ್ರಿಕರನ್ನೂ ಹಿಂಸೆ ಪಡಿಸಲಾರಂಭಿಸಿ ಮುಸಲ್ಮಾನ ಪ್ರಪಂಚದ ವಿದ್ಯಾಪ್ರದ ಸಾಯು ಕಾರ್ಯವನ್ನು ನಾಶಪಡಿಸಿಬಿಟ್ಟರು. ಇಷ್ಟರಲ್ಲೇ ಮಂಗೋಲಿಯದಿಂದ ತಾತರ ಜನರು ನುಗ್ಗಿ ಮುಸಲ್ಮಾನ ದೇಶಗಳನ್ನು ನಿರ್ಮೂಲನಮಾಡಿ ಬಿಟ್ಟರು. ಅವರ ಪೆಟ್ಟಿನಿಂದ ಹಾಳು ಬಿದ್ದಿರುವ ಮಧ್ಯ ಮತ್ತು ಪಶ್ಚಿಮ ಏಷಿಯಾ ದೇಶಗಳು ಇನ್ನೂ ಚೇತರಿಸಿಕೊಂಡಿಲ್ಲ. ಮುಂದೆ ೧೬-೧೭ ನೆಯ ಶತಮಾನಗಳಲ್ಲಿ ಇರಾಣ ಮತ್ತು ಮೊಗಲ ರಾಜ್ಯಗಳಲ್ಲಿ ವಿದ್ಯಾಜ್ಯೋತಿಯು ಸ್ವಲ್ಪ ಮಿನುಗಿದರೂ, ಅರಬರ ಯುಗದಲ್ಲಿ ಮುಸಲ್ಮಾನ ಪ್ರಪಂಚದಲ್ಲಿ ಇದ್ದ ವಿದ್ಯಾಪ್ರಭಾವವು ಕಳೆದ ಒಂಭತ್ತು ಶತಮಾನಗಳಿಂದಲೂ ಮಲಿನವಾಗಿ ಬಿಟ್ಟಿರುವುದು. ತುರುಕರು ಇಸ್ಲಾಮ ಪ್ರಪಂಚಕ್ಕೆ ಕ್ಷಾತ್ರಬಲವನ್ನು ಹೆಚ್ಚಿಸಿಕೊಟ್ಟರೂ ಅವರ ವಿದ್ಯಾಬಲವನ್ನು ಹಾಳುಮಾಡಿದರು. ಹಿಂದೂಗಳ ಕ್ಷೀಣತೆಗೆ ಬ್ರಾಹ್ಮಣರು ಉಳಿದು ಕ್ಷತ್ರಿಯರು ನಾಶವಾದುದು ಕಾರಣವಾದರೆ ಮುಸಲ್ಮಾನರ ಕ್ಷೀಣತೆಗೆ ಕ್ಷತ್ರಿಯರು ಉಳಿದು ಬ್ರಾಹ್ಮಣರು ನಾಶವಾದುದು ಕಾರಣವಾಯಿತು. ಜಗ

ಣರು ಕ್ಷಾತ್ರ ಬಲದಲ್ಲಿ ಸನ್ ೧೭೦೦ರಿಂದ ಕ್ಷೀಣಿಸಿದ್ದರಿಂದ ಪಾಶ್ಚಾತ್ಯರು ಮುಸಲ್ಮಾನ ಪ್ರಪಂಚವನ್ನು ಸಂಪೂರ್ಣವಾಗಿ ಅಧೀನಪಡಿಸಿಕೊಂಡರು. ಇಸ್ಲಾಮು ಧರ್ಮದಲ್ಲಿ ಸ್ವತಂತ್ರಜಿಜ್ಞಾಸೆಯೂ ನೂತನಾಭಿಪ್ರಾಯಗಳ ಸುಳಿವೂ ಮಾಯವಾಗಿ ಗೊಡ್ಡು ಹಿಡಿಯಿತು ಮತ್ತು ಮೂಢ ಮುಲ್ಲಾಗಳ ಸ್ವೇಚ್ಛಾ ಪ್ರಭುತ್ವ, ಗೋರಿ ಪೂಜೆ, ಪರ ಮತ ದ್ವೇಷ, ಸೌಖ್ಯಾತುರ ಸ್ವಾರ್ಥ ಇವು ತಾನೇ ತಾನಾಗಿ ತಲೆಯೆತ್ತಿಕೊಂಡವು. ಆದ್ದರಿಂದ ತುರುಕರನ್ನು ಇಸ್ಲಾಮುಧರ್ಮವಿನಾಶಕರೆಂದು ಅರಬರು ದ್ವೇಷಿಸುವದು ಸಹಜವೇ ಆಗಿದೆ.

ಈ ಧರ್ಮಕ್ಷೀಣತೆಯನ್ನು ಹೋಗಲಾಡಿಸಬೇಕೆಂದು ಅರಬರಲ್ಲಿ ಈಚೆಗೆ ಹುಟ್ಟಿರುವ ಚಳವಳಿಗಳಲ್ಲಿ ವಾಹಬಮತದ ಚಳವಳಿಯು ಅತಿ ಮುಖ್ಯವಾದುದು. ಮಹಮ್ಮದ ಇಬಿನ್ ಅಬ್ದುಲ್ ವಾಹಬ್ (ಸು. ೧೭೦೩—೧೭೯೭) ಎಂಬಾತನು ಇಸ್ಲಾಮು ಧರ್ಮಕ್ಕೆ ಆಗಂತುಕವಾಗಿ ಬಂದು ಸೇರಿದ್ದ ಗೋರಿ ಪೂಜೆ ಮುಂತಾದ ದುರಾಚಾರಗಳನ್ನು ನಿರ್ಮೂಲಿಸಲು ನೆಜೆದ್ ರಾಜ್ಯದಲ್ಲಿ ಈ ಮತವನ್ನು ಸ್ಥಾಪಿಸಿದನು. ಈ ಮತದವರು ಸ್ವಲ್ಪ ಕಾಲದಲ್ಲೇ ಅರಬ ದೇಶವನ್ನೆಲ್ಲ ಆಕ್ರಮಿಸಿ ಸಿರಿಯಾವನ್ನು ಜಯಿಸಬೇಕೆಂದು ಹೊರಡಲು ತುರುಕರು ಹೆದರಿ ದೊಡ್ಡ ಸೇನೆ ಕಳಿಸಿ ಇವರನ್ನಡಗಿಸಿದರು. ಇಲ್ಲಿಂದ ಮುಂದೆ ವಾಹಬಿ ಮತವು ರಾಜಕೀಯ ಮಾರ್ಗವನ್ನು ಬಿಟ್ಟು ಧಾರ್ಮಿಕ ಸುಧಾರಣೆಯ ಚಳವಳಿಯನ್ನು ಮಾತ್ರ ಕೈಕೊಂಡಿತು. ಈ ಮತದಿಂದ ಪ್ರೇರಿತನಾದ ಸೈಯದ ಮಹಮ್ಮದ ಬಿನ್ ಸಿನೂಸ್ಸಿ (ಸು. ೧೮೦೦—೧೮೫೯) ಎಂಬಾತನು ಸಿನೂಸಿ ಪಂಥ ಎಂದು ಪ್ರಸಿದ್ಧಿ ಪಡೆದ ಮುಸಲ್ಮಾನ ಪ್ರಪಂಚದಲ್ಲೆಲ್ಲಾ ಶಾಖಾ ಸಂಘಗಳನ್ನು ಕಲ್ಪಿಸಿಕೊಂಡಿರುವ ಒಂದು ಮಹಾಸಂಸ್ಥೆಯನ್ನು ಸ್ಥಾಪಿಸಿದನು. ಇದು ಉತ್ತರ ಆಫ್ರಿಕದಲ್ಲಿ ಧರ್ಮಜಾಗೃತಿಯನ್ನೂ ಸುಧಾರಣೆಗಳನ್ನೂ ಕಲ್ಪಿಸಿ ಅಜ್ಞಾನಿಗಳ ನೀಗ್ರೋ ಜನರನ್ನು ಮುಸಲ್ಮಾನರನ್ನಾಗಿ ಮಾಡುತ್ತಿದೆ. ಈ ಚಳವಳಿಯೂ ಅರಬ ಸಂತಾನದದು, ಇವನ್ನೂ ತುರುಕರು ವಿರೋಧಿಸಿದರು.

ತುರುಕರ ರಾಜಾಧಿಕಾರವು ಕೊನೆಗಾಣದಿದ್ದರೆ ತಾವೂ ಇಸ್ಲಾಮು

ಧರ್ಮವೂ ಉದ್ಧಾರವಾಗುವದು ದುಸ್ತರವೆಂದು ಕ್ರಮವಾಗಿ ಅರಬರು ತಿಳಿದು ರಾಜಕೀಯ ಸ್ವಾತಂತ್ರ್ಯವನ್ನು ಬಯಸಲಾರಂಭಿಸಿದರು. ಬರಬರುತ್ತ ಅರಬರ ಸ್ವಾತಂತ್ರ್ಯಪ್ರೀತಿಯು ಗಣಾವಸ್ಥೆಯಿಂದ ಜನಾಂಗಾವಸ್ಥೆಗೆ ಮುಂದುವರಿಯಿತು. ೧೮೭೭ರಲ್ಲಿ ನಡೆದ ರುಷ್ಯ-ತುರುಕರ ಯುದ್ಧಕಾಲದಲ್ಲಿ ಅರಬರು ತಾವು ಒಂದು ಸ್ವತಂತ್ರ ಜನಾಂಗವಾಗಲು ಬಯಸಿದರು. ಅಬ್ದುಲಹಮೀದನು ನಯಭಯಗಳಿಂದ ಈ ಪ್ರವೃತ್ತಿಯನ್ನು ಅಡಗಿಸಿದನು. ಆದರೆ ಸ್ವಲ್ಪ ಕಾಲದೊಳಗಾಗಿ ಬಾಲ-ಅರಬ (Young-Arab) ಚಳವಳಿಯು ಆರಂಭವಾಯಿತು. ಇದಕ್ಕೆ ಸಿರಿಯಾ ದೇಶದವರು ಮುಖಂಡರಾಗಿದ್ದರು. ಇವರು ೧೯೧೩ರಲ್ಲಿ ಪಾರೀಸನಗರದಲ್ಲಿ "ಅರಬಜನಾಂಗ ಸಭೆ" ಯೊಂದನ್ನು ಸ್ಥಾಪಿಸಿ ಪ್ರಚಾರ ಕಾರ್ಯವನ್ನು ಕೈಕೊಂಡರು. ಪ್ರಜಾಸ್ವಾತಂತ್ರ್ಯಕ್ಕೂ ಜನಾಂಗವ್ಯವಸ್ಥೆಗೂ ವೈರಿಯಾದ ಅಬ್ದುಲಹಮೀದನು ಅರಬರನ್ನು ಕಡುಹಿಂಸೆಯಿಂದ ಆಳತೊಡಗಿದನು. ಅರಬ ದೇಶಭಕ್ತರು ಪಾರೀಸನಗರದಿಂದ ಸ್ವದೇಶೀಯರನ್ನು ಹುರುಪುಗೊಳಿಸಲು ಹೀಗೆಂದು ಪ್ರಸಿದ್ಧಪತ್ರಿಕೆಯನ್ನು ಹೊರಡಿಸಿದರು: "ಪ್ರಿಯ ದೇಶಬಾಂಧವರೇ! ಉಜ್ವಲ ಕೀರ್ತಿಯುಕ್ತವಾದ ಅರಬ ಪ್ರಜೆ ಎಂಬ ಹೆಸರು ಪರರ ಬಾಯಲ್ಲಿ, ಮುಖ್ಯವಾಗಿ ತುರುಕರಲ್ಲಿ, ಎಷ್ಟು ನೀಚವೂ ತುಚ್ಛವೂ ಆಗಿಬಿಟ್ಟಿದೆ ಎಂದು ಎಲ್ಲರೂ ಬಲ್ಲೆವು. ಮಧ್ಯ ಏಶಿಯಾದಿಂದ ಹುಟ್ಟಿಬಂದ ಈ ಅಸಂಸ್ಕೃತ ಜನರ ದುಷ್ಟ ರಾಜ್ಯಭಾರದಿಂದ ನಾವು ಎಷ್ಟು ದೂರ ದುಃಖಕ್ಕೂ ದಾರಿದ್ರ್ಯಕ್ಕೂ ಸಿಕ್ಕಿಬಿದ್ದಿರುವೆವೆಂದು ನೋಡುತ್ತೇವೆ. ಜಗತ್ತಿನಲ್ಲಿ ಅತಿ ಸಂಪತ್ಕರವೂ ರಮಣೀಯವೂ (?) ಆಗಿರುವ ನಮ್ಮ ದೇಶವು ಈಗ ಬಿಂಗಾಡುಕೊಂಪೆಯಾಗಿದೆ. ನಾವು ಸ್ವತಂತ್ರರಾಗಿದ್ದಾಗ ಒಂದು ನೂರು ವರ್ಷದಲ್ಲಿ ಲೋಕವನ್ನು ಜಯಿಸಿದೆವು; ಎಲ್ಲೆಲ್ಲೂ ವಿದ್ಯೆಯನ್ನೂ ವಿಜ್ಞಾನವನ್ನೂ ಕಲೆಯನ್ನೂ ಹರಡಿದೆವು; ಲೋಕದ ನಾಗರಿಕತೆಗೆ ಅನೇಕ ಕಲಮಾನಗಳ ವರೆಗೆ ಮುಂದಾಳುಗಳಾಗಿದ್ದೆವು. ಆದರೆ ಎರ್ತೋಗ್ರುಲ್ಲ ( ಉಸ್ಮಾನಿ ತುರುಕರ ಪೌರಾಣಿಕ ಮೂಲಪುರುಷ ) ನ ವಂಶದವರು ಇಸ್ಲಾಮಿನ ಖಿಲಾಫತ್ತು ಪದವಿಯನ್ನು ಆಕ್ರಮಿಸಿಕೊಂಡಂದಿನಿಂದ ಅವರು ನಮ್ಮನ್ನು ಸುಲಿದು ತಿಂದು ಬದು

ಬಡವರನ್ನಾಗಿ ಮಾಡಿರುವರು." * ೧೯೦೫ ರಲ್ಲಿ ಹೆಜಾಸ್ ಮತ್ತು ಯಮೆನ್ ಪ್ರಾಂತ್ಯಗಳಲ್ಲಿ ದಂಗೆ ಎದ್ದಿತು. ತುರುಕರು ಇದನ್ನು ಅಡಗಿಸಲಾರದೆ ವರ್ಷ ವರ್ಷವೂ ಅಪಾರವಾಗಿ ಧನ-ಜನ ವ್ಯಯವನ್ನು ಮಾಡಿಕೊಂಡು ೧೯೧೧-೧೨ ರ ಯುದ್ಧಗಳಲ್ಲಿ ತರಹರಿಸಲಾರದೆ ಸೋತು ನಷ್ಟಪಟ್ಟರು.

೧೯೦೮ ರ ತುರ್ಕಿಯ ರಾಜ್ಯಕ್ರಾಂತಿಯಲ್ಲಿ ಅಧಿಕಾರಕ್ಕೆ ಬಂದ ಬಾಲ-ತುರುಕ ಪಕ್ಷದವರು ಬಾಲ-ಅರಬರನ್ನು ಆದರಿಸುವುದಕ್ಕೆ ಪ್ರತಿಯಾಗಿ ಅರಬರ ನಡೆನುಡಿಗಳನ್ನೆಲ್ಲಾ ತುರಾಣೀಕವಾಗಿ ಮಾಡಲು ಪ್ರಯತ್ನಪಟ್ಟರು. ತುರುಕ ಸಾಮ್ರಾಜ್ಯದಿಂದ ಪಾರಾಗದಿದ್ದರೆ ತಮಗೆ ಗತಿಯಿಲ್ಲವೆಂದು ಅರಬರು ನಿಶ್ಚಯ ಮಾಡಿಕೊಂಡು ಐರೋಪ್ಯ ಯುದ್ಧಕಾಲದಲ್ಲಿ ದಂಗೆ ಎಬ್ಬಿಸಿದರು.

೧೯೧೬ ನೇ ಮೇ ತಿಂಗಳಲ್ಲಿ ಬ್ರಿಟಿಷರು ಮೆಸಪೊಟೇಮಿಯವನ್ನು ಫ್ರೆಂಚರು ಸಿರಿಯಾವನ್ನೂ ಹಂಚಿಕೊಂಡು ಒಂದು ರಹಸ್ಯ ಸಂಧಿಮಾಡಿಕೊಂಡರು. ಮರುವರ್ಷ ಅದೇ ತಿಂಗಳಲ್ಲಿ ಫ್ರೆಂಚರು ಸಿರಿಯಾದ ಜತೆಗೆ ಸಿಲಿಷಿಯಾ ಪ್ರಾಂತ್ಯವನ್ನು ಪಡೆಯತಕ್ಕದೆಂದೂ ಸಿರಿಯಾ ಮೆಸಪೊಟೇಮಿಯಾಗಳಿಗೆ ಮಧ್ಯವಾಗಿರುವ ಪ್ರದೇಶವು ಉಭಯರಿಗೂ ವಿಭಾಗವಾಗತಕ್ಕದ್ದೆಂದೂ ಬ್ರಿಟಿಷರು ಪ್ಯಾಲಿಸ್ತ ದೇಶದಲ್ಲಿರುವ ಹೈಫ ಎಂಬ ರೇವನ್ನು ಪಡೆಯತಕ್ಕದ್ದೆಂದೂ ಪ್ಯಾಲಿಸ್ತ ದೇಶವು ಅಖಿಲಜನಾಂಗಮಧ್ಯಸ್ಥವಾಗಿರತಕ್ಕದೆಂದೂ ಮತ್ತೊಂದು ಗುಪ್ತ ಸಂಧಿ ಹುಟ್ಟಿತು. ಬ್ರಿಟಿಷರು ಈ ಸಂಧಿಗಳನ್ನು ಮುಚ್ಚಿಟ್ಟು ಅರಬ ದೇಶದ ರಾಜರಿಗೂ ಮುಖಂಡರಿಗೂ ಅಂತ [illegible] ಸ್ವಾತಂತ್ರ್ಯದ ಆಶೆ ತೋರಿಸಿ ಅವರಿಂದ ತುರುಕರ ಮೇಲೆ ದಂಗೆಯೆಬ್ಬಿಸಿದರು. ಬ್ರಿಟಿಷರ ಬಂಧುವಾದ ಇಗುಪ್ತದ ಸುಲ್ತಾನನು ಅರಬರೆಲ್ಲರೂ ಸಮಷ್ಟಿಯಾಗಿ ತನ್ನ ಸಾಮ್ರಾಜ್ಯಾಧಿಪತ್ಯದಲ್ಲಿ ಸೇರುವರೆಂದು ಆಶಿಸಿ ಅವರನ್ನು ತುರುಕರ ಮೇಲೆ ಬೀಳಲು ಪ್ರೇರಿಸಿದನು. ಮಕ್ಕಾ ಷರೀಫನೂ ಅವನ ನಾಲ್ವರು ಮಕ್ಕಳಾದ ಅಲಿ, ಫೈಸುಲ್ಲಾ, ಸೈಯದರುಗಳೂ ಬ್ರಿಟಿಷರ ಆಶ್ರಿತರಾಗಿ ದಂಗೆಗೆ ಮುಖಂಡರಾಗಿ ನಿಂತರು. ಫೈಜುಲ್ಲನು

* ಸ್ನ್ಯಾಡ್ಡರ್ ಪು. ೧೪೪. (ಅನುವಾದಿತ.)

ಬ್ರಿಟಿಷ ಸೇನಾನಿ ಕರ್ನಲ್ ಲಾರೆನ್ಸ್ ಎಂಬ ಸಾಹಸಿಯ ಸಹಾಯದಿಂದ ಮರಳುಗಾಡಿನಲ್ಲಿ ದಂಗೆಯೆಬ್ಬಿಸಿ ತುರುಕರ ಬಲವನ್ನು ಮುರಿದನು. ತುರುಕರು ಸೋತು ಅರಬ ದೇಶಗಳಿಂದ ಹಿಮ್ಮೆಟ್ಟಿದರು. ಯುದ್ಧಕಾಲದಲ್ಲಿ ಬ್ರಿಟಿಷರೂ ಫ್ರೆಂಚರೂ ಅರಬ ಜನಗಳಿಗೆ ಒಂದು ಭರವಸೆ ಪತ್ರಿಕೆಯನ್ನು ಹೊರಡಿಸಿ ಹೀಗೆ ತೋರಿಸಿದ್ದರು: "ಜರ್ಮನರ ದುರಾಶೆಯಿಂದ ಪ್ರಾಪ್ತವಾಗಿರುವ (ಈ) ಯುದ್ಧದಲ್ಲಿ, ತುರುಕರಿಂದ ಇದುವರೆಗೂ ಹಿಂಸಿಸಲ್ಪಡುತ್ತಿರುವ ಎಲ್ಲಾ ಜನಗಳನ್ನೂ ಸಂಪೂರ್ಣವಾಗಿ ಬಿಡುಗಡೆ ಮಾಡಿಸುವುದೂ ಪ್ರಜೆಗಳ ಸ್ವತಂತ್ರ ಸಂಕಲ್ಪದಿಂದ ಅಧಿಕಾರ ಪಡೆಯತಕ್ಕ ಜನಾಂಗ ರಾಜ್ಯಗಳನ್ನು ಸ್ಥಾಪಿಸುವುದೂ ಮಾತ್ರವೇ ಬ್ರಿಟಿಷರೂ ಫ್ರೆಂಚರೂ ಪೂರ್ವದೇಶಗಳಲ್ಲಿ ಕಾರ್ಯಭಾರಮಾಡಲು ಉದ್ದೇಶವಾಗಿದೆ." *

ಆದರೆ ತುರುಕರು ಸೋತ ಒಡನೆಯೇ ಇವರು ತಮ್ಮ ಮಾತನ್ನು ನಿರ್ಲಕ್ಷ್ಯವಾಗಿ ತೊರೆದು ತಮ್ಮ ಗುಪ್ತ ಸಂಧಿಗಳ ಪ್ರಕಾರ ಹಂಚಿಕೆಯಾಗಿದ್ದ ದೇಶಗಳನ್ನು ಸಸೈನ್ಯವಾಗಿ ಆಕ್ರಮಿಸಿಕೊಂಡರು. ಬೋಲ್ಷವಿಕರು ಈ ಕಳ್ಳ ಸಂಧಿಗಳನ್ನು ಹೊರಕ್ಕೆ ಪ್ರಕಟಿಸಿದರು. ಮೋಸಹೋದ ಅರಬರು ರೌದ್ರರೋಷದಿಂದ ಪರಕೀಯರ ಮೇಲೆ ದಂಗೆಯೆಬ್ಬಿಸಿದರು. ಬೋಲ್ಷವಿಕರೂ ಮುಸ್ತಫಾ ಕಮಾಲನೂ ಇವರಿಗೆ ಒಳಸಹಾಯಕರಾಗಿ ನಿಂತರು. ೧೯೨೦ ರಲ್ಲಿ ಫ್ರೆಂಚರು ಸಿರಿಯಾಕ್ಕೆ ಒಂದು ಲಕ್ಷ ಸೇನೆಯನ್ನು ಕಳುಹಿಸಬೇಕಾಯಿತು. ಬ್ರಿಟಿಷರು ಪೆಲೆಸ್ತ ದೇಶದಲ್ಲಿ ಒಂದು ಲಕ್ಷ ಸೇನೆಯನ್ನಿಟ್ಟು ಇರಾಣಕ್ಕೆ ಒಂದು ಲಕ್ಷ ಸೇನೆಯನ್ನು ಕಳುಹಿಸಿ ಅಲ್ಲಿನ ದಂಗೆಯನ್ನು ೧೫೦ ಕೋಟಿ ರೂಪಾಯಿ ವೆಚ್ಚದಿಂದ ಅಡಗಿಸಬೇಕಾಯಿತು. ಪೆಲೆಸ್ತ, ಸಿರಿಯಾ, ಇರಾಣ ದೇಶಗಳಲ್ಲಿ ನಡೆಯುತ್ತಿರುವ ಸ್ವರಾಜ್ಯಯುದ್ಧವು ಇನ್ನೂ ಇತ್ಯರ್ಥವಾಗಿಲ್ಲ. ಅರಬಸ್ಥಾನಕ್ಕೆ ಮಾತ್ರ ವಹಾಬಿಗಳು ಸ್ವಾತಂತ್ರ್ಯವನ್ನು ಸಂಪಾದಿಸಿದರು.

ಏಷಿಯಾದ ಅರಬರೆಲ್ಲರೂ ಸಮಷ್ಟಿಯಾಗಿ ಒಂದು ಸಂಯುಕ್ತ ರಾಜ್ಯವನ್ನು ಕಟ್ಟಬೇಕೆಂದು ಚಳವಳಿ ನಡೆಸುತ್ತಿರುವರು. ಅರಬ ದೇಶದ

---

* ಸ್ವದೇಶ ಪು. ೧೪೭ (ಅನುವಾದ)

ರಾಜನಾದ ಇಬ್ನಸೈಯುದನಿಗೆ ಈ ಕಾರ್ಯವನ್ನು ಸಾಧಿಸಲು ಆಶೆಯೂ ಶಕ್ತಿಯೂ ಇವೆ. ಈ ದೇಶಗಳು ಪ್ರತ್ಯೇಕವಾಗಿ ಒಂದೊಂದೇ ಇದ್ದು ನಿರ್ವಹಿಸುವದು ಕಷ್ಟ; ಸಂಯುಕ್ತವಾಗಿ ಸೇರಲು ಪಾಶ್ಚಾತ್ಯರ ಸಾಮ್ರಾಜ್ಯ ಪಿಪಾಸೆ ಹೊರತು ಮತ್ತಾವ ಕಡೆಯೂ ಇಲ್ಲ. ಆದ್ದರಿಂದ ಇದು ನೆರವೇರುವ ವರೆಗೂ ಅರಬ ಸಮಷ್ಟಿ ಚಳವಳಿಯು ಪ್ರಾಬಲ್ಯವನ್ನು ಪಡೆದು ಕೊಳ್ಳಲಾರದು.

## (೭) ಅಖಿಲ ಇಸ್ಲಾಮು ಜನ ಮಂಡಲ ಸಮಷ್ಟಿ (Pan-islam)

ಜನರಲ್ಲಿ ಸರ್ವ ಸಮತಾ ಭಾವವನ್ನೂ ಪರಮತ ತಿರಸ್ಕಾರ ಬುದ್ಧಿಯನ್ನೂ ಇಸ್ಲಾಮು ಧರ್ಮವಷ್ಟು ದೂರ ಮತ್ತಾವ ಧರ್ಮವೂ ಹುಟ್ಟಿಸಲಾರದು. ಆದ್ದರಿಂದ ಮುಸಲ್ಮಾನರಲ್ಲಿ ಐಕಮತ್ಯ ಹುಟ್ಟುವದು ಬಹು ಸುಲಭ. ವರ್ಷಂಪ್ರತಿ ಲಕ್ಷಾಂತರ ಮುಸಲ್ಮಾನರು ನಾನಾ ದೇಶಗಳಿಂದ ಹಾಜ್ ಎಂದರೆ ಮಕ್ಕಾ ಯಾತ್ರೆಗಾಗಿ ಒಂದು ಕಡೆ ಸೇರುತ್ತಿರುವುದರಿಂದ ಐಕಮತ್ಯವು ಬಹಳ ಬಲಪಡುವದು. ಇಸ್ಲಾಮು ಪ್ರಪಂಚವೆಲ್ಲವೂ ಒಬ್ಬ ಖಲೀಫನಿಗೆ ಅಧೀನವಾಗಿರಬೇಕೆಂಬ ಅಭಿಪ್ರಾಯವು ಸಹ ಇದನ್ನು ಪುಷ್ಟೀಕರಿಸುವದು. ವಿದ್ಯಾ ಕ್ಷೀಣತೆಯಿಂದ ಮುಸಲ್ಮಾನರಲ್ಲಿ ಜನಾಂಗ ಭಾವನೆ ಪ್ರಾಬಲ್ಯ ಪಡೆಯಲಾರದಾದ್ದರಿಂದ ಅವರು ತಮ್ಮ ಮತಾನುಬಂಧವನ್ನೇ ಮುಖ್ಯವೆಂದು ಪುರಸ್ಕರಿಸುವದು ಸಹಜ.

ಮುಸಲ್ಮಾನರ ಕ್ಷೀಣತೆ ಪರಿಹಾರಕ್ಕಾಗಿ ಹುಟ್ಟಿದ ವಾಹಬಿ ಸಿನೂಸ್ಸಿಯಾ ಮೊದಲಾದ ಚಳವಳಿಗಳು ರಾಜಕೀಯ ಮಾರ್ಗವನ್ನು ಬಿಟ್ಟು ಇತರ ವಿಧವಾದ ಸುಧಾರಣೆಗಳನ್ನು ಕೈಕೊಂಡದ್ದರಿಂದ ಒಂದು ದೇಶ, ಒಂದು ರಾಜ್ಯ, ಒಂದು ಜನಾಂಗದ ಉದ್ಧಾರಕ್ಕಾಗಿ ಕೆಲಸ ಮಾಡದೆ ಅಖಿಲ ಇಸ್ಲಾಮು ಪ್ರಪಂಚದ ಉದ್ಧಾರವನ್ನೇ ಉಪಲಕ್ಷಿಸಿದವು.

ಯುರೋಪ್ಯರು ಮುಸಲ್ಮಾನರನ್ನು ೧೯ನೆಯ ಶತಮಾನದಲ್ಲಿ ತೀರ ನುಗ್ಗು ಬಡಿದರು. ಆದ್ದರಿಂದ ಮುಸಲ್ಮಾನರಿಗೆ ಯುರೋಪ್ಯರ ಮೇಲೆ ಸರ್ವತ್ರ ಅಪರಿಮಿತವಾದ ವೈರ ಹುಟ್ಟಿತು. ಮುಸಲ್ಮಾನರ ಸಕಲ ದೇಶಗಳಲ್ಲಿಯೂ ಭಯಂಕರವಾದ ಯುದ್ಧಗಳೂ ದಂಗೆಗಳೂ ಹುಟ್ಟಿ ಕ್ರೂರವಾಗಿ ಅಡಗಿಸಲ್ಪಟ್ಟವು. ತಾವು ಒಟ್ಟುಗೂಡಿ ಕೈ ಮಾಡಿದರೆ ಜಯಿಸುವುದು

ಅಸಾಧ್ಯವಾದ್ದರಿಂದ ಅಖಿಲ ಇಸ್ಲಾಮು ಜನಮಂಡಲದವರೂ ಏಕವಾಗಿ ಕಲೆತು ತಮ್ಮ ಶತ್ರು ಬಾಧೆಯನ್ನು ಪರಿಹರಿಸಿಕೊಳ್ಳಬೇಕೆಂಬ ಭಾವನೆಯು ಸರ್ವತ್ರ ಹುಟ್ಟಿತು.

ಇಂಥಾ ಸಮಷ್ಟಿ ಭಾವವನ್ನು ಸೈಯದ ಜಮಾಲುದ್ದೀನ್ ಅಲ್ ಆಫಘನಿ ಎಂಬ ವಿಖ್ಯಾತ ಪುರುಷನು ಸರ್ವತ್ರ ಪ್ರಚಾರ ಮಾಡತೊಡಗಿದನು. ಇವನಲ್ಲಿದ್ದ ಮೋಹಕಶಕ್ತಿಯಿಂದ ಈ ಭಾವವು ಎಲ್ಲರಲ್ಲಿಯೂ ಹರಡಲು ಕಾರಣವಾಯಿತು. ತುರ್ಕಿಯ ಸುಲ್ತಾನ ಅಬ್ದುಲ ಹಾಮಿದನು ಇದನ್ನು ಪರಿಗ್ರಹಿಸಿ ಈತನನ್ನು ತನ್ನ ರಾಜಧಾನಿಯಲ್ಲಿರಿಸಿಕೊಂಡು ಈ ಸಮಷ್ಟಿಯ ಚಳವಳಿಯು ಸಕಲ ದೇಶಗಳಿಗೂ ವ್ಯಾಪಿಸುವಂತೆ ಮಾಡಿದನು.

ಈ ಚಳವಳಿಯು ೧೯೧೪ ರ ವೇಳೆಗೆ ಸಾವಿರ ಪ್ರಚಾರಕ ಪತ್ರಿಕೆಗಳನ್ನು ಸ್ಥಾಪಿಸಿದ್ದಿತು. ಮೊರಾಕೋದ ಪತ್ರಿಕೆಯನ್ನು ಜಾವಾದ ಮುಸಲ್ಮಾನರು ಓದಲಾರಂಭಿಸಿದರು. ಮುಸಲ್ಮಾನ ಪ್ರಪಂಚದಲ್ಲಿ ತುರುಕರಲ್ಲಿ ಅಭಿಮಾನವೂ ಖಲೀಫನಲ್ಲಿ ಭಕ್ತಿಯೂ ಹೆಚ್ಚುತ್ತಾ ಬಂದವು. ಅಬ್ದುಲ ಹಾಮಿದನು ಈ ಪ್ರಪಂಚದ ಸಕಲ ಭಾಗಗಳಿಂದಲೂ ಹಣವೆತ್ತಿ ಮಕ್ಕಾ ಮದೀನಾ ನಗರಗಳಿಗೆ ರೈಲು ಹಾಕಿಸಿದನು. ಮುಸಲ್ಮಾನರು ಇನ್ನೇನು ಲೋಕಾಧಿಪತಿಗಳಾಗಿ ಬಿಡುವರು ಎಂಬ ಆಶಾ ಭಾವವು ಸಕಲರಲ್ಲೂ ಹುಟ್ಟಿತು. ಯುರೋಪ್ಯರನ್ನು ಸುಗ್ಗುಬಡಿದ ಜಪಾನರು ಇಸ್ಲಾಮು ಧರ್ಮಕ್ಕೆ ಸೇರಿದರೆ ಲೋಕಾಧಿಪತಿಗಳಾಗಬಹುದೆಂದು ಅವರನ್ನು ಹಾಗೆ ಮಾಡುವಂತೆ ಸಕಲ ದೇಶಗಳ ಮುಸಲ್ಮಾನರೂ ಚಳವಳಿ ನಡೆಸಿದರು. ತುರುಕರು ಯುರೋಪ್ಯರಿಂದ ಸೋತು ದುರ್ದಶೆ ಪಡೆದಾಗ ಮುಸಲ್ಮಾನ ಪ್ರಪಂಚವು ಅವರ ಪಕ್ಷವನ್ನು ವಹಿಸಿತು. ಇಂಡಿಯಾ ದೇಶದಲ್ಲಿ ಖಿಲಾಫತ್ತಿನ ಚಳವಳಿಯು ಅತ್ಯಂತ ಪ್ರಾಬಲ್ಯವನ್ನು ಪಡೆದಿತ್ತು.

ಆದರೂ ರಾಜಕೀಯದೃಷ್ಟಿಯಿಂದ ಇಸ್ಲಾಮು ಸಮಷ್ಟಿಯ ಚಳವಳಿಯು ಏನೂ ಸಾಧಿಸಿಲ್ಲ, ಮುಂದೆಯೂ ಸಾಧಿಸುವಂತಿಲ್ಲ. ಆಫ್ರಿಕಾ ಮತ್ತು ಏಷಿಯಾದ ಅರಬರು ತುರುಕರ ಮಾತಿಗೆ ಮರುಳಾಗಲಿಲ್ಲ. ವಹಾಬಿ ಮತ್ತು ಸೆನೂಸ್ಸಿಯಾ ಚಳವಳಿಗಳು ತುರುಕರಿಗೆ ವಿರುದ್ಧವಾಗಿ

ದ್ದವು. ಈ ಚಳವಳಿಯಿಂದ ತನ್ನ ನಿರಂಕುಶ ಸ್ವೇಚ್ಛಾಪ್ರಭುತ್ವವನ್ನು ಸಂರಕ್ಷಿಸಿಕೊಳ್ಳುವುದೇ ಅಬ್ದುಲಹಾಮೀದನಿಗೆ ಮುಖ್ಯ ಉದ್ದೇಶವೆಂದು ಸಕಲರೂ ಸ್ವಲ್ಪದರಲ್ಲೇ ಕಂಡುಕೊಂಡರು. ಮಕ್ಕಾ ರೈಲಿಗೆಂದು ಎತ್ತಿದ ಹಣದಲ್ಲಿ ಸಹ ಬಹುಭಾಗವನ್ನು ಇವನು ಮೋಸ ಮಾಡಿ ಅಪಹರಿಸಿದನು. ಇಂಡಿಯಾದ ಖಿಲಾಫತ್ತು ಚಳವಳಿಯ ಪ್ರಾಬಲ್ಯಕ್ಕೆ ಗಾಂಧಿಯವರ ನೇತೃತ್ವವೂ ಹಿಂದೂಗಳ ಸಹಾಯವೂ ಮುಖ್ಯಕಾರಣವಾಗಿದ್ದವು. ಬಾಲ-ತುರುಕರ ಪಕ್ಷದವರು ತುರಾಣ ಸಮಷ್ಟಿಯನ್ನು ಪುರಸ್ಕರಿಸಿದ್ದರಿಂದ ತುರ್ಕಿಯಲ್ಲಿ ಸಹ ಇಸ್ಲಾಮ ಸಮಷ್ಟಿ ಭಾವವು ಶಿಥಿಲವಾಯಿತು. ಐರೋಪ್ಯ ಯುದ್ಧಕ್ಕೆ ಸೇರುವಾಗ ಖಲೀಫನು ಅಖಿಲ ಮುಸಲ್ಮಾನರೂ ತನ್ನ ಸಹಾಯಾರ್ಥ ಜಹಾದ್ ಎಂದರೆ ಪವಿತ್ರ ಧರ್ಮಯುದ್ಧವನ್ನು ಕೈಕೊಳ್ಳಬೇಕೆಂದು ಸಾರಿದನು. ಇವನ ಮಾತನ್ನು ಯಾವ ನರಪ್ರಾಣಿಯೂ ಕೇಳಿ ಮರ್ಯಾದಿಸಲಿಲ್ಲ. ಅವನ ಅಧೀನರಾಗಿದ್ದ ಅರಬರು ಐರೋಪ್ಯರಿಗೆ ಸಹಾಯ ಮಾಡಿ ದಂಗೆಯೆಬ್ಬಿಸಿ ತುರುಕರ ಸೋಲಿಗೆ ಕಾರಣರಾದರು. ಖಿಲಾಫತ್ತು ಕಡಿಮೆಯಾದಾಗ ಯಾವ ದೇಶದಲ್ಲೂ ಅದರ ಸೊಲ್ಲೇ ಏಳಲಿಲ್ಲ. ಈಗ ಖಿಲಾಫತ್ತು ಮಾಯವಾಗಿ ತುರ್ಕಿ, ಅರಬಸ್ಥಾನ, ಇರಾಣ, ಪಠಾಣ, ಇಗುಪ್ತ, ಮೊರಾಕೊ ಮೊದಲಾದ ಮುಸಲ್ಮಾನ ದೇಶಗಳಲ್ಲಿ ಪೃಥಕವಾದ ಜನಾಂಗ ಭಾವನೆಗಳು ಹುಟ್ಟಿ ಬಳೆಯುತ್ತಿರುವುದರಿಂದ ಇಸ್ಲಾಮ ಸಮಷ್ಟಿ ಭಾವವು ಈಗ ಮುಖ್ಯವಾಗಿ ದೇಶಾಭಿಮಾನಶೂನ್ಯರಾದ ಕೆಲ ಇಂಡಿಯಾ ದೇಶದ ಮುಸಲ್ಮಾನರಲ್ಲಿ ಮಾತ್ರ ಜೀವಿಸಿದೆ. ಮುಸಲ್ಮಾನರ ಕ್ಷೀಣತೆಯು ಸುಧಾರಣೆಯಿಂದ ಪರಿಹಾರವಾಗಬೇಕು. ಆದರೆ ಇಸ್ಲಾಮ ಸಮಷ್ಟಿವಾದಿಗಳು ಸರ್ವತ್ರ ಸುಧಾರಣೆಯ ವೈರಿಗಳಾಗಿರುವರು.

ಆದರೂ ಮುಸಲ್ಮಾನ ಪ್ರಪಂಚವು ಸುಧಾರಣೆಯನ್ನೂ ಪ್ರಗತಿಯನ್ನೂ ಪುರಸ್ಕರಿಸಿ ಮುಂದುವರಿಯಲು ಪ್ರಾರಂಭಿಸಿದೆ. ವಾಹಬಮತವು ಅರಬ ದೇಶಗಳಲ್ಲೂ, ಸಿನೂಸ್ಸಿಯಾ ಸಂಸ್ಥೆಯು ಆಫ್ರಿಕದಲ್ಲೂ, ಬಾಬ ಮತವು ಇರಾಣದಲ್ಲೂ, ಸಲಫೀಯ ಮತವೂ ಕ್ವಾದಿಯಾನಿಯ ಗುಲಾಂ ಅಹಮ್ಮದನ ಅಹಮ್ಮದೀಯ ಮತವೂ ಹಿಂದೂದೇಶದಲ್ಲೂ ಅದ್ಭುತವಾದ ಧರ್ಮ ಸುಧಾರಣೆಯನ್ನೂ ಧರ್ಮ ಜಾಗ್ರತಿಯನ್ನೂ ಕಲ್ಪಿಸಿವೆ. ಅಹಮ್ಮ

ದೀಯರು ಲಂಡನ್ನಿನಲ್ಲಿ ಒಂದು ಮಶೀದಿ ಕಟ್ಟಿ ಇಂಗ್ಲೆಂಡಿನಲ್ಲಿ ತಮ್ಮ ಮತವನ್ನು ಹರಡುತ್ತಿರುವರು. ಪಾರೀಸನಗರದಲ್ಲಿ ಅತ್ಯಂತ ದೊಡ್ಡದಾದ ಒಂದು ಮಶೀದಿಯು ಈಚೆಗೆ ಸ್ಥಾಪಿತವಾಗಿದೆ. ಪ್ರತಿ ವರ್ಷವೂ ಹಾಜಿಗೆ ಹೋಗುವುದಕ್ಕಿಂತಲೂ ಅಧಿಕ ಸಂಖ್ಯೆಯ ಮುಸಲ್ಮಾನರು ಪಾಶ್ಚಾತ್ಯ ನಾಗರಿಕತೆಗೆ ರಾಜಧಾನಿಯಾದ ಈ ನಗರಕ್ಕೆ ಯಾತ್ರೆಯಂತೆ ಬರಲಾರಂಭಿಸಿರುವರು. ಅಲಿಗಡ, ಬಗದಾದ್, ಬೇರೂತ (Beyruth), ಕಾಯಿರೊ (Cairo) ನಗರಗಳಲ್ಲಿ ಸುಪ್ರಸಿದ್ಧವಾದ ಮುಸಲ್ಮಾನ ವಿದ್ಯಾಪೀಠಗಳು ಹುಟ್ಟಿ ಅವರಿಗೆ ಪಾಶ್ಚಾತ್ಯ ನಾಗರಿಕತೆಯನ್ನು ಕಲಿಸುತ್ತಿವೆ. ಇಸ್ಲಾಮ ಪ್ರಪಂಚವು ಸಾವಿರಾರು ವರ್ಷಗಳಿಂದ ಕಳೆದುಕೊಂಡಿರುವ ವಿದ್ಯಾಬಲವನ್ನು ಜಿಜ್ಞಾಸಾ ಸ್ವಾತಂತ್ರ್ಯವನ್ನೂ ಉದ್ಧರಿಸಲು ಅನೇಕ ಸಾಹಸಿಗಳು ಪ್ರಯತ್ನಪಡುತ್ತಿರುವರು. ಇಸ್ಲಾಮ ಧರ್ಮವು ಜ್ಞಾನಕ್ಕೂ ಯುಕ್ತಿವಿಮರ್ಶೆಗೂ ವೈರಿಯಲ್ಲವೆಂದೂ, ಮೂಢ ಮುಲ್ಲಾಗಳೂ ಷರಿಯತ್ತೂ ಜನರನ್ನು ಪಶುಗಳಂತೆ ಆಳುವುದು ಈ ಧರ್ಮಕ್ಕೆ ಸ್ವರೂಪವಿರುದ್ಧವಾದ ಸಂಗತಿಯೆಂದೂ, ಶಾಂತಿಯೂ ಪರಮತ ಸಹನೆಯೂ ವಿದ್ಯಾವ್ಯವಸಾಯವೂ ಮುಸಲ್ಮಾನರ ಪರಮಧರ್ಮಗಳೆಂದೂ, ಕುರಾಣಕ್ಕೆ ಸ್ವತಂತ್ರವಾಗಿ ಅರ್ಥ ಮಾಡುವುದಕ್ಕೆ ಸಕಲರಿಗೂ ಅಧಿಕಾರವುಂಟೆಂದೂ, ಈಗ ಅಧಿಕಾರ ಮಾಡುತ್ತಿರುವ ಷರಿಯತ್ತಿನಲ್ಲಿ ಬಹುಭಾಗವು ಕುರಾಣದ ಉಪದೇಶಕ್ಕೆ ವಿರುದ್ಧವಾದುದೆಂದೂ, ದೇವರು ಮತಜ್ಞಾನವನ್ನೆಲ್ಲಾ ಹಿಂದೆಯೇ ಸಂಪೂರ್ಣವಾಗಿ ಪ್ರಸಾದಿಸಿಲ್ಲವಾದ್ದರಿಂದ ಈ ಜ್ಞಾನವನ್ನು ಅವನ ಅನುಗ್ರಹದಿಂದ ಉತ್ತರೋತ್ತರವಾಗಿ ಹೆಚ್ಚು ಹೆಚ್ಚಾಗಿ ಪಡೆಯಬಹುದೆಂದೂ ಮಹಾ ವಿದ್ವಾಂಸರಾದ ಹಲವು ಸುಧಾರಕರು ವಾದಿಸಲಾರಂಭಿಸಿರುವರು. ಪಾಟಲಿಪುತ್ರದ ಖುದಾಭಕ್ಷ ಎಂಬ ಪಂಡಿತನು ಹಿಂದೂದೇಶದಲ್ಲಿ ಈ ಪಕ್ಷಕ್ಕೆ ಮುಖ್ಯ ಪ್ರತಿನಿಧಿಯಾಗಿದ್ದನು.

---

# ೪ ನೆಯ ಅಧ್ಯಾಯ.

## ಚೀನರ ನವಚೈತನ್ಯಶಕ್ತಿ

ಏಷಿಯಾಖಂಡದ ಪ್ರತಿಯೊಂದು ದೇಶದ ಕ್ಷೀಣತೆಯನ್ನೂ ದಾಸ್ಯವನ್ನೂ ತದ್ವಿರುದ್ಧವಾದ ಜನಜಾಗೃತಿಯನ್ನೂ ಇನ್ನುಮುಂದೆ ಸಂಗ್ರಹವಾಗಿ ನೋಡಬೇಕು. ೧೯೦೦ ರ ವೇಳೆಗೆ ಜಪಾನದೇಶದ ಹೊರತಾಗಿ ಸಮಸ್ತ ಏಷಿಯಾವೂ ಸಾಮ್ರಾಜ್ಯಸ್ಥರ ರಾಜಾಧಿಕಾರ ಸೀಮೆಗೆ ಸೇರಿ ಹೋಗಿದ್ದಿತು. ಇವರು ಕಲ್ಪಿಸಿದ ದಾಸ್ಯವು ಒಂದೊಂದು ದೇಶದಲ್ಲಿ ಒಂದೊಂದು ರೂಪದಲ್ಲಿದ್ದಿತು. ಕಳೆದ ಹನ್ನೆರಡು ವರ್ಷಗಳಲ್ಲಿ ಏಷಿಯಾವು ತನ್ನ ದಾಸ್ಯದಲ್ಲಿ ಅರ್ಧ ಪಾಲನ್ನು ಪರಿಹರಿಸಿಕೊಂಡಿತು. ಎಂದಬಳಿಕ ಇದರ ಜಾಗೃತಿಯ ಪ್ರಭಾವವನ್ನು ಎಷ್ಟೆಂದು ಹೇಳಬೇಕು?

ಚೀನರು ೧೭೫೦ ರ ಸುಮಾರಕ್ಕೆ ಮೂರು ಸಾವಿರ ವರ್ಷಗಳಿಂದಲೂ ನಡೆದುಬರುತ್ತಿದ್ದ ಶ್ರೇಷ್ಠವಾದ ನಾಗರಿಕತೆಯಿಂದ ಕೂಡಿ, ಟಿಬೆಟ (ತಿಬೆಟ್ಟು), ಪೂರ್ವತುರಕಸ್ತಾನ ಮಂಗೋಲಿಯಾ, ಮಂಚೂರಿಯಾ ದೇಶಗಳನ್ನು ಗೆದ್ದುಕೊಂಡು, ಬರ್ಮಾ, ಕೊಚಿನ್‌ಚೈನ (Cochin-china) ಅನ್ನಾಂ, ಸಿಯಾಂ, ಕಾಂಬೋಡಿಯಾ (Cambodia), ನೇಪಾಳ, ಕೊರಿಯಾ ದೇಶಗಳನ್ನು ಸಾಮಂತ ರಾಜ್ಯಗಳಾಗಿ ಮಾಡಿಕೊಂಡು, ಪೂರ್ವಏಷಿಯಾಖಂಡದಲ್ಲಿ ಯಾರೂ ಎದುರಿಲ್ಲದೆ ಮಹಾ ಉಲ್ಲಾಸದಿಂದ ಮೆರೆಯುತ್ತಿದ್ದರು. ಯುರೋಪ್ಯರ ಕುಟಿಲರಾಜನೀತಿಯನ್ನರಿಯದೆ ಯುದ್ಧಬಲದಲ್ಲಿ ಹಿಂದುಳಿದಿದ್ದ ಇವರನ್ನು ಯುರೋಪ್ಯರು ನುಗ್ಗಿಬಡಿದು ಅರವತ್ತು ವರ್ಷ ಕಾಲದಲ್ಲಿ (೧೮೪೦-೧೯೦೦) ಇವರ ಸ್ವಾತಂತ್ರ್ಯಭಾಗ್ಯವನ್ನು ನಾಶ ಮಾಡಿದರು.

೧೮೩೯ ರ ವರೆಗೂ ಯುರೋಪ್ಯರು ಚೀನಾದಲ್ಲಿ ವ್ಯಾಪಾರ ಮಾಡಲು ಕ್ಯಾಂಟನ (Canton) ನಗರಕ್ಕೆ ಮಾತ್ರ ಪ್ರವೇಶಿಸಲು ಅವಕಾಶವಿದ್ದಿತು. ದೇಶಕ್ಕೆ ಅಫೀಮು ಹಾನಿಕರವೆಂದು ಚೀನರು ನಿಷೇಧಿಸಿದ್ದರೂ ಬ್ರಿಟಿಷರು ಕಳ್ಳತನದಿಂದ ತಂದು ಮಾರುತ್ತಿದ್ದುದನ್ನು ಅವರು ಆಕ್ಷೇಪಿಸಲು ಬ್ರಿಟಿಷರು ಯುದ್ಧಕ್ಕೆ ಹೊರಟು ಚೀನರನ್ನು ಸೋಲಿಸಿ

ಪಡು(೧೮೪೨). ಚೀಣರು ಹಾಂಕಾಂಗ ದ್ವೀಪವನ್ನೂ ಆರು ಕೋಟಿ ದ್ರವ್ಯ ಪರಿಹಾರವನ್ನೂ ಬ್ರಿಟಿಷರಿಗೆ ಒಪ್ಪಿಸಿ ಕ್ಯಾಂಟಾಂಗ ನಗರದ ಜತೆಗೆ ಬೇರೆ ನಾಲ್ಕು ನಗರಗಳನ್ನು ಪಾಶ್ಚಾತ್ಯರ ವ್ಯಾಪಾರಕ್ಕೆ “ತೆರೆ”ಯ ಬೇಕಾಯಿತು. ಒಡನೆಯೇ ಫ್ರೆಂಚರೂ ಅಮೇರಿಕದವರೂ ಇತರರೂ ಚೀಣರೊಡನೆ ಸಂಧಿ ಬೆಳೆಸಿ ನಾನಾ ಪ್ರಯೋಜನಗಳನ್ನು ಪಡೆದರು. ಈ ಪರದೇಶೀಯರ ವ್ಯಾಪಾರದ ಮೇಲೆ ಒಂದು ನೂರಕ್ಕೆ ಐದಕ್ಕೆ ಮೀರದಂತೆ ಸುಂಕ ಹಾಕುವುದಿಲ್ಲವೆಂದು ಚೀಣರು ಒಪ್ಪಿದರು. ಈ ಸುಂಕದ ಇಲಾಖೆಯ ಅಧಿಕಾರವನ್ನು ೧೮೫೪ ರಲ್ಲಿ ಬ್ರಿಟಿಷ ಅಧಿಕಾರಿಗಳ ವಶಕ್ಕೆ ಒಪ್ಪಿಸಬೇಕಾಯಿತು. ಇದೇರೀತಿ ಚೀಣರ ಅಂಚೆ ಇಲಾಖೆಯ ಅಧಿಕಾರವನ್ನು ಮುಂದೆ ಫ್ರೆಂಚರು ಕಸುಕೊಂಡರು (೧೮೯೮). ೧೮೫೭ ರಿಂದ ೧೮೬೦ ರೊಳಗಾಗಿ ರಷ್ಯನರು ಅಮೂರ್ ನದಿಯ ಉತ್ತರಭಾಗದ ದೇಶವನ್ನೆಲ್ಲಾ ಸಮುದ್ರದ ವರೆಗೂ ಸೇರಿಸಿಕೊಂಡರು.

ಇಂಗ್ಲಿಷರ ಧ್ವಜವಿದ್ದ ಒಂದು ದೇಶೀಯ ಹಡಗವನ್ನು ಹಿಡಿದ ತಪ್ಪಿತಕ್ಕೆ ಬ್ರಿಟಿಷರೂ ತಮ್ಮ ಮತಪ್ರವಾದಿಯೊಬ್ಬನನ್ನು ಕೊಂದ ನೆವದಿಂದ ಫ್ರೆಂಚರೂ ಯುದ್ಧಕ್ಕೆ ಹೊರಟು ರಾಜಧಾನಿಯನ್ನು ಹಿಡಿದು ಚಕ್ರವರ್ತಿಯ ವಸಂತಮಹಲನ್ನು ಸುಟ್ಟು ಚೀಣರನ್ನು ಸುಲಿದರು (೧೮೫೬-೬೦). ಚೀಣರು ಇವರಿಗೆ ಐದು ಕೋಟಿ ಪರಿಹಾರ ದ್ರವ್ಯ ತೆತ್ತು, ಕೌಲೂನ್ ಪ್ರಾಂತ್ಯವನ್ನು ಬ್ರಿಟಿಷರಿಗೆ ಸಮರ್ಪಿಸಿ, ೧೧ ಹೊಸ ನಗರಗಳನ್ನು ವ್ಯಾಪಾರಕ್ಕೆ ತೆರೆಯಬೇಕಾಯಿತು. ಪರದೇಶೀಯರು ಚೀಣದಲ್ಲಿ ಸ್ವತಂತ್ರವಾಗಿ ನೆಲಸಿ ಸಂಚರಿಸಬಹುದೆಂದೂ ಅವರ ಮೇಲೆ ಚೀಣ ಸರ್ಕಾರಕ್ಕೂ ಅವರ ನ್ಯಾಯಾಧಿಕಾರಿಗಳಿಗೂ ಅಧಿಕಾರವಿರಕೂಡದೆಂದೂ ಏರ್ಪಾಡು ಹುಟ್ಟಿ ಮುಂದೆ ಸಕಲ ಪಾಶ್ಚಾತ್ಯರಾಜ್ಯಗಳವರೂ ಸಂಧಿಗಳ ಮೂಲಕ ಈ “ರಾಜ್ಯಾತೀತ ಪ್ರಭುತ್ವಾಧಿಕಾರ”(Extra-territorial Power) ವನ್ನು ಕಸುಕೊಂಡರು. ಹಾಗೆಂದರೆ ಇವರು ತಂತಮ್ಮ ರಾಜ್ಯದ ಎಲ್ಲೆಯಿಂದ ಹೊರಗೆ ಪರದೇಶದಲ್ಲಿ ಸ್ವಕ್ಷೇತ್ರದಲ್ಲಿ ಪ್ರಭುತ್ವಾಧಿಕಾರ ನಡೆಯುವುದು ಎಂದರ್ಥ. ಫ್ರೆಂಚರು ೧೫೩೫ ರಲ್ಲಿ ತುರ್ಕಿರಾಜ್ಯದಲ್ಲಿ ಈ ಬಗೆಯಾದ ಅಧಿಕಾರವನ್ನು ಪಡೆದು ಮೇಲ್ಪಂಕ್ತಿ ಹಾಕಿಕೊಟ್ಟರು. ಚೀಣ

ದಲ್ಲಿ ಸ್ವೇಚ್ಛೆಯಿಂದ ಮೆರೆಯುತಕ್ಕ ಪರದೇಶಿಯರನ್ನು ಆಯಾ ದೇಶದ ರಾಜ್ಯದವರೇ ಅಲ್ಲಿ ನ್ಯಾಯಶಾಲೆಗಳನ್ನು ಸ್ಥಾಪಿಸಿ ತಮ್ಮ ದೇಶದ ನ್ಯಾಯಾಧಿಪತಿಗಳ ಮೂಲಕ ವಿಚಾರಣೆ ಮಾಡಲು ಅಧಿಕಾರ ಪಡೆದರು.

ಬ್ರಿಟಿಷರ ಅಧಿಕಾರಿಯೊಬ್ಬನ ಕೊಲೆಯಾದ ತಪ್ಪಿಗೆ ಪ್ರತಿಯಾಗಿ ಚೀಣಾದವರು ೧೮೭೬ ರಲ್ಲಿ ಪರಿಹಾರಪೂರ್ವಕವಾಗಿ ಮನ್ನಣೆ ಬೇಡಿ ಅವರ ವ್ಯಾಪಾರಕ್ಕೆ ಹೊಸ ನಾಲ್ಕು ನಗರಗಳನ್ನು ಯಾಂಗ್ಟ್ಸಿಕಿಯಾಂಗ ನದಿಯನ್ನೂ ತೆರೆಯಬೇಕಾಯಿತು. ಫ್ರೆಂಚರು ಅನ್ನಾಂ ಮೊದಲಾದ ದೇಶಗಳನ್ನೂ ಬ್ರಿಟಿಷರು ಬರ್ಮವನ್ನೂ ಕಬಳಿಸಿದರು. ಜಪಾನರು ಲೂಚೂ ದ್ವೀಪಗಳನ್ನು ಮೊದಲು ಆಕ್ರಮಿಸಿಕೊಂಡು ೧೮೯೪ ರಲ್ಲಿ ಚೀಣಾವನ್ನು ಘೋರವಾಗಿ ಸೋಲಿಸಿ ಫಾರ್ಮೋಸ, ಕೊರಿಯ, ದಕ್ಷಿಣಮಂಚೂರಿಯ ದೇಶಗಳನ್ನು ಕಿತ್ತುಕೊಂಡರು. ಇದಕ್ಕೆ ಸಹಿಸದೆ ರಷ್ಯನರೂ ಫ್ರೆಂಚರೂ, ಜರ್ಮನರೂ ದಕ್ಷಿಣಮಂಚೂರಿಯವನ್ನು ಚೀಣಾಕ್ಕೆ ಹಿಂದಕ್ಕೆ ಕೊಡಿಸಿದರು. ಆದರೆ ಕೂಡಲೆ ಜರ್ಮನರು ಷಾಂಟುಂಗ ಪ್ರಾಂತ್ಯದಲ್ಲಿ ಕಯಾಚೋ ಎಂಬ ಪ್ರದೇಶವನ್ನು ನುಂಗಿದರು; ರಷ್ಯನರು ದಕ್ಷಿಣಮಂಚೂರಿಯವನ್ನು ಆಕ್ರಮಿಸಿ ೨೫ ವರ್ಷಕಾಲದ ಗುತ್ತಿಗೆಯ ಹೆಸರಿನಿಂದ ಚೀಣಾದೇಶದ ಅತ್ಯಂತ ಶ್ರೇಷ್ಠ ರೇವು ನಗರವಾದ ಆರ್ಥರ್ ನಗರವನ್ನು ಹಿಡಿದುಕೊಂಡರು. ಅದಕ್ಕೆ ಎದುರಿನ ರೇವಾಗಿದ್ದ ವೀ-ಹೈ-ವೇ ನಗರವನ್ನು ಬ್ರಿಟಿಷರು ಕಿತ್ತುಕೊಂಡರು (೧೮೯೮).

ಈ ಸುಲಿಗೆಗೆ ಸಹಕಾರಿಯಾಗಿ ಹಲವು ದಂಗೆಗಳೂ ಕ್ಷಾಮಗಳೂ ಹುಟ್ಟಿದವು. ಭಯಂಕರವಾದ ಟೈಪಿಂಗ ಬಂಡಾಯವು ೧೩ ವರ್ಷ ಕಾಲ (೧೮೫೧—೬೪) ನಡೆದು ೨೦೦ ಲಕ್ಷ ಜನರನ್ನು ಆಹುತಿ ತೆಗೆದುಕೊಂಡಿತು. ಈ ರಾಜ್ಯದ ಮುಸಲ್ಮಾನ ಪ್ರಜೆಗಳು ಯುನ್ನಾನ ಪ್ರಾಂತದಲ್ಲೂ (೧೮೫೬—೭೩), ಶೆನ್ಸಿ ಮತ್ತು ಕನ್ಸು ಪ್ರಾಂತದಲ್ಲೂ (೧೮೬೨—೭೩) ಕಾಶಗರ ಪ್ರಾಂತದಲ್ಲೂ (೧೮೬೦—೭೭) ದಂಗೆಯೆಬ್ಬಿಸಿದಾಗ ವಿಶೇಷಪ್ರಯತ್ನದಿಂದ ಅಡಗಿಸಲ್ಪಟ್ಟರು. ೧೮೭೭—೭೮ ರ ಮಹಾಕ್ಷಾಮದಲ್ಲಿ ೧.೩ ಕೋಟಿ ಚೀನರು ಬಲಿಯಾದರು.

ಪಾಶ್ಚಾತ್ಯರ ಕೊಳ್ಳೆಯನ್ನು ಸಹಿಸಲಾರದೆ ಐ-ಹೋ-ಚೂವನ=ದೇಶಭಕ್ತರೂ ಸ್ನೇಹಪರರೂ ಆದ ಮುಷ್ಟಿಗಳು (Patriot-Harmony-Fists) ಎಂಬ ಹೆಸರಿನ ಒಂದು ಗುಪ್ತಸಂಘದವರು ದಂಗೆಯೆಬ್ಬಿಸಿ ರಾಜಧಾನಿಯಲ್ಲಿದ್ದ ಪಾಶ್ಚಾತ್ಯರಿಗೆ ಮುತ್ತಿಗೆ ಹಾಕಿದರು. ಈ ಮುಷ್ಟಿಕರ (Boxers) ಬಂಡನ್ನಡಗಿಸಲು ಎಂಟು ಪರರಾಜ್ಯದವರು ಸೇನೆ ಕಳಿಸಿ ಭಯಂಕರವಾಗಿ ಶಿಕ್ಷಿಸಿ ೧೦೩ ಕೋಟಿ ರೂಪಾಯಿ ದಂಡವನ್ನು ವಿಧಿಸಿದರು. ಈ ಹಣದ ಸಾಲವನ್ನು ಚೀಣರು ತೀರಿಸಲು ಇನ್ನೂ ಅಶಕ್ತರಾಗಿದ್ದಾರೆ.

ಮುಷ್ಟಿಕರ ಉರವಣಿಗೆ ಹೆದರಿ ಜಪಾನರೂ ಬ್ರಿಟಿಷರೂ ಮೈತ್ರಿ ಬೆಳೆಸಿದರು. (೧೯೦೨). ಇದು ೧೯೨೧ರ ವರೆಗೂ ನಡೆದುಬಂತು. ಜಪಾನರು ೧೯೦೫ರಲ್ಲಿ ಈ ರುಷ್ಯರನ್ನು ದಕ್ಷಿಣಮಂಚೂರಿಯಾದಿಂದ ಬಡಿದೋಡಿಸಿ ಆರ್ಥರ ನಗರವನ್ನು ತಾವು ಕಿತ್ತುಕೊಂಡರು. ಇದೇ ಸಮಯದಲ್ಲಿ ಬ್ರಿಟಿಷರು ಟಿಬೆಟ್ಟನ್ನು ಸೇರಿಸಿಕೊಂಡರು (೧೯೦೪-೬). ಜಪಾನರು ಕೋರಿಯಾದ ಸ್ವಾತಂತ್ರ್ಯವನ್ನು ಹಾಳುಮಾಡಿ ತಮ್ಮ ಅಧೀನದೇಶವಾಗಿ ಮಾಡಿಕೊಂಡರು (೧೯೧೦). ಬ್ರಿಟಿಷರು ಬರ್ಮಾದೇಶದ ಉತ್ತರದ ಗಡಿಯನ್ನು ವಿಸ್ತರಿಸಿ, ಮಿರಿ, ಅಬೋರಿ, ಮಿಷ್ಮಿ ಮೊದಲಾದ ಕಾಡುಜನರ ವಸತಿಗಳಿಗೆ ಸೇನೆ ಕಳುಹಿಸಿ ರಾಜ್ಯವನ್ನು ಹೆಚ್ಚಿಸಿದರು (೧೯೧೧). ರುಷ್ಯರು ಉತ್ತರಮಂಗೋಲಿಯಾವನ್ನು ತಮ್ಮ ಆಶ್ರಯಕ್ಕೆ ತೆಗೆದುಕೊಂಡು (೧೯೧೨-೧೫) ಜಪಾನರೊಡನೆ ಸಂಧಿಮಾಡಿಕೊಂಡು ಮಂಚೂರಿಯವನ್ನು ಉಭಯರೂ ಹಂಚಿಕೊಂಡರು. ಜಪಾನರು ೧೯೧೪ರಲ್ಲಿ ಜರ್ಮನರ ಪ್ರಾಂತ್ಯವನ್ನು ಹಿಡಿದುಕೊಂಡು ೧೯೧೫ರಲ್ಲಿ ಚೀಣರನ್ನು ಬೆದರಿಸಿ ತಮ್ಮ ಸುಪ್ರಸಿದ್ಧವಾದ ೨೧ ಬಯಕೆಗಳಿಗೆ ಒಪ್ಪಿಗೆ ತೆಗೆದುಕೊಂಡು ಚೀಣರಾಜ್ಯದ ಅರ್ಧಭಾಗದ ಮೇಲೆ ಸಮಾಧಿಕಾರವನ್ನು ಪಡೆದರು. ೧೯೩೨ರಲ್ಲಿ ಜಪಾನರು ಮಂಚೂರಿಯಾವನ್ನು ಕಬಳಿಸಿ ಪದಚ್ಯುತನಾಗಿದ್ದ ಚೀಣದ ಚಕ್ರವರ್ತಿಯನ್ನು ಅಲ್ಲಿಗೆ ತಮ್ಮ ಆಶ್ರಿತ ರಾಜನನ್ನಾಗಿ ಮಾಡಿ ನಿಲ್ಲಿಸಿರುವರು. ಚೀಣಾರಾಜ್ಯಕ್ಕೆ ಭಯಂಕರವಾದ ಅಂತಃಕಲಹಗಳಿಂದ ಕುಂದಿದೆ. ಅದರ ಅಧೀನದೇಶಗಳೆಲ್ಲವೂ ಸ್ವತಂತ್ರವಾ

ಗಲು ಬಯಸಿವೆ. ಪರದೇಶೀಯರ ಸಾಲಗಳಿಗಾಗಿ ರಾಜ್ಯದ ಆದಾಯಕರವಾದ ತೆರಿಗೆಗಳೆಲ್ಲವೂ ಈಡು ಮಾಡಲ್ಪಟ್ಟು ಪರದೇಶೀಯರ ವಶವಾಗಿವೆ. ಹೀಗಿದ್ದರೂ ಚೀಣರು ಸ್ವಾತಂತ್ರ್ಯಕ್ಕಾಗಿ ಚಂಡಸಾಹಸದಿಂದ ಹೋರಾಡುತ್ತಿರುವರು.

ಚೀಣರ ಉದ್ಧಾರವು ಸುಧಾರಣೆ, ಐಕಮತ್ಯಸಾಧನೆ, ಸಂಧಿಪುನರ್ವಿಮರ್ಶೆ (Treaty Revision) ಎಂಬ ಮೂರು ಮಾರ್ಗಗಳಿಂದ ಆಗಬೇಕಾಗಿದೆ.

## ಸುಧಾರಣೆ.

ಚೀಣರು ಅತ್ಯಂತ ರೂಢಿಪ್ರಿಯರು. ಆದರೆ ಅವರು ಪ್ರಗತಿಪರರಾಗದಿದ್ದರೆ ಹಿಂದುಳಿದವರಾಗಿಬಿಡುವರೆಂದು ತಿಳಿದು ಕಾಂಗಯುವೈ (K'ang Yu-Wei) ಎಂಬ ಸುಧಾರಕಪಕ್ಷದ ಮುಖಂಡನು ೧೮೯೮ರಲ್ಲಿ ಚಕ್ರವರ್ತಿಯ ಪ್ರೀತಿಯನ್ನು ಸಂಪಾದಿಸಿ ಶಾಸನಮುಖೇನ ಹಲವು ಸುಧಾರಣೆಗಳನ್ನು ಕಲ್ಪಿಸಿದನು. ಕೂಡಲೆ ರೂಢಿಬದ್ಧರೆಲ್ಲರೂ ಗುಂಪುಸೇರಿ ಘಟಕ ಸೇನಾಪತಿಯಾಗಿದ್ದ ಯುಆನಷಿಕೈ ಎಂಬಾತನ ಸಹಾಯದಿಂದ ಸಮ್ರಾಜ್ಞೀ-ಮಾತೆಗೆ ಮೊರೆಯಿಟ್ಟು ಆಕೆಯ ನೇತೃತ್ವದಲ್ಲಿ ಸಮ್ರಾಟನನ್ನು ಸೆರೆಹಿಡಿದು ಸರ್ವಾಧಿಕಾರವನ್ನೂ ಆಕೆಯು ವಹಿಸಿ ಸುಧಾರಕರನ್ನು ಗಲ್ಲಿಗೇರಿಸಿ ಸುಧಾರಣೆಯನ್ನು ಮುರಿದರು. ಆದರೆ ಜಪಾನರ ವಿಜಯವೂ ಅಭಿವೃದ್ಧಿಯೂ ಬಾಲ ಚೀಣಾ ಚಳವಳಿಯನ್ನು ಬಹುವಾಗಿ ವೃದ್ಧಿಪಡಿಸಿದವು. ದೇಶದ ತರುಣ ಜನತೆಯು ದೇಶದ ಉದ್ಧಾರಕ್ಕಾಗಿ ಬೇಕಾದ ವಿದ್ಯೆಯನ್ನೂ ಸುಧಾರಣೆಯನ್ನೂ ಕಲಿತು ತ್ಯಾಗವನ್ನೂ ಸೇವೆಯನ್ನೂ ಕೈಕೊಳ್ಳಲು ಸಿದ್ಧವಾಯಿತು. ಚೀಣಾ ವಿದ್ಯಾರ್ಥಿಗಳು ಸಹಸ್ರ ಸಂಖ್ಯೆಯಲ್ಲಿ ಜಪಾನ ದೇಶಕ್ಕೂ ಅಮೇರಿಕೆಗೂ ಹೋಗಿ ವಿದ್ಯಾಭ್ಯಾಸ ಮಾಡಿ ದೇಶ ಸೇವೆಗೆ ಸಿದ್ಧರಾದರು. ಆದರೆ ಚೀಣದ ಸರ್ಕಾರವು ಸುಧಾರಣೆಯನ್ನು ಛಲದಿಂದ ವಿರೋಧಿಸುತ್ತ ಬಂದದ್ದರಿಂದ ದಕ್ಷಿಣಚೀಣವು ದಂಗೆಯೆಬ್ಬಿಸಿ ೧೯೧೧ರಲ್ಲಿ ಚಕ್ರವರ್ತಿಯನ್ನು ಓಡಿಸಿ ಅರಾಜಕ ಪ್ರಭುತ್ವವನ್ನು ಸ್ಥಾಪಿಸಿ ಸುನ್ಯಾತಸೇನನನ್ನು ಅಧ್ಯಕ್ಷನನ್ನಾಗಿ ಆರಿಸಿತು.

ಸುನ್ಯಾತಸೇನನ (೧೮೬೭-೧೯೨೫) ಸುಧಾರಣಾಪ್ರವೃತ್ತಿಯನ್ನು ಸಹಿಸದೆ ಚೀಣಾ ಸರ್ಕಾರವು ಅವನನ್ನು ೧೮೯೫ರಲ್ಲಿ ಗಡಿಪಾರು ಮಾಡಿತ್ತು. ಆತನು ೧೯೧೧ರಲ್ಲಿ ಹಿಂತಿರುಗಿ ಬಂದು ವೀರಶಕ್ತಿಯನ್ನು ಸ್ಥಾಪಿಸಿದನು. ಇದು ಬೇರೆ ಐದು ಶಕ್ತಿಗಳೊಡನೆ ಸಮ್ಮಿಳಿತವಾಗಿ ಕುವೊ-ಮಿನ-ತಂಗ (Kuo-Min-Tang)—ಜನಾಂಗಶಕ್ತಿ (Nationalist Party) ಎಂದು ಹೆಸರು ಪಡೆಯಿತು.

ಸಮ್ರಾಟನ ಪತನದಿಂದ ರಾಜಧಾನಿಯಲ್ಲಿ ಮುಖ್ಯಾಧಿಕಾರವನ್ನು ಪಡೆದಿದ್ದ ಯೂವನಸಿಕೈಯನು ತಾನೇ ರಾಷ್ಟ್ರಾಧ್ಯಕ್ಷನಾಗಲು ಬಯಸಿದ್ದರಿಂದ ಸುನ್ಯಾತಸೇನನು ದೇಶಹಿತಾರ್ಥವಾಗಿ ಅದನ್ನು ಒಪ್ಪಿಕೊಂಡನು. ಯೂವನನು ಪ್ರಜಾಪ್ರಭುತ್ವಕ್ಕೂ ಸುಧಾರಣೆಗೂ ವೈರಿಯಾಗಿದ್ದನು. ಇವನು ವಿದೇಶಿಯರಿಗೆ ದೇಶವನ್ನು ಮಾರಿ ಮೂರು ದೊಡ್ಡ ಸಾಲಗಳನ್ನೆತ್ತಿ ತನ್ನ ವಿರೋಧಿಗಳನ್ನು ಅಡಗಿಸಲು ಪ್ರೋಲುಮಾಡಿ ಕುವೋ-ಮಿನ್-ತಂಗದನ್ನು ರಾಜದ್ರೋಹಿಗಳೆಂದು ನಿಗ್ರಹಿಸಲು ಪ್ರಯತ್ನ ಮಾಡಿ ಕಡೆಗೆ ತಾನೇ ಚಕ್ರವರ್ತಿ ಪದವಿಯನ್ನು ಪರಿಗ್ರಹಿಸಿದನು. ಆದರೆ ಮೂರು ವಾರದೊಳಗಾಗಿ ಚೀಣಾ ತರುಣಜನತೆಯೂ ಜನಾಂಗಶಕ್ತಿಯೂ ದಂಗೆಯೆಬ್ಬಿಸಿ ಗಲಭೆ ಮಾಡಿದ್ದರಿಂದ ಮೂರು ತಿಂಗಳಿಗೇ ಸಾಮ್ರಾಜ್ಯಪದವಿಯನ್ನು ಈತನು ಪರಿತ್ಯಜಿಸಬೇಕಾಯಿತು (೧೯೧೬ ಮಾರ್ಚ). ಕೂಡಲೆ ಇವನು ಮೃತನಾದನು.

ಇಲ್ಲಿಂದ ಮುಂದೆ ದೇಶವು ಒಳಕಲಹದಿಂದ ತುಂಬಿಹೋಗಿದ್ದರೂ ಸಾಹಸದಿಂದ ಪ್ರಗತಿಯನ್ನು ಉಪಾಸಿಸುತ್ತಿದೆ. ರಾಜ್ಯದಲ್ಲಿ ವರ್ಷವರ್ಷವೂ ಶಾಲೆಗಳೂ ವೈದ್ಯಾಲಯಗಳೂ ಹೆಚ್ಚುತ್ತಿವೆ. ಹಲವು ಕವಿಗಳೂ ಲೇಖಕರೂ ಚೀಣಾ ಸಾಹಿತ್ಯದಲ್ಲಿ ಹೊಸ ಹೊಸ ಮಾರ್ಗಗಳನ್ನು ಕಲ್ಪಿಸಿ ಜನಜಾಗೃತಿ ಮಾಡುತ್ತಿರುವರು. ವಿವಿಧ ಪ್ರಾಂತ್ಯಗಳ ಭಾಷೆಗಳನ್ನೆಲ್ಲಾ ಸಮನ್ವಯ ಮಾಡಿ ದೇಶಕ್ಕೆಲ್ಲಾ ಒಂದು ಕುವೊಯು—ಜನಾಂಗಭಾಷೆಯನ್ನು ಸ್ಥಾಪಿಸಲು ಸರ್ಕಾರದವರೂ ಹಲವು ಸಂಶೋಧಕ ಸಭೆಗಳವರೂ ಲೇಖಕರೂ ಸಾಹಸಪಡುತ್ತಿರುವರು. ಚೀಣದ ಭಾಷೆಯ ಉಚ್ಚಾರಣೆಯಲ್ಲಿ ವ್ಯವಸ್ಥೆ ಇಲ್ಲವಾದ್ದರಿಂದ ಜನರಿಗೆ ಬಹು ಕಷ್ಟವುಂಟಾಗುತ್ತಿದೆ. ವಿದ್ಯಾ

ಭ್ಯಾಸ ಮಂತ್ರಿಯಿಂದ ನೇಮಕವಾದ ಒಂದು ಸಂಶೋಧಕ ಸಭೆಯು ಜನರ ಉಚ್ಚಾರಣೆಯನ್ನು ಜನಾಂಗಸಾಮಾನ್ಯವಾದ ಒಂದು ಕ್ರಮಕ್ಕೆ ಬ್ಬಾಸ ಪಡಿಸಿ ೩೯ ಸಂಜ್ಞಾಕ್ಷರಗಳನ್ನು ಸಂಕೇತಪಡಿಸಿದೆ. ಸರ್ಕಾರದವರು ೧೯೧೮ ರಲ್ಲಿ ಈ ಹೊಸ ವರ್ಣಮಾಲೆಯನ್ನು ದೇಶದಲ್ಲಿ ಸ್ಥಾಪಿಸಿದರು. ೧೯೩೦ ರಲ್ಲಿ ಇದಕ್ಕೆ ಮತ್ತೊಂದು ಸ್ವರಾಕ್ಷರವನ್ನು ಸೇರಿಸಿದರು.

## ಅಂತಃಕಲಹ

ಚೀನಾರಾಜ್ಯವು ೧೮ ಪ್ರಾಂತ್ಯಗಳಾಗಿಯೂ ಮಂಚೂರಿಯವು ೩ ಪ್ರಾಂತ್ಯಗಳಾಗಿಯೂ ವಿಭಾಗವಾಗಿವೆ. ಈ ಪ್ರಾಂತ್ಯಗಳ ಅಧಿಪತಿಗಳಾದ ಟುಚನ (Tuchan) ಎಂಬುವರು ಸ್ವತಂತ್ರ ರಾಜರಂತೆ ಆಳುತ್ತ, ಕೇಂದ್ರ ಸರ್ಕಾರವನ್ನು ಸಡ್ಡೆಮಾಡದೆ, ದೇಶದ ಸೇನೆಯನ್ನೂ ವರಮಾನವನ್ನೂ ಆಡಳಿತವನ್ನೂ ತಮ್ಮಧೀನ ಪಡಿಸಿಕೊಂಡು, ಸ್ವಾರ್ಥದಿಂದ ಪರಸ್ಪರ ಕಲಹ ಮಾತ್ರ ನಡೆಸುತ್ತ ವಿದೇಶೀಯರ ಹೊಟ್ಟೆ ತುಂಬುತ್ತಿರುವರು. ಇವರ ಕೈಕೆಳಗೆ ಈಗ ೨೦ ಲಕ್ಷ ಸೇನೆ ಇದೆ. ಇದು ಸರ್ವದಾ ಅಂತಃಕಲಹದಲ್ಲಿ ನಿರತವಾಗಿ ದೇಶವನ್ನು ಕೊಳ್ಳೆ ಹೊಡೆಯುತ್ತಿದೆ. ಇದರಿಂದ ಕೃಷಿ ಕೈಗಾರಿಕೆ ವ್ಯಾಪಾರಗಳೆಲ್ಲಾ ದೇಶದ ಒಳಭಾಗದಲ್ಲಿ ನಿರ್ನಾಮವಾಗಿ ಹಳ್ಳಿಯವರೂ ಬಡವರೂ ಹೊಟ್ಟೆಗಿಲ್ಲದೆ ಅಲ್ಲಲ್ಲಿ ದಳಬದ್ಧರಾಗಿ ದಾರಿ ಗಾಯತ್ತ, ಕಳ್ಳತನದಿಂದ ಜೀವಿಸತೊಡಗಿರುವರು. ೧೯೩೧-೩೩ ರಲ್ಲಿ ಜಪಾನರ ಮೇಲೆ ಯುದ್ಧ ಮಾಡುತ್ತಿರುವವರು ಇಬ್ಬರು ಟುಚನರೇ ಹೊರತು ಚೀನಾದ ಕೇಂದ್ರಸರ್ಕಾರವಲ್ಲ. ಈ ಸರ್ಕಾರವು ತಟಸ್ಥವಾಗಿ ನಿಂತು ನೋಡುತ್ತಿರುವದು.

ರಾಜ್ಯಕ್ರಾಂತಿಯ ಕಾಲದಿಂದಲೂ ಉತ್ತರ ದಕ್ಷಿಣ ಚೀನಾಗಳಿಗೆ ನಿತ್ಯ ಕಲಹವು ಏರ್ಪಟ್ಟಿದೆ. ದಕ್ಷಿಣ ಚೀನದ ಕುವೋ-ಮಿನ್-ತಂಗನು ಉತ್ತರ ಚೀನದ ಯೂವನಷಿಕೈಯನ್ನು ಸೋಲಿಸಿದರೂ ಉತ್ತರದವರು ಅವರಿಗೆ ತಲೆಬಾಗಿಸಲು ಸಮ್ಮತಿಸಲಿಲ್ಲ. ೧೯೧೭ ರಿಂದ ೧೯೨೫ ರ ವರೆಗೆ ಟ-ಜೂಲಿ ಎಂಬ ಉತ್ತರ ಚೀನಾಪಕ್ಷದವನು ದೇಶವನ್ನು ಜಪಾನ್ಯರಿಗೆ ಮಾರುತ್ತ ಅಧಿಕಾರ ಮಾಡಿದನು. ೧೯೧೯ ರಿಂದ ಬ್ರಿಟಿಷರಿಗೆ ಆಶ್ರಿತನಾಗಿದ್ದ ಚಾಂಗಸೋಲಿನ್ ಎಂಬುವನು ಮಂಚೂರಿಯಾದ ಮೂರು ಪ್ರಾಂತ್ಯ

ಗಳಿಗೂ ತುಚೂನನಾದನು. ದಕ್ಷಿಣ ಚೀಣವು ಟಿ-ಚೂವಿಯ ಆಳ್ವಿಕೆಗೆ ಸೇರಿ ಕ್ವ್ಯಾತುಂಗ ನಗರದಲ್ಲಿ ಬೇರೊಂದು ಸರ್ಕಾರವನ್ನು ಸ್ಥಾಪಿಸಿತು. ಇದಕ್ಕೆ ೧೯೨೧ ರಲ್ಲಿ ಸುನ್ಯಾತಸೇನನು ಅಧ್ಯಕ್ಷನಾದನು. ಒಳಕಲಹಗಳನ್ನು ಅಡಗಿಸಲಾರದೆ ಬೋಲ್ಷೆವಿಕರ ಸಹಾಯದಿಂದ ಇವನು ತನ್ನ ಅಧಿಕಾರವನ್ನು ಸಂರಕ್ಷಿಸಿಕೊಳ್ಳಬೇಕಾಯಿತು (೧೯೨೪). ಉತ್ತರ ಚೀಣದಲ್ಲಿ ಮಂಚೂರಿಯಾದ ಚಾಂಗನು ಟಿ-ಚೂವಿಯನ್ನು ಸೋಲಿಸಿ ತಾನೇ ಉತ್ತರಚೀಣಕ್ಕೆ ಪ್ರಭುವಾದನು (೧೯೨೪-೨೫). ಸುನ್ಯಾತಸೇನನು ಮೃತನಾದ ಬಳಿಕ ಚಿಯಾಂಗಕೈಷೆಕ ಎಂಬ ವೀರಸೇನಾಪತಿಯು ದಕ್ಷಿಣ ಸರ್ಕಾರದ ಮುಖಂಡನಾಗಿ ಕ್ರಮವಾಗಿ ಉತ್ತರಚೀಣವನ್ನು ವಶಪಡಿಸಿಕೊಂಡನು (೧೯೨೮). ಅಂದಿನಿಂದ ದೇಶಕ್ಕೆ ಒಂದೇ ಕೇಂದ್ರಸರ್ಕಾರವು ಇರುತ್ತಿದೆ. ಇದರ ರಾಜಧಾನಿಯು ನಾನಕಿಂಗನಗರವಾಗಿದೆ. ಚಿಯಾಂಗನ ಸಾಹಸದಿಂದ ಉತ್ತರ ದಕ್ಷಿಣ ಚೀಣಾ ವಿಭಾಗಗಳ ವಿರೋಧವು ಉಪಶಮನವಾಗುತ್ತಿದೆ. ಆದರೆ ತುಚೂನರ ಅಧಿಕಾರ ಮಾತ್ರ ಇನ್ನೂ ನಾಶವಾಗಿಲ್ಲವಾದ್ದರಿಂದ ಅಂತಃಕಲಹವು ನಿರ್ನಾಮವಾಗಲು ಅಸಾಧ್ಯವಾಗಿದೆ.

## ಸಂಧಿಬಂಧನವಿಮುಕ್ತಿ.

ಚೀಣದ ದಾಸ್ಯವು ಅವರು ವಿದೇಶೀಯರ ಮೋಸಕ್ಕೆ ಸಿಕ್ಕಿ ಅವರೊಡನೆ ಮಾಡಿಕೊಂಡಿರುವ ಸಂಧಿಗಳಿಂದ ಕಲ್ಪಿತವಾಗಿದೆ. ಇವರ ರಾಜ್ಯದ ರಕ್ಷಣಾಸ್ಥಾನಗಳೂ ವ್ಯಾಪಾರ ಕೇಂದ್ರಗಳೂ ಪರರ ಕೈಗೆ ಸಿಕ್ಕಿವೆ. ಲಾಭಕರವಾದ ಹಲವು ವ್ಯಾಪಾರಗಳೂ ತೆರಿಗೆಗಳೂ ವಿದೇಶೀಯ ಮಾನ್ಯವಾಗಿ ಅವರ ಆಡಳಿತಕ್ಕೆ ಸೇರಿಹೋಗಿವೆ. ಚೀಣರು ಕಂದಾಯಸ್ವಾತಂತ್ರ್ಯವನ್ನು ಕಳೆದುಕೊಂಡಿರುವರು. ಉಪ್ಪು, ಸುಂಕ, ಅಂಚೆ ಮೊದಲಾದ ಇಲಾಖೆಗಳು ಪರರ ಅಧಿಕಾರಕ್ಕೆ ಸೇರಿವೆ. ದೇಶದ ಕಬ್ಬಿಣದ ಕೈಗಾರಿಕೆಯೆಲ್ಲವೂ ಜಪಾನರ ಮಾನ್ಯವಾಗಿದೆ. ಗಣಿ ಕೈಗಾರಿಕೆಯೂ ರೈಲುಗಳೂ ಪರರ ಸ್ವತ್ತಾಗಿವೆ. ದೇಶದಲ್ಲಿ ಮನಸ್ಸಿಗೆ ಗೊಂದಲವನ್ನು ಮಾಡುತ್ತಿರುವ ವಿದೇಶೀಯರನ್ನು ಚೀಣರು ಅಂಕೆಗೆ ತರಲಾರರು. ಚೀಣದ ಉದ್ಧಾರಕ್ಕೆ ಹಣಬೇಕು. ಪರರಲ್ಲಿ ಸಾಲವೆತ್ತಿದ್ದರೆ ಇವರ ದಾಸ್ಯವು ಹೆಚ್ಚುವದು. ಅಂತಃಕಲಹದಿಂದ ದೇಶದ ಉದ್ಯೋಗಗಳೆಲ್ಲವೂ ಹಾಳಾಗಿವೆ. ಲಾಭಕರ

ವಾದ ಉದ್ಯೋಗಗಳು ಪರರಿಗೆ ಸೇರಿಹೋಗಿವೆ. ಸುಂಕವನ್ನು ಕಂದಾಯವನ್ನು ಹೆಚ್ಚಿಸುವದಕ್ಕೂ ಸ್ವಾತಂತ್ರ್ಯವಿಲ್ಲ. ಧನಾಭಾವವಿಲ್ಲದಿದ್ದರೆ ಚಿಯಾಂಗನು ಅರಗಳಿಗೆಯಲ್ಲಿ ಜುಬನರನ್ನು ಅಡಗಿಸಿ ಸುಧಾರಣೆಗಳನ್ನು ಸಾಧಿಸುತ್ತಿದ್ದನು. ಈಗ ಹುಟ್ಟಿರುವ ಸಂಘಗಳು ಮಾರ್ಕಡದ ಚೀಣಾಗೆ ಧನಸಹಾಯವು ಒದಗುವಂತಿಲ್ಲ. ಆದ್ದರಿಂದ ಚೀಣದ ಸುಧಾರಣೆಗೂ ಐಕ್ಯಸಾಧನೆಗೂ ದಾಸ್ಯ ಪರಿಹಾರಕ್ಕೂ ಸಂಘವಿಮುಕ್ತಿಯೊಂದೇ ಉಪಾಯವಾಗಿದೆ.

ಇದನ್ನು ಧನಬಲ ಯುದ್ಧಬಲಶೂನ್ಯರಾದ ಚೀಣರು ಬಹಿಷ್ಕಾರ ಎಂಬ ಉಪಾಯದ ಮೂಲಕ ಸಾಧಿಸಲು ಬಗೆದಿರುವರು. ಇವರು ೧೯೦೫ ರಲ್ಲಿ ಅಮೇರಿಕದವರ ವ್ಯಾಪಾರಕ್ಕೂ ೧೯೦೮ ರಲ್ಲಿ ಜಪಾನರ ವ್ಯಾಪಾರಕ್ಕೂ ಬಹಿಷ್ಕಾರ ಹಾಕಿ ನಷ್ಟಪಡಿಸಿದ್ದರು. ಗಾಂಧಿಯವರ ಸತ್ಯಾಗ್ರಹದ ನೀತಿಶಕ್ತಿಯು ಗೊತ್ತಾದಮೇಲೆ ಚೀಣರು ೧೯೨೫ ರಿಂದ ಅದನ್ನು ಅವಲಂಬಿಸಿ ವಿದೇಶೀಯರನ್ನು ಹಣ್ಣಿಗೆ ತರುತ್ತಿರುವರು. ೧೯೨೫ ರಲ್ಲಿ ಷಾಂಘೈ, ಹಾಂಕೋ, ಕ್ಯಾಂಟುಂಗ ನಗರಗಳಲ್ಲಿ ವಿದೇಶೀಯರು ಮುಖ್ಯವಾಗಿ ಬ್ರಿಟಿಷರು ಸ್ವರಾಜ್ಯ ಚಳವಳಿಕಾರರಾದ ಚೀಣರ ಮೇಲೆ ಉದ್ಧಟತನದಿಂದ ಗುಂಡು ಹಾರಿಸಿ ಅನೇಕರನ್ನು ಕೊಂದುಹಾಕಿದರು. ೧೯೨೭ ರಲ್ಲಿ ಬ್ರಿಟಿಷರೂ ಅಮೇರಿಕದವರೂ ನಾಂಕಿಂಗವನ್ನು ಮುತ್ತಿ ದಾಳಿ ಮಾಡಿದರು. ಚೀಣಾ ಜನತೆಯು ಮುಷ್ಕರಬಲದಿಂದ ಇವರ ವ್ಯಾಪಾರಕ್ಕೆ ಸಮಗ್ರವಾದ ಬಹಿಷ್ಕಾರವನ್ನು ಹಾಕಿತು. ಇದರಿಂದ ಬ್ರಿಟಿಷರ ವ್ಯಾಪಾರವು ನಿರ್ಮೂಲವಾಗಿ ನಾಶವಾಯಿತಲ್ಲದೆ ಹಾಂಕೋ ಮೊದಲಾದ ಕಡೆ ಅವರು ಕಟ್ಟಿಕೊಂಡಿದ್ದ ವಸತಿಗಳನ್ನು ಉಳಿಸಿಕೊಳ್ಳಲಾರದೆ ಬಿಟ್ಟು ಹಿಮ್ಮೆಟ್ಟಬೇಕಾಯಿತು. ಬ್ರಿಟಿಷರು ಸಂಧಿಪುನರ್ವಿಮರ್ಶೆಗೆ ತಾವು ಸಿದ್ಧರಾಗಿರುವುದಾಗಿ ಹೇಳಿಕೊಂಡು ಚೀಣರಿಗೆ ತಲೆಬಾಗಿಸಬೇಕಾಯಿತು. ೧೯೨೭ ರಲ್ಲಿ ಜಪಾನ ರಾಜ್ಯದಲ್ಲಿ ವಿದೇಶ ಮಂತ್ರಿಯಾಗಿದ್ದ ಶಿದೆಹರನು ಚೀಣಾದೊಡನೆ ಸೌಮ್ಯದಿಂದ ವ್ಯವಹರಿಸುತ್ತಿದ್ದುದರಿಂದ ಜಪಾನರು ತೊಂದರೆಗೆ ಸಿಕ್ಕದೆ ಬ್ರಿಟಿಷರ ನಷ್ಟದಿಂದ ತಾವು ಲಾಭ ಪಡೆದರು. ಆದರೆ ೧೯೨೭-೨೮ ರಲ್ಲಿ ಅಧಿಕಾರಕ್ಕೆ ಬಂದ, ತನಕ ಎಂಬ ಜಪಾನ ಮಂತ್ರಿಯು ಚೀಣರನ್ನು ದಂಡಮಾರ್ಗದಿಂದ ಹೆದರಿಸಲು ಪ್ರಯತ್ನಪಡಲು ಚೀಣರು

ಜಪಾನರ ವ್ಯಾಪಾರಕ್ಕೆ ಬಹಿಷ್ಕಾರ ಹಾಕಿ ಗಾಸಿಪಡಿಸಿದರು. ೧೯೨೯ ರಲ್ಲಿ ಅಧಿಕಾರಕ್ಕೆ ಬಂದ ಷಿದೆಹರನು ಪುನಃ ಸಾಮದಿಂದ ಚೀಣರ ಪ್ರೀತಿಯನ್ನು ಸಂಪಾದಿಸಿ ಹೊಸ ಸಂಧಿ ಮಾಡಿಕೊಂಡು ಚೀಣಾದಲ್ಲಿ ಜಪಾನರ ವ್ಯಾಪಾರವನ್ನು ಹೆಚ್ಚಿಸಿದನು. ೧೯೩೧ ರಲ್ಲಿ ಈತನ ಮಾತಿಗೆ ವಿರುದ್ಧವಾಗಿ ಜಪಾನರು ಚೀಣರನ್ನು ಮೆಟ್ಟಲು ಪ್ರಯತ್ನಿಸಿದ್ದರಿಂದ ಚೀಣರು ಬಹಿಷ್ಕಾರದಿಂದ ಜಪಾನರ ವ್ಯಾಪಾರವನ್ನು ಸಂಪೂರ್ಣವಾಗಿ ಹಾಳು ಮಾಡಿರುವರು. ಚೀಣರ ವಿದ್ಯಾರ್ಥಿಮಂಡಲವು ತಮ್ಮ ಮಂತ್ರಿಗಳೂ ಅಧಿಕಾರಿಗಳೂ ದೇಶಕ್ಕೆ ಹಿತಕರವಾಗಿ ನಡೆದುಕೊಳ್ಳದೆ ಹೋದರೆ ಹರತಾಳಗಳನ್ನೂ ಕೂಟಗಳನ್ನೂ ಮೆರವಣಿಗೆಗಳನ್ನೂ ನಡೆಸಿ ಗಲಭೆ ಹೆಚ್ಚಿ ಅವರ ಮೂಗುಮುರಿಯುತ್ತಿರುವರು. ೧೯೩೨ ರಲ್ಲಿ ಜಪಾನರೊಡನೆ ಬಿಗಿಯಾಗಿ ವ್ಯವಹರಿಸಲಿಲ್ಲವೆಂದು ಇಬ್ಬರು ಮಂತ್ರಿಗಳ ಮೇಲೆ ಇವರು ಹೀಗೆ ಚಳವಳಿ ನಡೆಸಲು ಅವರು ಹೆದರಿ ಕೆಲಸ ಬಿಟ್ಟು ತಲೆಮರೆಸಿಕೊಂಡರು.

ಚೀಣರು ಐರೋಪ್ಯ ಯುದ್ಧದಲ್ಲಿ ಭಾಗಿಯಾದ್ದರಿಂದ ಮುಷ್ಟಿಕ ಯುದ್ಧದ ದಂಡದಲ್ಲಿ ಜರ್ಮನಿ ಮತ್ತು ಆಸ್ಟ್ರಿಯಾದವರಿಗೆ ಕೊಡಬೇಕಾಗಿದ್ದ ಸಾಲವನ್ನು ಉಳಿಸಿಕೊಂಡರು. ಬೋಲ್ಷೆವಿಕರು ರುಷ್ಯದೇಶದಲ್ಲಿ ಅಧಿಕಾರಕ್ಕೆ ಬಂದಾಗ ತಮ್ಮ ಹಿಂದಣ ರುಷ್ಯದ ಸರ್ಕಾರಗಳು ಅನ್ಯಾಯದಿಂದ ಪಡೆದುಕೊಂಡಿದ್ದ ಹಲವು ಮಾನ್ಯಾಧಿಕಾರಗಳನ್ನೂ ಹಕ್ಕುಗಳನ್ನೂ ಚೀಣರಿಗೆ ತಾವಾಗಿ ಬಿಟ್ಟುಕೊಟ್ಟರು. ಚೀಣರು ಜಪಾನರು ೧೯೧೫ ರಲ್ಲಿ ಬಲಾತ್ಕಾರವಾಗಿ ನಡೆಸಿದ್ದ ೨೧ ಬಯಕೆಗಳನ್ನೂ ಇತರರು ಪಡೆದುಕೊಂಡಿದ್ದ ಅನ್ಯಾಯಕರವಾದ ಹಕ್ಕುಗಳನ್ನೂ ನಿವರ್ತಿಸಿಕೊಡಬೇಕೆಂದು ಪ್ಯಾರೀಸಿನ ಸಂಧಿ ಸಭೆಯಲ್ಲಿ ಹೋರಾಡಿ ಸಂಧಿಪತ್ರಕ್ಕೆ ಸಹಿ ಮಾಡದೆ ಹೊರಟು ಬಂದರು. ಈ ಸಂಧಿ ಸಭೆಯಲ್ಲಿ ಬಿಳಿಯ ಜನರು ತಮ್ಮ ರಾಜ್ಯಗಳಲ್ಲಿ ಅನ್ಯವರ್ಣದವರಿಗೆ ಕೊಡುತ್ತಿರುವ ಹಿಂಸೆಯನ್ನು ತಪ್ಪಿಸಬೇಕೆಂದು ಚೀಣರೂ ಜಪಾನರೂ ಗಲಭೆ ಹಚ್ಚಿದ್ದರು. ಜಪಾನರು ಈ ವಿಚಾರವನ್ನು ಬಿಟ್ಟುಬಿಡುವುದಾದರೆ ಅವರು ಚೀಣಾದಲ್ಲಿ ಮಾಡಿದ್ದ ಪರಿಣೀತಿಯನ್ನು ತಾವು ಒಪ್ಪಿಕೊಳ್ಳುವುದಾಗಿ ಐರೋಪ್ಯರು ಸಂಧಾನ ಮಾಡಿ ಹಾಗೆಯೇ ತೀರ್ಮಾನಿಸಿದರು.

ಅಮೇರಿಕದವರು ಶಾಂತಸಾಗರತೀರದವರಾದ ರಾಜ್ಯಗಳವರನ್ನೆಲ್ಲಾ ವಾಷಿಂಗಟನ್ ನಗರದಲ್ಲಿ ೧೯೨೨ರಲ್ಲಿ ಒಂದು ಸಮ್ಮೇಳನಕ್ಕೆ ಕರೆದು ಕೂಡಿಸಿದ್ದರು. ಈ ಸಮ್ಮೇಳನದಲ್ಲಿ ಚೀನಾದ ಪಕ್ಷವನ್ನು ಹಿಡಿದಿರುವುದಾಗಿ ವಿದೇಶೀಯರು ಭರವಸೆಕೊಟ್ಟರು. (೧) ಆರ್ಥರ ರೇವು (ಜಪಾನ) ಮತ್ತು ಕೌಲೂನ (ಬ್ರಿಟನ್) ಗಳನ್ನು ಹೊರತು ಉಳಿದ ಎಲ್ಲಾ ಗುತ್ತಿಗೆ ಪ್ರದೇಶಗಳನ್ನೂ ಚೀನರು ಪಡೆಯುತಕ್ಕದ್ದು. (ಇದರಂತೆ ವೇಹ್ಯವೇ ಮೊದಲಾದ ಪ್ರದೇಶಗಳು ಚೀನಾದ ಕರಗತವಾಗಿವೆ.) (೨) ಪರರು ಚೀನಾ ಭೂಮಿಯಲ್ಲಿ ಅಂಚೆ, ತಂತಿ, ಪೋಲೀಸು, ಸೇನೆ ಮೊದಲಾದವನ್ನು ಇಟ್ಟುಕೊಳ್ಳಕೂಡದು. (೩) ಸುಂಕಸ್ವಾತಂತ್ರ್ಯ ಮತ್ತು ರಾಜ್ಯಾತೀತ ಪ್ರಭುತ್ವಾಧಿಕಾರ ನಿವೃತ್ತಿಗಳ ಸಾಧ್ಯಾಸಾಧ್ಯವನ್ನು ಪರೀಕ್ಷಿಸಿ ಕಲ್ಪಿಸಿಕೊಡಬೇಕು. ಜಪಾನರು ತಮ್ಮ ೨೧ ಬಯಕೆಗಳನ್ನು ಬಿಟ್ಟುಕೊಡಲು ಒಪ್ಪಿಕೊಂಡರು. ಆದರೆ ತಮ್ಮ ಮಾತಿನಂತೆ ಯಾರೂ ಸರಿಯಾಗಿ ನಡೆದುಕೊಂಡಿಲ್ಲ.

ಸುಂಕ ಮತ್ತು ರಾಜ್ಯಾತೀತಾಧಿಕಾರದ ವಿಚಾರವಾಗಿ ವಿದೇಶಿ ರಾಜ್ಯಗಳವರು ಚೀನಾದಲ್ಲಿ ಹಲವು ಸಾರಿ ಸಮ್ಮೇಳನವಾಗಿ ಸೇರಿಸಿದ್ದರು. ಅವರಲ್ಲಿ ಯಾರೂ ಸಾಮದಿಂದ ಚೀನಾದ ಇಷ್ಟವನ್ನು ನೆರವೇರಿಸಿಕೊಡಲು ಒಪ್ಪಲಿಲ್ಲ. ಚೀನರು ಸತ್ಯಾಗ್ರಹಾಸ್ತ್ರವನ್ನು ಬಳಸುತ್ತ ೧೯೨೬-೨೭ರಲ್ಲಿ ಸಂಧಿಗಳಿಗೆ ವಿರುದ್ಧವಾಗಿ ಹಲವು ಸುಂಕಗಳನ್ನು ಹಾಕಿ ಎತ್ತಿದರು. ೧೯೨೮ರಲ್ಲಿ ಉಪ್ಪಿನ ತೆರಿಗೆಯ ಯಾಜಮಾನ್ಯವನ್ನು ಸದ್ದಿಲ್ಲದೆ ತಮ್ಮ ಕೈಗೆ ತೆಗೆದುಕೊಂಡರು. ೧೯೨೯ನೆಯ ಜನವರಿಯಿಂದ ಇವರು ಸಂಪೂರ್ಣ ಸುಂಕ ಸ್ವಾತಂತ್ರ್ಯವನ್ನು ವಹಿಸಿರುವರು. ೧೯೨೬ರಲ್ಲಿ ಬೆಲ್ಜಿಯಂ ಮೊದಲಾದವರಿಗೆ ಅವರ ಹಳೆಯ ಸಂಧಿಗಳ ಕಾಲಾವಧಿ ಮುಗಿದು ಹೋಗಿರುವುದರಿಂದ ಹೊಸದಾಗಿ ಸಂಧಿ ಮಾಡಿಕೊಳ್ಳದಿದ್ದರೆ ಅವರ ಹಕ್ಕುಗಳೆಲ್ಲವೂ ಖಿಲವಾಗಿಬಿಡುತ್ತವೆಂದು ಚೀನರು ಎಚ್ಚರಿಕೆಕೊಟ್ಟರು. ಬೆಲ್ಜಿಯನರು ತಾವಾಗಿ ರಾಜ್ಯಾತೀತಾಧಿಕಾರವನ್ನು ಬಿಟ್ಟು ಹೊಸ ಸಂಧಿ ಮಾಡಿಕೊಂಡರು. ತಮ್ಮ ಹಳೆಯ ಸಂಧಿಗಳೆಲ್ಲ ರದ್ದಾಗಿವೆ ಎಂದು ಚೀನರು ೧೯೨೮ರಲ್ಲಿ ಪ್ರಕಟಿಸಿದರು. ೧೨ ರಾಜ್ಯಗಳವರು ಸಂಪೂರ್ಣ ಸುಂಕ

ಸ್ವಾತಂತ್ರ್ಯವನ್ನು ಅಂಗೀಕರಿಸಿ ಹೊಸ ಸಂಧಿ ಮಾಡಿಕೊಂಡರು. ಬ್ರಿಟಿಷರೇ ಮೊದಲಾದವರು ರಾಜ್ಯಾತೀತಾಧಿಕಾರವನ್ನು ಕ್ರಮಕ್ರಮವಾಗಿ ಬಿಡುತ್ತ ಬರುವರಾಗಿ ಹೇಳಿದರು. ಚೀಣಾವು ಇದಕ್ಕೆ ಒಪ್ಪದೆ ಈ ಅಧಿಕಾರವು ೧೯೩೦ರಿಂದ ಎಲ್ಲರಿಗೂ ರದ್ದಾಗಿದೆ ಎಂದು ಘೋಷಿಸಿದನು.

---

# ೫ನೆಯ ಅಧ್ಯಾಯ

## ಜಪಾನರ ಅಭ್ಯುದಯ

ಪೋರ್ಚುಗೀಸರು ೧೬ನೆಯ ಶತಮಾನದಲ್ಲಿ ಜಪಾನದಲ್ಲಿ ತಲೆದೋರಿದರು. ರೋಮನ್ ಕ್ರಿಸ್ತ ಪ್ರಚಾರಕ ಝೇವಿಯರ(Xavier)ನ ಪ್ರಯತ್ನದಿಂದ ಜಪಾನರು ಕ್ರಿಸ್ತ ಮತಕ್ಕೆ ಸೇರತೊಡಗಿದರು. ೧೫೮೭ರ ವೇಳೆಗೆ ೧೦ ಲಕ್ಷ ಜಪಾನರು ಕ್ರಿಸ್ತರಾಗಿದ್ದರು. ಇವರ ಕೆಡುಕುಗಳನ್ನು ಸಹಿಸದೆ ಜಪಾನ ಸರಕಾರವು ಕ್ರಿಸ್ತ ಪ್ರಚಾರಕರನ್ನು ಹೊರಹಾಕಿ ತನ್ನ ದೇಶದಲ್ಲಿ ಕ್ರಿಸ್ತಮತವನ್ನು ನಿರ್ನಾಮವಾಗಿ ನಾಶಪಡಿಸಿತು. ನಾಗಸಾಕಿ ನಗರ ಒಂದಕ್ಕೆ ವ್ಯಾಪಾರಾರ್ಥ ಡಚ್ಚರೂ ಚೀಣರೂ ಮಾತ್ರ ಬರಬಹುದೆಂದೂ ಮತ್ತಾವ ಪರದೇಶೀಯನೂ ಜಪಾನಿಗೆ ಬರಕೂಡದೆಂದೂ ೧೬೩೮ರಲ್ಲಿ ಒಂದು ಶಾಸನವು ಹುಟ್ಟಿ ೧೮೫೪ರ ವರೆಗೂ ಪ್ರಚಾರದಲ್ಲಿದ್ದಿತು.

೧೮೫೩ರಲ್ಲಿ ಅಮೇರಿಕದ ಪೆರ್ರಿ ಎಂಬ ನೌಕಾಧಿಕಾರಿಯೊಬ್ಬನು ಜಪಾನರು ಸಾಮದಿಂದ ದೇಶವನ್ನು ತಮಗೆ ತೆರೆಯದಿದ್ದರೆ ಯುದ್ಧ ಮಾಡುವುದಾಗಿ ಹೆದರಿಸಲು ಯುದ್ಧಬಲಶೂನ್ಯರಾಗಿದ್ದ ಜಪಾನರು ಯುದ್ಧವಿಲ್ಲದೆ ಹಾಗೆಯೇ ಮಾಡಿದರು. ಅಲ್ಲಿಂದ ೧೮೬೫ರೊಳಗಾಗಿ ೧೦-೧೫ ಪಾಶ್ಚಾತ್ಯ ರಾಜ್ಯಗಳು ಈ ದೇಶದೊಡನೆ ಹೊಸ ಸಂಧಿಗಳನ್ನು ಮಾಡಿಕೊಂಡು; ರಾಜಧಾನಿಗಳನ್ನು ನಿಶ್ಚಯಿಸಿ ವ್ಯಾಪಾರ ಸ್ವಾತಂತ್ರ್ಯ, ಸಂಚಾರ

ಸ್ವಾತಂತ್ರ್ಯ, ರಾಜ್ಯಾತೀತ ಪ್ರಭುತ್ವಾಧಿಕಾರ, ಮಿತಸುಂಕ ಮೊದಲಾದ ಹಕ್ಕುಗಳನ್ನು ಕಸುಕೊಂಡವು. ಈ ವಿದೇಶೀಯರು ಜಪಾನರ ಮೇಲೆ ಹಲವು ಸಲ ಭಯಂಕರವಾದ ಅತ್ಯಾಚಾರಗಳನ್ನು ಸಹ ನಡೆಸಿದರು.

ಉದಾಹರಣೆಗಾಗಿ, ಕ್ರಿ. ಶ. ೧೮೬೨ರಲ್ಲಿ ಜಪಾನದ ಶ್ರೀಮಂತ ಪ್ರಭುಗಳಲ್ಲಿ ಅತ್ಯಂತ ಶ್ರೇಷ್ಠನಾಗಿದ್ದ ಸತ್ಸುಮಾ ರಾಜಪುತ್ರನ ತಂದೆಯು ಸಪರಿವಾರನಾಗಿ ರಾಜಧಾನಿಗೆ ಬರುತ್ತಿದ್ದಾಗ ಎದುರಿಗೆ ಕೆಲ ಬ್ರಿಟಿಷ ವರ್ತಕರು ವಿಹಾರಕ್ಕಾಗಿ ಕುದುರೆಯ ಮೇಲೆ ಹೋಗುತ್ತಿದ್ದರು. ಅಲ್ಲಿನ ದೇಶಪದ್ಧತಿಯಂತೆ ಮರ್ಯಾದೆಗಾಗಿ ಕುದುರೆಯಿಂದ ಇಳಿಯುವಂತೆ ಆತನ ಪರಿವಾರವು ಈ ಇಂಗ್ಲೀಷ ಪೋರರನ್ನು ಎಷ್ಟು ವಿಧವಾಗಿ ಪ್ರಾರ್ಥಿಸಿದರೂ ಅವರು ಕೇಳದೆ ಜಗಳ ತೆಗೆದರು. ಈ ಜಗಳದಲ್ಲಿ ಇಬ್ಬರು ಇಂಗ್ಲಿಷರಿಗೆ ಗಾಯವಾಗಿ ರಿಚರ್ಡ್‌ಸನ್ ಎಂಬವನು ಮೃತಪಟ್ಟನು. ಇಂಗ್ಲಿಷ ರಾಯಭಾರಿಯು ಇದಕ್ಕೆ ಲಕ್ಷ ಪೌಂಡು ಪರಿಹಾರ ದ್ರವ್ಯವನ್ನೂ ಅತಿ ನಮ್ರವಾದ ಕ್ಷಮಾಪ್ರಾರ್ಥನೆಯನ್ನೂ ಅಪೇಕ್ಷಿಸಿದರು. ಜಪಾನರು ಒಡನೆಯೇ ಅವನ್ನು ಸಲ್ಲಿಸಿದ್ದರಿಂದ, ಬ್ರಿಟಿಷರು ಸತ್ಸುಮಾ ರಾಜಪುತ್ರನು ಮತ್ತೆ ೨೫೦೦೦ ಪೌಂಡು ಪರಿಹಾರ ಕೊಟ್ಟು ತಮ್ಮವನ ಕೊಲೆಗೆ ಕಾರಣರಾಗಿದವರನ್ನೆಲ್ಲಾ ಕೊಲ್ಲಿಸಬೇಕೆಂದು ವಿಧಿಸಿದರು. ಆತನು ಪರಿಹಾರ ಕೊಡಲು ಒಪ್ಪಿದರೂ ತನ್ನ ಸಾಕ್ಷಾತ್ ತಂದೆಯನ್ನು ಕೊಲ್ಲಿಸಲು ಒಪ್ಪಲಿಲ್ಲ. ಇವನಿಗೆ ಬುದ್ಧಿಕಲಿಸುವುದಕ್ಕಾಗಿ ಬ್ರಿಟಿಷ ಸರಕಾರದವರು ಒಂದು ದೊಡ್ಡ ಹಡಗುಪಡೆಯನ್ನು ಕಳಿಸಿದರು. ಅದು ಸತ್ಸುಮಾ ಶ್ರೀಮಂತರ ರಾಜಧಾನಿಯಾದ ಕಗೋಶಿಮಾ ನಗರವನ್ನು ಮುತ್ತಿ ಅವರ ಅರಮನೆಯನ್ನೂ ೧॥ ಲಕ್ಷ ಜನವಿದ್ದ ಆ ನಗರವನ್ನೂ ಸಂಪೂರ್ಣವಾಗಿ ದಹಿಸಿತು. ಆ ನಗರವೂ ಅದರ ವಸ್ತುಗಳೂ ಅಲ್ಲಿದ್ದ ಜಪಾನರ ಹಡಗುಗಳೂ ೪೮ ಗಂಟೆ ಕಾಲ ಏಕಪ್ರಕಾರವಾಗಿ ಉರಿಯುತ್ತಿದ್ದವು! *

ಜಪಾನ ಚಕ್ರವರ್ತಿಯನ್ನು ಶೋಗುನ್ ಎಂಬ ಶ್ರೀಮಂತ ಪ್ರಭುವು ಮೂಲೆಗೊತ್ತಿ ತಾನು ರಾಜ್ಯವಾಳುತ್ತಿದ್ದನು. ಸಮಾಜದಲ್ಲೂ ಸರಕಾರ

* ಫ್ರೆಡರಿಕ್ ಟ್ರ್ಯೂವೆನ್-ಸ್ವಜೀವನ ವೃತ್ತಾಂತ ಸ್ಮರಣೆಗಳು, ಪ್ರಥಮ ಸಂಪುಟ ೨೬೯.

ವಲ್ಲೂ ಶ್ರೀಮಂತರು ಸರ್ವಾಧಿಕಾರಿಗಳಾಗಿದ್ದರು. ಅವರಲ್ಲಿ ಕೂಜೆ (Kuge) = ಆಸ್ಥಾನ ಶ್ರೀಮಂತರು ಮತ್ತು ಡೈಮಿಯೊ (Daimio) = ಜಮೀನದಾರ ಶ್ರೀಮಂತರು ಎಂದು ಎರಡು ವರ್ಗಗಳಿದ್ದವು. ಇವರಿಬ್ಬರಿಗೂ ಕೊಡುವದೂ ತರುವದೂ ಸಹ ನಿಷೇಧವಾಗಿತ್ತು. ದೇಶವೆಲ್ಲವನ್ನೂ ೨೭೬ ಜಮೀನದಾರರ ಶ್ರೀಮಂತರು ಹಂಚಿಕೊಂಡು ಇದ್ದರು. ಶ್ರೀಮಂತರ ಆಶ್ರಿತ ಪರಿವಾರದವರು ಸಮುರಾಯಿಗಳಾಗಿದ್ದರು. ಜಪಾನ ಸಮಾಜದಲ್ಲಿ ಉತ್ತಮರು ಸಾಮಾನ್ಯರು ಎಂದು ಎರಡು ವಿಭಾಗವಿತ್ತು. ಈ ಉತ್ತಮರಿಗೆ ಸಮುರಾಯಿ ಎಂದು ಹೆಸರು. ಸಮುರಾಯಿಗಳು ನಮ್ಮ ದೇಶದ ರಾಜಪುತ್ರರನ್ನು ಹೋಲುತ್ತ ಕ್ಷತ್ರಕುಲದವರಾಗಿದ್ದರು. ಶ್ರೀಮಂತರೂ ಜಾತಿಯಲ್ಲಿ ಸಮುರಾಯಿಗಳಾಗಿದ್ದರು. ಸೇನೆ ಮತ್ತು ಸರಕಾರದ ನೌಕರಿಗೆ ಸಮುರಾಯಿ ಜಾತಿಯವರಲ್ಲದೆ ಮತ್ತಾರೂ ಸೇರಲಾಗುತ್ತಿರಲಿಲ್ಲ. ಈ ಪರಿಸ್ಥಿತಿಯು ಪ್ರಗತಿಗೆ ಪ್ರತಿಬಂಧಕವಾದುದಾಗಿತ್ತು. ಆದರೂ ಜಪಾನರು ಕ್ಷಣಾರ್ಧದಲ್ಲಿ ಇಂದ್ರಜಾಲ ಸದೃಶ್ಯವಾದ ಅಭಿವೃದ್ಧಿಯನ್ನು ಪಡೆದು ಈಗ ಜಗತ್ತಿನ ಬಲಾಂಗಗಳಲ್ಲಿ ಮೂರನೆಯ ಸ್ಥಾನವನ್ನು ಸಂಪಾದಿಸಿರುವರು. ಇದಕ್ಕೆ ಅವರ ಅನ್ಯಾದೃಶವಾದ ದೇಶಾಭಿಮಾನವೂ ಪರಿಗ್ರಹಣಶಕ್ತಿಯೂ ಸಾಹಸವೂ ಕಾರಣವಾಗಿವೆ. ಕುಟುಂಬ ಭಾವನೆಯೂ ಪಿತ್ರಾರಾಧನೆಯೂ ಅವರ ಮತದ ತಿರುಳಾಗಿವೆ. ದೇಶದ ಕುಟುಂಬಗಳಿಗೆ ಸಮ್ರಾಟನ ಕುಟುಂಬವು ಮೂಲವೆಂದು ಒಂದು ಐತಿಹ್ಯವಿರುವದರಿಂದ ಜಪಾನರೆಲ್ಲರಿಗೂ ಚಕ್ರವರ್ತಿಯು ಪರಮ ಪೂಜ್ಯವಾದ ಭಗವಂತನೇ ಆಗಿರುವನು. ಆದ್ದರಿಂದ ದೇಶಭಕ್ತಿಯು ಇವರ ಧರ್ಮಾಚರಣೆಗೆ ಮುಖ್ಯಸಾಧನವಾಗಿದೆ. ದೇಶದ ಹಿತಕ್ಕಾಗಿ ಜಪಾನರು ಏನು ಮಾಡುವದಕ್ಕೂ ಸಿದ್ಧರಾಗಿರುವರು. ದೇಶಹಿತಾರ್ಥ ಇವರ ಶ್ರೀಮಂತರು ತಮ್ಮ ಅಧಿಕಾರ ಮಾನ್ಯಗಳನ್ನು ಪರನಿರ್ಬಂಧವಿಲ್ಲದೆ ತಾವಾಗಿ ಬಿಟ್ಟರು; ಸಮುರಾಯಿಗಳು ತಮ್ಮ ಜಾತಿಶ್ರೇಷ್ಠತೆಯನ್ನು ನಿರಾಕರಿಸಿದರು; ಯುವಕರು ಸಾಂಪ್ರದಾಯಿಕ ಆಚಾರಗಳನ್ನು ಉಲ್ಲಂಘಿಸಿ ಪರದೇಶಗಳಿಗೆ ಸಾವಿರಗಟ್ಟಲೆಯಾಗಿ ಹೋಗಿ ವಿದ್ಯೆ ಕಲಿತು ಬಂದು ದೇಶಸೇವೆ ಮಾಡಿದರು. ಜಪಾನದಲ್ಲಿ ಸ್ವದೇಶದಲ್ಲಿ ಸಾಕಾದಷ್ಟು ಆಹಾರ ಬೆಳೆ

ಯಾದ ಕಷ್ಟವುಂಟಾದಾಗ ಇವರಲ್ಲಿ ಎಷ್ಟೋ ಮಂದಿ ಪರದೇಶಗಳಿಗೆ ವಲಸೆ ಹೋಗಿ ನೆಲೆಸಿ ಅನ್ನವನ್ನು ಬೆಳೆದು ತಮಗೆ ಸಹ ಉಳಿಸಿಕೊಳ್ಳದೆ ಮಾತೃದೇಶಕ್ಕೆ ಕಳುಹಿಸುತ್ತಾ ಬಂದರು. ತಾವು ಮುಂದಕ್ಕೆ ಬರಬೇಕೆಂದು ದೇಶಹಿತವನ್ನು ನಿರಾಕರಿಸುವ ಸ್ವಾರ್ಥಪಿಶಾಚಿಗಳು ಜಪಾನಿನಲ್ಲಿ ಇದುವರೆಗೂ ಹುಟ್ಟಿಲ್ಲ. ಇಂಥ ಜನರಲ್ಲಿ ಯಾವ ಭೇದೋಪಾಯವೂ ನಡೆಯದು; ಯಾವ ದೀರ್ಘ ವೈರವೂ ಇರದು; ಯಾವ ಅಂತಃಕಲಹವೂ ಹುಟ್ಟದು. ೧೮೬೮ರಲ್ಲಿ ಚಕ್ರವರ್ತಿಯ ಅಧಿಕಾರವನ್ನು ಪುನರುದ್ಧಾರಣೆ ಮಾಡಲು ಮುಖ್ಯ ಕರ್ತರಾಗಿದ್ದ ಸತ್ಸುಮಾ ಎಂಬ ಗಣದ ಪ್ರಧಾನ ಪುರುಷರು ದೇಶ ಸರಕಾರದಲ್ಲಿ ಅತ್ಯಂತ ಪ್ರಾಬಲ್ಯವನ್ನು ಪಡೆದಿದ್ದರು. ಈ ಗಣದವರು ಕೆಲ ಭಿನ್ನಾಭಿಪ್ರಾಯಗಳಿಂದ ೧೮೭೭ರಲ್ಲಿ ದಂಗೆಯೆಬ್ಬಿಸಿದರು. ಸರಕಾರದವರು ೧೨೦ ಕೋಟಿ ದ್ರವ್ಯವನ್ನು ವೆಚ್ಚಿಸಿ ಮಹಾಶ್ರಮದಿಂದ ಅದನ್ನು ಅಡಗಿಸಬೇಕಾಯಿತು. ಇಷ್ಟಾದರೂ ಸರಕಾರ ಪಕ್ಷದವರು ಬಂಡುಗಾರರ ಮೇಲೆ ವೈರ ಸಾಧನೆ ಮಾಡಲು ಹೋಗಲಿಲ್ಲ. ಸತ್ಸುಮಾ ಕುಲದವರಿಗೆ ರಾಜ್ಯಾಧಿಕಾರದಲ್ಲಿದ್ದ ಪ್ರಾಬಲ್ಯವು ಈ ಬಂಡಾಯದಿಂದ ಸ್ವಲ್ಪವೂ ಕುಗ್ಗಲಿಲ್ಲ. ದೇಶಾಭಿಮಾನದಂತೆಯೇ ಜಪಾನಿನ ಪರಿಗ್ರಹಣ ಶಕ್ತಿಯೂ ಅದ್ಭುತವಾದುದು. ತಮಗೆ ಬೇಕಾದುದು ಯಾವದು? ಅದು ಎಲ್ಲಿ ದೊರೆಯುತ್ತದೆ? ಎಂದು ತಿಳಿಯುವುದರಲ್ಲೂ ಅದನ್ನು ಪರಿಗ್ರಹಿಸುವುದರಲ್ಲೂ ಇವರು ಮಹಾ ಪ್ರತಿಭೆಯನ್ನು ಪಡೆದಿರುವರು. ಈ ಪರಿಗ್ರಹಣವು ಬರಿಯ ಅನುಕರಣವಾಗಿಲ್ಲ. ಜಪಾನರು ಪರರಿಂದ ಪರಿಗ್ರಹಿಸಿದ್ದನ್ನು ತಮ್ಮದಾಗಿ ಮಾಡಿಕೊಂಡು ಬಿಡುವರು; ಪರರದನ್ನು ಸ್ವಕರ್ತೃತ್ವಶಕ್ತಿಯಿಂದ ಉತ್ತರೋತ್ತರವಾಗಿ ವೃದ್ಧಿಪಡಿಸಿಕೊಳ್ಳುವರು.

ಶೋಗುನರು ದೇಶವನ್ನು ಪಾಶ್ಚಾತ್ಯರ ಅತ್ಯಾಚಾರದಿಂದ ಸಂರಕ್ಷಿಸಲಾರದೆ ಹೋದುದರಿಂದ ಶ್ರೀಮಂತರೂ ಸಮುರಾಯಿಗಳೂ ಸತ್ಸುಮಾ ಮೊದಲಾದವರನ್ನು ಮುಂದಿಟ್ಟುಕೊಂಡು ದಂಗೆಯೆಬ್ಬಿಸಿ ಶೋಗನರ ಪ್ರಭುತ್ವವನ್ನು ಕೊನೆಗಾಣಿಸಿ ಚಕ್ರವರ್ತಿಯ ಆಳ್ವಿಕೆಯನ್ನು ಪುನರುದ್ಧಾರಣೆ ಮಾಡಿದರು (೧೮೬೭-೬೮). ಮತ್ತು ಕ್ರಾಂತಿಕರವಾದ ಸುಧಾ

ರಣೆಗಳನ್ನು ಕಲ್ಪಿಸಿ ಪಾಶ್ಚಾತ್ಯನಾಗರಿಕತೆಯನ್ನು ಕಲಿತು ಅತ್ಯಂತ ಪ್ರಬಲವಾದ ಜನಾಂಗ ರಾಜ್ಯವನ್ನು ಕಟ್ಟಿದರು.

ರಾಜ್ಯಕ್ರಾಂತಿಯಾದ ಕೂಡಲೇ (೧೮೬೮-೭೩) ಅಂಚೆ, ಟಂಕಸಾಲೆ, ರೈಲು, ಠಾಣೆ, ರೇವು, ವಿದ್ಯಾಪೀಠ, ಬಲಾತ್ಕಾರಸೈನಿಕವೃತ್ತಿಕ್ರಮ ಇವೆಲ್ಲವೂ ಸ್ಥಾಪಿತವಾದವು. ನಿರ್ಬಂಧ ವಿದ್ಯಾಭ್ಯಾಸವು ೧೮೭೨ ರಲ್ಲಿ ಪ್ರಾರಂಭವಾಯಿತು. ೧೯೧೯ ರ ವೇಳೆಗೆ ದೇಶದಲ್ಲಿ ೧೦೦ಕ್ಕೆ ಒಬ್ಬ ಅಕ್ಷರಹೀನನು ಮಾತ್ರ ಉಳಿದಿದ್ದನು. ೧೮೬೯ ರಲ್ಲಿ ಶ್ರೀಮಂತರೂ ಸಾಮುರಾಯಿಗಳೂ ತಮ್ಮ ಅಧಿಕಾರಗಳನ್ನೂ ಜಾತಿಭೇದವನ್ನೂ ತಾವಾಗಿಯೇ ಬಿಟ್ಟರು. ೧೮೭೧ ರಲ್ಲಿ ೧೭ ಜನರನ್ನುಳಿದು ಇತರ ಜಹಗೀರದಾರ ಶ್ರೀಮಂತರೆಲ್ಲರೂ ತಮ್ಮ ಜಹಗೀರ್ದಾರಿಗಳನ್ನು ಸರಕಾರಕ್ಕೆ ಉಚಿತವಾಗಿ ಕೊಟ್ಟುಬಿಟ್ಟರು. ದೇಶದ ಭೂಮಿಯೆಲ್ಲವೂ ಸರಕಾರದ ಸ್ವತ್ತಾಯಿತು. ಸರಕಾರದವರು ಅದನ್ನು ಅಳತೆಮಾಡಿಸಿ ಕಂದಾಯ ಹಾಕಿದರು. ಉಭಯ ವರ್ಗದ ಶ್ರೀಮಂತರೂ ಕ್ವಾಜೋಕು (Kwazoku) ಎಂಬ ಹೆಸರಿನಿಂದ ಒಂದಾಗಿ ಸೇರಿದರು. ಬಲಾತ್ಕಾರ ಸೈನಿಕಕ್ರಮ ಬಂದ ಮೇಲೆ ಸಾಮಾನ್ಯ ಜಾತಿಯವರೂ ಸೇನೆಗೆ ಸೇರಲಾರಂಭಿಸಿದರು. ೧೮೭೯ ರಲ್ಲಿ ಪರಿಮಿತ ಸರ್ವಾಧಿಕಾರಮಯವಾಗಿದ್ದ ಒಂದು ಶಾಸನ ಸಭೆ ಸ್ಥಾಪಿತವಾಯಿತು. ಜನರು ಪ್ರಜಾಪ್ರಭುತ್ವಕ್ಕಾಗಿ ಪ್ರಚಂಡ ಚಳವಳಿ ನಡಿಸಿ ೧೮೮೯ ರಲ್ಲಿ ಅದನ್ನು ಪಡೆದರು. ಇದು ಅದ್ಯಾಪಿ ಸಂಪೂರ್ಣವಾಗಿ ಸಿದ್ಧಿಸಿಲ್ಲ. ೧೯೨೫ ರಲ್ಲಿ ೨೫ ವಯಸ್ಸಿಗೆ ಮೇಲ್ಪಟ್ಟವರೆಲ್ಲರಿಗೂ ಸಮತಾಧಿಕಾರ ದೊರೆತು ಒಂದು ಕೋಟಿ ಜನರು ಹೊಸದಾಗಿ ಆ ಅಧಿಕಾರವನ್ನು ಪಡೆದರು.

ಜಪಾನಿನ ಅಧಿಕಾರಾಭಿವೃದ್ಧಿಗೆ ಹಲವು ಅಡಚಣೆಗಳುಂಟು. ಈ ರಾಜ್ಯದಲ್ಲಿ ೪೧೧ ದ್ವೀಪಗಳಿವೆ. ಜನಸಂಖ್ಯೆಯು ಅಪರಿಮಿತವಾಗಿ ಹೆಚ್ಚುತ್ತಿದೆ. ಬ್ರಿಟನ್ನಿನಷ್ಟೇ ವಿಸ್ತೀರ್ಣವುಳ್ಳ ಈ ದೇಶದಲ್ಲಿ ಜನಸಂಖ್ಯೆಯು ೧೯೦೦ ರಲ್ಲಿ ೪ ೧/೪ ಕೋಟಿ ಇದ್ದು ಈಗ ೬೫ ಕೋಟಿಗೆ ಏರಿದೆ. ದೇಶದಲ್ಲಿ ಸಾಕಾದಷ್ಟು ಆಹಾರವಾಗಲಿ ಹತ್ತಿಯಂಥ ಕೈಗಾರಿಕೆಯ ವಸ್ತುಗಳಾಗಲಿ ಬೆಳೆಯುವುದಿಲ್ಲ. ಜಪಾನರಿಗೆ ವಲಸೆ ಹೋಗಲು ಹೊರಗೆ ಎಲ್ಲೂ ಸ್ಥಳವಿಲ್ಲ. ಇವರು ಮುಖ್ಯವಾಗಿ ವ್ಯಾಪಾರ ಕೈಗಾರಿಕೆಗಳನ್ನವಲಂಬಿಸಿ ಹೊರ

ಗಳಿಂದ ತಮ್ಮ ಆಹಾರವನ್ನು ತಂದು ಕೊಳ್ಳಬೇಕು. ವ್ಯಾಪಾರ ಕೈಗಾರಿಕೆಗಳನ್ನು ಇವರು ಮನಸ್ಸಿಗೆ ಹೆಚ್ಚಿಸಿಕೊಳ್ಳಲು ಅಸ್ಪದವಿಲ್ಲ. ಐರೋಪ್ಯ ಯುದ್ಧದಲ್ಲಿ ಸಿಕ್ಕಿ ಪಾಶ್ಚಾತ್ಯರ ವ್ಯಾಪಾರವೆಲ್ಲವೂ ಏಷಿಯಾದಲ್ಲಿ ನಡೆಲದಾಗ ಮಾತ್ರ, ಜಪಾನರು ತಮ್ಮ ಸಾಲವನ್ನು ತೀರಿಸಿ, ಬಂಡವಾಳವನ್ನು ಸೇರಿಸಿಕೊಂಡು, ವ್ಯಾಪಾರವನ್ನು ಕೈಗಾರಿಕೆಯನ್ನು ಹೆಚ್ಚಿಸಿಕೊಂಡರು. ಕೈಗಾರಿಕೆಯ ಉತ್ಪತ್ತಿಯಕ್ಕೆ ಆಧಾರವಾಗಿರುವ ಕೈಗಾರಿಕೆಯ ಬೆಳಸುಗಳು ಕಬ್ಬಿಣ, ಕಲ್ಲಿದ್ದಲಿ, ಕಲ್ಲೆಣ್ಣೆಗಳು ಜಪಾನ ದೇಶದಲ್ಲಿ ಇಲ್ಲ. ಇವು ಚೀನಾ ದೇಶದಲ್ಲಿ ಅಖಂಡವಾಗಿ ದೊರೆಯುತ್ತವೆ. ಇವುಗಳನ್ನು ಪಡೆಯಲು ಜಪಾನರು ೧೯೩೧ರಲ್ಲಿ ಪ್ರಯತ್ನಿಸಿದರು. ಆದರೆ ಪಾಶ್ಚಾತ್ಯರು ಅದನ್ನು ವಿಫಲಗೊಳಿಸುತ್ತಿರುವರು. ೧೯೨೩-ರಲ್ಲಿ ಇಲ್ಲಿ ಅತಿ ಭಯಂಕರವಾದ ಭೂಕಂಪ ಹುಟ್ಟಿ ಲಕ್ಷಾಂತರ ಜನರು ಹತರಾಗಿ ಕೋಟ್ಯಂತರ ದ್ರವ್ಯ ನಷ್ಟವಾಯಿತು. ಈಚೆಗೆ ಇದು ಪದೇ ಪದೇ ತಲೆದೋರಲಾರಂಭಿಸಿದೆ. ಸಘಾಲಿಯನ್ ದ್ವೀಪ, ಮಂಚೂರಿಯಾ, ಶೀತರದೇಶಗಳ ವಾಯುಗುಣವು ಇವರಿಗೆ ಒಗ್ಗುವುದಿಲ್ಲವಾದ್ದರಿಂದ ಆ ಸ್ಥಳಗಳಿಗೆ ಇವರು ವಲಸೆ ಹೋಗಲು ಇಚ್ಛಿಸರು. ಆದರೆ ಈ ದೇಶಗಳು ಖನಿಜ ಸಮೃದ್ಧವಾಗಿರುವುದರಿಂದ ಅವುಗಳನ್ನು ಪಡೆಯುವ ಸಲುವಾಗಿ ಜಪಾನರು ಈ ದೇಶಗಳಲ್ಲಿ ಪ್ರಾಬಲ್ಯವನ್ನು ಹವಣಿಸುತ್ತಿರುವರು.

ಪಾಶ್ಚಾತ್ಯರು ತಮ್ಮ ಸಂಧಿಗಳ ಮೂಲಕ ಕಸುಕೊಂಡಿದ್ದ ರಾಜ್ಯಾತೀತಪ್ರಭುತ್ವಾಧಿಕಾರವನ್ನು ಕೊನೆಗಾಣಿಸಿ ಸುಂಕಸ್ವಾತಂತ್ರ್ಯವನ್ನು ಪಡೆಯುವುದಕ್ಕೆ ಜಪಾನರು ೧೯೧೧ರ ವರೆಗೂ ಕಷ್ಟಪಡಬೇಕಾಯಿತು. ಈ ಸಂಧಿಗಳನ್ನು ಪುನರ್ವಿಮರ್ಶೆ ಮಾಡಿಸಲು ಜಪಾನರು ೧೮೭೨ರಲ್ಲೂ ೧೮೭೭ರಲ್ಲೂ ಪ್ರಯತ್ನಿಸಿದ್ದರು. ರಾಜ್ಯಾತೀತಪ್ರಭುತ್ವಾಧಿಕಾರದ ವಿಚಾರವಾಗಿ ವಿದೇಶೀಯರಿಗೂ ಜಪಾನರಿಗೂ ೧೮೮೩, ೧೮೮೬, ೧೮೮೭ರಲ್ಲಿ ಟೋಕಿಯೋ ನಗರದಲ್ಲಿ ಸಮ್ಮೇಲನಗಳು ನಡೆದವು. ಕಡೆಯ ಸಲ ಜಪಾನರ ವಿದೇಶ ಮಂತ್ರಿಯಾಗಿದ್ದ ಒಕುಮಾ ಎಂಬಾತನು ರಾಜ್ಯಾತೀತಾಧಿಕಾರವನ್ನು ಪೂರ್ಣವಾಗಿ ಕೊನೆಗಾಣಿಸಲು ಹೊಡೆದಾಡುತ್ತಿಲ್ಲವೆಂದು ತಿಳಿದು ಜನರು ಗಲಭೆಯೆಬ್ಬಿಸಿ ಅವನ ಮೇಲೆ ಸಿಡಿಗುಂಡು ಹಾಕಿ

ದರು. ಅವನ ಕಾಲು ಮುರಿದು ಸಮ್ಮೇಳನವು ನಿಂತುಹೋಗಿ ಮುಂದಕ್ಕೆ ಅವನು ಮರದ ಕಾಲನ್ನು ಉಪಯೋಗಿಸಬೇಕಾಯಿತು. ೧೮೯೪ರಲ್ಲಿ ಬ್ರಿಟಿಷರು ಈ ಅಧಿಕಾರ ನಿವೃತ್ತಿಗೆ ಒಪ್ಪಿ ಸಂಧಿಮಾಡಿಕೊಳ್ಳಲು ಇತರರೂ ಹಾಗೆಯೇ ಮಾಡಿದರು. ಈ ಸಂಧಿಗಳು ೧೮೯೯ರಿಂದ ಜಾರಿಗೆಬಂದು ೧೨ ವರ್ಷಕಾಲ ಮಾತ್ರ ಜಾರಿಯಲ್ಲಿರಬೇಕೆಂದು ನಿರ್ಧಾರಿತವಾಗಿತ್ತು. ಜಪಾನರು ೧೯೧೧ರಲ್ಲಿ ಎಲ್ಲರಿಗೂ ಎಚ್ಚರಿಸಲು ಸಕಲರೂ ಕಾಲಾವಧಿಯ ನಿರ್ಬಂಧವಿಲ್ಲದೆ ಜಪಾನರ ಸರ್ವಸ್ವಾತಂತ್ರ್ಯವನ್ನೂ ಅಂಗೀಕರಿಸಿ ಹೊಸ ಸಂಧಿಗಳನ್ನು ಮಾಡಿಕೊಂಡರು. ಈ ಸಂಧಿಗಳು ೧೯೧೧ನೆಯ ಜುಲೈ ೧೭ರಿಂದ ಜಾರಿಗೆ ಬಂದವು.

ರಷ್ಯಾ ಮತ್ತು ಜರ್ಮನರ ಭೀತಿಯಿಂದ ಹುಟ್ಟಿದ್ದ ಆಂಗ್ಲ ಜಪಾನ ಮೈತ್ರಿಯು ಅವರಿಬ್ಬರೂ ದೀನರಾದಮೇಲೆ ಬ್ರಿಟಿಷರಿಗೆ ಅಗತ್ಯವಿರಲಿಲ್ಲ. ಆಂಗ್ಲರೂ ಜಪಾನರೂ ಒಂದಾಗಿದ್ದರೆ ಚೀನಾದಲ್ಲೂ ಶಾಂತ ಸಾಗರದಲ್ಲೂ ತಮಗೆ ಅಪಾಯವೆಂದು ಅಮೇರಿಕದವರು ಹೆದರಿ ಅದನ್ನು ಕೊನೆಗಾಣಿಸಬೇಕೆಂದು ಆಶಿಸಿದರು. ಯುದ್ಧಕಾಲದಲ್ಲಿ ಅತಿಶಯವಾಗಿ ಏಳಿಗೆಯನ್ನು ಪಡೆದ ಜಪಾನರಿಂದ ತಮಗೆ ಭಯಬರುತ್ತದೆಂದು ಹೆದರಿ ಕೆನಡಾ ಆಸ್ಟ್ರೇಲಿಯಾ ದೇಶಗಳು ಈ ಮೈತ್ರಿಯನ್ನು ಮುಂದುವರಿಸಕೂಡದೆಂದು ವಿರೋಧಿಸಿದವು. ಬ್ರಿಟಿಷರಿಗೆ ಅಮೇರಿಕದವರ ಪ್ರೀತಿಯು ಬೇಕಾಗಿತ್ತು. ಆದ್ದರಿಂದ ಇದು ೧೯೨೧ರಲ್ಲಿ ಮುಕ್ತಾಯವಾಗಿ ವಾಷಿಂಗ್ಟನ್ ಸಮ್ಮೇಳನದಲ್ಲಿ ಪರಿಸಮಾಪ್ತಿಯನ್ನು ಪಡೆಯಿತು. ಶಾಂತಸಾಗರದಲ್ಲಿ ಜಪಾನರನ್ನು ಎದುರಿಸುವುದಕ್ಕಾಗಿ ಬ್ರಿಟಿಷರು ೧೯೨೩ರಲ್ಲಿ ಸಿಂಗಾಪೂರದಲ್ಲೂ ಅಮೇರಿಕದವರು ಹವೈ ದ್ವೀಪದ ಪರ್ಲ್ ನಗರದಲ್ಲೂ ಅತಿ ದೃಢವಾದ ಜಲದುರ್ಗವನ್ನು ಕಟ್ಟಲಾರಂಭಿಸಿದರು. ಇಲ್ಲಿಂದ ಮುಂದೆ ಇವರಿಬ್ಬರೂ ಜಪಾನರಿಗೆ ವಿರುದ್ಧವಾಗಿಯೇ ಕೆಲಸ ಮಾಡುತ್ತ ಬಂದಿರುವರು.

# ೭ನೆಯ ಅಧ್ಯಾಯ

## ಶೀತ ಖಂಡ

### ೧. ಸಯಾಮು ರಾಜ್ಯ (Siam)

ಪಾಶ್ಚಾತ್ಯರು ಈ ದೇಶೀಯರನ್ನು ತಮ್ಮ ಕುಟಿಲ ಸಂಧಿ ಬಂಧಗಳಲ್ಲೂ ಸಿಲುಕಿಸಿಕೊಂಡು (೧೮೫೫-೭೦) ರಾಜಕೀಯ ಪ್ರಭುತ್ವಾಧಿಕಾರವನ್ನೂ ಸಂಪೂರ್ಣ ವ್ಯಾಪಾರ-ವಾಸ-ಸ್ವಾಮ್ಯ-ಸಂಚಾರ ಸ್ವಾತಂತ್ರ್ಯಗಳನ್ನೂ ಅಪಹರಿಸಿದರು. ಜಪಾನರೂ (೧೮೯೪) ಯುಸ್ಕರೂ (೧೮೯೯) ಸಾವಕಾಶವಾಗಿ ಹೀಗೆ ಮಾಡಿದರು. ೧೮೯೩ರಲ್ಲಿ ಫ್ರೆಂಚರು ಯುದ್ಧಮಾಡಿ ಮೀಕಾಂಗ ನದಿಯ ಪೂರ್ವದಿಕ್ಕಿನ ಪ್ರದೇಶವನ್ನೆಲ್ಲಾ ಕಿತ್ತುಕೊಂಡರು. ಈ ಸಮಯದಲ್ಲಿ ಬ್ರಿಟಿಷರು ತಮ್ಮ ಬರ್ಮಾವಿಗೂ ಫ್ರೆಂಚರ ರಾಜ್ಯಕ್ಕೂ ಮಧ್ಯವಾಗಿ ಒಂದು ಉದಾಸೀನ ರಾಜ್ಯವು ಇರಬೇಕೆಂದು ಬಯಸಿ ಫ್ರೆಂಚರ ಉರವಣೆಯನ್ನು ವಿರೋಧಿಸಿ ಅವರನ್ನು ಸಂಧಿಗೆ ಒಪ್ಪಿಸದಿದ್ದರೆ ಸಯಾಮು ರಾಜ್ಯದ ಸ್ವಾತಂತ್ರ್ಯವು ಉಳಿಯುತ್ತಿರಲಿಲ್ಲ. * ಈ ರಾಜ್ಯವು ಮರಳಿ ಸ್ವಲ್ಪ ಭೂಮಿಯನ್ನು ಫ್ರೆಂಚರಿಗೂ (೧೯೦೪—೭) ಬ್ರಿಟಿಷರಿಗೂ (೧೯೦೯) ಬಿಟ್ಟುಕೊಡಬೇಕಾಯಿತು.

ಈ ದೇಶದವರು ವಿದೇಶಿಯರೊಡನೆ ವಿನೀತರಾಗಿ ತಗ್ಗಿ ನಡೆಯುತ್ತಾ ಅವರನ್ನು ಒಲಿಸಿಕೊಂಡು ಸದ್ವಿಧದ ಸುಧಾರಣೆಗಳನ್ನು ತಂದುಕೊಂಡು ತಾವು ಕಳೆದುಕೊಂಡಿದ್ದ ಅನೇಕ ಹಕ್ಕುಗಳನ್ನು ಹಿಂದಕ್ಕೆ ಪಡೆದರು. ೧೯೨೫ರಲ್ಲಿ ಬ್ರಿಟಿಷರು ತಮ್ಮ ಪ್ರಜೆಗಳನ್ನು ವಿಚಾರಣೆ ಮಾಡತಕ್ಕ ನ್ಯಾಯಶಾಲೆಯಲ್ಲಿ ತಮ್ಮ ಅಧಿಕಾರಿಯ ಜತೆಗೆ ಕೆಲ ದೇಶೀಯ

* ಜ. ಓ. ಗೂಚ್- ಆಧುನಿಕ ಯುರೋಪು ೧೮೭೮-೧೯೧೯, ಪುಟ ೬೭೯, ೬೮೬

ನ್ಯಾಯಾಧಿಕಾರಿಗಳನ್ನು ನೇಮಿಸಲು ಒಪ್ಪಿದರು. ೧೯೦೫ರಲ್ಲಿ ಇಟಲಿ ಮತ್ತು ಡೆನ್ಮಾರ್ಕ ರಾಜ್ಯಗಳು ಈ ಮಿಶ್ರನ್ಯಾಯಶಾಲೆಯನ್ನು ತಾವೂ ಅಂಗೀಕರಿಸಿದವು. ೧೯೦೭ರಲ್ಲಿ ಫ್ರೆಂಚರು ತಮ್ಮ ಏಷಿಯಾ ದೇಶೀಯ ಪ್ರಜೆಗಳ ವಿಚಾರದಲ್ಲಿ ರಾಜ್ಯಾತೀತ ಪ್ರಭುತ್ವಾಧಿಕಾರವನ್ನು ಬಿಟ್ಟು ಕೊಟ್ಟರು. ೧೯೦೯ರಲ್ಲಿ ಬ್ರಿಟಿಷರು ತಮ್ಮ ಪ್ರಜೆಗಳ ವಿಚಾರಣೆಯಲ್ಲಿ ಒಬ್ಬ ಐರೋಪ್ಯ ಸಮಾಲೋಚಕನು ಸಹಾಯನಾಗಬೇಕೆಂದು ಗೊತ್ತು ಪಡಿಸಿಕೊಂಡು ತಮ್ಮ ರಾಜ್ಯಾತೀತಾಧಿಕಾರವನ್ನು ಪೂರ್ಣವಾಗಿ ಬಿಟ್ಟರು. ಡೆನ್ಮಾರ್ಕಿನವರು ೧೯೧೩ರಲ್ಲಿ ಹೀಗೆಯೇ ಮಾಡಿದರು. ಈ ರಾಜ್ಯವು ಆಧುನಿಕ ಕ್ರಮದ ವ್ಯವಹಾರ ಶಾಸನಗಳನ್ನು ಸವಿಸ್ತಾರವಾಗಿ ಕಲ್ಪಿಸಿ, ದೇಶದಲ್ಲಿ ಗುಲಾಮಗಿರಿಯನ್ನು ನಿರ್ಮೂಲಿಸಿ, ನಾಗರಿಕ ಕ್ರಮದಲ್ಲಿ ರಾಜ್ಯಭಾರವನ್ನು ನಡೆಸುತ್ತಿದೆ. ರಾಜ್ಯಭಾರದಲ್ಲಿ ಪಾಶ್ಚಾತ್ಯರನ್ನು ಅಧಿಕಾರಕ್ಕೆ ವಿಸ್ತಾರವಾಗಿ ತರುವ ಪದ್ಧತಿ ಇದೆ. ದೇಶದಲ್ಲಿ ವಿದ್ಯಾಭ್ಯಾಸ, ರೈಲು, ರಸ್ತೆ ಮುಂತಾದವು ದಿನೇ ದಿನೇ ಹೆಚ್ಚುತ್ತಿವೆ. ರಾಜನು ನಿರಂಕುಶನಾದರೂ ೧೦ ಮಂತ್ರಿಗಳ ಸಹಾಯದಿಂದಲೂ ೧೯೩೨ರಲ್ಲಿ ಹುಟ್ಟಿದ ಒಂದು ಶಾಸನ ಸಭೆಯ ಸಹಾಯದಿಂದಲೂ ಆಳುತ್ತಿರುವನು. ವ್ಯಾಪಾರಕ್ಕೂ ಕಷ್ಟ ಕೆಲಸಕ್ಕೂ ಈ ದೇಶೀಯರು ಸ್ವಲ್ಪ ಅಲಸರಾಗಿರುವುದರಿಂದ ದೇಶದ ವ್ಯಾಪಾರವು ಪ್ರಾಯಿಕವಾಗಿ ಐರೋಪ್ಯರು, ಚೀಣರು, ಕೆಲ ಭಾರತೀಯರು, ಬರ್ಮೀಯರು ಇವರ ವಶವಾಗಿದೆ. ವರ್ಷಂಪ್ರತಿ ಚೀಣರು ವ್ಯಾಪಾರಕ್ಕೂ ಕೂಲಿಗೂ ದೇಶದ ಹಾಗೆ ಬಂದು ನೆಲಸುತ್ತಿರುವರು.

## (೨) ಬರ್ಮಾ ದೇಶ.

ಈ ದೇಶದ ಅಕ್ಕಿ, ಎಣ್ಣೆ, ಮತ್ತು ಮರದ ವ್ಯಾಪಾರವು ಅತ್ಯಂತ ವಿಸ್ತಾರವಾಗಿ ಅಭಿವೃದ್ಧಿ ಪಡೆದಿದೆ. ಇದರ ಯಾಜಮಾನ್ಯವು ಪ್ರಾಯಿಕವಾಗಿ ಬ್ರಿಟಿಷರ ಕೈಯಲ್ಲಿದೆ. ಆದರೆ ವರ್ಷಂಪ್ರತಿ ಭಾರತೀಯರು ಇಲ್ಲಿಗೆ ಬಂದು ಸೇರಿ ಈ ವ್ಯಾಪಾರವನ್ನು ತಮ್ಮ ವಶ ಪಡಿಸಿಕೊಳ್ಳುತ್ತ ಬರುತ್ತಿರುವುದರಿಂದಲೂ ಭಾರತ ದೇಶದ ಸ್ವರಾಜ್ಯ ಚಳವಳಿಯು ಇಲ್ಲೂ ಹರಡಿ ತಮ್ಮ ಆಳ್ವಿಕೆಯನ್ನು ಕೊನೆಗಾಣಿಸುವ ಸಂಭವವಿರುವುದರಿಂದಲೂ ಬರ್ಮಾವನ್ನು ಇಂಡಿಯಾ ರಾಜ್ಯದಿಂದ ಪ್ರತ್ಯೇಕಿಸಬೇಕೆಂದು

೧೯೩೦ರಿಂದ ಬ್ರಿಟಿಷರು ಪ್ರಯತ್ನ ಪಡುತ್ತಿರುವರು. ಕ್ಷಾಮದಿಂದಲೂ ದುರುಳರ ದುರಾಲೋಚನೆಯಿಂದಲೂ ಈ ದೇಶದ ಗಟ್ಟಿಮುಟ್ಟಾದ ಅನಾಗರಿಕ ಜನಗಣಗಳು ದಂಗೆಯೆದ್ದು ಅದ್ಯಾಪಿ ಗಲಭೆ ಮಾಡುತ್ತಿರುವರು (೧೯೩೦-೩೩). ಈ ದಂಗೆಕಾರರಲ್ಲಿ ಕೆಲ ಮಂದಿ ಬರ್ಮಾವಾಸಿಗಳಾದ ಭಾರತೀಯರ ಮೇಲೆ ದ್ವೇಷವಿಟ್ಟು ಅನೇಕ ಅತ್ಯಾಚಾರಗಳನ್ನು ಎಸಗಿದರು. ಆದರೆ ಈ ದೇಶದ ಗಣ್ಯರಾದ ಮುಖಂಡರೆಲ್ಲರೂ ಬರ್ಮಾ ಭಾರತ ವಿಭಜನೆಯನ್ನು ಛಲದಿಂದ ವಿರೋಧಿಸುತ್ತಿರುವರು. ಸ್ವರಾಜ್ಯ ಚಳವಳಿಯು ಈ ದೇಶದಲ್ಲಿ ದಿನೇ ದಿನೇ ಹೆಚ್ಚುತ್ತಿದೆ.

## (೩) ಬೋಟ ದೇಶ.

ಈ ದೇಶೀಯರಿಗೆ ಮಹಾ ಗುರುವಾದ ದಲಾಯಿಲಾಮನು ಚೀನಾದಿಗೆ ಸಾಮಂತನಾಗಿ ಇದನ್ನು ಲಾಸದಲ್ಲಿ ಆಳುವನು. ಬ್ರಿಟಿಷರು ಈ ದೇಶವನ್ನು ಹೊಕ್ಕು ವ್ಯಾಪಾರ ಲಾಭವನ್ನೂ ಇತರ ಹಕ್ಕುಗಳನ್ನೂ ಪಡೆಯಬೇಕೆಂದು ೧೮೭೭ರಿಂದ ಪ್ರಯತ್ನಿಸಿದರು. ಬೋಟರು ೧೯೦೪ರ ವರೆಗೆ ಅದಕ್ಕೆ ಅವಕಾಶ ಕೊಡಲಿಲ್ಲ. ಈ ಮಧ್ಯೆ ಬ್ರಿಟಿಷರು ಸಿಕ್ಕಿಂ ರಾಜ್ಯವನ್ನು ಕಬಳಿಸಿ, ಬೋಟ ದೇಶದ ಮೇಲೆ ರುಷ್ಯಕರು ಕಣ್ಣಿಕ್ಕಿದ್ದಕ್ಕೆ ಹೆದರಿ, ಅದರ ಅನಾವಶ್ಯಕರಾಗಿದ್ದಾಗ ೧೯೦೪ರಲ್ಲಿ ಲಾಸ ನಗರಕ್ಕೆ ಒಂದು ಸೇನೆಯನ್ನು ಕಳಿಸಿ, ಬೋಟರನ್ನು ಹೆದರಿಸಿ ಸಂಧಿ ಬಂಧದಲ್ಲಿ ಸಿಕ್ಕಿಸಿಕೊಂಡರು. ಬೋಟವು ಬ್ರಿಟಿಷರ ಆಶ್ರಿತ ಸ್ಥಾನವೆಂದು ಚೀನಾದೂ (೧೯೦೬) ರುಷ್ಯಕರೂ (೧೯೦೭) ಒಪ್ಪಬೇಕಾಯಿತು.

ಬ್ರಿಟಿಷ ಸೇನೆ ಬಂದಾಗ ಮಂಗೋಲಿಯಕ್ಕೆ ಓಡಿ ಹೋಗಿದ್ದ ದಲಾಯಿಲಾಮನು ಪೀಕಿನ ನಗರಕ್ಕೆ ಹೋಗಿದ್ದು ೧೯೦೯ರಲ್ಲಿ ಬೋಟಕ್ಕೆ ಹಿಂತಿರುಗಿದನು. ಈ ದೇಶವನ್ನು ತಮ್ಮ ಅಂಕೆಗೆ ಚೆನ್ನಾಗಿ ತರುವುದಕ್ಕಾಗಿ ಚೀನಾದು ಕಳುಹಿಸಿದ ಚಯೋ-ಇರ್ಹ್-ಫೆಂಗ (Chao Erb-Feng) ಎಂಬ ಸರ್ವಾಧಿಕಾರಿಯು ಚೀನಾ ಸೇನೆಯನ್ನು ಬೋಟದ ಸಕಲ ಸ್ಥಾನಗಳಲ್ಲಿಟ್ಟು ದೇಶೀಯರ ಸ್ವಾಧೀನತೆಯನ್ನು ಹಾಳು ಮಾಡಲುದ್ಯುಕ್ತನಿರಲು, ದಲಾಯಿಲಾಮನು ಬ್ರಿಟಿಷರ ನೆರವನ್ನು ಬಯಸಿ ಇಂಡಿಯಾದಿಗೆ ಓಡಿ ಹೋಗಿ ಡಾರ್ಜಿಲಿಂಗ (Darjiling) ದಲ್ಲಿ ವಾಸಿಸತೊಡಗಿ

ದನು(೧೯೧೦). ಚೀಣರು ಅತನನ್ನು ಪದಚ್ಯುತನನ್ನಾಗಿ ಮಾಡಿ ತಮ್ಮ ಪ್ರಾಚೀನ ಸಾಮಂತ ರಾಜ್ಯಗಳಾಗಿದ್ದ ನೇಪಾಳ, ಸಿಕ್ಕಿಮ್ ಭೋಟಾಂತ (Bhutan)ಗಳಲ್ಲಿ ಗಲಭೆ ಹುಟ್ಟಿಸಿ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಲು ಪ್ರಯತ್ನಿಸಿ, ಅವುಗಳ ಮೇಲೆ ತಮಗೆ ಇರತಕ್ಕ ಅಧಿರಾಜತ್ವವನ್ನು ಒಪ್ಪಬೇಕೆಂದು ಬ್ರಿಟಿಷರನ್ನು ಕೇಳಿದರು. ಬ್ರಿಟಿಷರು ಚೀಣರು ಈ ದೇಶಗಳ ತಂಟೆಗೆ ಹೋದರೂ ಬೋಟದಲ್ಲಿ ತಮಗಿಂತ ಹೆಚ್ಚಾಗಿ ಪ್ರಾಬಲ್ಯವನ್ನು ಸಂಪಾದಿಸಿದರೂ ತಾವು ಎದುರಿಸುವುದಾಗಿ ಹೆದರಿಸಿ ತಡೆದರು.

ಚೀಣವು ರಾಜ್ಯಕ್ರಾಂತಿಯ ತೊಡಕಿಗೆ ಸಿಕ್ಕಿರುವಾಗ ಬೋಟರು ದಂಗೆಯೆಬ್ಬಿಸಿ ಚೀಣರ ಸೇನೆಯನ್ನೂ ಅಧಿಕಾರಿ ವರ್ಗವನ್ನೂ ಓಡಿಸಿ, ಮಂಗೋಲಿಯದೊಡನೆ ಸ್ವತಂತ್ರವಾಗಿ ಒಂದು ಸಂಧಿ ಮಾಡಿಕೊಂಡಿತು (೧೯೧೩). ದಲಾಯಿಲಾಮನು ಲಾಸಕ್ಕೆ ಹಿಂತಿರುಗಿದನು. ಬೋಟರೂ ಚೀಣರೂ ಬ್ರಿಟಿಷರೂ ೧೯೧೪ರಲ್ಲಿ ಸಿಮ್ಲಾದಲ್ಲಿ ಮಾಡಿಕೊಂಡ ಸಂಧಿ ಪ್ರಕಾರ ಚೀಣರು ಈ ದೇಶಕ್ಕೆ ನಾಮತಃ ಅಧಿರಾಜರೆಂದೂ, ಅವರು ಅಲ್ಲಿಗೆ ಸೇನೆ ಕಳಿಸುವುದಕ್ಕಾಗಲಿ ಒಳ ವಿಚಾರದಲ್ಲಿ ಕೈಹಾಕುವುದಕ್ಕಾಗಲಿ ಅಧಿಕಾರವುಳ್ಳವರಲ್ಲವೆಂದೂ, ದೇಶದ ಮೇಲೆ ಚೀಣರಷ್ಟೇ ಅಧಿಕಾರವು ಬ್ರಿಟಿಷರಿಗೆ ಇರಬೇಕೆಂದೂ ಏರ್ಪಾಡಾಗಿ ದೇಶವು ಬ್ರಿಟಿಷರ ವಶವಾಯಿತು.

## (೪) ಮಂಗೋಲಿಯಾ.

ಉರ್ಗ ನಗರದಲ್ಲಿರುವ ಖುತುಕ್ತು (Khutkhtu) ಎಂಬ ಮಹಾಗುರುವು ಈ ದೇಶದ ರಾಜನು. ಚೀಣರು ಈ ದೇಶದಲ್ಲಿ ತಮ್ಮ ಅಧಿಕಾರವನ್ನು ಹೆಚ್ಚಿಸಿಕೊಳ್ಳಲು ೧೯೦೫ರಿಂದ ಮುಂದಕ್ಕೆ ಮಾಡಿದ ಪ್ರಯತ್ನವನ್ನು ಸಹಿಸದೆ, ಈ ದೇಶೀಯರು ರುಷ್ಯರ ಸಹಾಯವನ್ನು ಪಡೆದು ಚೀಣರನ್ನು ಓಡಿಸಿ, ಸ್ವತಂತ್ರರೆಂದು ಕರೆದುಕೊಂಡು, ಬೋಟರೊಡನೆ ಸಂಧಿ ಮಾಡಿಕೊಂಡರು. ೧೯೧೫ರಲ್ಲಿ ರುಷ್ಯರೊಡನೆ ಹುಟ್ಟಿದ ಸಂಧಿಯ ಪ್ರಕಾರ ಈ ದೇಶವೂ ಮಗ್ಗುಲಲ್ಲಿರುವ ಬರೂಗ ಎಂಬ ಪ್ರಾಂತ್ಯವೂ ನಾಮತಃ ಚೀಣರ ಅಧೀನ ರಾಜ್ಯವಾಗಿಯೂ ವಾಸ್ತವತಃ ರುಷ್ಯರ ಆಶ್ರಿತ ಸ್ಥಾನವಾಗಿಯೂ ಪರಿಣಮಿಸಿತು. ರುಷ್ಯರಲ್ಲಿ ಯುದ್ಧ ಮತ್ತು

ಕ್ರಾಂತಿಗಳಿಗೆ ಸಿಕ್ಕಿದ್ದಾಗ ೧೯೧೯ರಲ್ಲಿ ಚೀನರು ಮಂಗೋಲರನ್ನಡಗಿಸಲು ಪ್ರಯತ್ನಿಸಿ ವಿಫಲರಾದರು. ಬೋಲಷೆವಿಕ ಪಕ್ಷಕ್ಕೆ ವಿರೋಧಿಯಾದ ಉಂಗೆರು (Umgeru) ಎಂಬ ರುಷ್ಯದ ಸೇನಾಪತಿಯು ಚೀನರನ್ನು ಹಿಂದಕ್ಕಟ್ಟಿ ಉರ್ಗವನ್ನು ಹಿಡಿದು ಮಂಗೋಲರ ಹೆಸರಿನಲ್ಲಿ ತಾನೇ ಆಳ ತೊಡಗಿದನು (೧೯೨೧). ಈತನು ಮಂಗೋಲರ ಮಹಾ ಗುರುವನ್ನು ಬಂಧನದಲ್ಲಿರಿಸಿ ತನ್ನ ಎದುರು ಪಕ್ಷದ ಮನುಷ್ಯರೆಲ್ಲರನ್ನೂ ಕೊಲ್ಲಿಸುತ್ತಾ ಬಂದದ್ದರಿಂದ ಮಂಗೋಲರೂ ಬೋಲಷೆವಿಕರೂ ಒಂದಾಗಿ ಸೇರಿ ಇವನನ್ನು ಸೋಲಿಸಿ ಕೊಲ್ಲಿಸಿದರು. ಬೋಲಷೆವಿಕರು ಈ ದೇಶದಲ್ಲಿ ತಮ್ಮ ಅಂಕೆಗೊಳಪಟ್ಟ ಒಂದು "ಪ್ರಜಾಯುಕ್ತ ಕ್ರಾಂತಿಕರ ಸರ್ಕಾರ" (People's Revolutionary Government)ವನ್ನು ೧೯೨೪ರಲ್ಲಿ ಸ್ಥಾಪಿಸಿದರು. ಈಚೆಗೆ ಮಂಗೋಲವು ಅಧಿಕ ಸ್ವಾತಂತ್ರ್ಯವನ್ನು ಪಡೆದು ಬೋಲಷೆವಿಕ ಸಂಯುಕ್ತ ಸಾಮ್ರಾಜ್ಯದಲ್ಲಿ ಒಂದು ವಿಭಾಗ ರಾಜ್ಯವಾಗಿ ಸೇರಿದೆ. ಬೋಲಷೆವಿಕರ ಸಹಾಯದಿಂದ ಈ ದೇಶದಲ್ಲಿ ಜನಜಾಗೃತಿಯೂ ಪ್ರಗತಿಯೂ ಹುಟ್ಟುತ್ತಿವೆ. ಇಲ್ಲಿನ ಜನರು ಇನ್ನೂ ಗಣಾವಸ್ಥೆ (Tribal state)ಯಲ್ಲೇ ಇರುತ್ತಿರುವರು. ಈ ದೇಶಕ್ಕೆ ಆರ್ಥಿಕ ದೃಷ್ಟಿಯಿಂದ ಚೀನಾದ ಸಹಾಯವು ಬೇಕಾಗಿರುವುದರಿಂದ ಈ ಜನರು ಚೀನರೊಡನೆ ಸೌಹಾರ್ದದಿಂದ ಇರಲು ಪ್ರಯತ್ನಿಸುತ್ತಿರುವರು. ೧೪ ಲಕ್ಷ ಚದರ ಮೈಲುಗಳುಳ್ಳ ಈ ದೇಶದಲ್ಲಿ ೨೦ ಲಕ್ಷ ಜನರೂ ಇಲ್ಲ.

### (೫) ಮಂಚೂರಿಯಾ.

ಈ ದೇಶವು ಸುಮಾರು ೩॥ ಲಕ್ಷ ಚದರ ಮೈಲು ವಿಸ್ತೀರ್ಣವೂ ಮೂರು ಕೋಟಿ ಜನಸಂಖ್ಯೆಯೂ ಉಳ್ಳ ಅತಿ ಸಂಪತ್ಕರವಾದ ದೇಶವಾಗಿದೆ. ಇಲ್ಲಿ ಸುಮಾರು ೭ ಸಾವಿರ ಮೈಲುಗಳ ಉದ್ದ ರೈಲು ಹಾಕಲ್ಪಟ್ಟಿದೆ. ಇದರ ಉತ್ತರಭಾಗದಲ್ಲಿ ರುಷ್ಯರೂ ದಕ್ಷಿಣಭಾಗದಲ್ಲಿ ಜಪಾನರೂ ಪ್ರಾಬಲ್ಯವನ್ನು ಪಡೆದು ಇದ್ದರು. ಯುರೋಪ್ಯ ಯುದ್ಧದ ನಂತರ ಜಪಾನರು ಇಲ್ಲಿ ಎಲ್ಲರಿಗಿಂತಲೂ ಅಧಿಕವಾಗಿ ಪ್ರಾಬಲ್ಯವನ್ನು ಪಡೆಯುತ್ತಾ ಬರಲು, ಅದಕ್ಕೆ ಸಹಿಸದೆ, ಅಮೇರಿಕದವರು ವಾಷಿಂಗಟನ್ ಸಮ್ಮೇಳನದ ಸಂಧಿಯಲ್ಲಿ, ಈ ದೇಶವು ಸಕಲ ಪರಕೀಯರಿಗೂ ಸಮವಾಗಿ ತೆರೆದಿ

ರಬೇಕೆಂದು ಜಪಾನರು ಒಪ್ಪುವಂತೆ ಮಾಡಿದರು. ಇತರರಿಗಿಂತಲೂ ಜಪಾನರು ಇಲ್ಲಿ ಹೆಚ್ಚು ಪ್ರಾಬಲ್ಯವನ್ನು ಪಡೆಯುವುದು ಈ ಸಂಧಿಗೆ ವಿರೋಧವೆಂದು ಈಚೆಗೆ ಅಮೇರಿಕದವರು ಹೇಳುತ್ತಿರುವರು. ಜಪಾನರು ಈ ಅರ್ಥವನ್ನು ಒಪ್ಪದೆ ೧೯೩೧-೩೨ರಲ್ಲಿ ಈ ದೇಶವನ್ನು ಸಂಪೂರ್ಣವಾಗಿ ನುಂಗಿ, ಪರರ ಆಕ್ಷೇಪಣೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ, ಈ ರಾಜ್ಯವನ್ನು ಸ್ವತಂತ್ರವೆಂದು ಪ್ರಕಟಿಸಿ ತಮ್ಮ ಆಶ್ರಿತನೊಬ್ಬನನ್ನು ರಾಜನನ್ನಾಗಿ ತಂದು ಕೂರಿಸಿರುವರು.

ಮಂಚೂರಿಯಾದಲ್ಲಿ ಎರಡು ಲಕ್ಷ ಜಪಾನರು ನೆಲಸಿ ಅಲ್ಲಿಯ ವ್ಯಾಪಾರ ಕೈಗಾರಿಕೆಗಳ ಸರ್ವಸ್ವಾಮ್ಯವನ್ನು ಪಡೆದಿರುವರು. ಇಲ್ಲಿನ ಶೀತವನ್ನು ಸಹಿಸಲಾರದೆ ಇರುವ ಕಾರಣದಿಂದ ಜಪಾನರು ಈ ದೇಶದಲ್ಲೂ ಇತರ ದೇಶವಲ್ಲೂ ವಲಸೆ ಹೋಗಿ ನೆಲಸುವ ಯೋಚನೆ ಬಿಟ್ಟು ರಾಜಕೀಯ ಪ್ರಾಬಲ್ಯವನ್ನೂ ಆರ್ಥಿಕಾಧಿಪತ್ಯವನ್ನೂ ಮಾತ್ರ ವಶ ಪಡಿಸಿಕೊಳ್ಳಲು ಉದ್ಯಮಿಸಿರುವರು.

## (೬) ಮಲಯಾ ದೇಶ.

ಇದು ಇನ್ನೂ ಅತಿ ಹಿಂದುಳಿದಿದೆ. ಬ್ರಿಟಿಷರು ಇದನ್ನು ವಶಪಡಿಸಿಕೊಂಡು ಜಪಾನರ ಪ್ರಾಬಲ್ಯವನ್ನು ಶಾಂತಸಾಗರದಲ್ಲಿ ಎದುರಿಸುವ ಸಲುವಾಗಿ ಸಿಂಗಪೂರದಲ್ಲಿ ದೊಡ್ಡ ಜಲದುರ್ಗವನ್ನು ಕಟ್ಟುತ್ತಿರುವರು. ಸಿಂಗಪೂರವು ಬ್ರಿಟಿಷ ಸಾಮ್ರಾಜ್ಯದ ಸಂರಕ್ಷಣಾ ವ್ಯವಸ್ಥೆಯಲ್ಲಿ ಜಲ ದುರ್ಗವಾಗಿಯೂ, ಕಲ್ಲಿದ್ದಲಿಯ ರೇವಾಗಿಯೂ, ವಿಮಾನ ಸಂಚಾರದ ಕೇಂದ್ರವಾಗಿಯೂ, ಬೇತಾರಿನ ಕೇಂದ್ರವಾಗಿಯೂ, ಆಸ್ಟ್ರೇಲಿಯಾ ಇಂಡಿಯಾ ರಾಜ್ಯಗಳ ರಕ್ಷಾಸ್ಥಾನವಾಗಿಯೂ ಪರಿಣಮಿಸಿರುವುದರಿಂದ ಮಲಯ ದೇಶದ ಪ್ರಾಮುಖ್ಯಕ್ಕೆ ಹೆಚ್ಚುತ್ತಾ ಬರುತ್ತಿದೆ.

## (೭) ಕೋರಿಯಾ.

ಚೀಣದ ಸಾಮಂತನಾಗಿದ್ದ ಕೋರಿಯಾ ಚಕ್ರವರ್ತಿಯು ೧೮೯೫ ರಲ್ಲಿ ಜಪಾನರ ಸಾಮಂತನಾದನು. ಜಪಾನರ ದುರ್ವರ್ತನೆಯನ್ನು ಇವನು ತನ್ನ ರಾಣಿಯ ಮಾತಿನಮೇಲೆ ಸ್ವಲ್ಪ ಎದುರಿಸಿದ್ದಕ್ಕೆ ಜಪಾನರ ಸೇನೆಯು ಅರಮನೆಯನ್ನು ಮುತ್ತಿ ರಾಣಿಯನ್ನು ಕೊಂದು ಚಕ್ರವರ್ತಿ

ಯನ್ನು ಸೆರೆಯಿಟ್ಟಿತು. ರುಶ್ಯರು ಈ ಸೆರೆಯನ್ನು ತಪ್ಪಿಸಿ (೧೮೯೬) ಈ ದೇಶವನ್ನು ಕಬಳಿಸಲು ೮ ವರ್ಷ ಪ್ರಯತ್ನಿಸಿ ಜಪಾನರಿಗೆ ಸೋತು ದೇಶವನ್ನು ಅವರಿಗೆ ಒಪ್ಪಿಸಿದರು. ಈ ಮಧ್ಯಕಾಲದಲ್ಲಿ ಸುಧಾರಣೆಗಳನ್ನು ತಂದು ಬಲಗೊಂಡು ಸ್ವರಾಜ್ಯವನ್ನು ಸಾಧಿಸಬೇಕೆಂದು ಕೋರಿಯಾ ಪ್ರಜಾಪಕ್ಷದವರು ಫಿಲಿಪ್ ಜಯಸೋಹನ (Jaisohn) ಮತ್ತು ಸಿಂಗಮಾನ ರುಹೀ (Syngman Rhee) ಎಂಬವರ ನೇತೃತ್ವದಲ್ಲಿ ಚಳವಳಿ ನಡೆಸಿದರು. ಆದರೆ ಕೋರಿಯಾ ಅಧಿಕಾರವರ್ಗದವರು ಮದನೋಹಿತರಾಗಿ ಹಠಪ್ರೇರಣೆಯಿಂದ ಈ ಚಳವಳಿಯನ್ನು ಅಡಗಿಸಿದರು (೧೮೯೮).

೧೯೦೫ರಿಂದ ಮುಂದೆ ಜಪಾನರು ಕೋರಿಯದ ಸಮಸ್ತ ಸ್ವಾತಂತ್ರ್ಯವನ್ನೂ ಅಡಗಿಸಲು ಪ್ರಯತ್ನಿಸಿದರು. ಅವರು ವಿಧಿಸಿದ ಹೊಸ ಸಂಧಿಗೆ ಕೋರಿಯಾ ಚಕ್ರವರ್ತಿಯು ಸಹಿ ಹಾಕುವುದಿಲ್ಲವೆಂದು ಹಟ್ಟು ಹಿಡಿಯಲು ಜಪಾನರು ಅವನನ್ನು ಸೆರೆಗಿಕ್ಕಿ ಸಿಂಹಾಸನದಿಂದ ತಳ್ಳಿ ಅವನ ಮಗನನ್ನು ಪಟ್ಟಕ್ಕೆ ತಂದರು (೧೯೦೭). ಕೋರಿಯನರು ಗಲಭೆಯೆಬ್ಬಿಸಿ ಜಪಾನರ ಸರ್ವಾಧಿಕಾರಿಯಾಗಿದ್ದ ವಿಖ್ಯಾತಪುರುಷನಾದ ಇಟೋನನ್ನು ಕೊಲೆ ಮಾಡಲು (೧೯೦೯) ಜಪಾನರು ಅವರ ಸ್ವತಂತ್ರ ರಾಜ್ಯವನ್ನು ವಜಾ ಮಾಡಿ ಜಪಾನಿಗೆ ಸೇರಿಸಿಕೊಂಡು ಸರಕಾರದ ನೌಕರಿಗಳನ್ನೂ ದೇಶದ ಭೂಮಿಯನ್ನೂ ಜಪಾನರಿಗೆ ಮಾನ್ಯವಾಗಿ ವಹಿಸಿದರು. ಜಪಾನರಿಗೆ ನೆಲೆಸಲು ಸ್ಥಳಕಲ್ಪಿಸಲು ಕೊರಿಯನರನ್ನು ಸಾವಿರಗಟ್ಟಲೆಯಾಗಿ ಮಂಚೂರಿಯಾ ಮೊದಲಾದ ಕಡೆಗೆ ಗಡೀ ಪಾರುಮಾಡಿದರು. ಸ್ವಾತಂತ್ರ್ಯಕ್ಕಾಗಿ ಕೊರಿಯನರು ಪ್ರಚಂಡ ಚಳವಳಿ ಮಾಡತೊಡಗಲು ಜಪಾನರು ಸೈನಿಕ ಪ್ರಭುತ್ವವನ್ನು ಹೂಡಿ ವಿಚಾರಣೆಯಿಲ್ಲದೆ ಅವರನ್ನು ಸಹಸ್ರಸಂಖ್ಯೆಯಲ್ಲಿ ಸೆರೆಗೆ ಹಾಕಿ ಚಿತ್ರಹಿಂಸೆಮಾಡಿದರು. ಕೊರಿಯನರು ಜಗ್ಗದೆ ತಮ್ಮ ಪದಭ್ರಷ್ಟನಾದ ಚಕ್ರವರ್ತಿ ಮೃತನಾಗಿದ್ದುದರಿಂದ ೧೯೧೯ರಲ್ಲಿ ತಮ್ಮ ರಾಜ್ಯವು ಸ್ವತಂತ್ರ ಅರಾಜಕ ಪ್ರಭುತ್ವವೆಂದು ಸಾರಿ ಸತ್ಯಾಗ್ರಹ ಯುದ್ಧಕ್ಕೆ ತೊಡಗಿದರು. ಜಪಾನರ ಮರುಕರಹಿತವಾದ ನಿಗ್ರಹಕ್ಕೂ ಚಿತ್ರಹಿಂಸೆಗೂ ಸಿಕ್ಕಿಬಿದ್ದ ದೇಶದ ಎಳೆಯ ವಿದ್ಯಾರ್ಥಿಗಳೂ ಹೆಂಗಸರೂ ಶ್ರೀಮಂತರೂ

ಬಡವರೂ ಸರ್ವತ್ರ ಹರತಾಳ, ಅಸಹಕಾರ, ಸತ್ಯಾಗ್ರಹಗಳನ್ನು ನಡೆಸಿ, ಜಪಾನರನ್ನು ದಣಿಸಿದರು. ದೇಶವು ವಲಸೆಗೆ ಅಯೋಗ್ಯವಾದ್ದರಿಂದ ಜಪಾನರು ಈಗ ಸಾಮದಿಂದ ಕೋರಿಯನರನ್ನು ಶಾಂತಿಗೊಳಿಸಿ ಆಳುತ್ತಿರುವರು.

# ೭ನೆಯ ಅಧ್ಯಾಯ

## ಇರಾಣ ಪ್ರಪಂಚ.

### (೧) ರುಷ್ಯಾಧೀನ ಇರಾಣ ಖಂಡ.

ರುಷ್ಯರು ೧೮೦೦ರಿಂದ ೧೮೯೫ರೊಳಗಾಗಿ ಕಾಕಸಸ, ಮಧ್ಯ ಏಶಿಯಾ, ಉತ್ತರ ಇರಾಣ, ಪೂರ್ವ ಶಿಬಿರ ದೇಶಗಳನ್ನು ವಶಪಡಿಸಿಕೊಂಡು ದಕ್ಷಿಣ ಮುಖವಾಗಿ ಒತ್ತರಿಸುತ್ತ ಬರುತ್ತಿದ್ದರು. ಇವರ ಉಪಟಳಿಯನ್ನು ತಡೆಯಲು ಬ್ರಿಟಿಶರು ದಕ್ಷಿಣ ಇರಾಣ, ಬಲೂಚಿಸ್ಥಾನ, ಶೀಸ್ತಾನ, ಪಠಾಣ, ಟಿಬೆಟ ದೇಶಗಳನ್ನು ವಶ ಪಡಿಸಿಕೊಂಡು ಜಪಾನರ ಮೈತ್ರಿಯಿಂದ ಚೀಣಾದ ಕಡೆ ರುಷ್ಯರ ದಿಗ್ವಿಜಯವನ್ನು ನಿಲ್ಲಿಸಿದರು. ಉಭಯರೂ ಶಾಂತರಾಗಿ ೧೯೦೭ರಲ್ಲಿ ಸಂಧಿಮಾಡಿಕೊಂಡು, ತಮ್ಮ ತಮ್ಮ ಸರಹದ್ದನ್ನು ಸ್ಪಷ್ಟ ಪಡಿಸಿಕೊಂಡು, ತಮ್ಮ ಮಧ್ಯೆ ಹೊಸದಾಗಿ ಹೊಕ್ಕಿದ್ದ ಜರ್ಮನರ ಗಂಡಾಂತರವನ್ನು ಎದುರಿಸಲು ಅಣಿಮಾಡಿಕೊಂಡರು. ಯುರೋಪ ಮಹಾ ಯುದ್ಧದಲ್ಲಿ ಜರ್ಮನರು ಸೋತು, ರುಷ್ಯರು ರಾಜ್ಯಕ್ರಾಂತಿಯ ಕೊಂಡಲಿಗೆ ಸಿಲುಕಿರುವಾಗ, ಬ್ರಿಟಿಶರು ತುರಕ ಸಾಮ್ರಾಜ್ಯದ ದಕ್ಷಿಣ ಭಾಗವನ್ನೂ ಸಂಪೂರ್ಣ ಇರಾಣವನ್ನೂ ಕಾಕಸಸ ದೇಶವನ್ನೂ ಕಬಳಿಸಲು ಪ್ರಯತ್ನಿಸಿದರು.

ರುಷ್ಯರ ಸಾಮ್ರಾಜ್ಯದಲ್ಲಿ ಸುಮಾರು ೧೭೦ ಜನಾಂಗಗಳೂ ೧೫೦ ಭಾಷೆಗಳೂ ಲೋಕದ ಸಕಲ ಮತಭೇದಗಳೂ ಕಾಲ ಭೇದಗಳೂ ಕಂಡು

ಬರುತ್ತಿದ್ದವು. ರುಷ್ಯರು ಯಾರಿಗೂ ಯಾವ ವಿಧವಾದ ಸ್ವಾಧೀನತೆಯನ್ನೂ ಕೊಡದೆ ಇತರರಿಗೆ ರುಷ್ಯನ ಭಾಷೆ, ಆಚಾರ, ಸಂಸ್ಕೃತಿ ವಿದ್ಯೆಗಳನ್ನು ಬಲಾತ್ಕಾರವಾಗಿ ವಿಧಿಸಿ ಮಹಾ ನಿರಂಕುಶವಾಗಿ ಆಳುತ್ತಿದ್ದರು. ಅಖಿಲ ರುಷ್ಯನ ದೇಶವೂ ನಿಷ್ಕರುಣರಾದ ಅಲ್ಪ ಸಂಖ್ಯೆಯ ಶ್ರೀಮಂತರ ಜಮೀನ್ದಾರಿಯಾಗಿತ್ತು. ಇವರ ನಾಯಕನಾದ ಸಮ್ರಾಟನು ಅತ್ಯಂತ ನಿರಂಕುಶ ಪ್ರಭುವಾಗಿ ಆಳುತ್ತಿದ್ದನು. ಪ್ರಜಾ ಸ್ವಾತಂತ್ರ್ಯದ ಹೆಸರು ಹೇಳುವದೂ ಗುರುತರವಾದ ರಾಜದ್ರೋಹವಾಗಿತ್ತು. ಪ್ರಜಾ ಪಕ್ಷದ ಲಕ್ಷಾಂತರ ರುಷ್ಯರನ್ನು ಸರಕಾರವು ಸಿಬಿರ ದೇಶಕ್ಕೆ ಗಡೀ ಪಾರು ಮಾಡಿದ್ದಿತು. ಮಧ್ಯ ಏಷಿಯದ ತುರ್ಕಸ್ಥಾನದಲ್ಲಿ ಅನೇಕ ಲಕ್ಷ ರುಷ್ಯರು ನೆಲಸಿ ಅಲ್ಲಿನ ಜನರ ಭೂಮಿ ಕಾಣಿಗಳನ್ನು ಕಿತ್ತುಕೊಂಡು ಪುಷ್ಟರಾಗಿ ಜೀವಿಸುತ್ತಿದ್ದರು.

೧೯೧೭ರಲ್ಲಿ ಹುಟ್ಟಿದ ರಾಜ್ಯಕ್ರಾಂತಿಯಲ್ಲಿ ಸಮ್ರಾಟನು ಪದಭ್ರಷ್ಟನಾಗಿ ಪ್ರಜಾಪಕ್ಷದವರು ಅಧಿಕಾರಕ್ಕೆ ಬಂದರು. ಮುಂದೆ ಆರೇಳು ತಿಂಗಳಲ್ಲಿ ಇವರಲ್ಲಿ ಬೋಲಷೆವಿಕ ಎಂಬ ಹೆಸರಿನ ಒಂದು ವೀರ ಪಕ್ಷವು ಅಧಿಕಾರವನ್ನು ಪಡೆಯಿತು. ಬೋಲಷೆವಿಕರು ವ್ಯಕ್ತಿಗಳಿಗೆ ಆಸ್ತಿ ತಪ್ಪಿಸಿ ನಿರ್ಗತಿಕರಾದ ನಿಮ್ನ ಶ್ರೇಣಿಯವರಿಗೆ ರಾಜ್ಯಾಧಿಪತ್ಯ ದೊರಕಿಸಬೇಕೆಂಬ ಸಂಕಲ್ಪವುಳ್ಳವರಾದ್ದರಿಂದ, ಆಸ್ತಿಯುಳ್ಳವರೂ ಆಸ್ತಿ ಬಯಸತಕ್ಕವರೂ ಆದ ಮಧ್ಯಮ ಶ್ರೇಣಿಯು ಇವರ ಮೇಲೆ ಎಲ್ಲಾ ಕಡೆಯಲ್ಲೂ ದಂಗೆಯೆಬ್ಬಿಸಿತು. ಬಾಲ್ಟಿಕ ಸಮುದ್ರವರ್ತಿಯಾದ ಪೋಲೆಂಡು, ಫಿನ್ಲೆಂಡು ಮೊದಲಾದ ಅಧೀನ ದೇಶಗಳೆಲ್ಲವೂ ಸ್ವತಂತ್ರವಾದವು; ಯುರೋಪಿನ ರುಷ್ಯದ ದಕ್ಷಿಣಾರ್ಧವೂ ಸಹ ದಂಗೆಯವರ ಕೈ ತಪ್ಪಿತು. ಉತ್ತರದಿಂದ ಬ್ರಿಟಿಷರೂ ಪಶ್ಚಿಮದಿಂದ ಜರ್ಮನರೂ ಬೋಲಷೆವಿಕರ ಮೇಲೆ ದಾಳಿ ಬಂದರು. ಕೋಲ್ಚಾಕನೆಂಬ ನೌಕಾಪತಿಯು ಸಿಬಿರ ಮತ್ತು ಮಧ್ಯ ಏಷಿಯಾ ದೇಶಗಳನ್ನು ವಶ ಪಡಿಸಿಕೊಂಡು ಪೂರ್ವ ದಿಕ್ಕಿನಿಂದ ಬೋಲಷೆವಿಕರ ಮೇಲೆ ದಂಡೆತ್ತಿ ಬಂದನು. ಕಾಕಸಸ ದೇಶವು ಜಾರ್ಜಿಯಾ, ಆರ್ಮೀನಿಯಾ, ಅಸರ ಬೈಜಾನ ಎಂಬ ಮೂರು ಸ್ವತಂತ್ರ ರಾಜ್ಯವಾಗಿ ಒಡೆದು ಕೈ ತಪ್ಪಿತು. ಬೋಲಷೆವಿಕರಿಗೆ ತಮ್ಮ ದಕ್ಷಿಣ ದೇಶವೂ ಸಿಬಿರ ಕಾಕಸಸಗಳೂ ಕೈ ತಪ್ಪಿದ್ದರಿಂದ ಗೋಧಿ, ಸಕ್ಕರೆ, ತೊಗಲು, ಕಲ್ಲಿದ್ದಲಿ

ಕಲ್ಲೋಲ್ಲೋಲ ಇವು ಒರೆಗಡೆ ಸ್ಥಾನವು ತಪ್ಪಿಹೋಯಿತು. ಬಾಕು ನಗರದ ಕಲ್ಲೆಣ್ಣೆಯ ಗಣಿಗಳು ಮರಳಿ ಕೈಸೇರುವವರೆಗೂ ಇವರ ಮೋಟಾರುಗಾಡಿಗಳು ನಡೆಯದೆ ನಿಂತುಹೋಗಿದ್ದವು. ಆದರೆ ಬೋಲ್ಷೆವಿಕರ ಮುಖಂಡರಾದ ಲೆನಿನ್ ಮತ್ತು ಟ್ರಾಟ್ಸ್ಕಿ ಎಂಬ ಮಹಾಪುರುಷರು, ಗಾಳಿಯು ಮೋಡಗಳನ್ನು ಓಡಿಸುವಂತೆ ಈ ಸಕಲ ಶತ್ರುಗಳನ್ನೂ ಭಂಗಪಡಿಸಿ ಸರ್ವತ್ರ ವಿಜಯಿಗಳಾದರು. ಈ ನಿಶ್ಚಯಾತ್ಮಕವಾದ ವಿಜಯದ ಕಥೆಯು ನಮ್ಮ ಗ್ರಂಥ ಸೀಮೆಗೆ ಸೇರಿಲ್ಲ. ಬೋಲ್ಷೆವಿಕರು ಬಾಲ್ಟಿಕಸಮುದ್ರತೀರದಲ್ಲಿಯಾದ ದೇಶಗಳನ್ನು ಜಯಿಸಲು ಹೋಗದೆ ರಾಜಧಾನಿಯನ್ನು ಮಾಸ್ಕೋನಗರಕ್ಕೆ ಒಯ್ದು ತಮ್ಮ ಏಷಿಯಾ ಸಾಮ್ರಾಜ್ಯವನ್ನು ಮಾತ್ರ ಮರಳಿ ಸಂಪಾದಿಸಲು ಪ್ರಯತ್ನಪಟ್ಟರು.

ಕಾಕಸಸ ದೇಶದಲ್ಲಿ ಜಾರ್ಜಿಯದ ಜನರು ಕ್ರಿಸ್ತ ಮತಕ್ಕೆ ಸೇರಿ ಸುಸಂಸ್ಕೃತರ ವಿದ್ಯಾಸಂಸ್ಕೃತಿಯನ್ನು ಪರಿಗ್ರಹಿಸಿರುವರು. ಅರ್ಮೀನಿಯನರು ಪ್ರಾಚೀನಕುಲದ ಕ್ರಿಸ್ತರು. ಅಸರಬೈಜಾನದವರು ತಾತರ ಕುಲದ ಮುಸಲ್ಮಾನರು. ಈ ಮೂರು ದೇಶದವರಿಗೂ ಕುಲವೈರವೂ ಮತವೈರವೂ ಅಜನ್ಮಸಿದ್ಧವಾಗಿ ಬಂದಿರುವುದರಿಂದ ಬೋಲ್ಷೆವಿಕರು ಭೇದೋಪಾಯದಿಂದ ಕ್ರಿಸ್ತರಿಗೂ ಮುಸಲ್ಮಾನರಿಗೂ ವಿರಸ ಹುಟ್ಟಿಸಿ ಅಸರಬೈಜಾನೀಯರ ಮೇಲೆ ಅರ್ಮೀನಿಯನರನ್ನು ಕೆರಳಿಸಿ ಮುಸಲ್ಮಾನರನ್ನು ಎಲ್ಲಾ ಕೊಲೆಮಾಡಿಸತೊಡಗಿದರು. ಅಸರಬೈಜಾನೀಯರು ತುರುಕರ ಸಹಾಯದಿಂದ ಆಯುಧ ಸಾಮಗ್ರಿಗಳನ್ನು ಪಡೆದು ಇವರನ್ನು ಸೋಲಿಸಿದರು. ಇಷ್ಟರಲ್ಲೇ ತುರುಕರು ಕಾಕಸಸ ಪ್ರಾಂತ್ಯವನ್ನು ಮುತ್ತಿದರು. ಬಾಕು ನಗರವನ್ನು ಜರ್ಮನರು ಕೈವಶಮಾಡಿಕೊಂಡಾರೆಂದು ಬ್ರಿಟಿಷರು ಅದನ್ನು ಆಕ್ರಮಿಸಿದರು (೧೯೧೮ ನವೆಂಬರು). ಫ್ರೆಂಚರು ಇದಕ್ಕೆ ಸಹಿಸದೆ ಕಿರುಕುಳ ಮಾಡಲಾರಂಭಿಸಿದ್ದರಿಂದ ಬ್ರಿಟಿಷರು ತಡಮಾಡಲಾರದೆ ಬಾಕುವನ್ನೂ ಉತ್ತರ ಇರಾನವನ್ನೂ ಬಿಟ್ಟು ಹಿಮ್ಮೆಟ್ಟಬೇಕಾಯಿತು. ಆಗ ಬೋಲ್ಷೆವಿಕರು ನಿರಾಯಾಸವಾಗಿ ೧೯೨೦ರಲ್ಲಿ ಅಸರಬೈಜಾನವನ್ನೂ ಮರುವರ್ಷ ಜಾರ್ಜಿಯಾ ಅರ್ಮೀನಿಯಾಗಳನ್ನೂ ವಶಪಡಿಸಿಕೊಂಡರು.

ಕೋಲ್ಚಾಕನು ಏಷಿಯಾದಲ್ಲಿ ನೆಲೆಸಿದ್ದ ಪುಸ್ಯಕರ ಮತ್ತು ಯುದ್ಧದಲ್ಲಿ ಸೆರೆಸಿಕ್ಕಿ ಅಲ್ಲಿ ಇರಿಸಲ್ಪಟ್ಟಿದ್ದ ಜರ್ಮನಿ ಮತ್ತು ಆಸ್ಟ್ರಿಯಾ ಸಾಮ್ರಾಜ್ಯಗಳ ಸೈನಿಕರ (ಅವರಲ್ಲಿ ಮುಖ್ಯವಾಗಿ ಜೆಕೊಸ್ಲಾವ (Czecho Slav – ಬೊಹೀಮಿಯದವರು) ಬೆಂಬಲದಿಂದ ದಂಗೆಯೆಬ್ಬಿಸಿದ್ದನು. ಇವನ ಸೋಲಿನಿಂದಲೂ ಅವಿವೇಕದಿಂದಲೂ ಇವರು ಕ್ರಮವಾಗಿ ಕೈಬಿಟ್ಟರು. ಬೋಲಷೆವಿಕರು ಶೀಘ್ರಕಾಲದಾಗಿ ಪಶ್ಚಿಮ ಶಿಬಿರದೇಶವನ್ನು ಜಯಿಸಿದರು. ಬ್ರಿಟಿಷರೂ ಅವರ ಯುದ್ಧಮಿತ್ರರೂ ಬೋಲಷೆವಿಕರ ಉರವಣೆಯನ್ನು ತಡೆದು ಜೆಕೊಸ್ಲಾವರನ್ನು ಸಂರಕ್ಷಿಸುವ ಸಲುವಾಗಿ ಪೂರ್ವಶಿಬಿರ ದೇಶಕ್ಕೆ ಒಂದು ಸೇನೆಯನ್ನು ಕಳುಹಿಸಿದರು. ಈ ನೆವದಲ್ಲಿ ಜಪಾನರು ಅಲ್ಲಿಗೆ ದೊಡ್ಡ ಸೈನ್ಯವನ್ನು ಕಳುಹಿಸಿ ಪೂರ್ವಶಿಬಿರ ದೇಶವನ್ನು ಆಕ್ರಮಿಸಿ ಕೋಲ್ಚಾಕನ ರಾಜ್ಯಕ್ಕೆ ವಿರುದ್ಧವಾದ ಹಲವು ಆಶ್ರಿತ "ಸ್ವರಾಜ್ಯ" ಸಂಸ್ಥಾನಗಳನ್ನು ಕಲ್ಪಿಸಿದರು. ಜಪಾನರ ಏಳಿಗೆಗೆ ಸೈರಿಸದೆ ಪಾಶ್ಚಾತ್ಯರು ವಿಪರೀತವಾಗಿ ಕಿರುಕುಳಮಾಡಲಾರಂಭಿಸಿದರು. ಇದಕ್ಕೂ ಜಪಾನ್ಯದ ಪ್ರಿಯವಾದ ಸಂಸ್ಥಾನಗಳ ದಾಳಿಗೂ ಹೇಸಿ ಈ ದೇಶದ ಜನರು ಬೋಲಷೇವಿಕರ ಮರೆಹೊಕ್ಕರು. ತಮ್ಮ ವಲಸೆಗೆ ಅಯೋಗ್ಯವಾಗಿರುವ ಈ ದೇಶವನ್ನು, ಬಹಿರಂಗವಾದ ಯುದ್ಧಪ್ರಯತ್ನದಿಂದ, ಬ್ರಿಟಿಷರ ಮತ್ತು ಅಮೇರಿಕದವರ ವೈರವನ್ನು ಕೆರಳಿಸಿ, ದಕ್ಕಿಸಿಕೊಳ್ಳುವುದರಲ್ಲಿ ಲಾಭವಿಲ್ಲವೆಂದು ಅರಿತು ಜಪಾನರು ತಮ್ಮ ಸೇನೆಯನ್ನು ಒಂದಕ್ಕೆ ಕರೆಸಿಕೊಳ್ಳಲು ಬೋಲಷೆವಿಕರು ೧೯೨೨ರಲ್ಲಿ ರಕ್ತಪಾತವಿಲ್ಲದೆ ಪೂರ್ವಶಿಬಿರ ದೇಶವನ್ನು ವಶಪಡಿಸಿಕೊಂಡರು.

ಪಶ್ಚಿಮ ಶಿಬಿರದೇಶವನ್ನು ಬೋಲಷೆವಿಕರು ಹಿಡಿದುಕೊಂಡಾಗಲೇ ಮಧ್ಯಏಷಿಯದ ತುರುಕಸ್ಥಾನವು ಅವರ ಕೈಸೇರಿದಹಾಗಾಯಿತು. ಇವರು ೧೯೨೦ರಲ್ಲಿ ಖೀವ ರಾಜ್ಯದ ಖಾನನನ್ನು ಸೆರೆಗಿಕ್ಕಿದರು. ಬೊಖಾರದ ಖಾನನು ಹೆದರಿ ಅಫಘಾನದೇಶಕ್ಕೆ ಓಡಿಹೋದನು. ಬೋಲಷೆವಿಕರು ತಮ್ಮ ಏಷಿಯಾ ಸಾಮ್ರಾಜ್ಯದಲ್ಲಿ ಅತ್ಯಧಿಕ ಜನಸಂಖ್ಯೆಯುಳ್ಳ ತುರುಕಸ್ಥಾನದ ಜನರನ್ನು ಸಾಮೋಪಾಯದಿಂದ ಒಗ್ಗಿಸಲು ಪ್ರಯತ್ನಿಸಿ

ದರು. ತುರ್ಕರ ಸಮಷ್ಟಿವಾದಿಯಾದ ಅನ್ವರಪಾಷಾನ ನಾಯಕತ್ವದಲ್ಲಿ ನಡೆದ ಬಸ್ಮಾಚಿ ಬಂಡಾಯವನ್ನು ಇವರು ಅಡಗಿಸಿದರು.

ಬೋಲಷೆವಿಕರು ಲೋಕದಲ್ಲಿರುವ ಸಕಲ ಜನಗಳಿಗೂ ಸ್ವಾತಂತ್ರ್ಯವನ್ನು ದೊರಕಿಸಿಕೊಡುವುದು ತಮ್ಮ ವ್ರತವೆಂದು ಸಾರಿದ್ದರಿಂದ. ದೈನ್ಯರಾಗಿದ್ದ ದೇಶಗಳವರೆಲ್ಲರೂ ಅವರ ಸಹಾಯವನ್ನು ಬಯಸಿ ಮಾಸ್ಕೋನಗರವನ್ನು ಸೇರಿ ಕಿರುಕುಳಮಾಡಲಾರಂಭಿಸಿದರು. ಈ ಸಂಬಂಧವಾದ ಪ್ರಚಾರಕಾರ್ಯಕ್ಕಾಗಿ ರುಷ್ಯಕರು ಮಾಸ್ಕೋದಲ್ಲಿ ಪ್ರಾಚ್ಯವಿದ್ಯಾಮಂದಿರ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಏಷಿಯದ ಸಕಲಭಾಷೆಗಳನ್ನೂ ಅಲ್ಲಿ ಕಲಿಸಲು ಏರ್ಪಡಿಸಿದರು. ಇವರ ಪ್ರಚಾರಕರು ಇವುಗಳನ್ನು ಕಲಿತು ಆಯಾ ಭಾಷೆಗಳಲ್ಲಿ ಬೋಲಷೆವಿಕರ ಧರ್ಮವನ್ನು ಬರೆದು ವಿವರಿಸಿ ಸಕಲ ದೇಶದ ಜನರನ್ನೂ ತಮ್ಮ ಬಳಿಗೆ ಎಳೆದುಕೊಳ್ಳಲು ಪ್ರಾರಂಭಿಸಿದರು. ಅಲ್ಲದೆ ೧೯೧೯ರಲ್ಲಿ ತಾಷ್ಕಂಡನಗರದಲ್ಲಿ ೧೯೨೦ರಲ್ಲಿ ಸಮರಖಂಡದಲ್ಲೂ ಮಧ್ಯಏಷಿಯದ ಜನಗಳ ಪರಿಷತ್ತುಗಳನ್ನು ಕೂಡಿಸಿದ್ದರು. ತತ್ಫಲವಾಗಿ ಪ್ರಾಚ್ಯಬಂಧವಿಮೋಚನಾಸಂಸ್ಥೆ (Union for the Liberation of the East) ಎಂಬುದು ಸ್ಥಾಪಿಸಲ್ಪಟ್ಟು, ಸರ್ವತ್ರ, ಸಾಮ್ರಾಜ್ಯವಿರುದ್ಧವಾದ ಚಳವಳಿಗೆಲ್ಲಾ ಅದು ಸಹಾಯ ಮಾಡತೊಡಗಿತು. ೧೯೨೦ರಲ್ಲಿ ಬಾಕು ನಗರದಲ್ಲಿ ಇವರು ಸೇರಿಸಿದ್ದ ಅಖಿಲ ಪ್ರಾಚ್ಯಜನ ಮಹಾಪರಿಷತ್ತಿಗೆ ೩೭ ಜನಾಂಗಗಳಿಗೆ ಸೇರಿದ್ದ ೧೮೯೧ ಪ್ರತಿನಿಧಿಗಳು ಬಂದಿದ್ದು ಬೋಲಷೇವಿಕ ಧರ್ಮದಲ್ಲಿ ಉಪದಿಷ್ಟರಾದರು. ಸ್ಟಾಲಿನ್ ಎಂಬ ಬೋಲಷೆವಿಕ ಮುಖಂಡನ ಸಲಹೆಯ ಮೇರೆಗೆ ಬೋಲಷೆವಿಕರು ಜನಾಂಗ ಸಮಿತಿ (Council of Nationalities) ಎಂಬ ಹೊಸ ಇಲಾಖೆಯನ್ನು ಸ್ಟಾಲಿನನ ಅಧ್ಯಕ್ಷತೆಯಲ್ಲಿ ಸ್ಥಾಪಿಸಿ, ಏಷಿಯದ ತಮ್ಮ ಪ್ರಜೆಗಳಿಗೆ ಸಂಸ್ಕೃತಿ, ಭಾಷೆ, ಧರ್ಮ ಮೊದಲಾದವುಗಳಲ್ಲಿ ಸರ್ವಸ್ವಾಧೀನತೆಯನ್ನು ವಹಿಸಿ ಅವರ ಸಮಾಜವನ್ನು ಮಾತ್ರ ಬೋಲಷೆವಿಕ ಧರ್ಮಕ್ಕನುಸಾರವಾಗಿ ರಚಿಸಲು ಕೈಕೊಂಡರು. ಈ ನೀತಿಗನುಸಾರವಾಗಿ ಸ್ಟಾಲಿನ್ನನು ಮಧ್ಯಏಷಿಯಾದಲ್ಲಿ ತ್ರೀಮಂಕರನ್ನು ಪುಷ್ಯಮಿತ್ರೀಯರ

ದನ್ನು ಅಡಗಿಸಿ ಸಿಮ್ಮರಿಗೆ ಸರ್ವಾಧಿಕಾರಕೊಡಲು ಕೆಲಸಮಾಡಿದನು. ಇದರಿಂದ ಈ ದೇಶದಲ್ಲಿ ಬಹು ದೊಡ್ಡ ಕ್ರಾಂತಿಯು ಹುಟ್ಟಿತ್ತಿದೆ.

ಬೋಲಶೆವಿಕರ ಹೊಸರಾಜ್ಯವಿಭಾಗ ಕ್ರಮದಿಂದಲೂ ಏಷಿಯಾ ಖಂಡಕ್ಕೆ ರಾಜಕೀಯ ಸ್ವಾತಂತ್ರ್ಯವು ಹೆಚ್ಚಿದೆ. ಜಾರ್ಜಿಯಾ ಆರ್ಮೇನಿಯಾ, ಅಸರಬೈಜಾನಗಳು ಒಂದಾಗಿ ಸಂಯುಕ್ತವಾಗಿ ಕಾಕಸಸ ರಾಜ್ಯವನ್ನು ನಿರ್ಮಿಸಿಕೊಂಡಿವೆ. ೧೯೨೩ರಲ್ಲಿ ಅಖಿಲ ರುಷ್ಯದ ಸಾಮ್ರಾಜ್ಯವು ಶ್ವೇತ ರುಷ್ಯಾ, ಯುಕ್ರೇಯಿನ್, ಕಾಕಸಸ, ಮಹಾರುಷ್ಯ ಎಂಬ ನಾಲ್ಕು ಅಂಗ ರಾಜ್ಯಗಳ ಸಂಯುಕ್ತರಾಜ್ಯ (Federal State) ವಾಗಿ ವ್ಯವಸ್ಥೆಪಡೆಯಿತು. ಮಹಾರುಷ್ಯದ ಅಂಗ ರಾಜ್ಯಕ್ಕೆ ಸೇರಿರುವ ಏಷಿಯದ ದೇಶಗಳನ್ನು ಬೋಲಶೆವಿಕರು ಆತ್ಮಶಕ್ತ್ಯದ ಉಪಾಂಗರಾಜ್ಯಗಳಾಗಿ ವಿಭಾಗಿಸಿ ಕ್ರಮವಾಗಿ ಅವರ ಸ್ವಾತಂತ್ರ್ಯವನ್ನು ಹೆಚ್ಚಿಸುತ್ತಿರುವರು. ಬರಬರುತ್ತ ಈ ಮುಖ್ಯವಾದ ಉಪಾಂಗರಾಜ್ಯಗಳು ಅಂಗರಾಜ್ಯವಾಗಿ ಅಭಿವೃದ್ಧಿ ಪಡೆಯುತ್ತಿವೆ. ಮಧ್ಯ ಏಷಿಯದ ತುರುಕಮಾನಸ್ಥಾನ ಮತ್ತು ಉಸಬೇಗಸ್ಥಾನಗಳೆಂಬ ಉಪಾಂಗರಾಜ್ಯಗಳು ೧೯೨೫ರಲ್ಲೂ ತಾಜಿಕಸ್ಥಾನವೆಂಬುದು ೧೯೨೯ರಲ್ಲೂ ಈ ಸಾಮ್ರಾಜ್ಯದ ಐದು ಆರು ಏಳನೆಯ ಅಂಗರಾಜ್ಯಗಳಾಗಿ ಮಾಡಲ್ಪಟ್ಟವು. ತಾಜಿಕಸ್ಥಾನದ ರಾಜಧಾನಿಯು ಸ್ಟಾಲಿನಾಬಾದ ಎಂಬ ಹೆಸರನ್ನು ಪಡೆಯಿತು. ಈಚೆಗೆ ಮಂಗೋಲಿಯವು ಎಂಟನೆಯ ಅಂಗರಾಜ್ಯವಾಗಿ ಸೇರಿದೆ. ಟಿಬೆಟದೇಶವು ಒಂದು ಪ್ರತ್ಯೇಕದೇಶವಾಗಿರುವುದು ತಪ್ಪಿ ೧೯೨೫ರಲ್ಲಿ ಒಂದು ಉಪಾಂಗ (ಅರಾಜಕ) ರಾಜ್ಯವಾಗಿ ಮಾಡಲ್ಪಟ್ಟಿತು. ಹೀಗೆ ಬೋಲಶೆವಿಕರ ಪ್ರಾಬಲ್ಯದಿಂದ ಏಷಿಯಾದಲ್ಲಿ ಜನಜಾಗೃತಿಯು ಜತೆಗೆ, ಮುಂದೆ ಸ್ವತಂತ್ರ ಜನಾಂಗ ರಾಜ್ಯಗಳಾಗಿ ಪರಿಣಮಿಸಲು ಯೋಗ್ಯವಾದ ರಾಜ್ಯಗಳು ಸ್ಥಾಪಿತವಾಗುತ್ತ ಬರುತ್ತಿವೆ.

ತಮ್ಮ ಸಾಮ್ರಾಜ್ಯದಲ್ಲಿ ಹುಂಡುಕಟ್ಟದ ಕೈಗಾರಿಕೆಯನ್ನು ಐದು ವರ್ಷದಲ್ಲಿ ಅಭಿವೃದ್ಧಿಪಡಿಸಲು ಬಗೆದು ಬೋಲಶೆವಿಕರು ೧೯೨೮ರಿಂದ ಏಷಿಯವನ್ನು ಮುಖ್ಯ ಕಾರ್ಯಕ್ಷೇತ್ರವಾಗಿ ಮಾಡಿಕೊಂಡು ಕೆಲಸಮಾಡುತ್ತಿರುವರು. ಈ ಪಂಚ ವಾರ್ಷಿಕ ಕ್ರಮದ ಕೆಲಸವು ೧೯೩೩ಕ್ಕೆ ಮುಗಿದು ಹೋಗಿ ಏಷಿಯವು ದೊಡ್ಡ ಕೈಗಾರಿಕೆಯ ಕೇಂದ್ರವಾಗುತ್ತ ಬರುತ್ತಿದೆ.

## (೭) ಉಸ್ಮಾನಿ ತುರುಕ ರಾಜ್ಯ.

ಸ್ವಲ್ಪ ಕಾಲಕ್ಕೆ ಹಿಂದೆ ಉತ್ತರ ಆಫ್ರಿಕ, ಬಾಲ್ಕನ್ ದೇಶ, ದಕ್ಷಿಣ ಪುಷ್ಕಳ ದೇಶ, ಪಶ್ಚಿಮ ಏಷಿಯಾಗಳೆಲ್ಲವನ್ನೂ ಆಳುತ್ತ ಐರೋಪ್ಯರನ್ನು ನಡುಗಿಸುತ್ತಿದ್ದ ತುರುಕರು ೧೯೨೦ನೆಯ ಸಂಧಿಯ ಪ್ರಕಾರ ಸಕಲ ಅಧೀನ ದೇಶಗಳನ್ನೂ ಕಳೆದುಕೊಂಡು ತಮ್ಮ ಮಾತೃದೇಶದಲ್ಲಿ ಸಹ ಐರೋಪ್ಯರ ಆಧಿಪತ್ಯದಲ್ಲಿ ಅಳುವ ದುಸ್ಥಿತಿಗೆ ಇಳಿದರು. ಈ ಪರಿಣಾಮಕ್ಕೆ ಪಾಶ್ಚಾತ್ಯರ ಸಾಹಸಕ್ಕಿಂತಲೂ ತುರುಕ ಸುಲ್ತಾನರ ದುರ್ಗಣತೆಯಿಂದ ಹುಟ್ಟಿ ಬಂದ ಕ್ಷೀಣತೆಯೇ ಮುಖ್ಯ ಕಾರಣವಾಗಿತ್ತು.

ಈ ಸುಲ್ತಾನರುಗಳು ಅತ್ಯಂತ ನಿರಂಕುಶರಾಗಿ ಮನಸ್ವೀ ಆಳುತ್ತಿದ್ದರು. ರಾಜ ಪದವಿಗಾಗಿ ರಾಜವಂಶದಲ್ಲಿ ಕಲಹವೂ ಕೊಲೆಯೂ ಸದಾ ನಡೆಯುತ್ತಿದ್ದುವು. ಅಂತಃಪುರದ ಹೆಂಗಸರ ಕಿರುಕುಳವು ಸರ್ಕಾರದ ರಾಜನೀತಿಯ ಮೇಲೆ ಅಧಿಕಾರ ಮಾಡುತ್ತಿತ್ತು. ಎಷ್ಟೋ ಘಟಕರಾದ ಮಂತ್ರಿಗಳು ಯಾವಳೋ ಒಬ್ಬ ಸೂಳೆಯ ಮಾತಿನಿಂದ ನಿಷ್ಕಾರಣವಾಗಿ ಗಲ್ಲಿಗೇರಿಸಲ್ಪಟ್ಟಿರುವರು. ಪೂಜ್ಯ ಖಲೀಫ ಪದವಿಯಲ್ಲಿ ಮಂಡಿಸಿದ್ದ ಈ ಸುಲ್ತಾನರು ಅತಿ ಘೋರ ಪಾತಕಿಗಳಾಗಿದ್ದರು. ಸರ್ಕಾರದ ಹಣವೆಲ್ಲವೂ ಮಿತಿಯೂ ಲೆಕ್ಕವೂ ಇಲ್ಲದೆ ಇವರ ದುರ್ವ್ಯಯಕ್ಕೆ ಪಾಲಾಗುತ್ತಿತ್ತು. ತೆರಿಗೆಗಳಿಗೆ ಲೆಕ್ಕವೂ ವ್ಯವಸ್ಥೆಯೂ ಇಲ್ಲದೆ ಅತಿಲೋಭಿಗಳಾದ ನೌಕರರಿಂದ ವಸೂಲಾಗುತ್ತಿದ್ದುವು. ಸರಕಾರದ ಆಯವ್ಯಯಕ್ಕೆ ಲೆಕ್ಕವಿರಲಿಲ್ಲ. ನೌಕರವರ್ಗದವರಿಗೆ ಶಿಕ್ಷಣೆಗೆ ವಿಚಾರವಿರಲಿಲ್ಲ; ಯೋಗ್ಯತಾ ಪರೀಕ್ಷೆಗಳು ನಿರ್ಧಾರಕವಾಗಿರಲಿಲ್ಲ. ಕ್ರಮಾಭಿವೃದ್ಧಿಯು ಗೊತ್ತಾಗಿರಲಿಲ್ಲ. ಸಕಾಲಕ್ಕೆ ಸಂಬಳ ಕೊಡುತ್ತಿರಲಿಲ್ಲ; ಅವರಲ್ಲಿ ಮುಕ್ಕಾಲು ಪಾಲು ಜನರಿಗೆ ಅಕ್ಷರ ಸಹ ಬರುತ್ತಿರಲಿಲ್ಲ. ಮೇಲಿನವರ ಅನುಗ್ರಹದಿಂದಲೂ ನೌಕರಿ ಮಾರಾಟದಿಂದಲೂ ಮುಖಾಭಿಮಾನದಿಂದಲೂ ಇಂಥವರು ಕೆಲಸವನ್ನು ಪಡೆದು ಜನರನ್ನು ಕೊಳ್ಳೆ ಹೊಡೆಯುತ್ತಿದ್ದರು. ಗ್ರೀಕರೂ ಅರ್ಮೀನಿಯನರೂ ವಿದ್ಯಾಬುದ್ಧಿಗಳಲ್ಲಿ ಚುರುಕಾಗಿದ್ದರೂ ಅವರಿಗೆ ದೊಡ್ಡ ಹುದ್ದೆಗಳನ್ನು ಕೊಡದೆ ಕೆಲಸ ನಡೆಯುವ ಸಲುವಾಗಿ

ಮುಖ್ಯ ಮುಖ್ಯವಾದ ಗುಮಾಸ್ತೆ ನೌಕರಿಗಳನ್ನು ಕೊಟ್ಟಿದ್ದರು. ನೌಕರ ವರ್ಗದವರ ಮೇಲೆ ಸೇನೆಯವರ ಅಧಿಕಾರವು ಅಪ್ರತಿಹತವಾಗಿ ನಡೆಯುತ್ತಿತ್ತು. ಸೇನಾ ವ್ಯವಸ್ಥೆಯೂ ಹೀಗೆಯೇ ದುಃಸ್ಥಿತಿಯಲ್ಲಿತ್ತು. ಸೇನಾಧಿಕಾರಿಗಳಲ್ಲಿ ನೂರಕ್ಕೆ ೫ ಮಂದಿಗೆ ಸಹ ಅಕ್ಷರ ಬರುತ್ತಿರಲಿಲ್ಲ. ಸೈನಿಕ ಶಿಕ್ಷಣೆಯು ತೀರ ಹಿಂದುಳಿದಿತ್ತು. ಸೇನೆಗೆ ಎಷ್ಟೋ ತಿಂಗಳುಗಳವರೆಗೆ ಸಂಬಳ ದೊರೆಯುವುದು ಕಷ್ಟವಾಗುತ್ತಿತ್ತು. ಸೈನಿಕರಿಗೆ ಬಟ್ಟೆ ಬರೆ ಮೊದಲಾದ ಯಾವ ಸೌಕರ್ಯಗಳನ್ನೂ ಸರ್ಕಾರವು ಒದಗಿಸುತ್ತಿರಲಿಲ್ಲ. ಅಲ್ಲದೆ ಅವರು ಬೀಡು ಬಿಟ್ಟಿರತಕ್ಕ ಪ್ರಾಂತ್ಯದ ಜನರನ್ನು ಸುಲಿದು ಜೀವಿಸಬೇಕೆಂದು ಸರ್ಕಾರದವರೇ ವಿಧಿಸಿದ್ದರು. ದೇಶದಲ್ಲಿ ಸಂಚಾರಸೌಕರ್ಯಗಳೂ, ವಿದ್ಯಾಭ್ಯಾಸವೂ ಅಭಾವವಾಗಿದ್ದವು. ತುರ್ಕಿಲಿಪಿಯು ಅತಿ ಕ್ಲಿಷ್ಟವಾಗಿದ್ದುದರಿಂದ ದೇಶದಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳೂ ಪುಸ್ತಕಗಳೂ ಆರ್ಮೇನಿಯಾ ಅಥವಾ ಗ್ರೀಕ ಲಿಪಿಗಳನ್ನು ಬಳಸುತ್ತಿದ್ದವು. ಸಾಮ್ರಾಜ್ಯದಲ್ಲಿ ತುರುಕರು ಬಹಳ ಸ್ವಲ್ಪ ಮಂದಿ ಇದ್ದರು. ಅವರಲ್ಲಿ ಬಹು ಭಾಗದವರು ಕೃಷಿಯಿಂದ ಜೀವಿಸುತ್ತಿದ್ದರು. ಹೀಗಿದ್ದರೂ ಸಕಲ ಯುದ್ಧಗಳಲ್ಲೂ ಅವರೇ ಮುಖ್ಯವಾಗಿ ಸೇನಾಭಾರವನ್ನು ನಿರ್ವಹಿಸಬೇಕಾಗಿತ್ತು. ಯುದ್ಧ ಸೇವಾ ನಿರ್ಬಂಧವಿಲ್ಲದಿದ್ದ ಗ್ರೀಕರೂ ಆರ್ಮೇನಿಯನರೂ ದೇಶದ ಸಮಸ್ತ ವ್ಯಾಪಾರ, ಕೈಗಾರಿಕೆ, ಲೇವಾದೇವಿ, ಕುಶಲ ಕಲೆ, ಗುಮಾಸ್ತೆ ನೌಕರಿಗಳನ್ನೂ ಆಕ್ರಮಿಸಿಕೊಂಡು ಅಲ್ಪರೂ ಸಾತ್ವಿಕರೂ ಆದ ತುರುಕರನ್ನು ವಂಚಿಸಿ ಸುಲಿಗೆ ಮಾಡುತ್ತ ಮೆರೆಯುತ್ತಿದ್ದರು. ಈ ಹಿಂಸೆಯನ್ನು ಸಹಿಸಲಾರದೆ ತುರುಕರು ರೇಗಿ ಬಿದ್ದು ಈ ಗ್ರೀಕರನ್ನೂ ಆರ್ಮೇನಿಯರನ್ನೂ ಕೊಲ್ಲುತ್ತಿದ್ದರು. ಸರ್ಕಾರದವರು ಜನರಲ್ಲಿ ಭೇದಬುದ್ಧಿಯನ್ನು ಹೆಚ್ಚಿಸುತ್ತ ಸಕಲರಿಗೂ ಗೂಢಚಾರರ ಕಾವಲಿಟ್ಟು ಹಿಂಸೆಪಡಿಸುತ್ತಿದ್ದರು. ಸುಧಾರಣೆಯ ಪಾತಿತ್ಯದವರು ಭಯಂಕರವಾದ ಆಪತ್ತಿಗೊಳಗಾಗುತ್ತಿದ್ದರು.

ಈ ಮಧ್ಯೆ ಯುರೋಪ್ಯರು ತಮ್ಮ ಕುಟಿಲ ಸಂಧಿಗಳ ಮೂಲಕ ಈ ರಾಜ್ಯದಲ್ಲಿ ಸದ್ದಿಲ್ಲದೆ ತಮ್ಮ ಅಧಿಕಾರ ಗೂಡಾರವನ್ನು ವಿಸ್ತಾರವಾಗಿ ಹರ

ಡಿಕೊಂಡಿದ್ದರು. ೧೫೩೫ರಲ್ಲಿ ಫ್ರೆಂಚರು ಇಲ್ಲಿ ರಾಜ್ಯಾತೀತಪ್ರಭುತ್ವಾಧಿಕಾರವನ್ನೂ ಇಲ್ಲಿರುವ ಕ್ರೈಸ್ತಸಂಸ್ಥೆಗಳ ಉಸ್ತುವಾರಿಯನ್ನೂ ಕ್ರೈಸ್ತ ಜನರ ಯೋಗಕ್ಷೇಮದ ಪೋಷಣೆಯನ್ನೂ ಪಡೆದರು. ಇಂಥ ಅಧಿಕಾರಗಳು ಉಳಿದ ಪಾಶ್ಚಾತ್ಯರಿಗೂ ಕ್ರಮವಾಗಿ ಕೊಡಲ್ಪಟ್ಟವು. ಬಹು ಮಂದಿ ವಿದೇಶೀಯರು ಇಲ್ಲಿನ ಜಮೀನ್ದಾರಿಗಳನ್ನೆಲ್ಲ ತಮ್ಮ ಸ್ವತ್ತಾಗಿ ಮಾಡಿಕೊಂಡಿದ್ದರು. ಪ್ರತಿಯೊಂದು ಪಾಶ್ಚಾತ್ಯ ರಾಜ್ಯವೂ ತನ್ನ ಪ್ರಜೆಗಳ ಸೌಕರ್ಯಕ್ಕಾಗಿ ಈ ದೇಶದಲ್ಲಿ ದೊಡ್ಡ ಅಂಚೆಇಲಾಖೆಯನ್ನು ಸ್ಥಾಪಿಸಿಕೊಂಡಿದ್ದಿತು. ಬಹು ಮಂದಿ ದೇಶೀಯರೂ ಇವುಗಳನ್ನೇ ಉಪಯೋಗಿಸುತ್ತಿದ್ದರು. ಈ ವಿದೇಶೀ ಅಂಚೆಗಳನ್ನು ತಪ್ಪಿಸಬೇಕೆಂದು ೧೯೦೧ರಲ್ಲಿ ನಡೆದ ಪ್ರಯತ್ನವು ವಿಫಲವಾಯಿತು. ಕ್ರೈಸ್ತಮತಪ್ರಚಾರಿಗಳು ಸರ್ವತ್ರ ತಮ್ಮ ಕಾರ್ಯಾಲಯಗಳನ್ನೂ ವಿದ್ಯಾಲಯಗಳನ್ನೂ ಸ್ಥಾಪಿಸಿ ಬಹು ಮಂದಿ ಗ್ರೀಕರನ್ನೂ ಆರ್ಮೀನಿಯನರನ್ನೂ ತಮ್ಮ ವಶಪಡಿಸಿಕೊಂಡು ದೇಶಾಭಿಮಾನವನ್ನು ನಾಶ ಪಡಿಸುತ್ತಿದ್ದರು. ಪಾಶ್ಚಾತ್ಯರು ತುರುಕರ ಪ್ರಜೆಗಳಾದ ಗ್ರೀಕ ಆರ್ಮೀನಿಯನರು ತಮ್ಮ ಆಶ್ರಿತರೆಂದು ಸಾರುತ್ತ ತುರುಕರು ಅವರ ತಂಟೆಗೆ ಹೋಗದಂತೆ ತಡೆಯುತ್ತ, ಕ್ರಮವಾಗಿ ಅವರನ್ನು ತುರುಕರ ನ್ಯಾಯಶಾಲೆಗಳ ಅಧಿಕಾರದಿಂದ ತಪ್ಪಿಸುತ್ತ, ರಾಜ್ಯದಲ್ಲಿ ರಾಜದ್ರೋಹವನ್ನೂ ದಂಗೆಯನ್ನೂ ಹೆಚ್ಚಿಸುತ್ತಿದ್ದರು. ತುರುಕರು ಸರಕಾರದಲ್ಲಿ ಕುಶಲವೂ ನಿಪುಣವೂ ಆದ ಹುದ್ದೆಗಳಿಗೆ ಯುರೋಪ್ಯರು ಯೋಗ್ಯರೆಂದು ಅವರನ್ನು ನೇಮಿಸುವ ಪದ್ಧತಿಯನ್ನು ಸುರುವು ಮಾಡಿದ್ದರಿಂದ ಪೋಲೀಸು, ರೈಲು, ಗಣಿ, ಕೈಗಾರಿಕೆ, ಸೇನೆ ಮೊದಲಾದ ಇಲಾಖೆಗಳ ಉನ್ನತಾಧಿಕಾರಗಳೆಲ್ಲವೂ ವಿದೇಶೀಯರ ಪಾಲಾಗಿ ಅವರು ಅರ್ಥ ಸರ್ಕಾರವನ್ನು ತಮ್ಮ ವಶಪಡಿಸಿಕೊಂಡು ಬಿಟ್ಟಿದ್ದರು. ರೈಲು ಮತ್ತು ಗಣಿಯ ಉದ್ಯೋಗಗಳು ದೀರ್ಘಕಾಲದ ಗುತ್ತಿಗೆಯ ಮೂಲಕ ವಿದೇಶೀಯರ ಸ್ವಾಮ್ಯವಾಗಿದ್ದವು. ೧೮೫೪ರಲ್ಲಿ ಸುಲ್ತಾನನು ಯುರೋಪ್ಯರಲ್ಲಿ ವಿಪರೀತ ಸಾಲ ಮಾಡಿದನು. ಈ ಸಾಲವು ಬರಬರುತ್ತ ಹೆಚ್ಚುತ್ತ ಹೋಯಿತು. ಈ ಸಾಲಕ್ಕೆ ಬಡ್ಡಿಯನ್ನು ಕ್ರಮವಾಗಿ ಸಲ್ಲಿಸಲು ತಕ್ಕ ವಿಚಾರ ಮಾಡಬೇಕೆಂದು ಈ

ವಿದೇಶೀ ಸಾಲಗಾರರು ಗಲಭೆ ಹೆಚ್ಚಿದ್ದರಿಂದ, ೧೮೮೧ರಲ್ಲಿ ಈ ಸಾಲಕ್ಕಾಗಿ, ರಾಜ್ಯದ ಆರು ಮುಖ್ಯ ತೆರಿಗೆಗಳ ಆಡಳಿತವು ವಿದೇಶೀ ಅಧಿಕಾರಿವರ್ಗ ಸಂಘಟಿತವಾದ ಒಂದು ಸಮಿತಿಯನ್ನು ಸರ್ಕಾರದಲ್ಲಿ ಒಂದು ಇಲಾಖೆಯಾಗಿ ಕಲ್ಪಿಸಿ, ಅದಕ್ಕೆ ವಹಿಸಲ್ಪಟ್ಟಿತು. ಈ ಸಾಲದ ಇಲಾಖೆಯು ದೇಶದಲ್ಲಿ ಸ್ವತಂತ್ರವಾಗಿ ಅಧಿಕಾರ ಮಾಡತೊಡಗಿತು.

೧೮೩೯ಕ್ಕೆ ಹಿಂದೆ ನಡೆದ ಸುಧಾರಣೆಯ ಅಲ್ಪ ಸ್ವಲ್ಪ ಪ್ರಯತ್ನಗಳೊಂದೂ ಫಲಕ್ಕೆ ಬರಲಿಲ್ಲ. ರಷೀದ್ ಪಾಷಾ ಎಂಬ ಮಂತ್ರಿಯು ೧೮೩೯ರಿಂದ ೧೮೫೮ರ ಮಧ್ಯೆ ಈ ರಾಜ್ಯದ ಅನ್ಯಾಯವಾದ ಶಾಸನಗಳನ್ನೂ ತೆರಿಗೆಗಳನ್ನೂ ಸುಲಿಗೆಯನ್ನೂ ಸ್ವಲ್ಪ ದೂರ ತಪ್ಪಿಸಿದನು. ೧೮೫೬ರಲ್ಲಿ ಪ್ಯಾರೀಸಿನ ಸಂಧಿಯಲ್ಲಿ ವಿದೇಶೀಯರು ತುರುಕ ಸರ್ಕಾರಕ್ಕೂ ಅವರ ಪ್ರಜೆಗಳಿಗೂ ಮಧ್ಯೆ ಪ್ರವೇಶಿಸಕೂಡದೆಂಬ ಸಂಕೇತ ಹುಟ್ಟಿತು. ೧೮೬೮ರಲ್ಲಿ ಒಂದು ಸೇನಾ ಶಿಕ್ಷಾಶಾಲೆಯು ಕಲ್ಪಿತವಾಯಿತು. ೧೮೭೬ರಲ್ಲಿ ಅಧಿಕಾರದಲ್ಲಿದ್ದ ಮಿಥತ್ ಪಾಷಾ ಎಂಬ ಮಂತ್ರಿಯು ಸಾಂಕುಶ ರಾಜ್ಯಭಾರವನ್ನು ಕಲ್ಪಿಸಲು ಬಗೆದು, ಸುಲ್ತಾನ ಅಬ್ದುಲ್ ಅಜೀಜನನ್ನು ತಳ್ಳಿಸಿ, ಅವನ ಮಗ ಮುರಾದನಿಗೆ ಪಟ್ಟಗಟ್ಟಿ, ಒಂದು ಪಾರ್ಲಿಮೆಂಟನ್ನು ಸ್ಥಾಪಿಸಿದನು. ಆದರೆ ಮುರಾದನಿಗೆ ಕೆಲ ತಿಂಗಳಲ್ಲೇ ಹುಚ್ಚು ಹಿಡಿದು, ಅವನ ತಮ್ಮನಾದ ಅಬ್ದುಲ್ ಹಾಮಿದನು ಪಟ್ಟಕ್ಕೆ ಬಂದು, ಈ ಮಂತ್ರಿಯನ್ನು ಓಡಿಸಿ, ಅವನ ಸುಧಾರಣೆಗಳನ್ನು ನಾಶ ಮಾಡಿದನು. ಇವನ ಹಿಂಸೆಯನ್ನು ತಡೆಯಲಾರದೆ ಆರ್ಮೀನಿಯನರೂ ಅರಬರೂ ತಿರುಗಿ ಬಿದ್ದರು. ಅಬ್ದುಲ್ ಹಾಮಿದನು ೧೮೯೪-೯೬ರಲ್ಲಿ ಆರ್ಮೀನಿಯದಲ್ಲಿ ೨-೩ ಲಕ್ಷ ಜನರನ್ನು ನರಮೇಧಮಾಡಿಸಿ ಕೊಲ್ಲಿಸಿದನು. ಬಾಲ-ತುರುಕ ಪಕ್ಷದವರು ಪ್ಯಾರೀಸ ನಗರದಿಂದ ರಹಸ್ಯವಾಗಿ ಚಳವಳಿ ನಡೆಸಿ, ೧೯೦೮ರಲ್ಲಿ ಸೇನೆಯನ್ನು ವಶಪಡಿಸಿಕೊಂಡು, ಸರ್ಕಾರವನ್ನು ಹಿಡಿದು, ಅಬ್ದುಲ್ ಹಾಮಿದನನ್ನು ಸಿಂಹಾಸನದಿಂದ ತಳ್ಳಿ, ಸಾಂಕುಶ ರಾಜ್ಯಭಾರವನ್ನು ಸ್ಥಾಪಿಸಲು ಪ್ರಯತ್ನಪಟ್ಟರು. ರಾಜ್ಯಭಾರದಲ್ಲಿ ಇವರಿಗೆ ಅನುಭವವಿರಲಿಲ್ಲ. ಇವರ ತುರಾಣ ಐಕ್ಯಾಭಿಮಾನದಿಂದ ಅರಬರೂ

ಬಾಳ್ವನವೂ ತಿರುಗಿ ಬಿದ್ದರು. ಪಾಶ್ಚಾತ್ಯರು ಇವರನ್ನು ಬಹಿರಂಗವಾಗಿ ವಿರೋಧಿಸಿ ಇವರ ಸುಧಾರಣೆಯ ಪ್ರಯತ್ನಗಳನ್ನು ಮುರಿದರು. ೧೯೧೨ ರಿಂದ ೧೯೧೩ರವರೆಗೆ ತುರುಕರು ಯುದ್ಧಕ್ಕೆ ಸಿಕ್ಕಿ ಭಂಗಪಟ್ಟು ದೀನರಾದರು. ತುರುಕರ ಸುಲ್ತಾನನೂ ಅವನ ಕೆಳಗಿನ ಸರಕಾರದವರೂ ೧೯೨೦ರಲ್ಲಿ ಪಾಶ್ಚಾತ್ಯರು ವಿಧಿಸಿದ ಸಂಧಿಯನ್ನು ನಿರ್ವಾಹವಿಲ್ಲದೆ ಒಪ್ಪಿದರು.

ಆದರೆ ಮುಸ್ತಫಾ ಕಮಾಲನು ಈ ಸಂಧಿಯನ್ನು ನಿರಾಕರಿಸಿ, ದಂಗೆ ಎಬ್ಬಿಸಿ ಅಂಗೋರದಲ್ಲಿ ಒಂದು ಸ್ವತಂತ್ರ ಜನಾಂಗಸರಕಾರವನ್ನು ಏರ್ಪಡಿಸಿ, ಪಾಶ್ಚಾತ್ಯರನ್ನು ಸೋಲಿಸಿ, ದೇಶದಿಂದ ಹೊರಡಿಸಿದನು (೧೯೨೨). ಇವನ ವಿಜಯದ ಕಥೆಯನ್ನು ಇಲ್ಲಿ ವಿವರಿಸಲಾಗುವುದಿಲ್ಲ. ಪಾಶ್ಚಾತ್ಯರು ಲೌಸಾನ ಸಂಧಿ (೧೯೨೩-೪) ಯ ಪ್ರಕಾರ ತಮ್ಮ ರಾಜ್ಯಾತೀತಾಧಿಕಾರ, ಅಂಚೆಮನೆ, ವಿದ್ಯಾಶಾಲೆಗಳನ್ನೆಲ್ಲ ಬಿಡಲು ಒಪ್ಪಿದರು. ಹಿಂದಣ ಸಾಮ್ರಾಜ್ಯವು ಶಕಲವಾಗಿ ಒಡೆದು ಹೋಗಿದ್ದುದರಿಂದ ಅದರ ಸಾಲವು ಈ ಎಲ್ಲಾ ಭಾಗಗಳಿಗೂ ಹಂಚಲ್ಪಟ್ಟಿತು. ತುರ್ಕಿಯ ಸರಕಾರದಲ್ಲಿ ವಿದೇಶೀಯರ ಪ್ರಾಬಲ್ಯವು ಕೊನೆಗಂಡಿತು. ಗ್ರೀಕರೂ ತುರುಕರೂ ತಮ್ಮ ತಮ್ಮ ರಾಜ್ಯದಿಂದ ಜನಪರಿವರ್ತನೆ ಮಾಡಿಕೊಳ್ಳಲು ಏರ್ಪಾಡಾಯಿತು. ತಮ್ಮ ರಾಜ್ಯದ ಅಲ್ಪಸಂಗಡಗಳಿಗೂ ಪರಮತೀಯರಿಗೂ ಸ್ವಾಧೀನತೆಯನ್ನು ಕೊಡಲು ತುರುಕರು ಒಪ್ಪಿದರು. ಹೀಗೆ ತುರುಕರಿಗೆ ಪರಕುಲಗಳ ಪ್ರಜೆಗಳೆಲ್ಲರೂ ಕೈತಪ್ಪಿ. ತಮ್ಮ ಕುಲದವರೇ ಏಕಾಯತ್ತವಾಗಿರತಕ್ಕ ಅಚ್ಚುಕಟ್ಟಾದ ಒಂದು ಜನಾಂಗ ರಾಜ್ಯವು ದೊರೆಯಿತಲ್ಲದೆ ಹಲವು ಶತಮಾನಗಳಿಂದ ಪಾಶ್ಚಾತ್ಯರು ಬಿಗಿದಿದ್ದ ದಾಸ್ಯದ ಸಂಕೋಲೆಗಳೆಲ್ಲಾ ಕಿತ್ತು, ಹಿಂದೆ ಯಾವಾಗಲೂ ಅನುಭವಿಸದಿದ್ದ ಸ್ವಾತಂತ್ರ್ಯ ಭಾಗ್ಯವು ಪ್ರಾಪ್ತವಾಯಿತು.

ಹತ್ತು ವರ್ಷಕಾಲದ ಬಿಡುವಿಲ್ಲದ ಯುದ್ಧದಿಂದ ದೇಶದ ಉದ್ಯೋಗಗಳೆಲ್ಲಾ ಹಾಳಾಗಿ, ಸೇನೆಗೆ ಸೇರಲು ಯೋಗ್ಯತೆಯುಳ್ಳ ಪುರುಷರೆಲ್ಲರೂ ಹತರಾಗಿ ಎಲ್ಲೆಲ್ಲೂ ಗೋಳು ತುಂಬಿತ್ತು. ಆದರೆ ಧೈರ್ಯ ಸೋಲಾ

ಧಗಳನ್ನು ಸೈತಾನನ ಸಾಧನಗಳಿಂದ ನಿರೋಧಿಸುವ ಮೌಢ್ಯಾವಸ್ಥೆಯಲ್ಲಿದ್ದರು. ರಾಜಧಾನಿಯೆನಿಸಿದ ಅಂಗೋರದ ಜನಸಂಖ್ಯೆ ಹಠಾತ್ತಾಗಿ ಹೆಚ್ಚಿ ಜನರಿಗೆ ವಸತಿಯಿಲ್ಲದೆ ಹಿಂಸೆಯಾಗಿತ್ತು. ಈ ರಾಜಧಾನಿಯಲ್ಲಿ ಸಹ ವಿದ್ಯುದ್ದೀಪ, ನಲ್ಲಿ, ಭೋಜನಶಾಲೆ, ರಸ್ತೆ ಮುಂತಾದವುಗಳಾವುದೂ ಇರಲಿಲ್ಲ. ಸುಲ್ತಾನನೂ ಖಿಲಾಫತ್ತು ಪದವಿಯೂ ಇದ್ದುದರಿಂದ ಹಿಂದಣ ಕಾಲದ ಅಪ್ರಾಮಾಣಿಕವಾದ ನೌಕರ ವರ್ಗವು ಇನ್ನೂ ಅಧಿಕಾರ ನಡೆಸುತ್ತಿತ್ತು. ರಾಜ್ಯದಲ್ಲಿ ಕೋಶವು ಬರಿದಾಗಿತ್ತು. ಕುಶಲವಾದ ಉದ್ಯೋಗಗಳನ್ನು ಸರ್ವಮಾನ್ಯವಾಗಿ ನಡೆಸುತ್ತಿದ್ದ ಗ್ರೀಕರೂ ಅರ್ಮೀನಿಯನರೂ ಈಗ ಗಡಿಪಾರಾದ್ದರಿಂದ ಅವರ ಸ್ಥಾನಕ್ಕೆ ತುರುಕರಿಗೆ ಹೊಸದಾಗಿ ಶಿಕ್ಷಣ ಕೊಟ್ಟು ತರಬೇಕಾಗಿತ್ತು. ಪ್ರಗತಿಯ ವೈರಿಗಳ ಗುಂಪು ಅಧಿಕವಾಗಿತ್ತು. ಅನ್ವರಪಾಷಾ ಮೊದಲಾದ ಮುಖಂಡರು ಆ ಕಾಲದಲ್ಲಿ ಮತ್ಸರವುಳ್ಳವರಾಗಿದ್ದರಲ್ಲದೆ ತುರಾಣಸಮಷ್ಟಿಗಾಗಿ ಚಳವಳಿ ನಡೆಸುತ್ತಿದ್ದರು. ದೇಶವನ್ನು ಸುಧಾರಿಸಿ ಅಭಿವೃದ್ಧಿಗೆ ತರಲು ಕಮಾಲನಿಗೆ ಹೀಗೆ ಜನಧನ ಸಹಾಯವು ಏನೇನೂ ಇರಲಿಲ್ಲ. ಆದರೂ ಅತ್ಯಲ್ಪ ಕಾಲದಲ್ಲಿ ಇವನು ಸಕಲ ವಿರೋಧಗಳನ್ನು ಪರಿಹರಿಸಿ ದೇಶವನ್ನು ಅತ್ಯಂತ ಪ್ರಗತಿಕರವಾಗಿ ಮಾಡಿದನು.

ಗ್ರೀಸಿನಲ್ಲಿದ್ದ ತುರುಕರೂ ಮುಸಲ್ಮಾನರೂ ತುರ್ಕಿಗೂ, ಇಲ್ಲಿದ್ದ ಗ್ರೀಕರೂ ಅರ್ಮೀನಿಯನರೂ ಅಲ್ಲಿಗೂ ಇತರ ಕಡೆಗೂ ಪರಿವರ್ತನೆಯಿಂದ ಕಳುಹಿಸಲ್ಪಟ್ಟುದರಿಂದ ತುರ್ಕಿಯಲ್ಲಿ ಕುಲ, ಭಾಷೆ, ಮತ ಇವು ಏಕರೂಪವಾಗಿರಲು ಅನುಕೂಲವಾಯಿತು. ೧೯೩೫ನೆಯ ಜನಗಣತಿಯ ಪ್ರಕಾರ ತುರ್ಕಿಯಲ್ಲಿ ೧೬೦ ಲಕ್ಷ ಜನರಿರುವಂತೆ ಗೊತ್ತಾಯಿತು. ತುರುಕರು ಹಳೆಯ ಸಂಧಿಗಳನ್ನು ಹರಿದು ಹಾಕಿ ಪ್ರಪಂಚದ ಮುಖ್ಯ ರಾಜ್ಯಗಳೊಡನೆ ಸ್ವತಂತ್ರವಾಗಿ ಸಮಾನಸ್ಕಂಧರಂತೆ ಸಂಧಿಗಳನ್ನು ಮಾಡಿಕೊಳ್ಳುತ್ತಿರುವರು. ಇವರ ರಾಜ್ಯದಲ್ಲಿ ವಿದೇಶೀಯರ ಉಚ್ಛೃಂಖಲತೆಯು ನಿರ್ನಾಮವಾಗುತ್ತ ಬಂದಿದೆ. ವಿದೇಶೀಯರ ಬ್ಯಾಂಕುಗಳು, ರೈಲುಗಳು, ವ್ಯಾಪಾರ ಸಂಸ್ಥೆಗಳು, ಶಾಲೆಗಳು ಇವೆಲ್ಲವೂ ತುರುಕ ಸರ್ಕಾ

ದಷ್ಟು ಹೇಳಿದಂತೆ ಕೇಳುತ್ತ, ತಮ್ಮ ನೌಕರಿಗೆ ತುರುಕರನ್ನೇ ತಂದುಕೊಂಡು ತುರ್ಕಿ ಭಾಷೆಯನ್ನು ಉಪಯೋಗಿಸಬೇಕೆಂದು ನಿರ್ಬಂಧಗಳು ಹುಟ್ಟಿವೆ. ಇದರಿಂದ ಆ ಭಾಷೆಯ ಅಭಿವೃದ್ಧಿಯೂ ವಿದೇಶಿಯರ ಪ್ರಾಬಲ್ಯನಾಶನವೂ ಲಭಿಸುತ್ತವೆ. ೧೯೩೦ರಿಂದ ವಿದೇಶಿಯರು ಇಲ್ಲಿ ಶಾಲೆಗಳನ್ನು ಇಟ್ಟು ನಡೆಸುವ ಅಧಿಕಾರವು ತಪ್ಪಿರುವದು. ವಿದೇಶಿಯರಿಗೆ ಹೊಸದಾಗಿ ಯಾವ ಮಾನ್ಯಾಧಿಕಾರಗಳನ್ನೂ ಕೊಡರು, ಹಿಂದೆ ಅವರು ಪಡೆದಿದ್ದವುಗಳನ್ನು ಕ್ರಮವಾಗಿ ಹಿಂದಕ್ಕೆ ಪಡೆಯಲು ತುರುಕರು ಪ್ರಯತ್ನಪಡುತ್ತಿರುವರು. ಸರ್ವದಾ ದಂಗೆಯೆಬ್ಬಿಸುತ್ತಿರುವ ಕುರುಕ ಜನರನ್ನು ಅಂಕೆಗೆ ತಂದು ದೇಶವನ್ನು ಉದ್ಧರಿಸುವುದಕ್ಕಾಗಿ ತುರುಕರು ಅಂಗೋರದಿಂದ ಕುರುದಸ್ಥಾನಕ್ಕೆ ೭೦೦ ಮೈಲುಗಳ ರೈಲನ್ನು ಸರಕಾರದವರೇ ಹಾಕಿಸುವರು. ದೇಶಾಭಿವೃದ್ಧಿ ಕಾರ್ಯಕ್ಕೆ ಪರದೇಶಿಯರ ಸಹಾಯವನ್ನು ಬಯಸಲು ತುರುಕರು ಅಸಮ್ಮತರಾಗಿರುವರು.

ತುರ್ಕಿಯು ೧೯೨೨ರಲ್ಲಿ ಅರಾಜಕ ಪ್ರಭುತ್ವದಲ್ಲಿದ್ದಿತು. ೧೯೨೪ರಲ್ಲಿ ಕಮಾಲನು ಖಿಲಾಫತ್ತನ್ನು ರದ್ದು ಮಾಡಿ ತನ್ನ ಸರಕಾರವನ್ನು ಶುದ್ಧ ಲೌಕಿಕ ಸಂಸ್ಥೆಯಾಗಿ ಮಾಡಿದನು. ದೇಶದಲ್ಲಿ ಸರ್ವಪ್ರಜಾಸಮ್ಮತದಿಂದ ಆರಿಸಲ್ಪಡುವ ಜಿಲ್ಲಾ ಪ್ರತಿನಿಧಿಗಳು, ೩೭೦ ಮಂದಿ ಪ್ರತಿನಿಧಿಗಳುಳ್ಳ ಒಂದು ಜನಾಂಗ ಸಭೆಯನ್ನು ಚುನಾಯಿಸುವರು. ಈ ಸಭೆಯು ನಾಲ್ಕು ವರ್ಷಕ್ಕೊಂದಾವರ್ತಿ ರಾಜ್ಯಾಧ್ಯಕ್ಷನನ್ನು ಆರಿಸುವುದು. ಈ ಸಭೆಗೆ ಜವಾಬ್ದಾರಿ ಹೊತ್ತ ಮಂತ್ರಿಮಂಡಲವು ದೇಶವನ್ನು ಸಾಂಘಿಕವಾಗಿ ಆಳುವುದು. ಈಗ ರಾಜ್ಯಭಾರವು ಸ್ವಾವಲಂಬಿತತೆಯಿಂದಲೂ ದಕ್ಷತೆಯಿಂದಲೂ ನಡೆಯುತ್ತಿದೆ. ಆಯವ್ಯಯದ ಆಡಳಿತವು ಒಪ್ಪವಾಗಿಯೂ ಬಿಗಿಯಾಗಿಯೂ ಏರ್ಪಟ್ಟಿದೆ. ಸರಕಾರವು ಬೋಲಶೆವಿಕ್ ಮತವಾದಿಗಳನ್ನೂ ಕಮಾಲನ ಮೇಲೆ ಕುಟಿಲ ಸಂಧಿ ನಡೆಸಿದವರನ್ನೂ ಅತಿಕ್ರೂರವಾಗಿ ಶಿಕ್ಷಿಸಿದರೂ ೧೯೩೦ರಲ್ಲಿ ರಾಜದ್ರೋಹಶಾಸನವನ್ನು ನಿವರ್ತಿಸಿ ಹದಿನೈದುಸಾವಿರ ಅಪರಾಧಿಗಳನ್ನು ಮುಕ್ತಮಾಡಿತು.

ದೇಶದಲ್ಲಿ ಸಾರ್ವಜನಿಕ ನಿರ್ಬಂಧ ವಿದ್ಯಾಭ್ಯಾಸವು ನಡೆಯುತ್ತಿದೆ. ತುರ್ಕಿ ಭಾಷೆಯು ದಿನೇ ದಿನೇ ಪ್ರಾಬಲ್ಯವನ್ನು ಪಡೆಯುತ್ತಿದೆ. ತುರುಕರು ವ್ಯಾಪಾರ ಕೈಗಾರಿಕೆಗಳಲ್ಲಿ ಅಶಿಕ್ಷಿತರಾಗಿದ್ದುದರಿಂದ ಸರ್ಕಾರವು ದೊಡ್ಡ ಸಹಕಾರ ಸಂಘಗಳನ್ನೂ ಆರ್ಥಿಕ ಶ್ರೇಣಿಸಂಘ (Gilds) ಗಳನ್ನೂ ಕಲ್ಪಿಸಿ ಈ ಉದ್ಯೋಗಗಳನ್ನು ನಡೆಸಲಾರಂಭಿಸಿದೆ.

ಕಮಾಲನು ಬಹುಪತ್ನಿವಿವಾಹ, ಗೋಷಾ ಪದ್ಧತಿಗಳನ್ನು ನಿಷೇಧಿಸಿ, ಸ್ತ್ರೀಯರಿಗೆ ಸಕಲ ನೌಕರಿಗೂ ಸೇರಲು ಪುರುಷರಷ್ಟೇ ಸ್ವಾತಂತ್ರ್ಯವನ್ನು ಕಲ್ಪಿಸಿರುವನು. ಇಲ್ಲಿನ ಸೇನೆಯಲ್ಲಿ ೧೯೩೫ರಲ್ಲಿ ಇಬ್ಬರು ಸ್ತ್ರೀ-ಕರ್ನಲ್‌ಗಳೂ ೧೧೦ ಸ್ತ್ರೀ ಅಧಿಕಾರಿಗಳೂ ಇದ್ದರು. ೧೯೩೦ರಲ್ಲಿ ೯ ಜನ ಸ್ತ್ರೀ ನ್ಯಾಯಾಧೀಶರಿದ್ದರು. ಸ್ತ್ರೀಯರು ಪಾಶ್ಚಾತ್ಯರಂತೆ ಉಡುಪು ಧರಿಸಬೇಕೆಂದು ವಿಧಿಗಳು ಹುಟ್ಟಿವೆ. ವಿವಾಹವಾಗಬೇಕಾದ ವಧೂವರರು ವೈದ್ಯಪರೀಕ್ಷೆ ಮಾಡಿಸಿಕೊಂಡು ವೈದ್ಯರ ಸಮ್ಮತಿ ಪಡೆಯಬೇಕೆಂಬ ನಿರ್ಬಂಧವುಂಟಾಗಿದೆ.

ತುರುಕರು ತಮ್ಮ ಸ್ವದೇಶೀ ಟೋಪಿಯನ್ನೂ ಉಡುಪನ್ನೂ ಬಿಟ್ಟು ಪಾಶ್ಚಾತ್ಯರ ಉಡುಪನ್ನು ಧರಿಸಬೇಕೆಂದೂ ಪಾಶ್ಚಾತ್ಯರಂತೆ ಹೆಸರುಗಳನ್ನಿಟ್ಟುಕೊಳ್ಳಬೇಕೆಂದೂ ಶಾಸನಗಳು ಹುಟ್ಟಿವೆ. ಪಾಶ್ಚಾತ್ಯರ ಸಂಖ್ಯಾಂಗ ಗಣಿತಾಂಕ, ಲಿಪಿಗಳು ಅಂಗೀಕರಿಸಲ್ಪಟ್ಟಿವೆ. ಸಾಲಕ್ಕೆ ಸರಿಗೆ ಬಾಕಿನ ಪದ್ಧತಿಯನ್ನು ತುರುಕರು ತಪ್ಪಿಸಿರುವರು (೧೯೩೪).

ರಾಜ್ಯದಲ್ಲಿ ಸಕಲ ಮತಗಳೂ ಸಮಾನವೆಂದು ಸಾರಲ್ಪಟ್ಟಿವೆ. ಕುರಾನು ತುರ್ಕಿಗೆ ಪರಿವರ್ತಿತವಾಗಿರುವುದಲ್ಲದೆ ನಮಾಜಿನಲ್ಲಿ ಅರಬಿ ಭಾಷೆಗೆ ಪ್ರತಿಯಾಗಿ ತುರುಕ ಭಾಷೆಯನ್ನೇ ಉಪಯೋಗಿಸಬೇಕೆಂದು ಶಾಸನ ಹುಟ್ಟಿದೆ (೧೯೩೧). ದೇವರ ಹೆಸರಿನಲ್ಲಿ ಪ್ರಮಾಣ ಮಾಡಿಸುವುದೂ, ಮಸೀದಿಗೆ ಹೋಗುವಾಗ ಜೋಡನ್ನು ಹೊರಗೆ ಬಿಡುವುದೂ ನಿಷೇಧಿಸಲ್ಪಟ್ಟು ನಮಾಜಿನ ಕಾಲದಲ್ಲಿ ಕೂತಲು ಕುರ್ಚಿಗಳು ಹಾಕಿಸಲ್ಪಟ್ಟಿವೆ. ಪಾಶ್ಚಾತ್ಯರ ಗುಡಿಗಳಂತೆ ನಮಾಜಿನ ಕಾಲದಲ್ಲಿ ಮಸೀದಿಗಳಲ್ಲಿ ವಾದ್ಯಗಾನವು ಏರ್ಪಟ್ಟಿದೆ.

ಹೀಗೆ ಮುಸ್ತಫಾ ಕಮಾಲನ ಸಾಹಸವು ತುರುಕರ ಸ್ವಾತಂತ್ರ್ಯವನ್ನು ಉಳಿಸಿದುದರ ಜತೆಗೆ ಅವರನ್ನು ಪೃಥಕ್ವಾದ ಜನಾಂಗರಾಜ್ಯವಾಗಿಯೂ ಪ್ರಗತಿಪರರಾದ ಜನ ಕುಲವಾಗಿಯೂ ಮಾರ್ಪಡಿಸಿದೆ. ತುರುಕರ ಅಭ್ಯುದಯವು ಏಷಿಯಾಖಂಡಕ್ಕೆಲ್ಲಾ ಉದಾಹರಣೆಯಾಗಿದೆ.

---

# ೮ನೆಯ ಅಧ್ಯಾಯ

## ಶ್ಯಾಮಕ ಜಗತ್ತು.

### (೧) ಅಬಿಸೀನಿಯಾ.

ನೋಹ ಎಂಬ ಪುರಾಣ ಪುರುಷನ ಶಾಮು (Sham) ಹಾಮು (Ham) ಯೂಫೆತ (Japhet) ಎಂಬ ಮೂರು ಮಕ್ಕಳಿಂದ ಲೋಕದ ಮನುಷ್ಯ ಕುಲವೆಲ್ಲವೂ ಹುಟ್ಟಿ ಬೆಳೆದಿದೆ ಎಂದು ಬೈಬಲವು ತಿಳಿಸುತ್ತದೆ. ಶ್ಯಾಮನ ವಂಶೀಯರು ಸೆಮಿಟಿಕರು ಅಥವಾ ಶ್ಯಾಮಕರು. ಉತ್ತರ ಆಫ್ರಿಕದ ಜನರು ಹಾಮನ ವಂಶದ ಹಾಮಕ ಕುಲ (Hammetic) ದವರು. ಹೆಸರಿನ ಕಥೆ ಹೇಗಿದ್ದರೂ, ಅರಬರೂ ಯಹೂದ್ಯರೂ ಅಬಿಸೀನಿಯನರೂ ಒಂದೇ ಕುಲಕ್ಕೆ ಸೇರಿದವರೆಂಬುದು ನಿಜ. ಪ್ರಾಚೀನ ಕಾಲದ ಸುಮೇರು, ಬಾಬಿಲ, ಅಸುರ, ಫಿನಿಶ ದೇಶಗಳವರೂ ಈ ಕುಲದವರೆಂದು ಕೆಲವರು ಹೇಳುವರು. ದ್ರಾವಿಡರು ಇವರನ್ನು ಅನೇಕ ವಿಷಯಗಳಲ್ಲಿ ಹೋಲುವರು. ಶ್ಯಾಮಕ ಕುಲಕ್ಕೆ ಅರಬ ದೇಶವು ಮಾತೃಸ್ಥಾನವೆಂದು ಪಂಡಿತರು ಹೇಳುವರು.

ಅಬಿಸೀನಿಯಾ ದೇಶದಲ್ಲಿ ಹಿಂದೆ ಒಂದು ಹಿಂದೂ ವಂಶವು ಆಳುತ್ತಿತ್ತು. ಕ್ರಿಸ್ತ ಮತ ಹುಟ್ಟಿದ ಸ್ವಲ್ಪ ಕಾಲದಲ್ಲೇ ಈ ದೇಶದವರು ಆ

ಮತವನ್ನು ಅವಲಂಬಿಸಿದನು. ಕಾನಸ್ಟಾಂಟಿನೋಪಲ್ಲಿನಲ್ಲಿ ಆಳಿದ ಪೂರ್ವ ರೋಮಕ ಸಾಮ್ರಾಜದಲ್ಲಿ ೧೦೦ ಮಂದಿ ಆರ್ಮೇನಿಯನರಾಗಿದ್ದರು. ಈಗಿನ ಕಾಲದಲ್ಲಿ ಆರ್ಮೇನಿಯಾ ದೇಶದ ಉತ್ತರ ಭಾಗವನ್ನು ರುಷ್ಯರೂ ದಕ್ಷಿಣ ಭಾಗವನ್ನು ತುರುಕರೂ ಸೇರಿಸಿಕೊಂಡಿದ್ದರು. ಈ ತುರುಕ ಆರ್ಮೇನಿಯದಲ್ಲಿ ಆರು ಪ್ರಾಂತ್ಯಗಳೂ ೨೭ ಲಕ್ಷ ಜನರೂ ಇದ್ದರು. ಇವರಲ್ಲಿ ೧೫ ಲಕ್ಷ ಮಾತ್ರವೇ ಆರ್ಮೇನಿಯನರು; ೬ ಲಕ್ಷ ಮಂದಿ ಕುರುದ ಕುಲದವರು. ಕುರುದರೂ ತುರುಕರೂ ಮುಸಲ್ಮಾನರೂ ಆರ್ಮೇನಿಯನರನ್ನು ಅತಿ ದ್ವೇಷದಿಂದ ಕಾಣುತ್ತ ಅವರ ಮೇಲೆ ಸರ್ವದಾ ಅತ್ಯಾಚಾರಗಳನ್ನೆಸಗುತ್ತಿದ್ದರು. ಬಹು ಜನ ಆರ್ಮೇನಿಯನರು ಮೂಲ ಪ್ರಾಂತ್ಯವನ್ನು ಬಿಟ್ಟು ಸಿರಿಯಾದಲ್ಲೂ ಕಾನಸ್ಟಾಂಟಿನೋಪಲ್ಲಿನಲ್ಲೂ ಸ್ಮರ್ನದಲ್ಲೂ ಲಕ್ಷಗಟ್ಟಲೆಯಾಗಿ ನೆಲಸಿ ಬುದ್ಧಿಕುಶಲತೆ ಬೇಕಾಗಿರುವ ಉದ್ಯೋಗಗಳನ್ನೆಲ್ಲಾ ಗ್ರೀಕರೊಡನೆ ಸರ್ವಸಾಮಾನ್ಯವಾಗಿ ವಶಪಡಿಸಿಕೊಂಡು ಜೀವಿಸುತ್ತಿದ್ದರು.

೧೮೭೭ರಲ್ಲಿ ರುಷ್ಯರು ತುರುಕ-ಆರ್ಮೇನಿಯವನ್ನು ಜಯಿಸಿ ಸೇರಿಸಿಕೊಂಡರು. ಇತರ ಯುರೋಪ್ಯರು ಇದನ್ನು ಸಹಿಸದೆ, ತುರುಕರು ಈ ಪ್ರಾಂತ್ಯದಲ್ಲಿ ರಾಜಕೀಯ ಸುಧಾರಣೆಗಳನ್ನು ಕಲ್ಪಿಸಿ, ಸ್ವಾಧೀನತೆಯನ್ನು ಕೊಡಬೇಕೆಂದು ನಿರ್ಬಂಧಹಾಕಿ ಅದನ್ನು ಅವರಿಗೆ ಹಿಂದಕ್ಕೆ ಕೊಡಿಸಿದರು. ಆದರೆ ಈ ಜನರಲ್ಲಿ ಕಡುವಿರೋಧವನ್ನು ಹಿಡಿದಿದ್ದ ಅಬ್ದುಲಹಮೀದನು ಯುರೋಪ್ಯರಾಜ್ಯಗಳ ಒತ್ತಾಯಕ್ಕೆ ಸಗ್ಗದೆ, ಇಲ್ಲಿ ಯಾವ ಸುಧಾರಣೆಯನ್ನೂ ಕಲ್ಪಿಸಲಿಲ್ಲ. ಒರಟರಾದ ಕುರುದ ಜನರನ್ನು ಇವನು ಕೆರಳಿಸಿ ಇವರನ್ನು ದಿನಂಪ್ರತಿ ಕೊಲ್ಲಿಸುತ್ತಿದ್ದನು. ೧೮೯೪ರಲ್ಲಿ ಕುರುದರ ಕೊಳ್ಳೆಗೆ ಸಿಕ್ಕಿ ನಷ್ಟಪಟ್ಟಿದ್ದ ಕೆಲ ಗ್ರಾಮಗಳ ಆರ್ಮೇನಿಯನರು ಸರ್ಕಾರದ ಕಂದಾಯವನ್ನು ತೆರಲು ತಾವು ಅಸಮರ್ಥರಾಗಿದ್ದೇವೆಂದು ಹೇಳಿಕೊಂಡರು. ತುರುಕ ಸರ್ಕಾರವು ಇವರನ್ನು ಶಿಕ್ಷಿಸಲು ಸೇನೆಯನ್ನು ಕಳಿಸಿತು. ಈ ಸೈನ್ಯವೂ ಸರ್ಕಾರದ ಅಧಿಕಾರಿಗಳೂ ಕುರುದರೂ ಇತರ ಮುಸಲ್ಮಾನರೂ ಈ ಬಡ ಜನರ ಮೇಲೆ ಬಿದ್ದು ಬಹಿರಂಗವಾಗಿ ನರ ಬೇಟೆಯಾಡಿ ಸಾವಿ

ರೀತು ಗ್ರಾಮಗಳನ್ನು ಸುಟ್ಟು ಸುಮಾರು ೬॥ ಲಕ್ಷ ಜನ ಆರ್ಮೇನಿಯನರನ್ನು ಕೊಲೆ ಮಾಡಿದರು. ೧೯೦೮ರಲ್ಲಿ ಅಧಿಕಾರಕ್ಕೆ ಬಂದ ಬಾಲ-ತುರುಕ ಪಕ್ಷದವರು ತುರಾಣಿ ಕುಲಾಭಿಮಾನಿಗಳಾಗಿದ್ದುದರಿಂದ ಆರ್ಮೇನಿಯನರ ಜನಾಂಗಾಭಿಮಾನವನ್ನೂ ಸ್ವರಾಜ್ಯ ಕಾಮನೆಯನ್ನೂ ಅಡಗಿಸಲು ಪ್ರಯತ್ನಿಸಿದರು. ೧೯೦೯ರಲ್ಲಿ ಈ ಜನರು ಮತ್ತೆ ಭಯಂಕರವಾಗಿ ಕೊಲೆ ಮಾಡಲ್ಪಟ್ಟರು. ಐರೋಪ್ಯ ಯುದ್ಧ ಕಾಲದಲ್ಲಿ ತುರಾಣಿ ಸಮಷ್ಟಿವಾದಿಗಳು ತುರುಕ-ಆರ್ಮೇನಿಯಾ ಪ್ರಾಂತ್ಯವನ್ನು ಆರ್ಮೇನಿಯಾ ಶೂನ್ಯವಾಗಿ ಮಾಡಿ ತುರಾಣಿ ಪಂಥಕ್ಕೆ ಸೇರಿಸಿಕೊಳ್ಳಲು ಬಗೆದು ಲಕ್ಷಾಂತರ ಮಂದಿಯನ್ನು ಕೊಂದು ಗಡಿಪಾರು ಮಾಡಿದರು. ತುರ್ಕಿಯ ಇತರ ಕಡೆ ಇದ್ದ ಆರ್ಮೇನಿಯನರು ಸಹ ಮುಂದೆ ಮುಸ್ತಫಾ ಕಮಾಲನಿಂದ ಗಡಿಪಾರು ಮಾಡಲ್ಪಟ್ಟರು. ಸಿಲೀಸಿಯದಲ್ಲಿದ್ದವರು ಸಿರಿಯಾಕ್ಕೆ ಓಡಿಹೋಗಿ ಫ್ರೆಂಚ ಪ್ರಜೆಗಳಾದರು.

ಐರೋಪ್ಯ ಯುದ್ಧವು ಮುಗಿಯುವ ವೇಳೆಗೆ ರುಸ್ಯ-ಆರ್ಮೇನಿಯವು ಸ್ವತಂತ್ರ ಅರಾಜಕ ರಾಜ್ಯವಾಗಿತ್ತು. ಪ್ಯಾರಿಸಿನ ಸಂಧಿಸಭೆಯಲ್ಲಿ ಆರ್ಮೇನಿಯನರು, ರುಸ್ಯ, ತುರುಕ, ಇರಾಣ ರಾಜ್ಯಗಳಲ್ಲಿ ಲೀನವಾಗಿ ಹೋಗಿದ್ದ ತಮ್ಮ ದೇಶದ ಮೂರು ವಿಭಾಗಗಳನ್ನು ಒಂದುಗೂಡಿಸಿ ಬಾಕು, ತ್ರಿಬಿಜಾಂಡ(Trebizond), ಬಾಟುಮ್(Batum) ಎಂಬ ರೇವು ನಗರಗಳ ಸಮೇತ ಒಂದು ಸ್ವತಂತ್ರ ರಾಜ್ಯವಾಗಿ ಕಲ್ಪಿಸಿಕೊಡಬೇಕೆಂದು ಅಪೇಕ್ಷಿಸಿದರು. ಅಮೇರಿಕದ ವಿಲ್ಸನ್ನನು ಇದಕ್ಕೆ ಒಪ್ಪಿದ್ದನು. ಆದರೆ ಕಾರ್ಯತಃ ಇದು ಸಾಧ್ಯವಾಗುವ ಹಾಗೆ ಇಲ್ಲ. ಈ ಮೂರು ರೇವು ನಗರಗಳಲ್ಲೂ ಅವುಗಳ ಸುತ್ತುಮುತ್ತಲ ಪ್ರದೇಶಗಳಲ್ಲೂ ಒಂದು ಆರ್ಮೇನಿಯಾ ಹಳ್ಳಿಯೂ ಇಲ್ಲ. ರುಸ್ಯ-ಆರ್ಮೇನಿಯನರು ಬೋಲಶೆವಿಕರೊಡನೆ ಸೇರಿಕೊಂಡು ಅಸರಬೈಜಾನಿಯರನ್ನು ನರಬೇಟೆಯಾಡಿದ್ದರು. ಇವರಿಗೆ ಪ್ರಭುತ್ವ ದೊರೆತರೆ ತಮ್ಮ ಸೇಡು ತೀರಿಸಿಕೊಳ್ಳದೆ ಬಿಡರೆಂದು ಹೆದರಿ ಈ ಭಾಗಗಳ ಮುಸಲ್ಮಾನರೆಲ್ಲರೂ ಅದನ್ನು ವಿರೋಧಿಸಿದರು. ತುರುಕ-ಆರ್ಮೇನಿಯದಲ್ಲಿ ಮುಸಲ್ಮಾನರು ಈ ಜ

ರಿಗೆ ಹತ್ತು ಮಡಿ ಅಧಿಕವಾಗಿದ್ದುದರಿಂದ ಪರಸಹಾಯವಿಲ್ಲದೆ ಆ ಪ್ರಾಂತ್ಯವನ್ನು ಇವರು ವಶ್ಯಸಿಕೊಳ್ಳಲು ಆಗುತ್ತಿರಲಿಲ್ಲ. ಈ ಜನರಿಗೆ ಪಾಲಕರಾಗಿ ನಿಂತು ಜನ ಧನ ಸಹಾಯ ಮಾಡಿ ಉದ್ಧಾರ ಮಾಡುವ ಕೆಲಸಕ್ಕೆ ಅಮೇರಿಕದವರೂ ಬ್ರಿಟಿಷರೂ ಫ್ರೆಂಚರೂ ಹಿಂಜರಿದರು. ನಾರ್ವೆ ದೇಶದವರನ್ನು ಹೀಗೆ ಮಾಡಲು ಪ್ರಾರ್ಥಿಸಿದ್ದಕ್ಕೆ ಅವರೂ ತಿರಸ್ಕರಿಸಿದರು. ಈ ಮಧ್ಯೆ ಕಮಾಲನೂ ಬೋಲ್ಷೆವಿಕರೂ ತಮ್ಮ ತಮ್ಮ ಭಾಗಗಳ ಆರ್ಮೇನಿಯಾ ಪ್ರಾಂತ್ಯಗಳನ್ನು ಜಯಿಸಿ, ಸ್ನೇಹ ಸಂಧಿ ಮಾಡಿಕೊಂಡದ್ದರಿಂದ ಉಭಯ ಪ್ರಾಂತಗಳೂ ಒಂದಾಗಿ ಸೇರುವ ಸಂಭವವು ತಪ್ಪಿ ಹೋಯಿತು. ತುರುಕ ಆರ್ಮೇನಿಯದ ಹತಶೇಷರು ಅರಾಜಕ ರಾಜ್ಯವಾಗಿದ್ದ ರುಸ್ಯಾ ಆರ್ಮೇನಿಯಕ್ಕೆ ಹೋಗಿ ಸೇರಿಕೊಂಡರು. ಅಖಿಲ ಆರ್ಮೇನಿಯನರೂ ಒಂದು ಜನಾಂಗ ರಾಜ್ಯವಾಗಿ ಸೇರಿ ಅಭಿವೃದ್ಧಿ ಪಡೆಯುವ ಭಾಗ್ಯವು ಈ ಜನರಿಗೆ ಲಭಿಸದೆ ಹೋಯಿತು.

## (೨) ಅರಬಸ್ಥಾನ.

ಈ ದೇಶವು ಸುಮಾರು ೧೩ ಲಕ್ಷ ಚದರ ಮೈಲು ವಿಸ್ತೀರ್ಣವನ್ನು ೬೦ ಲಕ್ಷ ಜನಸಂಖ್ಯೆಯನ್ನೂ ಪಡೆದಿದೆ. ದೇಶದ ಒಳಭಾಗವು ಅಗಮ್ಯವಾದ ಮರಳ್ಗಾಡು. ನೀರು ವಸತಿ ಇರತಕ್ಕ ಕಡೆ ನೂರಾರು ಮೈಲುಗಳ ಅಂತರದಲ್ಲಿ ಕೆಲ ಊರುಗಳು ಇವೆ. ಮರಳುಗಾಡಿನಲ್ಲಿ ಪಕ್ಕ ಪಕ್ಕಲಾಗಿ ಜೀವಿಸುತ್ತಿರುವ ಅರಬರು ಶುದ್ಧವಾಗಿ ಸ್ವಾವಲಂಬಿಗಳಾಗಿರುವರು. ಅವರಿಗೆ ಸರ್ಕಾರದ ಪ್ರಯೋಜನ ಕಡಿಮೆ. ಸರ್ಕಾರವು ಅವರನ್ನು ಶಾಸನ ಮಾಡುವುದೂ ಕಷ್ಟ. ಆದ್ದರಿಂದ ಈ ಜನರು ಅತ್ಯಂತ ಸ್ವಾತಂತ್ರ್ಯ ಪ್ರಿಯರಾಗಿರುವರು. ಯುರೋಪ್ಯ ಯುದ್ಧಕ್ಕೆ ಹಿಂದೆ ಇಲ್ಲಿ ೮ ಸ್ವತಂತ್ರ ರಾಜ್ಯಗಳೂ ೫ ಅಧೀನ ರಾಜ್ಯಗಳೂ ಇದ್ದವು. ಏಡೆನ್ ಪ್ರಾಂತ್ಯವೂ ಇದಕ್ಕೆ ಮಗ್ಗಲು ದೇಶವೂ ಬ್ರಿಟಿಷರಿಗೆ ಸೇರಿದ್ದವು. ಮಕ್ಕಾ ಮದೀನ ಗಳಿರುವ ಹೆಜಾಜ ರಾಜ್ಯವೂ, ಅಸೀರ ರಾಜ್ಯವೂ, ಸನ ಅಥವಾ ಯೆಮೆನ್ ರಾಜ್ಯವೂ ತುರುಕರಿಗೆ ಅಧೀನವಾಗಿದ್ದವು.

ಈ ದೇಶಕ್ಕೆ ಸಂಬಂಧಪಟ್ಟ ವಾದಗಳ ವಿಜೃಂಭಣೆ, ಅರಬರ ಜನಾಂಗಾಭಿಮಾನ, ಬಾಲ-ಅರಬ ಚಳವಳಿ, ಸ್ವಾತಂತ್ರ್ಯಯುದ್ಧ, ಐರೋಪ್ಯರ ಮೋಸ, ಅರಬಜನಮಂಡಲಿಸಮಷ್ಟಿ ಚಳವಳಿ, ಅರಬರ ಸ್ವರಾಜ್ಯ ಚಳವಳಿ ಇವೇ ಮೊದಲಾದ ಅಂಶಗಳನ್ನು ಹಿಂದೆಯೇ ವಿವರಿಸಿದೆ. ಬ್ರಿಟಿಷರ ಸಹಾಯದಿಂದ ಮಕ್ಕಾಷರೀಫನಾದ ಹುಸೇನನು ಹೆಜಾಜ ರಾಜ್ಯಕ್ಕೂ ಅವನ ಮಕ್ಕಳಾದ ಫೈಜುಲ್ ಮತ್ತು ಅಬ್ದುಲ್ಲರು ಇರಾಕ ಮತ್ತು ಜೋರ್ಡಾನ ರಾಜ್ಯಗಳಿಗೂ ರಾಜರಾದರು.

ಅರಬಸ್ಥಾನದಲ್ಲಿ ಬ್ರಿಟಿಷರ ಪ್ರಾಬಲ್ಯವನ್ನು ಉಡುಗಿಸಿದ ಖ್ಯಾತಿಯು ನೆಜೆಡ್ ರಾಜ್ಯದ ಸುಲ್ತಾನ ವಾಹಬಿ ಮತಾಗ್ರೇಸರ ಅಬ್ದುಲ್ ಅಜೀಜ್ ಇಬಿನ್ ಸೈಯ್ಯದನಿಗೆ ಸೇರುವುದು. ಐರೋಪ್ಯ ಯುದ್ಧಕಾಲದಲ್ಲಿ ಈ ಸಾಹಸಿಯು ತಮಗೆ ವಿರೋಧವಾಗಿ ಕೆಲಸ ಮಾಡದಿರಲು ಬ್ರಿಟಿಷರು ಇವನಿಗೆ ವರ್ಷಂಪ್ರತಿ ಸ್ವಲ್ಪ ಹಣ ಕೊಡಲಾರಂಭಿಸಿದರು. ಇಬಿನ್ ಸೈಯ್ಯದನು ಈ ಹಣದ ಸಹಾಯದಿಂದ ಬಲವಾದ ಸೇನೆಯನ್ನು ಕಟ್ಟಿ ತನ್ನ ಅಕ್ಕಪಕ್ಕದ ಷಮಾರ್, ಹೈಲ, ಜೂಫ, ಅಶ್‌ಹಸ ಮೊದಲಾದ ರಾಜ್ಯಗಳನ್ನೆಲ್ಲ ಜಯಿಸಿದನು.

ತುರುಕರು ೧೯೨೪ರಲ್ಲಿ ಖಿಲಾಫತ್ತನ್ನು ವಜಾ ಮಾಡಿದಾಗ ಹೆಜಾಜಿನ ಹುಸೇನನು ಬ್ರಿಟಿಷರ ಸಹಾಯದಿಂದ ಖಲೀಫನೆಂಬ ಬಿರುದನ್ನು ವಹಿಸಿದನು. ಆದರೆ ಮುಸಲ್ಮಾನ ಲೋಕವೆಲ್ಲವೂ ಇವನನ್ನು ವಿರೋಧಿಸಿದ್ದರಿಂದ ಬ್ರಿಟಿಷರು ತಟಸ್ಥರಾಗಿ ಇವನ ಕೈಬಿಟ್ಟರು. ಬ್ರಿಟಿಷರು ಬಂಡ ಪಗುದಿಯನ್ನು ತಪ್ಪಿಸಿದ್ದರಿಂದ ಸಮಯ ಕಾಯುತ್ತಿದ್ದ ಇಬಿನ್ ಸೈಯ್ಯದನು ಹೆಜಾಜನ್ನು ಮುತ್ತಿ ಜಯಿಸಿ ಹುಸೇನನ ವಂಶದವರನ್ನು ಓಡಿಸಿ (೧೯೨೬) ತಾನು ಮಕ್ಕಾದಲ್ಲಿ ಅರ್ಧ ಅರಬ ದೇಶಕ್ಕೆ ರಾಜನಾಗಿ ಪಟ್ಟ ಧರಿಸಿದನು. ೧೯೨೬ರಲ್ಲಿ ಅಸಿರದ ಆಮೀರನು ಇವನ ಸಾಮಂತನಾದನು. ದೇಶದ ಹಲವು ಜನಗಣಗಳು ಇವನ ಆಧಿಪತ್ಯವನ್ನು ಅಂಗೀಕರಿಸಿದವು. ಆದರೆ ಸನಾ ರಾಜ್ಯದ ಇಮಾಮನು ಮಾತ್ರ ಇಟಲಿಯವರೊಡನೆಯೂ ಬೋಲಷೆವಿಕರೊಡನೆಯೂ ಸಂಧಿಮಾಡಿಕೊಂಡು ಬ್ರಿಟಿಷರಿಗಾಗಲಿ

ಇಬಿನ್ ಸ್ಸೈಯ್ಯದನಿಗಾಗಲಿ ಬಗ್ಗದೆ ಸ್ವತಂತ್ರನಾಗಿರುವನು. ಬ್ರಿಟಿಷರು ಇಬಿನ್ ಸ್ಸೈಯ್ಯದನ ಮೈತ್ರಿಯನ್ನು ಸಂಪಾದಿಸಲು ಮೂರುವರ್ಷಕಾಲ ಕಷ್ಟಪಟ್ಟು ಕಡೆಗೆ ಅವನ ಸಂಪೂರ್ಣ ಸ್ವಾತಂತ್ರ್ಯವನ್ನು ಒಪ್ಪಿ ಸಂಧಿ ಮಾಡಿಕೊಂಡರು. ಅರಬ ದೇಶವನ್ನೆಲ್ಲ ಒಂದು ಸಂಯುಕ್ತ ರಾಜ್ಯವಾಗಿ ಮಾಡಬೇಕೆಂದು ಇಬಿನ್ ಸ್ಸೈಯದನು ಸಾಹಸಪಡುತ್ತಿರುವನು.

ತನ್ನ ಹೆಜಾಜ ರಾಜ್ಯದಲ್ಲಿ ಮಕ್ಕಾಯಾತ್ರೆಯೇ ಮುಖ್ಯ ವರಮಾನದ ಮೂಲವೆಂದರಿತು ಇಬಿನ್ ಸ್ಸೈಯದನು ಈ ಯಾತ್ರಾ-ವ್ಯಾಪಾರಕ್ಕೆ ಬಹಳ ಪ್ರೋತ್ಸಾಹ ಕೊಡುತ್ತಿರುವನು. ಸರ್ವಸಮ್ಮತವಾದ ಯಾತ್ರಾಸೌಕರ್ಯಗಳನ್ನು ಕಲ್ಪಿಸಲು ೧೯೨೬ರಲ್ಲಿ ಮಕ್ಕಾದಲ್ಲಿ ಅಖಿಲ ಸುನ್ನಿ ಜನರ ಪರಿಷತ್ತೊಂದು ಸೇರಿದ್ದಿತು. ಇದಕ್ಕೆ ಬಂದಿದ್ದ ಪಾಶ್ಚಾತ್ಯ ವಿದ್ಯಾಸಂಪನ್ನರಾಗಿದ್ದ ಕೆಲ ಇಜಿಪ್ತ ದೇಶದ ಪ್ರತಿನಿಧಿಗಳು ಮಸೀತಿಗೆ ಹತ್ತಿರವಾಗಿ ಚುಟ್ಟಾ ಸೇದಿದದರಿಂದು ವಾಹಬಿ ಜನಗಳು ಅಪಮಾನಿಸಿ ಗಲಾಟೆ ಹಚ್ಚಿದ್ದರಿಂದ ಇಜಿಪ್ತರು ಕ್ರುದ್ಧರಾಗಿ ಇಲ್ಲಿಗೆ ಯಾತ್ರೆ ಬರುವುದನ್ನು ನಿಲ್ಲಿಸಿದರು. ಆದರೆ ಇಬಿನ್ ಸ್ಸೈಯದನು ಕ್ರಮವಾಗಿ ಈಚೆಗೆ ಇಜಿಪ್ತರ ಕೋಪವನ್ನು ಶಾಂತ ಮಾಡಿರುವನು. ವಾಹಬಿ ರಾಜ್ಯಭಾರವು ಇತರ ದೇಶಗಳ ಮುಸಲ್ಮಾನರಲ್ಲಿ ಕೆಲವರಿಗೆ ಸರಿಬರುವುದಿಲ್ಲ. ೧೯೩೧ರಲ್ಲಿ ಜರೂಸಲೇಮಿನಲ್ಲಿ ಕೂಡಿದ್ದ ಪರಿಷತ್ತಿಗೆ ಈ ವಾಹಬಿ ಪಕ್ಷದವರು ಸೇರಿರಲಿಲ್ಲ.

## (೩) ಇರಾಕ ದೇಶ.

ಈ ದೇಶದಲ್ಲಿ ನದಿಯ ಮಧ್ಯಪ್ರದೇಶದಲ್ಲಿ ಅರಬ ಸಂತಾನರೂ ಅದಕ್ಕೆ ಉತ್ತರ ಮತ್ತು ಪೂರ್ವ ದಿಕ್ಕಿನ ಗಡಿಸೀಮೆಯಲ್ಲಿ ಕುರುದರೂ ಇರುವರು. ದೇಶದಲ್ಲಿ ಜೂದರೂ ಕ್ರಿಸ್ತರೂ ಹೇರಳವಾಗಿ ಗೋಚರಿಸುವರು. ಕ್ರಿ. ಪೂ. ೩೦೦೦ ವರ್ಷಕ್ಕೆ ಹಿಂದೆಯೇ ಈ ನದಿಗಳಿಗೆ ಅಣೆಕಟ್ಟು ಹಾಕಿ ದೊಡ್ಡ ನೀರಾವರಿಯ ಕೆಲಸಗಳನ್ನು ಕಲ್ಪಿಸಿಕೊಂಡಿದ್ದುದರಿಂದ ಈ ದೇಶವು ಲೋಕದ ನಂದನವನವೆಂದು ಬೈಬಲಿನಲ್ಲಿ ಪ್ರಸಿದ್ಧಿಪಡೆದಿತ್ತು. ಈ ನೀರಾವರಿಯ ಕಟ್ಟಡಗಳು ಕಾಲಾನುಕಾಲದಲ್ಲಿ ಸಂಪೂರ್ಣವಾಗಿ ಹಾಳಾಗಿ ಹೋಗಿ ಈ ದೇಶವು ಬೆಂಗಾಡಾಗಿತ್ತು. ಇಲ್ಲಿನ ಅರಬ ಸಂತಾನರು

ಶಾಪಶಾಲ್ಯದಿಂದ ತಮ್ಮ ಜೀವನ ಮಾಡುತ್ತಿದ್ದರು. ಶಿಯಾ ಮುಸಲ್ಮಾನರಿಗೆ ಪುಣ್ಯಕ್ಷೇತ್ರಗಳಾದ ನೆಜಾಫ್, ಕರ್ಬೇಲ, ಸಮರ, ಕಾಧಿಮೈನ್ ಎಂಬ ಸ್ಥಳಗಳು ಈ ದೇಶದಲ್ಲಿದ್ದುವು. ಅಲ್ಲಿಗೆ ವರ್ಷಕ್ಕೆ ಲಕ್ಷಾಂತರ ಶಿಯಾ ಯಾತ್ರಿಕರು ಬಂದುಹೋಗುತ್ತಿರುವರು. ಈ ಸ್ಥಳಗಳಲ್ಲಿ ಶಿಯಾ ಜನರ ರಾಜ್ಯವಾದ ಇರಾಣವು ಅತ್ಯಂತ ಪ್ರಾಬಲ್ಯವನ್ನು ಪಡೆದಿತ್ತು. ಇರಾಕದ ಉತ್ತರ ಭಾಗದಲ್ಲಿರುವ ಮುಸುಲ (Mosul) ಪ್ರಾಂತ್ಯದಲ್ಲಿ ೪॥ ಲಕ್ಷ ಕುರುದರೂ, ೩ ಲಕ್ಷ ಅರಬರೂ, ೭೦ ಸಾವಿರ ತುರುಕರೂ, ೬೦ ಸಾವಿರ ಕ್ರಿಸ್ತರೂ ಇದ್ದರು. ಇರಾಕದಲ್ಲಿ ಈ ಪ್ರಾಂತ್ಯ ಒಂದರಲ್ಲಿ ಮಾತ್ರವೇ ಆಹಾರಧಾನ್ಯವು ಬೆಳೆಯುತ್ತಿತ್ತು. ಇರಾಕದ ನದಿಗಳ ಜಲಾಶಯವು ಈ ಪ್ರಾಂತ್ಯದಲ್ಲಿದ್ದುದರಿಂದ ಇದು ಪರಹಸ್ತಗತವಾದರೆ ಇರಾಕಿನಲ್ಲಿ ನೀರಾವರಿಯ ಕೆಲಸವಾವುದನ್ನೂ ನಿರ್ವಹಿಸಲಾಗುತ್ತಿರಲಿಲ್ಲ. ಈ ಪ್ರಾಂತ್ಯದಲ್ಲಿ ಕಲ್ಲೆಣ್ಣೆ ಸಹ ಸಮೃದ್ಧಿಯಾಗಿ ದೊರೆಯುತ್ತಿದ್ದುದರಿಂದ ಇರಾಕಿನ ಅಭ್ಯುದಯಕ್ಕೆ ಈ ಪ್ರಾಂತ್ಯವು ಅತ್ಯಗತ್ಯ ಬೇಕಾಗಿತ್ತು.

ಇರಾಣಿ ಸಮುದ್ರಕೊಲ್ಲಿಯ ತೀರದಲ್ಲಿರುವ ತಮ್ಮ ಕಲ್ಲೆಣ್ಣೆಯ ವ್ಯಾಪಾರಿಕೆಯನ್ನು ಸಂರಕ್ಷಿಸುವ ಸಲುವಾಗಿ, ಬ್ರಿಟಿಷರು ತಮ್ಮ ಮಾತಿಗೆ ಮೀರಿ ಇರಾಕನ್ನು ಆಕ್ರಮಿಸಿ, ೧೯೨೦ನೆಯ ಏಪ್ರಿಲಿನಲ್ಲಿ ಅದರ ಪಾಲನಾಧಿಕಾರವನ್ನು ಪಡೆದರು. ಅಲ್ಲಿನ ಅರಬರು ಬೇಗ ಭಯಂಕರವಾಗಿ ದಂಗೆಯೆಬ್ಬಿಸಿದರು. ಬ್ರಿಟಿಷರಿಗೆ ಅದನ್ನಡಗಿಸಲು ಲಕ್ಷ ಸೈನ್ಯವೂ ೧೦೦ ಕೋಟಿ ರೂಪಾಯಿಗಳೂ ಬೇಕಾದವು. ಈ ದೇಶದ ಸ್ವರಾಜ್ಯ ಪಕ್ಷದವರು ರಾಜನನ್ನಾಗಿ ಮಾಡಬೇಕೆಂದು ಇದ್ದ ಸೈಯದ ತಾಲೀಬ್ ಎಂಬ ಮುಖಂಡನನ್ನು ಬ್ರಿಟಿಷರು ಸಿಂಹಳದ್ವೀಪಕ್ಕೆ ಗಡೀಪಾರು ಮಾಡಿ ಕಳುಹಿಸಿ, ಮಕ್ಕಾ ಷರೀಫ ಹುಸೇನನ ಎರಡನೆಯ ಮಗನಾದ ಫೈಜುಲ್ಲನನ್ನು ರಾಜನನ್ನಾಗಿ ಮಾಡಿ, ಒಂದು ಸಂಧಿಯನ್ನು ವಿಧಿಸಿ, ಮಜ್ಲೀಸ್ ಎಂಬ ಹೆಸರುಳ್ಳ ಒಂದು ಶಾಸನ ಸಭೆಯನ್ನು ಕಲ್ಪಿಸಿದರು. ಇರಾಕರು ಸ್ವರಾಜ್ಯಕ್ಕಾಗಿ ೧೯೨೪ರವರೆಗೂ ಪದೆ ಪದೆ ದಂಗೆಯೇಳುತ್ತ ಈ ಸಂಧಿಯನ್ನು ತಿರಸ್ಕರಿಸಿ ಚಳವಳಿ ನಡೆಸಿದರು. ಈ ಮಧ್ಯೆ ಮುಸ್ತಫಾ ಕಮಾಲನು ಇರಾಕಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿದ್ದ ಮುಸುಲ ಪ್ರಾಂತ್ಯವನ್ನು ವಶ ಮಾಡಿದರೂ

ಬಿಟ್ಟುಕೊಡುವುದಿಲ್ಲವೆಂದು ಹಟಹಿಡಿದನು, ಇರಾಕದ ಮೇಲೆ ತುರುಕರನ್ನು ತೆರಳಿಸಿ, ಆ ಪ್ರಾಂತ್ಯದ ಕ್ರಿಸ್ತರನ್ನೆಲ್ಲ ಇರಾಕಕ್ಕೆ ಓಡಿಸಿ ಗಲಭೆಹಚ್ಚಿದನು. ಇರಾಕಿನ ಪಾಲನೆಯು ತುಂಬಾ ವ್ಯಯಕರವಾಗಿ ಬಿಟ್ಟಿದ್ದುದರಿಂದ, ಬ್ರಿಟಿಷರು ತುರುಕರೊಡನೆ ಲಾಭಕರವಾಗಿ ಸಂಧಿ ಮಾಡಿಕೊಂಡು ಇರಾಕವನ್ನು ಬಿಟ್ಟುಹೋಗಬೇಕೆಂದು ಇಂಗ್ಲೆಂಡಿನಲ್ಲಿ ಸರ್ವತ್ರ ಚಳವಳಿ ಹುಟ್ಟಿತು. ಆಗ ಇರಾಕಿನ ಬ್ರಿಟಿಷ ಗವ್ಹರ್ನರನು, ಬ್ರಿಟಿಷರು ವಿಧಿಸಿದ್ದ ಸಂಧಿಯನ್ನು ಇರಾಕರ ಶಾಸನ ಸಭೆಯು ಒಡನೆಯೇ ಒಪ್ಪದಿದ್ದರೆ, ತಾನು ಬ್ರಿಟಿಷ ಸೇನೆ ಮತ್ತು ನೌಕರ ವರ್ಗ ಸಮೇತ ಇರಾಕವನ್ನು ಪರಿತ್ಯಜಿಸಿ ಹೊರಟುಹೋಗುವುದಾಗಿ ಹೆದರಿಸಿದನು. ಬ್ರಿಟಿಷರ ಸಹಾಯವಿಲ್ಲದೆ ಮಸುಲನ್ನು ಪಡೆಯುವುದು ದುರ್ಲಭವೆಂದೂ ಅವರು ಬಿಟ್ಟುಹೋದರೆ ತಾವು ತುರುಕರ ಬಾಯಿಗೆ ತುತ್ತಾಗುವುದು ನಿಶ್ಚಯವೆಂದೂ ಇರಾಕರು ಹೆದರಿ ೧೯೨೪ರಲ್ಲಿ ಬ್ರಿಟಿಷರೊಡನೆ ಸಂಧಿಯನ್ನು ಒಪ್ಪಿಕೊಂಡರು. ಇರಾಕರು ಬ್ರಿಟಿಷರ ಪಾಲನೆಯನ್ನು ಮರಳಿ ೨೫ ವರ್ಷ ಕಾಲಕ್ಕೆ ಹೆಚ್ಚಿಸಿಕೊಂಡು ಹೊಸ ಸಂಧಿಮಾಡಿಕೊಳ್ಳುವುದಾದರೆ ಮಸುಲವು ಅವರಿಗೆ ಸೇರತಕ್ಕದ್ದೆಂದು ಸರ್ವಜನಾಂಗಮಂಡಲಿಯು ತೀರ್ಮಾನಿಸಿತು. ತುರುಕರು ಇದನ್ನು ಒಪ್ಪಲಿಲ್ಲ. ಆಗ ಬ್ರಿಟಿಷರು ತಂತ್ರದಿಂದ ಇಟಲಿಯವರನ್ನು ತುರುಕರ ಮೇಲೆ ಕೆರಳಿಸಿ ಬಿಡಲು, ತುರುಕರು ಯುಕ್ತವಿಲ್ಲದೆ, ಮಸುಲ ಪ್ರಾಂತ್ಯದ ಎಣ್ಣೆಯ ಲಾಭದಲ್ಲಿ ದಶಾಂಶವನ್ನು ಪಡೆಯುವುದಕ್ಕೆ ಪ್ರತಿಯಾಗಿ ಆ ಪ್ರಾಂತ್ಯವನ್ನು ಇರಾಕಕ್ಕೆ ಬಿಟ್ಟುಕೊಟ್ಟು ಸಂಧಿ ಮಾಡಿಕೊಂಡರು. (೧೯೨೬).

ಇರಾಕರು ಅನ್ಯರ ಪಾಲನೆ ಇಲ್ಲದೆ ಸ್ವತಂತ್ರವಾಗಿ ಆತ್ಮಸಂರಕ್ಷಣೆ ಮಾಡಿಕೊಳ್ಳಲಾರರೆಂದು ಸರ್ವಜನಾಂಗಮಂಡಲಿಯು ಬ್ರಿಟಿಷರ ಪಾಲನಾಧಿಕಾರ ಕಾಲವನ್ನು ಹೆಚ್ಚಿಸಿದ್ದಿತಷ್ಟೆ. ಈ ಅಪವಾದವನ್ನು ಹೋಗಲಾಡಿಸಿಕೊಳ್ಳಲು ೧೯೩೬ರಲ್ಲಿ ಇರಾಕ ಮಂತ್ರಿಮಂಡಲದವರು ತಮ್ಮ ದೇಶದಲ್ಲಿ ಸಾರ್ವತ್ರಿಕ ನಿರ್ಬಂಧ ಸೈನ್ಯಕ್ರಮವನ್ನು ತರಲು ಯೋಜಿಸಿದರು. ದೇಶದಲ್ಲಿ ಇದಕ್ಕೆ ವಿರೋಧವಾಗಿ ಹಾಹಾಕಾರ ಹುಟ್ಟಿ ಈ ಮಂತ್ರಿಗಳು ಅಧಿಕಾರವನ್ನು ಕಳೆದುಕೊಂಡರು.

ಬ್ರಿಟಿಷರೊಡನೆ ಹುಟ್ಟಿದ ಹೊಸ ಸಂಧಿಯು (೧೯೩೦) ಇರಾಕ ದೇಶವು ಬ್ರಿಟಿಷರ ಪಾಲನಾಧಿಕಾರಕ್ಕೊಳಪಟ್ಟ ಸ್ವತಂತ್ರ ರಾಜ್ಯವೆಂದು ಸಾರಿತು. ಬ್ರಿಟಿಷರ ಪಾಲನೆಯು ಕೇವಲ ನಾಮಮಾತ್ರ ಇರಬೇಕೆಂದು ಬಯಸುತ್ತಿದ್ದ ಇರಾಕರ ಸ್ವರಾಜ್ಯ ಪಕ್ಷದವರು ಈ ಸಂಧಿಯನ್ನು ವಿರೋಧಿಸಿದರು. ಕೆಲ ಮಂತ್ರಿಗಳು ಈ ಸಂಧಿಗೆ ಒಪ್ಪದೆ ಕೆಲಸ ಬಿಟ್ಟರು. ಶಾಸನ ಸಭೆಯು ಇದಕ್ಕೆ ವಿರೋಧವಾಗಿದ್ದುದರಿಂದ ಸಮಾವೇಶವಾದೊಡನೆಯೇ ಮುಂದಕ್ಕೆ ತಳ್ಳಲ್ಪಟ್ಟಿತು. ಹೊಸ ಮಂತ್ರಿಮಂಡಲವೂ ವಿರೋಧಿಸಿ ಕೆಲಸ ಬಿಟ್ಟಿತು. (೧೯೩೧). ಬ್ರಿಟಿಷರು ತಮ್ಮ ಮಾತು ಕೇಳತಕ್ಕವರಿಗೆ ಮಂತ್ರಿಪದವಿಯನ್ನು ಕೊಟ್ಟರು. ಅವರು ತಾವು ಏನೂ ಮಾಡಲಾಗದೆ ಕೆಲಸ ಬಿಡಬೇಕಾಯಿತಲ್ಲದೆ, ಬ್ರಿಟಿಷರು ಈ ಸಂಧಿಯನ್ನು ಸಡಿಲಿಸಿ ಇರಾಕರಿಗೆ ಸ್ವಾತಂತ್ರ್ಯವನ್ನು ಒಪ್ಪಿಸದಿದ್ದರೆ, ಯಾರೂ ಮಂತ್ರಿ ಕೆಲಸಕ್ಕೆ ಬರುವುದಿಲ್ಲವೆಂದು ಇರಾಕ ಮುಖಂಡರು ಹಟಹಿಡಿದರು. (೧೯೩೨). ಆಗ ಬ್ರಿಟಿಷರು ಇರಾಕರಿಗೆ ೧೯೩೨ರಲ್ಲಿ ಸರ್ವಜನಾಂಗಮಂಡಲಿಯ ಸದಸ್ಯತ್ವವನ್ನು ಕೊಡಿಸುವುದಾಗಿ ಭರವಸೆ ಕೊಟ್ಟದ್ದರಿಂದ ದೇಶದಲ್ಲಿ ಚಳವಳಿ ಸ್ವಲ್ಪ ಶಾಂತವಾಯಿತು. ಈ ಸದಸ್ಯತ್ವವು ದೊರೆತಲ್ಲಲ್ಲದೆ ಸರಿಯಾಗಿ ನಡೆದರೆ ಬ್ರಿಟಿಷರ ಪಾಲನಾಧಿಕಾರವು ನಿವರ್ತಿತವಾಗಬೇಕಾಗುವುದು.

ಇರಾಕ ದೇಶದಲ್ಲಿ ಈಗ ರೈಲುಗಳೂ ನೀರಾವರಿ ಕೆಲಸಗಳೂ ವ್ಯಾಪಾರವೂ ಹೆಚ್ಚುತ್ತಿವೆ. ಇಂಗ್ಲೆಂಡು-ಇಂಡಿಯಾಗಳ ವಿಮಾನ ಪ್ರಯಾಣಕ್ಕೆ ಬಗದಾದವು ಒಂದು ಮುಖ್ಯ ಕೇಂದ್ರವಾಗಿ ಪರಿಣಮಿಸಿದೆ. ಸರ್ಕಾರದಲ್ಲಿ ಇರಾಕ ನೌಕರರು ಹೆಚ್ಚುತ್ತಿರುವರು. ೧೯೨೦ರಿಂದ ೧೯೩೦ರೊಳಗಾಗಿ ಈ ಸರ್ಕಾರದಲ್ಲಿದ್ದ ೧೦೨೩ ಬ್ರಿಟಿಷ ಮತ್ತು ೩೨೦೦ ಹಿಂದೂ ನೌಕರರ ಸಂಖ್ಯೆಯು ಕ್ರಮವಾಗಿ ೨೦೪ ಮತ್ತು ೬೦೦ಕ್ಕೆ ಇಳಿದಿದೆ.

## (೪) ಸಿರಿಯಾ ದೇಶ.

ಸಿರಿಯಾ ದೇಶದ ತೀರ ಪ್ರದೇಶವನ್ನು ಒಂದು ಪರ್ವತಮಾಲೆಯು ಉಳಿದ ಭಾಗದಿಂದ ವಿಭಾಗಿಸುವುದು. ತೀರದ ದಕ್ಷಿಣಾರ್ಧವು ಲಿಬನಾನ (Labonon) ಎಂಬ ಹೆಸರು ಪಡೆದಿದೆ. ಇದರ ಜನರು ಕ್ರಿಸ್ತರು. ಅವರು ನೂರಾರು ವರ್ಷಗಳಿಂದಲೂ ಫ್ರೆಂಚರ ಪೋಷಣೆಯನ್ನು ಪಡೆದಿ

ಪ್ಪವು. ತೀರದ ಉತ್ತರಾರ್ಧವು ಅಲಯುತ (Alaouites) ಎಂಬ ಜನರ ದೇಶವಾಗಿದೆ. ಒಳದೇಶದಲ್ಲಿ ದಮಾಸ್ಕಸ್ಸಿನ ದಕ್ಷಿಣಕ್ಕಿರುವ ಗಿರಿಪ್ರದೇಶವು ಹೌರಾಣ ಎಂಬ ಹೆಸರನ್ನು ಪಡೆದು, ಅತಿ ಒರಟರಾದ, ಅಲ್ ದುರುಜಿ (Al Duruzi) ಎಂಬವನ ಮತಾನುಯಾಯಿಗಳಾದ ದುರುಜಿ ಅಥವಾ ದ್ರೂಸ (Druses) ಎಂಬ ಜನರ ವಾಸಭೂಮಿಯಾಗಿದೆ. ದಮಾಸ್ಕಸ್ಸಿನಿಂದ ಹಾಲಬ್ (Aleppo) ನಗರದ ಉತ್ತರಕ್ಕೆ ಸಿಲಿಸಿಯಾ ವರೆಗಿನ ದೇಶವು ಅರಬ ಸಂಜ್ಞೆಯಿಂದ ಕೂಡಿ "ನಿಜಸಿರಿಯಾ" ಎನ್ನಿಸಿದೆ. ಈ ನಾಲ್ಕು ಭಾಗಗಳ ಜನರಿಗೂ ಸ್ವಲ್ಪವೂ ಪರಸ್ಪರ ಎರಕವಿಲ್ಲದ್ದರಿಂದ ಇವರೆಲ್ಲರನ್ನೂ ಒಂದೇ ರಾಜ್ಯದ ಸರಕಾರದಲ್ಲಿ ಅಡಗಿಸುವುದು ದುಸ್ಸಾಧ್ಯವಾಗಿದೆ. ದೇಶದಲ್ಲಿ ಬಹುಮತವನ್ನು ಪಡೆದಿರುವ ಅರಬರು ಇತರರನ್ನು ಮೆಟ್ಟಿ ಅರಬ ರಾಜ್ಯವನ್ನು ಕಟ್ಟಿ, ಪ್ಯಾಲೆಸ್ತ, ಇರಾಕ, ಅರಬಸ್ತಾನ ಮೊದಲಾದ ಅರಬ ರಾಜ್ಯಗಳೊಡನೆ ಸೇರಿ ಒಂದು ಸಂಯುಕ್ತ ಅರಬ ರಾಜ್ಯವನ್ನು ಕಲ್ಪಿಸಬೇಕೆಂಬ ಸಂಕಲ್ಪದಿಂದ ಇರುವರು. ಈಗಿನ ಕಾಲದ ಅರಬ ಕುಲದವರ ಚಳವಳಿಗೆಲ್ಲಕ್ಕೂ ಸಿರಿಯವೇ ಮೂಲಸ್ಥಾನವಾಗಿತ್ತು.

ಫ್ರೆಂಚರು ಸಿರಿಯಾ ಸಿಲಿಸಿಯಾ ದೇಶಗಳನ್ನು ತಮ್ಮ ಪಾಲನೆಗೆ ಪಡೆದು ಆಕ್ರಮಿಸಿಕೊಳ್ಳಲು, ಅದನ್ನು ಸಹಿಸದೆ, ಸಿರಿಯದ ಅರಬರು ದಮಾಸ್ಕಸ್ಸಿನಲ್ಲಿ ೧೯೨೦ನೆಯ ಮಾರ್ಚಿಯಲ್ಲಿ ಅಖಿಲ-ಸಿರಿಯಾದ ಪರಿಷತ್ತೊಂದನ್ನು ಸೇರಿಸಿ, ತಮ್ಮ ರಾಜ್ಯದ ಸ್ವಾತಂತ್ರ್ಯವನ್ನು ಸಾರಿ, ಮಕ್ಕಾ ಷರೀಫನ ಮಗ ಫೈಸಲ್ಲನನ್ನು ರಾಜನನ್ನಾಗಿ ಆರಿಸಿ ಪಟ್ಟಗಟ್ಟಿದರು. ದೇಶದಲ್ಲಿ ಫ್ರೆಂಚರ ಮೇಲೆ ಎಲ್ಲೆಲ್ಲೂ ದಂಗೆ ಹುಟ್ಟಿತು. ಫ್ರೆಂಚರು ಗೌರಾದ (Gourad) ಎಂಬ ವಿಖ್ಯಾತ ಸೇನಾಪತಿಯನ್ನು ಲಕ್ಷ ಸೇನೆಯೊಡನೆ ಕಳಿಸಿದರು. ಆತನು ೧೯೨೦ನೆಯ ಜುಲೈ ತಿಂಗಳಲ್ಲಿ ದಮಾಸ್ಕಸ್ಸನ್ನು ಹಿಡಿದು ಫೈಸಲ್ಲನನ್ನು ದೇಶದಿಂದ ಓಡಿಸಿ ಜನರನ್ನು ಸರ್ವತ್ರ ಶಿಕ್ಷಿಸಿ ಹೆದರಿಸಿ ಅಡಗಿಸಿದನು.

ಗೌರಾದನು ನಿಜಸಿರಿಯವನ್ನು ಐದು ರಾಜ್ಯವಾಗಿ ಒಡೆದು ಹಲಬ, ದಮಾಸ್ಕಸ, ಹೌರಾಣ, ಲೆಬನಾನ, ಅಲಯುತ ಎಂದು ಐದು ರಾಜ್ಯಗಳನ್ನು

ನಿರ್ಧರಿಸಿದನು. ಈ ಐದು ರಾಜ್ಯಗಳ ಪ್ರತಿನಿಧಿಗಳು ಒಂದು ಸಂಯುಕ್ತ ಸಮಿತಿಯಾಗಿ ಸೇರತಕ್ಕದ್ದೆಂದು ಕಲ್ಪಿಸಿದನು. ಅದಕ್ಕೆ ಲಿಬನಾನ ಹೌರಾಣ ರಾಜ್ಯಗಳು ಒಪ್ಪಲಿಲ್ಲ. ಇವನು ಕಲ್ಪಿಸಿದ ರಾಜ್ಯವಿಭಾಗಗಳು ತೀರ ಅಸಮರ್ಪಕವಾಗಿದ್ದವು. ಕ್ರೈಸ್ತರಲ್ಲಿ ಪಕ್ಷಪಾತ ತೋರಿಸಿ ಲಿಬನಾನ ರಾಜ್ಯಕ್ಕೆ ಮಿತಿಮೀರಿದಷ್ಟು ಹೆಚ್ಚು ಪ್ರದೇಶವನ್ನು ದಮಾಸ್ಕಸಿನ ರೇವು ನಗರವಾಗಿದ್ದ ಬೇರೂತ (Beyruth) ವನ್ನೂ ಇವನು ಕೊಟ್ಟದ್ದರಿಂದ ದಮಾಸ್ಕಸ್ಸಿನ ವ್ಯಾಪಾರವೂ ಪ್ರಾಮುಖ್ಯತೆಯೂ ನಷ್ಟವಾದವು. ಹಲೆಬ ನಗರದ ರೇವಾದ ತ್ರಿಪೋಲಿಯನ್ನು ಅಲಯುತರಿಗೆ ಕೊಟ್ಟದ್ದರಿಂದ ಆ ನಗರವೂ ಕುಗ್ಗಿತು. ಹಿಂದಿನ ಸಕಲ ವೈಭವಕ್ಕೂ ಅರಬರ ಪ್ರಾಬಲ್ಯಕ್ಕೂ ಆಕರವಾಗಿದ್ದ ಈ ನಗರಗಳೆರಡೂ ದೈನ್ಯವನ್ನು ಪಡೆಯಲು ಅರಬರಿಗೆ ವ್ಯಥೆಯೂ ನಷ್ಟವೂ ಉಂಟಾದವು. ನಿರಂತರವಾದ ಕಲಹ ರೋಗಗಳಿಂದ ಬಹು ಪ್ರಜಾಕ್ಷಯವಾಗಿ ಕ್ಷಾಮವು ಮನೆಮಾಡಿಕೊಂಡಿದ್ದಿತು. ಗೌರಾದನು ನಯಮಾರ್ಗಕ್ಕೆ ಅಪರಿಚಿತನಾಗಿ ನೀತಿಗೆ ಮುಂಚೆ ಸಿರಿಯಾದವರನ್ನು ದಂಡಿಸುತ್ತ ಆಳುತ್ತಿದ್ದನು.

೧೯೨೩ರಲ್ಲಿ ಗವರ್ನರನಾಗಿ ಬಂದ ವೇಗಾಂಡನು ನಯಮಾರ್ಗದಿಂದ ದೇಶವನ್ನು ಶಾಂತಸ್ಥಿತಿಗೆ ತಂದು, ಹಲೆಬ ದಮಾಸ್ಕಸ ರಾಜ್ಯಗಳನ್ನು ಒಂದೇ ರಾಜ್ಯವಾಗಿ ಸೇರಿಸಿ ಅರಬರನ್ನು ಸಮಾಧಾನಪಡಿಸಿದನು. ಆದರೆ ೧೯೨೪ರಲ್ಲಿ ಫ್ರಾನ್ಸಿನಲ್ಲಿ ಪಟ್ಟಕ್ಕೆ ಬಂದ ಇವನ ಎದುರುಪಕ್ಷದವರು ಇವನನ್ನು ಹಿಂದಕ್ಕೆ ಕರೆಸಿಕೊಂಡು ಸರೇಯ್ಲ (Sarrail) ಎಂಬ ಪ್ರಸಿದ್ಧ ಸೇನಾಪತಿಯನ್ನು ಕಳಿಸಿದರು.

ಸರೇಯ್ಲನು ನಯವೆಂಬುದನ್ನೇ ಕಂಡರಿಯದ ಹಠವಾದಿಯಾದ ಸೇನಾನಿಯು; ನಾಸ್ತಿಕನಾದ್ದರಿಂದ ಸಕಲ ಮತಗಳ ಮುಖಂಡರನ್ನು ಅವನು ಅಪಮಾನಿಸಿದನು. ಫ್ರೆಂಚರ ಜನ್ಮಾಧಿಮಿತ್ರರಾದ ಕ್ರೈಸ್ತರು ಸಹ ಅರಬರೊಡನೆ ಸೇರಿ ವಿರುದ್ಧಾಚರಣೆ ಪ್ರಾರಂಭಿಸಿದರು. ಇವನು ಲಿಬನಾನ ರಾಜ್ಯಕ್ಕೆ ಜನರಿಗೆ ಅಪ್ರಿಯನಾದ ಒಬ್ಬ ಗವರ್ನರನನ್ನು ನೇಮಿಸಿದನು. ಅಲ್ಲಿನ ರಾಜ್ಯಸಭೆಯು ತನ್ನ ಅಸಮಾಧಾನವನ್ನು ಪ್ರದರ್ಶಿಸಲು ಸರೇ

ಯ್ಲನು ಆ ಸಭೆಯನ್ನೇ ಮುಚ್ಚಿಸಿದನು. ಇವನನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಕ್ರೈಸ್ತರೆಲ್ಲರೂ ಫ್ರಾನ್ಸಿಗೆ ಮೊರೆಯಿಟ್ಟರು. ೧೯೨೫ನೆಯ ಜೂಲೈ ತಿಂಗಳಲ್ಲಿ ಬೇರೂತ ನಗರದ ಪ್ರಜೆಗಳು ತೆರಿಗೆಗಳನ್ನು ಕಡಿಮೆ ಮಾಡಿಕೊಡುವಂತೆ ಕೇಳಿಕೊಂಡರು. ಅದಕ್ಕೆ ಉತ್ತರವಾಗಿ ಸರಕಾರದವರು ಈ ಪ್ರಜೆಗಳ ಮೇಲೆ ಗುಂಡು ಹಾರಿಸಿ ಅನೇಕರನ್ನು ಕೊಲ್ಲಿಸಿದರು. ಹೌರಾನದ ಗವ್ಹರ್ನರನಾಗಿದ್ದ ಕಾರ್ಬಿಲ್ಲೆಟ್ (Carbillet) ಎಂಬವನು ಅಲ್ಲಿನ ಜನರ ನಡೆನುಡಿಗಳನ್ನರಿಯದೆ ಸರ್ವದಾ ಅವರ ಮನಸ್ಸನ್ನು ನೋಯಿಸುತ್ತಿದ್ದನು. ಇವನ ಹೆಂಡತಿಯು ಮಮತೆಯಿಂದ ಸಾಕುತ್ತಿದ್ದ ಬೆಕ್ಕು ಒಂದು ದಿವಸ ಎಲ್ಲಿಯೋ ತಪ್ಪಿಸಿಕೊಂಡು ಹೋಯಿತು. ಒಡನೆಯೇ ಕಾರ್ಬಿಲ್ಲೆಟನು ೨೪ ಗಂಟೆಯೊಳಗಾಗಿ ಅದನ್ನು ಹುಡುಕಿ ತಂದುಕೊಡದಿದ್ದರೆ ರಾಜಧಾನಿಯವರೆಲ್ಲರಿಗೂ ದಂಡ ಹಾಕುವುದಾಗಿ ಸಾರಿದನು. ಬೆಕ್ಕು ಸಿಕ್ಕಲಿಲ್ಲ. ಇವನು ಹಾಕಿದ ದಂಡವನ್ನು ಯಾರೂ ಕೊಡಲಿಲ್ಲ. ಜನರು ಇವನನ್ನು ಹಿಂದಕ್ಕೆ ಕರೆಸಿಕೊಳ್ಳುವಂತೆ ಹೇಳಲು ಒಂದು ಬಿನ್ನಹ ಮಂಡಲಿಯನ್ನು ಬೇರೂತಕ್ಕೆ ಕಳುಹಿಸಿದರು. ಅದಕ್ಕೆ ಭೆಟ್ಟಿಗೆ ಅವಕಾಶ ದೊರೆಯಲಿಲ್ಲ. ಮತ್ತೊಂದು ಬಿನ್ನಹಮಂಡಲಿಗೆ ಸರೇಯ್ಲನು ದಮಾಸ್ಕಸಿನಲ್ಲಿ ದರ್ಶನವಿತ್ತು ಅವರ ಬಿನ್ನಹವನ್ನು ತಿರಸ್ಕರಿಸಿದ್ದಲ್ಲದೆ ಅವರೆಲ್ಲರನ್ನು ಸೆರೆಗೆ ಹಾಕಿದನು.

ಈ ಅತ್ಯಾಚಾರಗಳಿಗೆ ಸಹಿಸದೆ ದುರುಸರು ಭಯಂಕರವಾಗಿ ದಂಗೆ ಎಬ್ಬಿಸಿ ತಮ್ಮ ರಾಜ್ಯದಲ್ಲಿದ್ದ ಫ್ರೆಂಚ ದಳವನ್ನು ನಾಶಮಾಡಿದರು. ಕೂಡಲೆ ಮುಸಲ್ಮಾನ ಅರಬರೂ ದಂಗೆಯೆದ್ದರು. ಸಿರಿಯದ ಸ್ವರಾಜ್ಯವಾದಿಗಳು ಇವರೊಡನೆ ಸೇರಿಕೊಂಡರು. ಸ್ವಾತಂತ್ರ್ಯ ಚಳವಳಿಗೆ ಪ್ರಾರಂಭಿಸಲು ದೇಶದ ಎಲ್ಲ ಭಾಗಗಳಲ್ಲೂ ಉರಿಯುತ್ತಿತ್ತು. ಇದನ್ನು ಅಡಗಿಸಲು ಫ್ರೆಂಚರು ಅಪಾರವಾದ ಸೇನೆಯನ್ನು ಕಳಿಸಬೇಕಾಯಿತು. ರಾಜಧಾನಿಯಲ್ಲಿ ವಿದ್ರೋಹವು ಹರಡದಂತೆ ಮಾಡುತ್ತೇನೆಂದು ಹೊರಟು ಸರೇಯ್ಲನು ಹಲವು ಹುಚ್ಚಾಟಗಳನ್ನು ಆಡಿದನು. ದಮಾಸ್ಕಸಿನ ಊರಬಳಿಯ ತೋಟಗಳಲ್ಲಿ ಶಾಂತಿಯಿಂದ ಕೆಲಸ ಮಾಡುತ್ತಿದ್ದ ಹಲವರು ಕೆಲಸಗಾರರು ಏಕಾಏಕಿ ಹಿಡಿಯಲ್ಪಟ್ಟು ವಿದ್ರೋಹಿಗಳೆಂದು ವಧಿಸಲ್ಪಟ್ಟರು. ಇದರಿಂದ

ಜನರು ತಪ್ತರಾಗಿ, ಊರಿಗೆ ಕಳ್ಳತನದಿಂದ ಬಂದು ಸೇರಿದ್ದ ಕೆಲ ಮದುಸಂ ಸಂಗಡ ಸೇರಿ ಸ್ವಲ್ಪ ಗಾಗಳೆ ಮಾಡಿದರು. ಒಡನೆಯೆ ಸರೇಯ್ಲನು ಈ ನಗರದ ಮೇಲೆ, ಎಚ್ಚರಿಕೆ ಕೊಡದೆ, ವಿಮಾನಗಳಿಂದಲೂ ಶಸ್ತ್ರರಥ (Armoured cars) ಗಳಿಂದಲೂ ಚಲಾಕವ್ಯೂಹ (Tanks) ಗಳಿಂದಲೂ ೩೬ ಗಂಟೆಕಾಲ ಸಿಡಿಗುಂಡುಗಳ ವರ್ಷವನ್ನು ಕರಸಿ ಸುಮಾರು ೨,೦೦೦ ಜನರನ್ನು ಕೊಲ್ಲಿಸಿದನು. ಚರಿತ್ರಪ್ರಸಿದ್ಧವಾದ ಬೀದಿಗಳು ಕಟ್ಟಡಗಳೂ ಬೆಂದು ನಾಶವಾದವು. ಈ ಅತ್ಯಾಚಾರದಿಂದ ಲೋಕದಲ್ಲೆಲ್ಲಾ ಹಾಹಾಕಾರ ಹುಟ್ಟಿದ್ದರಿಂದ ಫ್ರೆಂಚರು ಸರೇಯ್ಲನನ್ನು ಹಿಂದಕ್ಕೆ ಕರಸಿಕೊಳ್ಳಬೇಕಾಯಿತು. (೧೯೨೫ ಡಿಸೆಂಬರು). ದಮಾಸ್ಕಸ ನಗರವು ಮತ್ತೆ ೧೯೨೬ನೆಯ ಮೇ ತಿಂಗಳಲ್ಲಿ ಶಸ್ತ್ರಪ್ರಹಾರಕ್ಕೆ ಗುರಿಯಾಗಿ ೧೬೦೦ ಕಟ್ಟಡಗಳನ್ನೂ ೧೦೦೦ ಜನರನ್ನೂ ಕಳೆದುಕೊಂಡಿತು. ಈ ದಂಗೆಯು ೧೯೨೭ರ ಮಧ್ಯಭಾಗದವರೆಗೂ ಉಪಶಮನವಾಗಲಿಲ್ಲ.

ಫ್ರೆಂಚರು ತಮ್ಮ ಹಿಂದಲ ದಂಡನೀತಿ ಮಾರ್ಗವನ್ನು ಬಿಟ್ಟು ದೇಶದಲ್ಲಿ ಸ್ವರಾಜ್ಯವನ್ನೂ ಅಖಿಲ ಸಿರಿಯಾ ಸಂಯುಕ್ತ ರಾಜ್ಯವನ್ನೂ ಸ್ಥಾಪಿಸುವುದಾಗಿ ಸ್ಪಷ್ಟವಾಗಿ ಭರವಸೆ ಕೊಟ್ಟರು. ಆದರೂ ಜನರು ಶಾಂತರಾಗಲಿಲ್ಲ. ಫ್ರೆಂಚರಿಗೆ ಬಹಳ ಬೇಕಾಗಿದ್ದ ಲಿಬನಾನದವರು ೧೯೨೭ರಲ್ಲಿ ಫ್ರೆಂಚರು ದೇಶವನ್ನು ಬಿಟ್ಟು ಹೋಗಬೇಕೆಂದು ಚಳವಳಿ ಪ್ರಾರಂಭಿಸಿ ಅವರು ಹಾಕಿದ ತೆರಿಗೆಗಳನ್ನೆಲ್ಲಾ ವಿರೋಧಿಸಿದರು. ಇದರ ಗವರ್ನರನು ತನ್ನನ್ನು ವೈದ ಒಂದು ಪತ್ರಿಕೆಯ ಮೇಲೆ ವ್ಯಾಜ್ಯ ತರಲು ದೇಶದ ಪ್ರಧಾನ ವಕೀಲರೆಲ್ಲರೂ ತಾವಾಗಿ ಬಂದು ಅಪರಾಧಿಯ ಪಕ್ಷವನ್ನು ವಹಿಸಿ ವ್ಯಾಜ್ಯವನ್ನು ಜಯಿಸಿದರು. ೧೯೨೮ರಲ್ಲಿ ಸಿರಿಯಾದಲ್ಲಿ ಏರ್ಪಡಿಸಿದ ಚುನಾವಣೆಗಳು ಅಸಹಕಾರದಿಂದಲೂ ದಂಗೆಗಳಿಂದಲೂ ವಿಫಲವಾದವು. ಅಂತಿಯೋಕ ನಗರದ ಪ್ರಾಂತ್ಯದವರು ತುರುಕ ಭಾಷೆಯುಳ್ಳದಕ್ಕೆ ತಮ್ಮ ಪ್ರಾಂತ್ಯಕ್ಕೆ ಸ್ವಾಧೀನತೆಯನ್ನು ಬಯಸಿದರು. ಅರಬರೆಲ್ಲರೂ ಲಿಬನಾನ ರಾಜ್ಯವನ್ನು ಹಿಂದಲ ಗಡಿಗಳಷ್ಟಕ್ಕೆ ಇಳಿಸಬೇಕೆಂದು ಚಳವಳಿ ನಡೆಸಿದರು. ಫ್ರೆಂಚರು ಬಹಳ ಸಾಹಸಪಟ್ಟು ಸಿರಿಯಾದಲ್ಲಿ ಒಂದು ದೇಶೀಯ ಸರ್ಕಾರವನ್ನು ಏರ್ಪಡಿಸಿದರು. ಅದರ ಮಂತ್ರಿಗಳೆಲ್ಲರೂ

ಸ್ವರಾಜ್ಯವನ್ನು ಬಯಸಿ ಫ್ರೆಂಚರನ್ನು ವಿರೋಧಿಸಿದರು. ತಾವು ಹೇಳಿದಂತೆ ಕೇಳತಕ್ಕವರನ್ನು ಮಂತ್ರಿಗಳಾಗಿ ಮಾಡಲು ಫ್ರೆಂಚರು ಪ್ರಯತ್ನಿಸಿ ವಿಫಲರಾದರು. ೧೯೩೦ರಲ್ಲಿ ಸೇರಿದ್ದ ಒಂದು ಪ್ರಜಾಪರಿಷತ್ತು ಇಡೀ ಸಿರಿಯಾ ದೇಶವೂ ಪ್ರತ್ಯೇಕ ಧ್ವಜಾಂಕದಿಂದ ಕೂಡಿ, ಫ್ರೆಂಚರ ಪಾಲನೆ ಇಲ್ಲದೆ, ಒಂದೇ ಒಂದು ಸ್ವತಂತ್ರ ರಾಜ್ಯವಾಗಬೇಕೆಂದು ತೀರ್ಮಾನಿಸಿತು. ಫ್ರೆಂಚರು ಇದನ್ನು ಮುಚ್ಚಿಸಿದರು. ಸಿರಿಯದ ಶಾಸನಸಭೆಯು ಇದೇ ತೀರ್ಮಾನವನ್ನು ತಾವು ಅಂಗೀಕರಿಸುವುದಾಗಿ ಹೇಳಿದರು. ಜನರು ಸಮ್ಮತಿಸದೆ ಸ್ವರಾಜ್ಯಕ್ಕಾಗಿ ಮಹಾಛಲದಿಂದ ಹೋರಾಡುತ್ತಿರುವರು. ಸಿರಿಯಾ ಪ್ಯಾಲೆಸ್ತು ದೇಶಗಳನ್ನು ಒಂದೇ ರಾಜ್ಯವಾಗಿ ಸೇರಿಸಬೇಕೆಂದು ಮತ್ತೊಂದು ಚಳವಳಿ ಸಹ ನಡೆಯುತ್ತಿದೆ.

೧೯೩೯ರಲ್ಲಿ ಫ್ರೆಂಚರು ಸಿಲಿಸಿಯವನ್ನು ತುರುಕರಿಗೆ ಬಿಟ್ಟು ಕೊಟ್ಟಿದ್ದರು. ಆಗ ಅಲ್ಲಿಂದ ೧ ಲಕ್ಷ ಆರ್ಮೇನಿಯನರು ಸಿರಿಯಾಕ್ಕೆ ಓಡಿ ಬಂದು ಫ್ರೆಂಚರ ಆಶ್ರಯವನ್ನು ಪಡೆದರು. ವ್ಯಾಪಾರಿಗಳಾದ ಈ ಜನರು ಕೃಷಿಕರಾಗಲು ಬಯಸದೆ, ನಗರಗಳಲ್ಲಿ ಹಂದಿಗೊಡ್ಡಿಗಳಲ್ಲಿ ಕಿಕ್ಕಿರಿದು ಸೇರಿಕೊಂಡು, ಅವುಗಳ ಕೊಳಕನ್ನೂ ರೋಗವನ್ನೂ ಹೆಚ್ಚಿಸುತ್ತ, ದೇಶೀಯರ ವ್ಯಾಪಾರವನ್ನು ಕೆಡಿಸುತ್ತ, ಸರ್ವರಿಗೂ ಅಪ್ರಿಯರಾಗಿ ತೊಂದರೆ ಕೊಡುತ್ತಿರುವರು. ದೇಶದ ಗಲಭೆಗೆ ಇದೂ ಒಂದು ಕಾರಣವು.

ಜನರಿಗೆ ಅನುಭವವಿಲ್ಲದ [illegible] ಸರ್ಕಾರಗಳನ್ನು ಫ್ರೆಂಚರು ಸ್ಥಾಪಿಸಿದ್ದರಿಂದ ಅವು ಸ್ಥಿರವಾಗಿ ಬಾಳಲಿಲ್ಲವೆಂದು ಕೆಲ ವಿಮರ್ಶಕರು ಅಭಿಪ್ರಾಯಪಡುತ್ತಿರುವರು.

ಸಿರಿಯವು ಬಹು ಫಲವತ್ತಾದ ದೇಶವು. ದೇಶದ ತೀರಪ್ರದೇಶವೂ ಒಳಪ್ರದೇಶವೂ ಅನ್ಯೋನ್ಯಾಶ್ರಯವಿಲ್ಲದಿದ್ದರೆ ತೀರ ದುರ್ಬಲವಾಗಿ ದುರ್ದೆಸೆಯನ್ನು ಪಡೆಯುವುವು. ಈ ಪ್ರಾಂತ್ಯಗಳ ಕುಲ ಮತ್ತು ಮತ ಸ್ಥಿತಿಗಳು ಇವುಗಳ ಏಕೀಕರಣಕ್ಕೆ ಅಡ್ಡಿಯಾಗಿವೆ. ಅವರ ದೇಶದಲ್ಲಿ ಆರ್ಥಿಕಾಭಿವೃದ್ಧಿಯು ಚೆನ್ನಾಗಿ ನಡೆದು ವಿದ್ಯಾಭ್ಯಾಸವು ಹರಡಿದರೆ ಜನರು

ಹೊಸ ಹೊಸ ಆರ್ಥಿಕ ಮತ್ತು ರಾಜಕೀಯ ಅನುಬಂಧಗಳಿಂದ ಬಂಧಿತರಾಗಿ ಬಹುಮತ್ಯವನ್ನು ಕಾಲಕ್ರಮದಲ್ಲಿ ಪಡೆಯುವರು. ಈಗ ಮರುಭೂಮಿಯಾಗಿರುವ ಪೂರ್ವಸಿರಿಯಾ ದೇಶದಲ್ಲಿ ಯೂಫ್ರೈಟಿಸನದಿಯನ್ನು ಚೆನ್ನಾಗಿ ಉಪಯೋಗಪಡಿಸಿಕೊಂಡದ್ದೇ ಆದರೆ ಅಲ್ಲಿ ಧಾನ್ಯವೂ ವಿದ್ಯುಚ್ಛಕ್ತಿಯೂ ಹತ್ತಿಯೂ ಸಮೃದ್ಧಿಯಾಗಿ ಬೇಗ ದೇಶವು ಏಳಿಗೆಯನ್ನು ಪಡೆಯುವುದು.

## (೫) ಪ್ಯಾಲೆಸ್ತ ದೇಶ.

ಈ ದೇಶದಲ್ಲಿರುವ ೨೨। ಲಕ್ಷ ಜನರಲ್ಲಿ ಅರಬರು ೧೪॥ ಲಕ್ಷ, ಯಹೂದರು ೪ ಲಕ್ಷ, ತುರ್ಕಮಾನರು ೧। ಲಕ್ಷ, ಪಾರಸೀಕರು ೬೦ ಸಾವಿರ, ಜೂಷರು ೬೫ ಸಾವಿರ, ಕ್ರೈಸ್ತರು ೬೦ ಸಾವಿರ, ಅರ್ಮೇನಿಯನರು ೬೦ ಸಾವಿರ ಮಂದಿ ಇರುವರು. ಯೂದ ಜನರಿಗೆ ಈ ದೇಶವು ಅನಾದಿಯಾದ ಅತ್ಯಂತ ಪವಿತ್ರವಾದ ಸ್ವದೇಶವು. ಕ್ರೈಸ್ತ ಜನರಿಗೂ ಇದು ಮಹಾಪುಣ್ಯ ದೇಶವಾಗಿದೆ. ಇದು ಮುಸಲ್ಮಾನರ ಕೈಗೆ ಬೀಳದಂತೆ ತಪ್ಪಿಸಲು ಕ್ರೈಸ್ತರು ಹಲ ಶತಮಾನ ಕಾಲ ಹೋರಾಡಿ ಭಂಗಪಟ್ಟಿದ್ದರು. ಆದರೆ ಕ್ರೈಸ್ತರಿಗೂ ಯೂದರಿಗೂ ಪ್ರಥಮಪುಣ್ಯಕ್ಷೇತ್ರವಾಗಿರುವ ಜರೂಸಲೆಮ್ ನಗರವು ಮುಸಲ್ಮಾನರಿಗೆ ಮಕ್ಕಾ ಮದೀನಾ ನಗರಗಳ ತರುವಾಯ ತೃತೀಯ ಮಹಾ ಪುಣ್ಯಕ್ಷೇತ್ರವಾಗಿದೆ. ಖಲೀಫ ಉಮರನು ಕಟ್ಟಿಸಿದ ಅತಿ ಪವಿತ್ರವಾದ ಮಸೀತಿ ಇಲ್ಲಿದೆ. ಸಾವಿರಾರು ವರ್ಷಗಳಿಂದ ಈ ದೇಶವನ್ನಾಳುತ್ತ ಇಲ್ಲಿ ಬಹುಮತವನ್ನು ಪಡೆದಿರುವ ಮುಸಲ್ಮಾನರು ಕ್ರೈಸ್ತರಾಗಲಿ ಯೂದರಾಗಲಿ ಈ ನಗರದಲ್ಲೂ ಈ ದೇಶದಲ್ಲೂ ತಮಗಿಂತಲೂ ಅಧಿಕ ಪ್ರಾಬಲ್ಯವನ್ನು ಪಡೆಯುವುದಕ್ಕೆ ಸೈರಿಸರು.

ಸುಯೆಜ ಕಾಲುವೆಯನ್ನೂ ಭೂಮಧ್ಯ ಸಮುದ್ರಮಾರ್ಗವನ್ನೂ ಬ್ರಿಟಿಷರು ವಶಪಡಿಸಿಕೊಳ್ಳದೆ ಹೋದರೆ ಅವರ ಏಶಿಯಾ ಸಾಮ್ರಾಜ್ಯಕ್ಕೆ ಉಳಿಗಾಲವಿಲ್ಲ. ಐಗುಪ್ತ ದೇಶವನ್ನು ಕಬಳಿಸಿ ಇವರು ಈ ಕಾರ್ಯವನ್ನು ಸ್ವಲ್ಪ ದೂರ ಸಾಧಿಸಿದ್ದರು. ಆದರೆ ಪ್ರಬಲನಾದ ಶತ್ರುವು ಪ್ಯಾಲೆಸ್ತ ದೇಶದಲ್ಲಿ ಅಧಿಕಾರವನ್ನು ಪಡೆದರೆ ಅವನು ಈ ಮಾರ್ಗವನ್ನು ಬ್ರಿಟಿಷರಿಗೆ ಮುಚ್ಚಿ ಅನಾಹುತವನ್ನು ಕಲ್ಪಿಸಲು ಸಾಧ್ಯ. ಬಹುಕಾಲದಿಂದಲೂ

ಸಿರಿಯಾದಲ್ಲಿ ಪ್ರಾಬಲ್ಯವನ್ನು ಪಡೆದಿದ್ದ ಫ್ರೆಂಚರು ಈ ದೇಶವನ್ನು ಬಯಸುತ್ತಿದ್ದರು. ಜರ್ಮನರೂ ರುಷ್ಯರೂ ಇರಾಣ ಸಮುದ್ರದವರೆಗೂ ಹಬ್ಬಿ ಬ್ರಿಟಿಷರನ್ನು ನುಗ್ಗಿಬಡಿಯಲು ಹವಣಿಸಿದ್ದರು. ಇರಾಣ ಕಡಲಿನ ತೀರದಿಂದ ಪೆಲೆಸ್ತದೇಶವನ್ನು ಆಕ್ರಮಿಸಿಕೊಳ್ಳುವುದು ಸುಲಭ. ಇದಲ್ಲದೆ ಸ್ವಾತಂತ್ರ್ಯಪ್ರಿಯರಾದ ಐಗುಪ್ತರ ದೇಶದಲ್ಲಿ ತಮ್ಮ ಅಧಿಕಾರವು ಸ್ಥಿರವಿಲ್ಲವೆಂದು ತಿಳಿದಿದ್ದರು. ಇರಾಣ ಸಮುದ್ರತೀರದ ಕಲ್ಲೆಣ್ಣೆಯನ್ನು ವಶಪಡಿಸಿಕೊಂಡು ಇರಾಕ ದೇಶವನ್ನೂ ಮೊಸುಲ ಪ್ರಾಂತ್ಯದ ಕಲ್ಲೆಣ್ಣೆಯನ್ನೂ ಸಂಪಾದಿಸಲು ಆಶಿಸುತ್ತಿದ್ದ ಬ್ರಿಟಿಷರಿಗೆ ಅಲ್ಲಿನ ಕಲ್ಲೆಣ್ಣೆಯನ್ನು ತಮ್ಮ ದೇಶಕ್ಕೆ ಪೆಲೆಸ್ತದೇಶದ ಮಾರ್ಗವಾಗಿ ಸಾಗಹಾಕುವುದು ಅತಿ ಸಮೀಪವೂ ಸುಲಭವೂ ಸುರಕ್ಷಿತವೂ ಆಗಿರುವುದು—ಇತ್ಯಾದಿ ಕಾರಣಗಳಿಂದ ಪೆಲೆಸ್ತ ದೇಶವನ್ನು ಹೇಗಾದರೂ ಮಾಡಿ ತಾವು ಸಂಪಾದಿಸಬೇಕೆಂದು ಬ್ರಿಟಿಷರು ಸಂಕಲ್ಪಿಸಿದ್ದರು. ಯುರೋಪ್ಯ ಯುದ್ಧಕಾಲದಲ್ಲಿ ಬ್ರಿಟಿಷರು ಫ್ರೆಂಚರೊಡನೆ ಮಾಡಿಕೊಂಡ ರಹಸ್ಯಸಂಧಿಗಳಲ್ಲಿ ಈ ದೇಶವನ್ನು ಫ್ರೆಂಚರು ಪಡೆಯಬಹುದೆಂದು ಮೊದಲು ಒಪ್ಪಿದ್ದು, ಅನಂತರ ಸರ್ವ ಜನಾಂಗ ಮಧ್ಯಸ್ಥವಾಗಿರಲು ಅಂಗೀಕರಿಸಿದ್ದರು. ಬಹಿರಂಗವಾಗಿ ಅದು ಅರಬರಿಗೆ ಸೇರತಕ್ಕದ್ದೆಂದು ಒಪ್ಪಿ ಅವರನ್ನು ದಂಗೆಯೆಬ್ಬಿಸಿದರು. ಯುದ್ಧದಲ್ಲಿ ದೇಶವು ತಮ್ಮ ವಶಕ್ಕೆ ಬಂದ ಮೇಲೆ ತಾವು ಕೊಟ್ಟ ವಚನಗಳನ್ನೆಲ್ಲ ಮೀರಿ ೧೯೨೦ರಲ್ಲಿ ಈ ದೇಶದ ಪಾಲನಾಧಿಕಾರವನ್ನು ಸಂಪೂರ್ಣವಾಗಿ ಪಡೆದುಕೊಂಡು ಅಲ್ಲಿಗೆ ರಾಜಾಧಿಕಾರಿಗಳಾದರು. ಈಚೆಗೆ ಇರಾಣ ಕಡಲಿನ ಬಳಿ ಇರುವ ತಮ್ಮ ಕಲ್ಲೆಣ್ಣೆಯ ಕ್ಷೇತ್ರಗಳಿಂದ ಪೆಲೆಸ್ತ ದೇಶಕ್ಕೆ ಎಣ್ಣೆಯ ನಲ್ಲಿ (Pipe Line) ಹಾಕಿರುವಲ್ಲದೆ, ಪೆಲೆಸ್ತ ದೇಶದ ಹೈಫ ನಗರವನ್ನು ಭೂಮಧ್ಯ ಸಮುದ್ರದ ಪೂರ್ವತೀರದಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ರೇವಾಗಿಯೂ ವಿಮಾನಯಾನ ಕ್ಷೇತ್ರವಾಗಿಯೂ ಕಟ್ಟುವರು.

ಪೆಲೆಸ್ತ ದೇಶವು ಅತಿದರಿದ್ರ ಬೆಂಗಾಡಾದ್ದರಿಂದ ಅದರ ಅಭಿವೃದ್ಧಿಗೆ ಅಪಾರವಾದ ಹಣವು ಬೇಕಾಗುವುದು. ಬ್ರಿಟಿಷರು ತಂತ್ರದಿಂದ ಈ ದೇಶವನ್ನು "ಯಹೂದ ಜನಾಂಗ ವಾಸಭೂಮಿ" ಯಾಗಿ ಮಾಡುವುದಾಗಿ ಘೋಷಿಸಿ ಕೊಟ್ಟು ಅಲ್ಲಿನ ದೇಶಾಭಿವೃದ್ಧಿಯ ವೆಚ್ಚವನ್ನು ಜೂದ

ಜನರ ತಲೆಗೆ ಕಟ್ಟಿ ತನ್ನ ಪ್ರಯೋಜನವನ್ನು ಸಾಧಿಸಿಕೊಂಡಳು. ಈ ದೇಶದ ಸ್ವಾಮಿತ್ವವನ್ನು ಬ್ರಿಟಿಷರಿಗೆ ವಹಿಸಿದ ಪಾಲಕಾಧಿಕಾರ ಪತ್ರದಲ್ಲಿ ಪ್ಯಾಲೆಸ್ತ ದೇಶವನ್ನು ಜೂದ-ವಾಸಭೂಮಿಯಾಗಿ ಮಾಡುವುದು ಅವರ ಸರ್ಕಾರಕ್ಕೆ ಉದ್ದೇಶವಾಗಿರಬೇಕೆಂದೂ, ಅದನ್ನು ನೆರವೇರಿಸಲು ಒಂದು ಜೂದ-ಕಾರ್ಯಕರ್ತರ ಸಂಸ್ಥೆ (Jewish Agency) ಏರ್ಪಡಬೇಕೆಂದೂ, ಈ ದೇಶದ ಸರ್ಕಾರವು ಈ ಉದ್ದೇಶಪರಿಪಾಲನೆಯಲ್ಲೂ ಜೂದ ಜನರಿಗೆ ಸಂಬಂಧಪಟ್ಟ ವಿಚಾರಗಳಲ್ಲೂ ಈ ಸಂಸ್ಥೆಯ ಪರಾಮರ್ಶದಂತೆ ನಡೆಯುವುದೆಂದೂ ವಿಧಿ ಹುಟ್ಟಿತು. ಈ ಉದ್ದೇಶಕ್ಕಾಗಿ ಕೆಲಸನಡೆಸುತ್ತಿದ್ದ ಜಯೋನಿಸ್ಟ್ ಪಕ್ಷದವರ ನಿರ್ವಾಹಕ ಸಮಿತಿಯೇ ಈ ದೇಶದ ಜೂದ-ಕಾರ್ಯಕರ್ತರ ಸಂಸ್ಥೆಯಾಗಿ ಅಂಗೀಕರಿಸಲ್ಪಟ್ಟು, ಬ್ರಿಟಿಷರಿಗೆ ಎರಡನೆಯ ಕೈಯಾಗಿ ಈ ದೇಶದಲ್ಲಿ ಪ್ರಾಬಲ್ಯವನ್ನು ಪಡೆಯಿತು.

ಈ ಏರ್ಪಾಡಿನಂತೆ ವರ್ಷಂಪ್ರತಿ ಪ್ಯಾಲೆಸ್ತ ದೇಶಕ್ಕೆ ಸಾವಿರಾರು ಮಂದಿ ಜೂದರು ವಲಸೆ ಬಂದು ನೆಲೆಸಲಾರಂಭಿಸಿದರು. ಮೇಲೆ ಹೇಳಿದ ಜೂದ-ಕಾರ್ಯಕರ್ತರ ಸಂಸ್ಥೆಯು ಸರ್ಕಾರದಿಂದ ಒಂದು ಕಾಸಿನ ಸಹಾಯವನ್ನೂ ಬಯಸದೆ, ತಾನೇ ಹಣವನ್ನು ಕೂಡಿಸಿ, ಈ ದೇಶದಲ್ಲಿ ತನ್ನ ಜನರಿಗೆ ಭೂಮಿಯನ್ನು ಕೊಂಡು, ಮನೆಗಳನ್ನು ಕಟ್ಟಿಸಿ, ನೀರಾವರಿ ಕೆಲಸಗಳನ್ನು ಕೈಕೊಂಡು, ವಿದ್ಯುಚ್ಛಕ್ತಿಯನ್ನು ಸೃಜಿಸಿ, ಶಾಲೆಗಳನ್ನೂ ವೈದ್ಯಾಲಯಗಳನ್ನೂ ಸ್ಥಾಪಿಸಿ, ವ್ಯಾಪಾರ ಕೈಗಾರಿಕೆಗಳನ್ನು ಹೆಚ್ಚಿಸಿ, ಸೊಳ್ಳೆ ರೋಗವನ್ನಡಗಿಸಲು ಜೌಗು ಪ್ರದೇಶಗಳನ್ನು ಬತ್ತಿಸಿ ತನ್ನ ಜನರಿಗೂ ಈ ದೇಶಕ್ಕೂ ಅತ್ಯಂತ ಹಿತವನ್ನು ಕಲ್ಪಿಸಿತು. ಇದು ಸ್ಥಾಪಿಸಿದ ಜೂದ-ವಿದ್ಯಾಪೀಠವನ್ನು ೧೯೨೫ರಲ್ಲಿ ಬಾಲ್ಫರನು ಬಂದು ತೆರೆದನು.

ಜೂದರ ಅಪ್ರತಿಹತವಾದ ಉತ್ಕರ್ಷವನ್ನು ಕಂಡು ಪ್ಯಾಲೆಸ್ತ ದೇಶದ ಕ್ರೈಸ್ತರೂ ಇಂಗ್ಲೆಂಡಿನ ಕೆಲ ಕ್ರೈಸ್ತರೂ ಅಸೂಯೆಯಿಂದ ಅವರಿಗೆ ವಿರುದ್ಧವಾಗಿ ಕಿರುಕುಳ ಮಾಡಲಾರಂಭಿಸಿದರು. ೧೯೨೬-೨೭ರಲ್ಲಿ ಈ ದೇಶದಲ್ಲಿ ಪ್ರಬಲವಾದ ಆರ್ಥಿಕ ಮುಗ್ಗಟ್ಟು ಉಂಟಾಗಿ ಜೂದರು ಬಹಳ ನಷ್ಟಪಟ್ಟಿದ್ದರಿಂದ, ಇಲ್ಲಿಗೆ ವಲಸೆಯಾಗಿ ಬಂದಿದ್ದ ಬಹುಜನರು ಪರದೇಶಗಳಿಗೆ ಹೋಗಲಾರಂಭಿಸಿದರು. ಈ ಸಮಯದಲ್ಲಿ ಜಯೋನಿಸ್ಟ್ ಪಕ್ಷಕ್ಕೆ

ಸೇರದೆ ಇದ್ದ ಯೂದರು ಸಹ ಜಯಾನರೊಡನೆ ಸ್ವಜನಾಭಿಮಾನದಿಂದ ಪರಿಷತ್ತಿಗೆ ಸೇರಿ, ಸಕಲರೂ ಒಗ್ಗಟ್ಟಾಗಿ ಪ್ಯಾಲೆಸ್ತ ದೇಶದ ಅಭಿವೃದ್ಧ್ಯುದ್ಯೋಗಗಳಿಗೆ ಧನಸಹಾಯ ಮಾಡಬೇಕೆಂದು ತೀರ್ಮಾನಿಸಿದರು. ಇವರ ಸಹಾಯದಿಂದ ಈ ದೇಶದಲ್ಲಿ ಯೂದರು ಮತ್ತೆ ನೆಲೆಸಿಕೊಳ್ಳಲು ಅವಕಾಶವಾಯಿತು (೧೯೨೮). ಈ ರಾಜ್ಯದ ಯೂದ-ಕಾರ್ಯಕರ್ತ ಸಂಸ್ಥೆಯು ಜಯಾನ್ ಪಕ್ಷದವರೊಬ್ಬರ ಸಂಸ್ಥೆಯಾಗಿರುವುದಕ್ಕೆ ಪ್ರತಿಯಾಗಿ ಸಕಲ ಪಕ್ಷದ ಯೂದರಿಂದಲೂ ರಚಿತವಾಯಿತು. (೧೯೨೯).

ಬ್ರಿಟಿಷರೂ ಯೂದರೂ ಈ ದೇಶದ ಭೋಗಭಾಗ್ಯಾಧಿಕಾರಗಳನ್ನು ಹಂಚಿಕೊಂಡು ಮೆರೆಯುವುದು ಇಲ್ಲಿನ ಅರಬರಿಗೆ ಸಹನವಾಗಲಿಲ್ಲ. ೧೯೨೦-೨೧ರಲ್ಲಿ ತುರುಕರ ಮತ್ತು ಬೋಲಷೆವಿಕರ ಒಳಸಹಾಯದಿಂದ ಹುಟ್ಟಿದ ದಂಗೆಯನ್ನು ಅಡಗಿಸಲು ಬ್ರಿಟಿಷರು ಒಂದು ಲಕ್ಷ ಸೇನೆಯನ್ನು ತರಬೇಕಾಯಿತು. ಯೂದರ ಮೇಲೆ ಸೇಡು ತೀರಿಸಿಕೊಳ್ಳಲು ೧೯೨೦ನೆಯ ಜೂನ್ ತಿಂಗಳಲ್ಲಿ ಜರೂಸಲೇಮ ನಗರದಲ್ಲಿ ಅರಬರು ಗಲಭೆ ಹತ್ತಿ, ಕೈಗೆ ಸಿಕ್ಕಿದ ಯೂದರನ್ನು ಕೊಂದು ಗಾಯಪಡಿಸಿ, ಅವರ ಅಂಗಡಿಗಳನ್ನೂ ಮನೆಗಳನ್ನೂ ಸೂರೆ ಮಾಡಿದರು. ೧೯೨೧ನೆಯ ಫೆಬ್ರುವರಿಯಲ್ಲಿ ಜಾಫ ನಗರದಲ್ಲಿ ಪ್ಯಾಲೆಸ್ತ ಅರಬ ಜನರ ಪರಿಷತ್ತೊಂದು ಸೇರಿ ದೇಶದಲ್ಲಿ ಅರಬರ ಸ್ವರಾಜ್ಯವು ಸ್ಥಾಪಿತವಾಗಬೇಕೆಂದು ಬಯಸಿತು. ಸ್ವಲ್ಪ ದಿವಸದಲ್ಲೇ ದೇಶದ ಅನೇಕ ಕಡೆ ಅರಬರು ಯೂದರ ಮೇಲೆ ಬಿದ್ದು ಪ್ರಾಣಧನಹಾನಿಗಳನ್ನು ಮಾಡಿದರು. ಈ ಗಲಭೆಯಲ್ಲಿ ಜಾಫ ನಗರ ಒಂದರಲ್ಲಿ ೩೦೦ ಜನರು ಸತ್ತರು. ಅರಬರು ಪದೆ ಪದೆ ಕೂಟಗಳನ್ನು ನಡೆಸಿ, ಬ್ರಿಟಿಷರು ತಮಗೆ ಸ್ವರಾಜ್ಯವನ್ನು ಕೊಟ್ಟು ದೇಶವನ್ನು ಬಿಟ್ಟು ಹೋಗಬೇಕೆಂದು ಸಾರುತ್ತ, ಸರ್ಕಾರದ ಶಾಸನ ಸಭೆಯನ್ನು ಬಹಿಷ್ಕರಿಸಿ ಅಸಹಕಾರವನ್ನಾಚರಿಸತೊಡಗಿದರು. ೧೯೨೫ರಲ್ಲಿ ಇವರು ಯೂದ-ವಿದ್ಯಾಪೀಠದ ಪ್ರಾರಂಭೋತ್ಸವವನ್ನು ಬಹಿಷ್ಕರಿಸಿದರು. ಆ ಕಾಲದಲ್ಲಿ ಹಲವು ಕಡೆ ದಂಗೆಗಳು ಹುಟ್ಟಿ ಯೂದರ ಮೇಲೆ ಅತ್ಯಾಚಾರಗಳು ನಡೆದವು. ಈ ಯೂದ ದ್ವೇಷವು ಕ್ರಮವಾಗಿ ಹೆಚ್ಚಿ ೧೯೨೯ರಲ್ಲಿ ಅತ್ಯಂತ ಭಯಂಕರವಾದ ದಂಗೆಯನ್ನು ಹುಟ್ಟಿಸಿ ಈ ದೇಶದ ಚರಿತ್ರೆಯನ್ನೇ ಮಾರ್ಪಡಿಸಿತು.

ಜೂದರ ಕೊನೆಯ ರಾಜನಾದ ಹಿರೋದನು ಕಟ್ಟಿಸಿದ್ದ ಅವರ ಅತಿ ಪವಿತ್ರವಾದ ದೇವಾಲಯವು ಅವರ ಶತ್ರುಗಳಿಂದ ನಾಶವಾಗಿ ಈಗ ಅದರ ಒಂದು ಪಾರ್ಶ್ವದ ಪಾಳುಗೋಡೆ ಮಾತ್ರ ಉಳಿದಿದೆ. ಈ ಗೋಡೆಯ ಒತ್ತಿನಲ್ಲೇ ಇರುವ ಉಮರನ ಮಸೀತಿಗೆ ಈ ಗೋಡೆಯು ಹೊರಪ್ರಾಕಾರದ ಗೋಡೆಯಂತೆ ಇದೆ. ಈ ಗೋಡೆಗೆ ಎದುರಾಗಿ ಒಂದು ಬೀದಿ ಇದೆ. ಈ ಬೀದಿಯು ಮುಸಲ್ಮಾನರ ದೇವಾದಾಯವಾಗಿದೆ. ಜೂದರು ತಮ್ಮ ಹಬ್ಬಗಳಲ್ಲಿ ಈ ಬೀದಿಯಲ್ಲಿ ಈ ಗೋಡೆಯ ಮುಂದೆ ಸೇರಿ ತಮ್ಮ ದೇವತಾರಾಧನೆಯನ್ನು ನಡೆಸುವ ಪದ್ಧತಿಯನ್ನಿಟ್ಟುಕೊಂಡಿರುವರು. ತುರುಕರ ಆಳ್ವಿಕೆಯಲ್ಲಿ ಈ ಆಚರಣೆಗೆ ಯಾರೂ ಯಾವಾಗಲೂ ಅಡ್ಡಿಪಡಿಸುತ್ತಿರಲಿಲ್ಲ. ಆದರೆ ಬ್ರಿಟಿಷರ ಆಳ್ವಿಕೆ ಹುಟ್ಟಿ ಜೂದರು ಬಹುಪ್ರಾಬಲ್ಯವನ್ನು ಪಡೆದಾಗ, ಅವರು ಈ ದೇವಾದಾಯದ ಬೀದಿಯನ್ನೂ ಮಸೀತಿಯನ್ನೂ ಆಕ್ರಮಿಸಿ ತಮ್ಮ ದೇವಾಲಯವನ್ನು ಕಟ್ಟಿಕೊಳ್ಳುವರು ಎಂದು ಅರಬರು ಹೆದರಿ, ಈ ಸ್ಥಳದಲ್ಲಿ ಜೂದರ ಪೂಜೆಯು ಹಿಂದಲ ಆಚರಣೆಯಲ್ಲಿ ಚಾಚೂ ತಪ್ಪಿದರೂ ವಿರೋಧಿಸಿ ಗಲಭೆ ಮಾಡತೊಡಗಿದರು. ಈ ಬೀದಿಯಲ್ಲಿ ಯಾವ ಪ್ರತಿಬಂಧಕವನ್ನೂ ಜೂದರು ಕಲ್ಪಿಸಕೂಡದೆಂದು ಸಂಕೇತವಿದ್ದುದರಿಂದ, ಜೂದರು ತಮ್ಮ ಪೂಜೆಯ ಕಾಲದಲ್ಲಿ ಅಲ್ಲಿ ಕುರ್ಚಿಮೇಜುಗಳನ್ನು ಹಾಕಿಕೊಂಡರೂ ಸಹ ಅರಬರು ವಿರೋಧಿಸುತ್ತಿದ್ದರು.

೧೯೨೮ನೆಯ ಸೆಪ್ಟೆಂಬರಿನಲ್ಲಿ ಜೂದರ ಒಂದು ದೊಡ್ಡ ಹಬ್ಬದಲ್ಲಿ ಈ ಬೀದಿಯಲ್ಲಿ ಒಂದು ತೆರೆಯನ್ನು ಇಟ್ಟಿದ್ದರು. ಅರಬರ ಆಕ್ಷೇಪಣೆಯಿಂದ ಇದನ್ನು ತೆಗೆಯಬೇಕೆಂದು ಸರ್ಕಾರದವರು ವಿಧಿಸಿದರು. ಜೂದರು ಅದಕ್ಕೆ ಒಪ್ಪಿಕೊಂಡರೂ ಅಜಾಗರೂಕತೆಯಿಂದ ಅದನ್ನು ತೆಗೆಯಲಿಲ್ಲವಾಗಿ ಆ ಬೀದಿಯ ಸುತ್ತಲೂ ಅರಬರು ದೊಂಬಿ ಸೇರಿದರು. ಆಗ ಸರ್ಕಾರದವರು ಹೆದರಿ ಜೂದರ ಅತಿ ಮುಖ್ಯವಾದ ಪ್ರಾರ್ಥನೆಯ ಮಧ್ಯೆ ನುಗ್ಗಿ ಈ ತೆರೆಯನ್ನು ಕಿತ್ತುಹಾಕಿ ಪೂಜೆಗೆ ಭಂಗಪಡಿಸಿದರು. ಜೂದರು ಇದರಿಂದ ತುಂಬಾ ಆಕ್ರೋಶಗೊಂಡು ಈ ಬೀದಿಯನ್ನು ತಾವು ಆಕ್ರಮಿಸಬೇಕೆಂದು ಚಳವಳಿ ಪ್ರಾರಂಭಿಸಿದರು. ಅದಕ್ಕೆ ಪ್ರತಿಯಾಗಿ ಮುಸಲ್ಮಾನರು ಜೂದರ ಪಾಳುಗೋಡೆಯೇ ತಮ್ಮದೆಂದು ಹೇಳಿಕೊಳ್ಳುತ್ತ ತಮ್ಮ ಮಸೀತಿಯಿಂದ

ಅದರ ಕಡೆಗೆ ಒಂದು ಬಾಗಿಲನ್ನು ಇಟ್ಟರು. ಸರ್ಕಾರದವರು ಇದು
ಪದ್ಧತಿಗೆ ವಿರುದ್ಧವಾದ್ದಲ್ಲವೆಂದು ಎಣಿಸಿ ತಡೆಯಲಿಲ್ಲ. ಆದರೆ ಜೂಧರು
ಎಲ್ಲೆಲ್ಲೂ ಇದನ್ನು ವಿರೋಧಿಸಿ ಗಲಭೆ ಹಚ್ಚಿ, ಈ ಹಾಳುಗೋಡೆಯ ಬಳಿಗೆ
ಮೆರವಣಿಗೆ ಹೋಗಿ ಅದು ತಮಗೆ ಸೇರಿದ್ದೆಂದು ಕೂಗಾಡತೊಡಗಿದರು.
ಒಡನೆಯೇ ಅರಬರು ಜರೂಸಲೆಮಿನಲ್ಲೂ ಇತರ ಊರುಗಳಲ್ಲೂ ಏಕಾಕಾರ
ವಾಗಿ ೧೯೨೯ನೆಯ ಆಗಸ್ಟಿನಲ್ಲಿ ದಂಗೆಯೆದ್ದು ಜೂಧರನ್ನು ಬೇಟೆಯಾಡಿ
ಅವರ ಮನೆ ಮಠಗಳನ್ನು ಸೂರೆ ಮಾಡತೊಡಗಿದರು. ಅರಬ ಜಾತಿಯ
ಪೋಲೀಸುಪಡೆಯು ಇವರಿಗೆ ಸಹಾಯಕವಾಗಿ ನಿಂತಿತು. ಜೂಧರಿಗೆ
ಬಹು ಪ್ರಾಣಹಾನಿ ಧನನಷ್ಟಗಳು ಸಂಭವಿಸಿದವು. ದಂಗೆಯನ್ನು ಸರ್ಕಾ
ರದವರು ಬಹು ಪ್ರಯಾಸದಿಂದ ಅಡಗಿಸಿದರು. ಅರಬರು ಜೂಧರಿಗೆ
ಸಂಪೂರ್ಣವಾಗಿ ಬಹಿಷ್ಕಾರ ಹಾಕಿ ಅವರ ವ್ಯಾಪಾರವನ್ನು ನಷ್ಟಪಡಿಸಿ
ದರು. ಸರ್ಕಾರದವರು ಅಪರಾಧಿಗಳನ್ನು ಶಿಕ್ಷಿಸಿದ್ದಕ್ಕೆ ಸಹಿಸದೆ ಅರಬರು
ಹರ್ತಾಲಗಳನ್ನು ಹೂಡಿ ಸರ್ಕಾರಾಧಿಕಾರಿಗಳನ್ನು ಗುಂಡಿನಿಂದ ಸುಟ್ಟು
ದಾಂಧಲೆ ನಡೆಸಿದರು. ಅಲ್ಲದೆ ಸ್ವರಾಜ್ಯವನ್ನು ಬಯಸಿ ವಿಪರೀತ ಗಲಭೆ
ಹಚ್ಚಿದರು.

ಈ ವಿಚಾರವಾಗಿ ಸರ್ಕಾರದವರು ಏರ್ಪಡಿಸಿದ್ದ ವಿಚಾರಣಾಸಭೆ
ಯವರು ಅರಬರಿಗೆ ಪ್ಯಾಲೆಸ್ತ ದೇಶದಲ್ಲಿ ಸ್ವರಾಜ್ಯವನ್ನು ಕೊಡದಿದ್ದರೆ ನಿರ್ವಾ
ಹವಿಲ್ಲವೆಂದು ಅಭಿಪ್ರಾಯಪಟ್ಟರು. ಅರಬರ ಆಕಾಂಕ್ಷೆ ಇನ್ನೂ ಪೂರ್ಣ
ವಾಗಿಲ್ಲ. ಈಚೆಗೆ ಅರಬರು ಸ್ವಲ್ಪ ಶಾಂತರಾಗಿರುವರು. ೧೯೩೧ರಲ್ಲಿ
ಜರೂಸಲೆಮಿನಲ್ಲಿ ಸೇರಿದ್ದ ಅಖಿಲ ಇಸ್ಲಾಮಿಕ ಸಭೆಗೆ ಅರಬಸ್ಥಾನದವರೂ
ಸಿರಿಯಾದವರೂ ಸೇರಲಿಲ್ಲ. ಬ್ರಿಟಿಷರೂ ಜೂಧರೂ ಹಿಂದಿನಂತಲ್ಲದೆ
ಶಕ್ತಿ ಸಮವಾಗಿ ನಡೆದುಕೊಳ್ಳಲಾರಂಭಿಸಿದ್ದರೂ, ಧನದಲ್ಲೂ ವಿದ್ಯಾ
ಬುದ್ಧಿಗಳಲ್ಲೂ ಹಿಂದುಳಿದಿರುವ ಅರಬರು ಅವರ ಪ್ರಾಬಲ್ಯವನ್ನು ಮುರಿದು
ಹಾಕಲು ತೀರ ಅಸಮರ್ಥರಾಗಿರುವರು.

ಪ್ಯಾಲೆಸ್ತ ದೇಶದಲ್ಲಿ ಜೋರ್ಡಾನ ನದಿಗೆ ಪೂರ್ವಕ್ಕಿರುವ ಪ್ರಾಂತ್ಯ
ವನ್ನು ಬ್ರಿಟಿಷರು ೧೯೨೧ರಲ್ಲಿ ಪ್ರತ್ಯೇಕವಾದ ರಾಜ್ಯವನ್ನಾಗಿ ಮಾಡಿ,

ಮಹಮ್ಮದಷಾಹನ ಮಗನಾದ ಅಬ್ದುಲ್ಲನನ್ನು ರಾಜನನ್ನಾಗಿ ಮಾಡಿ, ತಮ್ಮ ಪಾಲನೆಯಲ್ಲಿಟ್ಟುಕೊಂಡು ಆಳುತ್ತಿರುವರು. ಈ ದೇಶದವರು ಸಹ ಈಚೆಗೆ ಸ್ವರಾಜ್ಯಕ್ಕಾಗಿ ಚಳವಳಿ ಪ್ರಾರಂಭಿಸಿರುವರು.

---

# ೯ನೆಯ ಅಧ್ಯಾಯ.

## ಆರ್ಯಲೋಕ.

### (೧) ಪಠಾಣದೇಶ.

ಈ ದೇಶವು ಸುಮಾರು ೩॥ ಲಕ್ಷ ಚದರಮೈಲು ವಿಸ್ತೀರ್ಣವುಳ್ಳದ್ದಾಗಿ ೭೦-೮೦ ಲಕ್ಷ ಪ್ರಜೆಗಳುಳ್ಳದ್ದಾಗಿದೆ. ದೇಶವನ್ನು ಹಿಂದೂಕುಶ ಪರ್ವತವು ಎರಡಾಗಿ ವಿಭಾಗಿಸುವುದು. ದಕ್ಷಿಣಾರ್ಧವು ಮಾತ್ರ ನಿಜವಾದ ಪಠಾಣ ದೇಶವು. ಇದರ ಜನರು ಆರ್ಯ ಕುಲದವರು. ಉತ್ತರಾರ್ಧದ ಜನರು ತಮುತ್ತರವಾಗಿರುವ ತುರುಕಸ್ಥಾನದಲ್ಲಿರುವ ತುರುಕಮಾನ ಕುಲದವರು. ಅವರು ತುರಾಣಖಂಡಕ್ಕೆ ಸೇರುವರು. ಜ್ಯುಬರಿನ ರಾಜನಾದ ಸಾಲನ ಮಗನಾದ ಅಫಘನ ಎಂಬವನ ವಂಶಜರೆಂದು ಹೇಳಿಕೊಳ್ಳತಕ್ಕ ಎಷ್ಟೋ ಕೆಲ ಮಂದಿ ಯಹೂದ್ಯರೂ ಈ ದೇಶದಲ್ಲಿ ಇರುವರು. ಇಲ್ಲಿಂದ ಇಂಡಿಯಾಕ್ಕೆ ಬರುವ ಕಣಿವೆ ದಾರಿಗಳುಂಟು. ದೇಶದ ದಕ್ಷಿಣಾರ್ಧವು ಋಗ್ವೇದದ ಕಾಲದಿಂದ ಮುಸಲ್ಮಾನರ ಕಾಲದವರೆಗೂ (ಸು. ಕ್ರಿ. ಶ. ೯೦೦ರವರೆಗೆ) ಭರತಖಂಡಕ್ಕೆ ಸೇರಿದ ಭಾಗವಾಗಿದ್ದಿತು. ಅದ್ಯಾಪಿ ಇಲ್ಲಿ ಹಿಂದೂ ಬೌದ್ಧ ಸ್ಮಾರಕಗಳು ಹೇರಳವಾಗಿ ಗೋಚರಿಸುತ್ತವೆ. ಗಾಂಧಾರ ಎಂಬ ಇದರ ಪ್ರಾಚೀನ ಹೆಸರು ಕಂದಹಾರ ಎಂಬ ರೂಪದಲ್ಲಿ ಇನ್ನೂ ಜೀವಿಸಿದೆ. ಘಜನಿ ಮಹಮ್ಮದನ ಕಾಲದಿಂದ ಮುಂದೆ ಪಠಾಣರು ಹಿಂದೂದೇಶಕ್ಕೆ ದಾಳಿಯಿಟ್ಟು ದೇಹಲಿಯಲ್ಲಿ ಸಾಮ್ರಾಜ್ಯವನ್ನು ಕಟ್ಟಿ ಮೆರೆದರು. ಆದರೆ ಪಠಾಣ ದೇಶವು ಮಾತ್ರ ಮುಸಲ್ಮಾನರ ಆಳ್ವಿಕೆಯ ಕಾಲದಿಂದಲೂ ತೀರ ಹಿಂದುಳಿದು ಹೀನದೆಸೆಯಲ್ಲಿ ಜೀವಿಸುತ್ತ ಬರುತ್ತಿದೆ. ೧೯ನೆಯ ಶತಮಾನದಲ್ಲಿ ಉತ್ತರ

ದಿಂದ ರುಷ್ಯರೂ ದಕ್ಷಿಣದಿಂದ ಬ್ರಿಟಿಷರೂ ಪಠಾಣರ ಮೇಲೆ ಬಿದ್ದು ರಾಜ್ಯಾಪಹರಣ ಮಾಡಲಾರಂಭಿಸಿದರು. ಬ್ರಿಟಿಷರು ಮೂರು ಯುದ್ಧಗಳನ್ನು ಮಾಡಿ ೧೮೮೦ರ ವೇಳೆಗೆ ಈ ರಾಜ್ಯವನ್ನು ತಮ್ಮ ಆಶ್ರಿತರಾಜ್ಯ (Protectorate) ವಾಗಿ ಮಾಡಿಕೊಂಡಿದ್ದರು. ೧೯೦೭ರಲ್ಲಿ ಈ ಸ್ಥಿತಿಯನ್ನು ರುಷ್ಯರೂ ಅನುಮೋದಿಸಿದರು. ಈ ಏರ್ಪಾಟಿನ ಪ್ರಕಾರ ಈ ದೇಶವು, ಬ್ರಿಟಿಷರ ಮೂಲಕವಾಗಿ ಹೊರತು, ಸ್ವತಂತ್ರವಾಗಿ ಮತ್ತಾವ ಪರರಾಜ್ಯದೊಡನೆ ವ್ಯವಹರಿಸುವುದಕ್ಕಾಗಲಿ, ಪರರನ್ನು ಕೆಲಸಕ್ಕೆ ತರುವುದಕ್ಕಾಗಲಿ, ಪರರಲ್ಲಿ ಸಾಲ ಮಾಡುವುದಕ್ಕಾಗಲಿ, ದೇಶದಲ್ಲಿ ಪರರಿಗೆ ಮಾನ್ಯಾಧಿಕಾರಗಳನ್ನು ಕೊಡುವುದಕ್ಕಾಗಲಿ ಅಧಿಕಾರವುಳ್ಳದ್ದಾಗಿರಲಿಲ್ಲ. ಇದಕ್ಕೆ ಪ್ರತಿಯಾಗಿ ಇಂಡಿಯಾ ಸರ್ಕಾರದವರು ಈ ದೇಶದ ರಾಜನಿಗೆ ವರ್ಷಂಪ್ರತಿ ಸ್ವಲ್ಪ ಲಂಚದ್ರವ್ಯವನ್ನು ಕೊಡುತ್ತಿದ್ದರು.

ಬ್ರಿಟಿಷರ ಹಿತಮಿತ್ರನಾಗಿದ್ದ ಅಮೀರ ಹಬಿಬುಲ್ಲನು ಯುರೋಪ್ಯ ಮಹಾಯುದ್ಧದಲ್ಲಿ ದೇಶವು ಬ್ರಿಟಿಷರಿಗೆ ವಿರುದ್ಧವಾಗಿ ಆಚರಿಸದಂತೆ ತಡೆದನು. ಇವನು ೧೯೧೯ರಲ್ಲಿ ಹತ್ಯಮಾಡಲ್ಪಟ್ಟು ಇವನ ಎರಡನೆಯ ಮಗನಾದ ಅಮಾನುಲ್ಲನು ಪಟ್ಟವೇರಿದನು. ಯುದ್ಧದಿಂದ ದಣಿದು, ಏಷಿಯಾದಲ್ಲಿ ಸರ್ವತ್ರ ಸೇನೆಯಿಟ್ಟುಕೊಂಡು ಹೋರಾಡುತ್ತಿದ್ದ ಬ್ರಿಟಿಷರ ಕಷ್ಟಸಂಧಿಯನ್ನೂ ಹಿಂದೂ ದೇಶದಲ್ಲಿ ತುಂಬಿದ್ದ ಅಶಾಂತಿಯನ್ನೂ ಕಂಡು ಅಮಾನುಲ್ಲನು ಬ್ರಿಟಿಷರ ಮೇಲೆ ಯುದ್ಧಕ್ಕೆ ಹೊರಟನು. ಬ್ರಿಟಿಷರು ಇವನನ್ನು ತಡೆದರೂ ಸೋಲಿಸಲಾಗಲಿಲ್ಲ. ಉಭಯರಿಗೂ ಸಂಧಿಪ್ರಸ್ತಾಪವು ದೀರ್ಘವಾಗಿ ಎರಡು ವರ್ಷಕಾಲ ನಡೆಯಿತು. ಆಮಧ್ಯೆ ಚತುರನಾದ ಅಮಾನುಲ್ಲನು ರುಷ್ಯರೊಡನೆಯೂ ತುರುಕರೊಡನೆಯೂ ಸಂಧಿ ಮಾಡಿಕೊಂಡು ಅವರ ಸಹಾಯದಿಂದ ಮರಳಿ ಬ್ರಿಟಿಷರ ಮೇಲೆ ಕೈಮಾಡುವ ರೀತಿ ತೋರ್ಪಡಿಸಿಕೊಂಡದ್ದರಿಂದ, ಬ್ರಿಟಿಷರು ನಿರ್ವಹಿಸಲಾರದೆ, ಪಠಾಣ ರಾಜ್ಯದ ಸರ್ವ ಸ್ವಾತಂತ್ರ್ಯವನ್ನೂ ಅವಕ್ಕೆ ವಹಿಸಿ ತಮಗೆ ಸಮಾನಸ್ಕಂಧನಾದ ರಾಜ್ಯವೆಂದು ಅಂಗೀಕರಿಸಿ ಸಂಧಿ ಮಾಡಿಕೊಂಡರು. (೧೯೨೧). ಇಲ್ಲಿಂದ ಮುಂದೆ ಅಮಾನುಲ್ಲನು ಮುಸ್ತಫಾ ಕಮಾಲನಂತೆ ದೇಶವನ್ನು ಪ್ರಗತಿಪರವಾಗಿ ಮಾಡಲು ಪ್ರಯತ್ನಿಸಿದನು.

ಈ ರಾಜ್ಯವು ಹಲವು ಜನಗಣ (Tribes) ಗಳ ಕೂಟವಾಗಿತ್ತು. ಈ ಗಣಗಳೇ ಅಲ್ಲಿನ ಸಾಮಾಜಿಕ ಮತ್ತು ರಾಜಕೀಯ ವಿಭಾಗಗಳಾಗಿದ್ದವು. ಅಮಾನುಲ್ಲನು ಇವನ್ನು ತಪ್ಪಿಸಿ ಭೂವಿಭಾಗಗಳಿಗೆ ರಾಜಕೀಯ ಪ್ರಾಂತ್ಯಗಳನ್ನು ಕಲ್ಪಿಸಿದನು. ಆಡಳಿತವನ್ನು ನಿರ್ವಹಿಸಲು ಒಂದು ಮಂತ್ರಿಮಂಡಲವೂ ಪ್ರಜಾಪ್ರತಿನಿಧಿಸಭೆಯೂ ಸ್ಥಾಪಿತವಾದುವು. ವಿದ್ಯಾಶಾಲೆಗಳು ಬಾಲರಿಗೂ ಬಾಲಕಿಯರಿಗೂ ಏರ್ಪಟ್ಟುವು. ವೃತ್ತಾಂತ ಪತ್ರಿಕೆಗಳು ಹುಟ್ಟಲು ಉತ್ತೇಜನವು ದೊರೆಯಿತು. ಹಳ್ಳಿಯಾಗಿದ್ದ ಕಾಬೂಲವು ನಾಗರಿಕ ನಗರವಾಗಿ ಮಾರ್ಪಡುತ್ತ ಬಂದಿತು. ಉತ್ತಮ ವಿದ್ಯಾರ್ಜನೆಗಾಗಿ ವಿದ್ಯಾರ್ಥಿಗಳು ಪರದೇಶಗಳಿಗೆ ಕಳುಹಿಸಲ್ಪಟ್ಟರು. ರುಸ್ಯಕ ಮತ್ತು ತುರುಕ ಅಧಿಕಾರಿಗಳು ಸುಸಜ್ಜಿತವಾದ ಸೇನೆಗೆ ಶಿಕ್ಷಣ ಕೊಡತೊಡಗಿದರು. ದೇಶದಲ್ಲಿ ಸಕಲ ಪ್ರಜೆಗಳೂ ಬಲಾತ್ಕಾರವಾಗಿ ಎರಡು ವರ್ಷ ಸೇನಾವೃತ್ತಿ ಮಾಡಬೇಕೆಂದು ವಿಧಿ ಹುಟ್ಟಿತು. ಜನರಿಗೆ ಐರೋಪ್ಯರ ಉಡುಗೆತೊಡುಗೆಗಳು ವಿಧಿಸಲ್ಪಟ್ಟುವು. ಹಿಂದೂ ಮುಂತಾದ ಅನ್ಯ ಮತೀಯರನ್ನು ಯಾರೂ ಪೀಡಿಸದಂತೆ ಏರ್ಪಾಡಾಗಿ, ಜಲಾಲಾಬಾದ್, ಘಜನಿ, ಕಂದಹಾರ ನಗರಗಳಿಂದ ಪ್ರತಿನಿಧಿಸಭೆಗೆ ಒಬ್ಬೊಬ್ಬ ಹಿಂದೂವನ್ನು ಕಳುಹಿಸಲು ಅವಕಾಶ ಕೊಡಲ್ಪಟ್ಟಿತು.

೧೯೨೮ರಲ್ಲಿ ರಾಜನೂ ರಾಣಿಯೂ ಸಮಾರಂಭದಿಂದ ಯುರೋಪಿನಲ್ಲಿ ವಿಸ್ತಾರವಾಗಿ ಸಂಚರಿಸಿಕೊಂಡು ಹಿಂತಿರುಗಿದರು. ಆಗ ಗೋಷಾವನ್ನು ಬಿಟ್ಟಿದ್ದ ರಾಣಿಯು ತನ್ನ ದೇಶದಲ್ಲೂ ಅದನ್ನು ಬಿಟ್ಟಳು. ರಾಜನು ತನ್ನ ಸರದಾರರ ಪತ್ನಿಯರೂ ಹಾಗೆಯೇ ಮಾಡಬೇಕೆಂದು ಅಪ್ಪಣೆ ಮಾಡಿದನು. ಸುಧಾರಣೆಗಳನ್ನು ಕಲ್ಪಿಸಲು ರಾಜನು ಸೇರಿಸಿದ ಒಂದು ಜಿರ್ಗಾ (ಜನಕೂಟ) ವು ಪ್ರತಿನಿಧಿ ಸಭೆಯನ್ನು ಹೆಚ್ಚಿಸಬೇಕೆಂದೂ, ಬಲಾತ್ಕಾರ ಸೈನಿಕ ಕ್ರಮವನ್ನು ಮೂರು ವರ್ಷಕ್ಕೆ ಹೆಚ್ಚಿಸಬೇಕೆಂದೂ, ಸಾರ್ವತ್ರಿಕ ನಿರ್ಬಂಧ ವಿದ್ಯಾಭ್ಯಾಸವನ್ನು ಏರ್ಪಡಿಸಬೇಕೆಂದೂ, ದೇಶಕ್ಕೆ ಹೊಸದೊಂದು ತ್ರಿವರ್ಣದ ಧ್ವಜವನ್ನು ನಿರ್ಮಿಸಬೇಕೆಂದೂ, ದೇಶದಲ್ಲಿ ಪರದೇಶದ ಮುಲ್ಲಾಗಳು ಮತಬೋಧೆ ಮಾಡುವುದನ್ನು ನಿಷೇಧಿಸಬೇಕೆಂದೂ ತೀರ್ಮಾನಿಸಿತು.

ಆದರೆ ಆಚಾರಶೀಲರಾದ ಮುಲ್ಲಾಗಳು ರಾಜರಾಣಿಯರ ಅನಾಚಾರಗಳಿಗೆ ಸಹಿಸದೆ ರಾಜದ್ರೋಹವನ್ನು ಬೋಧಿಸಲಾರಂಭಿಸಿದರು. ರಾಜನು ಕೂಡಲೆ ಅವರ ಮುಖಂಡರನ್ನು ಗಲ್ಲಿಗೆ ಹಾಕಿಸಿದನು. ಆದರೂ ಪೂರ್ವ ಪ್ರಾಂತ್ಯದಲ್ಲಿ ಕಿನ್ವಾರಿಗಣಗಳು ದಂಗೆಯೇಳಲು ರಾಜಧಾನಿಗೆ ಉತ್ತರದಲ್ಲಿದ್ದ ಗಣಗಳು ಬಚ್ಚಾಯಿಸಕಯೋ ಎಂಬವನ ಕೈಕೆಳಗೆ ದಂಗೆಯೆದ್ದರು. ಅಮಾನುಲ್ಲನು ತನ್ನ ಪ್ರಯಾಣಕ್ಕೂ, ಕಟ್ಟಡ ಮುಂತಾದ ಕಾರ್ಯಗಳಿಗೂ, ಯುದ್ಧಸಾಮಗ್ರಿಗಳಿಗೂ ತನ್ನ ಕೋಶವನ್ನೆಲ್ಲಾ ಬರಿದು ಮಾಡಿಬಿಟ್ಟಿದ್ದುದರಿಂದ ಸರ್ಕಾರದ ನೌಕರವರ್ಗಕ್ಕೂ ಸೇನೆಗೂ ಎರಡು ತಿಂಗಳ ಸಂಬಳ ಸಹ ಬಾಕಿ ನಿಂತಿದ್ದು ಅವರು ಅಮಾನುಲ್ಲನಲ್ಲಿ ವಿರಕ್ತರಾದ್ದರಿಂದ ಅಮಾನುಲ್ಲನು ಸೋತು ರಾಜ್ಯಭ್ರಷ್ಟನಾದನು. (೧೯೨೯ನೆಯ ಮೇ). ಬಚ್ಚಾಯಿಸಕಯನು ಹಬಿಬುಲ್ಲಾ ಎಂಬ ಹೆಸರಿನಿಂದ ಅಮೀರನಾದನು.

ಆದರೆ ಅಮಾನುಲ್ಲನ ಸೇನಾಪತಿಯಾಗಿ ಯುರೋಪಿನಲ್ಲಿದ್ದ ನಾದಿರ್‌ಖಾನನೆಂಬ ವೀರನು ದೇಶಕ್ಕೆ ಹಿಂತಿರುಗಿ, ಜನರನ್ನು ಎಬ್ಬಿಸಿ, ಹಬಿಬುಲ್ಲನನ್ನು ಸೋಲಿಸಿ ಕೊಂದು, ಜನರ ಪ್ರಾರ್ಥನೆಯಿಂದ ತಾನೇ ಪಟ್ಟವೇರಿದನು. (೧೯೨೯ನೆಯ ನವೆಂಬರು). ಈತನು ಮುಲ್ಲಾಗಳನ್ನು ಎದುರು ಹಾಕಿಕೊಳ್ಳದೆ ಚಾತುರ್ಯದಿಂದ ಎಲ್ಲರಿಗೂ ಬೇಕಾದವನಾಗಿ ಆಳುತ್ತಿದ್ದಾನೆ. ಈತನು ೧೯೩೧ನೆಯ ಜೂಲೈ ತಿಂಗಳಲ್ಲಿ ಬದ್ಧವಾಗಿ ಚುನಾವಣೆಯಿಂದ ಕಲ್ಪಿತವಾಗುವ ಒಂದು ಪ್ರಜಾಶಾಸನಸಭೆಯನ್ನು ಏರ್ಪಡಿಸಿರುವನು. ಅಮಾನುಲ್ಲನು ಮರಳಿ ರಾಜ್ಯವನ್ನು ಪಡೆಯುವ ಆಶೆಯನ್ನು ಬಿಡದೆ ಸಮಯನಿರೀಕ್ಷಣೆ ಮಾಡುತ್ತ ಪರದೇಶಗಳಲ್ಲಿ ವಾಸಿಸುತ್ತಿದ್ದಾನೆ.

## (೬) ಇರಾಣದೇಶ.

ಸುಮಾರು ೬೫ ಲಕ್ಷ ಚದರಮೈಲು ವಿಸ್ತೀರ್ಣವುಳ್ಳ ಈ ದೇಶದಲ್ಲಿ ಒಂದು ಕೋಟಿ ಜನರು ಇರುವರು. ದೇಶದ ಬಹುಭಾಗವು ಬೆಂಗಾಡಾಗಿರುವುದು. ಮರುಭೂಮಿಗಳೂ ಶೀತಮಯವಾದ ಪ್ರಸ್ಥಭೂಮಿಗಳೂ ತುಂಬಿರುವುವು. ದೊಡ್ಡ ನದಿಗಳು ಕಡಿಮೆ. ಹೀಗಿದ್ದರೂ ಈ ದೇಶದ

ಜನರು ಈಗ ಸಾವಿರಾರು ವರ್ಷಗಳಿಂದಲೂ ಹಿಂದೂ, ಚೀನ, ಗ್ರೀಕ್, ರೋಮನ್, ಅರಬ, ತುರುಕ ಜನಗಳಿಗೆ ಸಮನ್ವಯಾಗಿ ವೈಭವವನ್ನು ಪಡೆದು ಬಾಳುತ್ತ ಬಂದಿರುವರು. ಇತ್ತಗೆ ನಾದಿರಷಹಾನ ಕಾಲವಾದ ನಂತರ ಇವರ ರಾಜ್ಯವು ಬಹುವಾಗಿ ಕ್ಷೀಣಿಸಿ ನಂದುವ ಸ್ಥಿತಿಗೆ ಬಂದಿತ್ತು. ೧೯ನೆಯ ಶತಮಾನದಲ್ಲಿ ರುಷ್ಯರು ಉತ್ತರಾರ್ಧವನ್ನೂ ಬ್ರಿಟಿಷರು ದಕ್ಷಿಣಾರ್ಧವನ್ನೂ ಆಕ್ರಮಿಸಿ, ೧೯೦೭ರಲ್ಲಿ ಹಂಚಿಕೊಂಡು ತಮ್ಮ ಪ್ರಾಬಲ್ಯಸ್ಥಾನವನ್ನಾಗಿ ಮಾಡಿಕೊಂಡು ಬಿಟ್ಟರು. ಪಾರಸಿಕ ರಾಜರು ಇವರಲ್ಲಿ ವಿಪರೀತ ಸಾಲಮಾಡಿ ಅವರ ದಾಸರಾಗಿ ಬಿಟ್ಟಿದ್ದರು. ಈ ವೇಳೆಯಲ್ಲಿ ಹೊಸದಾಗಿ ಗೋಚರಕ್ಕೆ ಬಂದ ಕಲ್ಲೆಣ್ಣೆಯು ಪಾಶ್ಚಾತ್ಯರ ದುರಾಶೆಯನ್ನು ಅಧಿಕಪಡಿಸಿದವು.

ಮೋಟಾರು, ಹಡಗು, ವಿಮಾನಗಳು ನಡೆಯುವುದಕ್ಕೆ ಕಲ್ಲಿದ್ದಲಿಗಿಂತಲೂ ಕಲ್ಲೆಣ್ಣೆಯು ಅತ್ಯಾವಶ್ಯಕವಾಗಿರುವುದರಿಂದ ಈಗ ದೊಡ್ಡ ಜನಾಂಗವಾಗಿ ದೊಡ್ಡ ಸಾಮ್ರಾಜ್ಯಗಳನ್ನು ಕಟ್ಟಿಕೊಳ್ಳುವರಿಗೆ ಕಲ್ಲೆಣ್ಣೆ ದೊರೆಯದೆ ಉಳಿಗಾಲವಿಲ್ಲ. ಆದರೆ ಬ್ರಿಟಿಷರ ಜಗದ್ವ್ಯಾಪಿಯಾದ ಸಾಮ್ರಾಜ್ಯದಲ್ಲಿ ಕಲ್ಲೆಣ್ಣೆ ಇಲ್ಲ. ಅದು ಬಾಕು ನಗರದ ಬಳಿ ದೊರೆಯು ವಂತೆಯೇ ಪಾರಸಿಕ ಕೊಲ್ಲಿಯ ತೀರದಲ್ಲೂ ಅಖಂಡವಾಗಿ ದೊರೆಯುತ್ತದೆ. ಇದನ್ನು ಕೈಗೆ ಹಾಕಿಕೊಳ್ಳಬೇಕೆಂದು ಬಗೆದು ಜರ್ಮನರು ತುರುಕರನ್ನು ಸರಿಪಡಿಸಿಕೊಂಡು ಬಗದಾದಿನ ರೈಲನ್ನು ಪ್ರಾರಂಭಿಸಿದರು. ಆದರೆ ಇವರು ಆ ರೈಲನ್ನು ಸಮುದ್ರತೀರಕ್ಕೆ ಮುಟ್ಟಿಸುವಷ್ಟರಲ್ಲೇ ಬ್ರಿಟಿಷರು ೧೯೦೯ರಲ್ಲಿ ಈ ಕಲ್ಲೆಣ್ಣೆಯ ಪ್ರದೇಶವನ್ನು ಮಿಳ್ಳರರಾಲ ಗುತ್ತಿಗೆ ಪಡೆದು, ಕಾರ್ಖಾನೆಗಳನ್ನು ಸ್ಥಾಪಿಸಿ, ಐರೋಪ್ಯ ಮಹಾಯುದ್ಧದಲ್ಲಿ ಜರ್ಮನರನ್ನು ಸದೆಬಡಿದು, ಇರಾಕ ದೇಶವನ್ನು ಆಕ್ರಮಿಸಿ, ಕಲ್ಲೆಣ್ಣೆ ದೊರೆಯುತಕ್ಕ ತಮುತ್ತರವಾದ ಮೊಸುಲ ಪ್ರಾಂತ್ಯವನ್ನು ಸಂಪಾದಿಸಿದರು. ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಳ್ಳುವ ಸಲುವಾಗಿ ಇವರು ಇರಾಕ ದೇಶದ ಸ್ವಾತಂತ್ರ್ಯವನ್ನು ಅಂಗೀಕರಿಸಲು ಪ್ರಯತ್ನಿಸಿ ವಿಫಲರಾದರು.

ತಮ್ಮ ರಾಜನು ಸೊನ್ನೆ ದೇಶವನ್ನು ಹಾಳುಮಾಡುತ್ತಿದ್ದುದನ್ನು ನಿಲ್ಲಿಸಿ ಪ್ರತಿನಿಧಿಸಭೆಯೊಂದನ್ನು ಸ್ಥಾಪಿಸಿ ಆಳಬೇಕೆಂದು ಪಾರಸಿಕ ಪ್ರಜೆ

ಗಳು ೧೯೦೫-೬ರಲ್ಲಿ ಚಳವಳಿ ಹಚ್ಚಿದರು. ರಾಜನು ತರಹರಿಸಲಾರದೆ ಒಂದು ಸಭೆಯನ್ನು ಕೂಡಿಸಿದನು. ಆದರೆ ಆಗ ಹೊಸದಾಗಿ ಪಟ್ಟಕ್ಕೆ ಬಂದ ರಾಜನು ರುಸ್ಯದ ಅಧಿಕಾರಿಗಳ ಸಹಾಯದಿಂದ ಸೇನೆಯನ್ನು ಕಳಿಸಿ ಈ ಸಭೆಯನ್ನು ಮುರಿಯಲು ಬಗೆದನು. ದಕ್ಷಿಣಪ್ರಾಂತ್ಯದ ಭಕ್ತಿಯಾರಿ ಜನರು ಇದಕ್ಕೆ ಸಹಿಸದೆ ದಂಗೆಯೆದ್ದು, ರಾಜಧಾನಿಯನ್ನು ಮುತ್ತಿ, ರಾಜನನ್ನು ಸಿಂಹಾಸನದಿಂದ ತಳ್ಳಿ, ಪ್ರಜಾಸಭೆಯನ್ನು ಸಂರಕ್ಷಿಸಿದರು. (೧೯೦೯). ಆದರೆ ಪಾರಸಿಕರ ಸಾಂಕುಶ ರಾಜ್ಯಸುಧಾರಣೆಯು ಪ್ರಯತ್ನವು ಕೋಶವು ಬರಿದಾಗಿದ್ದುದರಿಂದಲೂ ಅಧಿಕಾರಕ್ಕೆ ಬಂದವರು ಅನನುಭವಸ್ಥರಾಗಿದ್ದು ದರಿಂದಲೂ ರಾಜಪಕ್ಷದವರು ಸರ್ವದಾ ಕಿರುಕುಳ ಮಾಡುತ್ತಿದ್ದುದರಿಂದಲೂ ದೇಶದಲ್ಲಿ ಅತಿ ಹಿಂದುಳಿದ ಜನಗಣಗಳು ತುಂಬಿದ್ದುದರಿಂದಲೂ ಪರದೇಶಿಯರು ವಿರೋಧಿಸಿದ್ದರಿಂದಲೂ ಸ್ವಲ್ಪದರಲ್ಲೇ ವಿಫಲವಾಯಿತು. ಕೋಶದ ಆಡಳಿತಕ್ಕೆ ನಿಯಮಿಸಲ್ಪಟ್ಟಿದ್ದ ಶೂಸ್ಟರ್ ಎಂಬ ಅಮೇರಿಕದ ಅಧಿಕಾರಿಯನ್ನು ರುಸ್ಯರೂ ಬ್ರಿಟಿಷರೂ ದೇಶದಿಂದ ಹೊರಡಿಸಿ ತಮ್ಮ ಅಧಿಕಾರವನ್ನು ಮೆರೆಯಿಸಿದರು. (೧೯೧೧).

ಯುರೋಪ್ಯ ಯುದ್ಧದಲ್ಲಿ ಇರಾಣದೇಶವು ಸೇರದಿದ್ದರೂ ಸೇರಿದ್ದಕ್ಕಿಂತಲೂ ಅಧಿಕ ಕ್ಷೋಭವನ್ನು ಪಡೆಯಿತು. ಇದರ ಪಶ್ಚಿಮ ಪ್ರಾಂತ್ಯಗಳಲ್ಲಿ ರುಸ್ಯರೂ ಅಫಘಾನಿಯನರೂ ಕುರುದರೂ ತುರುಕರೂ ಬ್ರಿಟಿಷರೂ ಸ್ವೇಚ್ಛೆಯಾಗಿ ಒಳಹೊಕ್ಕು ದಾಂಧಲೆ ಮಾಡಿದರು. ಜರ್ಮನರ ಕಡೆಗೆ ದೇಶವು ಸೇರದಂತೆ ತಡೆಯುವ ಸಲುವಾಗಿ ಸೇನೆಯನ್ನು ಕಳುಹಿಸಿ ರುಸ್ಯರು ಉತ್ತರ ದೇಶವನ್ನೂ ಬ್ರಿಟಿಷರು ದಕ್ಷಿಣ ದೇಶವನ್ನೂ ಆಕ್ರಮಿಸಿಕೊಂಡರು. ೧೯೧೭-೧೮ರಲ್ಲಿ ದೇಶದಲ್ಲಿ ದೊಡ್ಡ ಕ್ಷಾಮವು ಪ್ರಾಪ್ತವಾಯಿತು. ರುಸ್ಯದಲ್ಲಿ ಬೋಲಶೆವಿಕರು ಅಧಿಕಾರಕ್ಕೆ ಬಂದಾಗ ಬ್ರಿಟಿಷರು ಉತ್ತರ ಇರಾಣವನ್ನೂ ಆಕ್ರಮಿಸಿಕೊಂಡು, ನಯಭಯಗಳಿಂದ ೧೯೧೯ರಲ್ಲಿ ಇರಾಣರನ್ನು ಒಂದು ಸಂಧಿಗೆ ಸಿಕ್ಕಿಸಿಕೊಂಡು ದೇಶವನ್ನು ಸಂಪೂರ್ಣವಾಗಿ ತಮ್ಮ ಆಶ್ರಿತರಾಜ್ಯವಾಗಿ ಮಾಡಿಕೊಂಡು ಬಿಟ್ಟರು. ಈ ಸಂಧಿಗೆ ಸಮ್ಮತಿಸಿದ ಮೂವರು ಪಾರಸಿಕ ಮಂತ್ರಿಗಳಿಗೆ ಬ್ರಿಟಿಷರು ತಲೆಗೆ ಐದೈದು ಲಕ್ಷ ರೂಪಾಯಿ ಲಂಚ ಸುರಿದರು. ಪಾರಸಿಕರು ಪಾರ್

ಸಿನ ಸಂಧಿಸಭೆಗೆ ಕಳುಹಿಸಿದ್ದ ಪ್ರತಿನಿಧಿಗಳನ್ನು ಬ್ರಿಟಿಷರು ಒಳಕ್ಕೇ ಬಿಡಿಸಲಿಲ್ಲ.

ಆದರೆ ಈ ದುರಾಕ್ರಮಣದಿಂದ ಇರಾಣದಲ್ಲಿ ಹಾಹಾಕಾರ ಹುಟ್ಟಿ ಜನರು ದಂಗೆಯೆದ್ದರು. ಬ್ರಿಟಿಷರ ಲಂಚಕ್ಕೆ ಒಳಗಾಗಿದ್ದ ಮಂತ್ರಿಗಳು ಸೆರೆಗೆ ಹಾಕಲ್ಪಟ್ಟರು, ಫ್ರೆಂಚರ ವಿರೋಧದಿಂದ ಬ್ರಿಟಿಷರು ಬಾಕು ಪ್ರಾಂತ್ಯವನ್ನು ಬಿಟ್ಟುಬಂದೊಡನೆಯೇ ಉತ್ತರ ಇರಾಣವೂ ಅವರ ಕೈತಪ್ಪಿತು. ಕೂಡಲೆ ಇರಾಣರು ಬೋಲ್ಷೆವಿಕರೊಡನೆಯೂ ತುರುಕರೊಡನೆಯೂ ಅಫಘಾಣರೊಡನೆಯೂ ಬ್ರಿಟಿಷರಿಗೆ ವಿರುದ್ಧವಾಗಿ ಸಂಧಿ ಮಾಡಿಕೊಂಡು ಬ್ರಿಟಿಷರ ಪ್ರಾಬಲ್ಯವನ್ನು ನಯಭಯಗಳಿಂದ ನಾಶ ಮಾಡಿದರು. ಬ್ರಿಟಿಷರು ತರಹರಿಸಲಾರದೆ ಈ ದೇಶದಿಂದ ತಮ್ಮ ಸೇನೆಯನ್ನು ಹಿಂದಕ್ಕೆ ಕರೆಯಿಸಿಕೊಂಡು, ತಮ್ಮ ಮೇಲೆ ಇರಾಣರಿಗೆ ಹುಟ್ಟಿದ್ದ ವೈರವನ್ನು ಉಪಶಮನಗೊಳಿಸಲು ವಿಪರೀತವಾಗಿ ಪ್ರಯತ್ನಪಡಲಾರಂಭಿಸಿದರು.

೧೯೨೧ರಲ್ಲಿ ರಜಾಖಾನ ಎಂಬ ಶೂರ ಸೇನಾಪತಿಯು ರಾಜಧಾನಿಯನ್ನು ಹಿಡಿದು ಸರ್ವಾಧಿಕಾರವನ್ನು ಪಡೆದನು. ಮುಂದೆ ಎರಡು ವರ್ಷ ಕಾಲ ಈತನು ತನ್ನ ಕಡೆಯವರನ್ನು ಮಂತ್ರಿಗಳಾಗಿ ನಿಯಮಿಸುತ್ತಿದ್ದು ಕಡೆಗೆ ತಾನೇ ಸೇನಾಪತಿತ್ವದ ಜತೆಗೆ ಪ್ರಧಾನಮಂತ್ರಿಪದವಿಯನ್ನೂ ವಹಿಸಿದನು. ಪಾರಸೀಕ ರಾಜನು ಕೂಡಲೆ ದೇಶವನ್ನು ಬಿಟ್ಟು ಹೊರಟು ಹೋದನು. ರಜಾಖಾನನು ದೇಶದಲ್ಲಿ ಅರಾಜಕ ಪ್ರಭುತ್ವವನ್ನು ಸ್ಥಾಪಿಸಲು ಮುಲ್ಲಾಗಳು ವಿರೋಧಿಸಿದ್ದರಿಂದ (೧೯೨೫) ಮರುವರ್ಷ ಸರ್ವಾನುಮತದಿಂದ ರಜಾಷಹಾ ಎಂಬ ಹೆಸರಿನಿಂದ ತಾನೇ ಪಟ್ಟವೇರಿದನು.

ರಜಾಷಹಾನು ಸೇನೆಗೆ ಯೋಗ್ಯ ಶಿಕ್ಷಣ ಕೊಟ್ಟು ಬಲಪಡಿಸಿ, ದೇಶದಲ್ಲಿ ಪದೆ ಪದೆ ದಂಗೆ ಏಳುತ್ತಿರುವ ಜನಗಣಗಳನ್ನು ಅಡಗಿಸಿ ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪಿಸಿರುವನು. ಸರಕಾರದ ದಕ್ಷತೆಯು ಹೆಚ್ಚುತ್ತಿದೆ. ಮಿಲ್ಸ್ಪಾಗ ಮೊದಲಾದ ಕೆಲ ಅಮೇರಿಕದ ಅಧಿಕಾರಿಗಳ ಸಹಾಯದಿಂದ

ಶೋಲೀಕದ ಆಡಳಿತವು ಕ್ರಮಪಟ್ಟು ಚೆನ್ನಾಗಿ ನಡೆಯುತ್ತಿದೆ. ರಾಜನು ಜನರ ವಿದ್ಯಾಭ್ಯಾಸವನ್ನೂ ಆರ್ಥಿಕೋದ್ಯಮವನ್ನೂ ದೇಶಾಭಿಮಾನವನ್ನೂ ಹೆಚ್ಚಿಸಲು ಬಹು ಉತ್ಸಾಹಪರನಾಗಿ ಕೆಲಸ ಮಾಡುತ್ತಿರುವನು. ಇರಾಣದಲ್ಲಿ ರಸ್ತೆ, ರೈಲು, ಯಂತ್ರ, ಕೈಗಾರಿಕೆ ಮೊದಲಾದ ಯಾವ ನಾಗರಿಕ ಸಾಧನಗಳೂ ಇಲ್ಲ. ಜನರು ಮೂಢರಾಗಿ ಸುಧಾರಣೆಗೆ ವಿರೋಧಿಗಳಾಗಿ ಒಕ್ಕಟ್ಟಿಲ್ಲದೆ ಸೋಮಾರಿಗಳಾಗುತ್ತಿರುವರು. ಆದರೂ ದೇಶಾಭಿವೃದ್ಧಿಕಾರ್ಯಕ್ಕೆ ವಿದೇಶೀಯರ ಸಹಾಯವನ್ನು ಪಡೆದು ತಮ್ಮ ಜುಟ್ಟನ್ನು ಅವರ ಕೈಗೆ ಒಪ್ಪಿಸಕೂಡದೆಂದು ರಾಜನೂ ಪ್ರಜೆಗಳೂ ಏಕಮತವುಳ್ಳವರಾಗಿರುವರು. ಯೂರೋಪಿಯನರು ತಮ್ಮ ಹಿಂದಿನ ಕರಾರುಗಳಿಂದ ಈ ರಾಜ್ಯದಿಂದ ಕಸುಕೊಂಡಿದ್ದ ಮಾನ್ಯಾಧಿಕಾರಗಳನ್ನು ಬಿಟ್ಟುಕೊಟ್ಟಿರುವರು. ೧೯೨೭ರಲ್ಲಿ ಪಾರಸಿಕ ಮಜಲೀಸ ಸಭೆ (ಪ್ರತಿನಿಧಿ ಸಭೆ) ಯು ಮರುವರ್ಷದಿಂದ ಪರರ ರಾಜ್ಯಾತೀತ ಪ್ರಭುತ್ವಾಧಿಕಾರಗಳೆಲ್ಲಾ ಮುಕ್ತಾಯವಾಗಿವೆ ಎಂದು ವಿಧಿಸಿತು. ಅದರಂತೆಯೇ ೧೯೨೮ನೆಯ ಮೇ ೧೦ರಿಂದ ಅವೆಲ್ಲಾ ಬಿಲವಾಗಿವೆ ಎಂದು ಶಾಸನ ಹುಟ್ಟಿ ಆ ದಿವಸವು ದೇಶಕ್ಕೆಲ್ಲಾ ವಾರ್ಷಿಕ ರಜಾ ದಿನವಾಗಿ ಮಾಡಲ್ಪಟ್ಟಿತು. ಫ್ರೆಂಚರು ಇದನ್ನು ಮೊದಲು ಒಪ್ಪಿಕೊಂಡರು. ಉಳಿದ ಪಾಶ್ಚಾತ್ಯರೆಲ್ಲರೂ ಹಾಗೆಯೇ ಒಪ್ಪಿ ಹೊಸ ಸಂಧಿಗಳನ್ನು ಮಾಡಿಕೊಳ್ಳಬೇಕಾಯಿತು. ೧೯೨೮ರಲ್ಲಿ ಬ್ರಿಟಿಷರೂ ಹೀಗೆಯೇ ಹೊಸ ಸಂಧಿ ಮಾಡಿಕೊಂಡರು. ಈ ಸಂಧಿಯಿಂದ ಪಾರಸಿಕರು ಇರಾಕ ರಾಜ್ಯದಲ್ಲಿ ಬ್ರಿಟಿಷರ ಆಧಿಪತ್ಯವನ್ನು ಒಪ್ಪಿಕೊಂಡರು.

---

# ೧೦ನೆಯ ಅಧ್ಯಾಯ.

## ಭಾರತ ಸ್ವರಾಜ್ಯಸಾಧನೆ.

ಇಂಗ್ಲೀಷರಿಗೆ ಭರತಖಂಡದಲ್ಲಿ ಮೊಗಲರ ಕಾಲದವರೆಗೂ ರಾಜ್ಯಭಾರಕ್ಕೆ ಅಳವಡುವಷ್ಟು ಸಾಹಸವಿರಲಿಲ್ಲ. ಉದಾಹರಣೆಗಾಗಿ, ಬ್ರಿಟಿಷರ ಬಂಗಾಳದ ವ್ಯಾಪಾರಸ್ಥಾನದ ಅಧ್ಯಕ್ಷನಾದ ರಸ್ಸೆಲನು ದೇಹಲಿ ಸಮ್ರಾಟನಿಗೆ ೧೭೧೨ರಲ್ಲಿ ಹೀಗೆ ಬಿನ್ನವಿಸಿ ಬರೆದುಕೊಂಡನು :—" ಲೋಕಾಧಾರನೂ

ಸರ್ವನಿಯಂತನೂ ಆದ ಮಹಾಪ್ರಭುವಿನ ಪಾದಪೀಠಶಿರಸ್ಕನಾದ ಜಾನ್ ರಸೆಲ್ಲನು ಅಂಗಲಾಚಿ ಬೇಡಿಕೊಳ್ಳುವುದೇನೆಂದರೆ—ನಾವು ಇಂಗ್ಲಿಷರು ಇದುವರೆಗೂ ಬಂಗಾಳ ಬಿಹಾರ ಒರಿಸ ದೇಶಗಳಲ್ಲಿ ಸುಂಕವಿಲ್ಲದೆ ವ್ಯಾಪಾರ ಮಾಡುತ್ತ ಮಹಾಸ್ವಾಮಿಯವರ ಅತ್ಯಂತ ನಿಷ್ಠೆಯುಳ್ಳ ಗುಲಾಮರಾಗಿ ಇರುತ್ತಿದ್ದೇವೆ. ನಾವು ಮಹಾಸ್ವಾಮಿಯವರ ಅತಿ ಪವಿತ್ರವಾದ ಆಜ್ಞೆಗಳನ್ನು ತಪ್ಪದೆ ನಡೆಸಿ, ಮಹಾಸ್ವಾಮಿಯವರ ಕೃಪೆಗೆ ಪಾತ್ರರಾಗಿದ್ದೇವೆ. ಮೇಲೆ ಹೇಳಿದ ಸ್ಥಳಗಳಲ್ಲಿ ನಾವು ಹಿಂದಿನಂತೆಯೇ ನಮ್ಮ ಉದ್ಯೋಗವನ್ನು ನಿಷ್ಕಂಟಕವಾಗಿ ನಡೆಸಿಕೊಂಡು ಬರಲು, ಮಹಾಸ್ವಾಮಿಯವರು ಅನುಗ್ರಹಿಸಬೇಕೆಂದು ಬೇಡಿಕೊಳ್ಳುತ್ತೇವೆ. '' †

ಪ್ರಭುತ್ವಾಪಹರಣಕ್ಕೆ ದೇಶದ ಪರಿಸ್ಥಿತಿಯು ಸಹಾಯಕವಾಗಿದ್ದುದರಿಂದ ಬ್ರಿಟಿಷರು ಫ್ರೆಂಚರನ್ನು ಸೋಲಿಸಿ ತಮ್ಮ ಯುದ್ಧಸಾಹಸದಿಂದಲೂ ನೀತಿತಂತ್ರದಿಂದಲೂ ಒಂದು ಶತಮಾನಕಾಲದಲ್ಲಿ ಅಖಿಲ ಭರತಖಂಡಕ್ಕೆ ಸಮ್ರಾಟರಾದರು. (೧೭೫೭-೧೮೫೭). ಈ ಖಂಡದ ಸಾಮ್ರಾಜ್ಯ ಪ್ರಭುತ್ವವನ್ನು ಪಡೆದಿದ್ದ ಮೊಘಲ್ ಮತ್ತು ಮರಾಠಾ ಚಕ್ರವರ್ತಿಗಳಿಬ್ಬರ ಅಧಿಕಾರವೂ ೧೮೫೭ರಲ್ಲಿ ನಿರ್ನಾಮವಾಗಿ ಬ್ರಿಟಿಷರ ಕೈಸೇರಿದ್ದರಿಂದ, ತತ್ಪೂರ್ವವೇ, ಅವರಿಬ್ಬರ ಸಾಮಂತರಾಗಿದ್ದು, ಮಿತ್ರಾಭಿಧಾನದಿಂದ ಬ್ರಿಟಿಷರಿಗೆ ವಶವರ್ತಿಗಳಾಗಿದ್ದ, ಭಾರತರಾಜರೆಲ್ಲರೂ ಈ ಹೊಸಸಮ್ರಾಟರ ಸಾಮಂತರಾಗಿ ಪರಿಣಮಿಸಿದರು.

ಬ್ರಿಟಿಷರ ಸಾಮ್ರಾಜ್ಯಸಾಧನೆಯ ಕ್ರಮವನ್ನು ಇಲ್ಲಿ ವಿವರಿಸಲು ಆಗುವುದಿಲ್ಲ. ವ್ಯಾಪಾರದ ನೆವದಲ್ಲಿ ದೇಶಕ್ಕೆ ಒಳಹೊಕ್ಕ ಬ್ರಿಟಿಷರು ಸಮಯದಲ್ಲಿ ಕಾಲಿಗೆ ಬೀಳುತ್ತ, ಯಾರೂ ತಡೆಯದ ವೇಳೆಯಲ್ಲಿ ಸಿಕ್ಕಿದ್ದನ್ನು ದೋಚುತ್ತ, ದೇಶದ್ರೋಹಿಗಳ ಸಂಗವನ್ನು ಬಯಸುತ್ತ, ಮರೆಯಾಗಿ ಸಂಚು ನಡೆಸುತ್ತ, ಕಡೆಗೆ ಬಹಿರಂಗವಾಗಿ ಮೇಲೆಬಿದ್ದು ರಾಜ್ಯವನ್ನು ಕಿತ್ತುಕೊಂಡರು. ಈ ರಾಜ್ಯಸ್ಥಾಪಕರಾದ ಕ್ಲೈವ್, ವಾರನ್ ಹೇಸ್ಟಿಂಗ್ಸ್, ವೆಲ್ಲೆಸ್ಲಿ, ಮಾಯೊರ, ಡಾಲಹೌಸಿ ಮೊದಲಾದವರು

† [illegible]—[illegible] ಇಂಡಿಯಾ ಮತ್ತು ಇಂಗ್ಲೆಂಡು [illegible] ಯರು (೧೮೮೯) ಪುಟ ೨೩೯. (ಉದ್ಧೃತ).

ನಡೆಸಿದ ಅತ್ಯಾಚಾರಗಳನ್ನು ವಿವರಿಸಿ ತೀರದು. ವೆಲ್ಲೆಸ್ಲಿಯು—ಇಂಡಿಯಾ ದೇಶದ ರಾಜರೆಲ್ಲರೂ ಬ್ರಿಟಿಷರ ಸಾಮಂತ ಮಿತ್ರರಾಗಬೇಕು, ಇಲ್ಲವಾದರೆ ಒಡನೆ ಯುದ್ಧಕ್ಕೆ ಸಿದ್ಧರಾಗಬೇಕು—ಎಂದು ಸಾರಿ, ನಿರ್ನಿಮಿತ್ತವಾಗಿ ಜಗಳ ತೆಗೆದು ಬ್ರಿಟಿಷರ ಪಶುಬಲವನ್ನು ಮೆರೆಯಿಸಿದನು. ಡಾಲಹೌಸಿಯು ದುರ್ಬಲರನ್ನು ಸುಲಿದು ರಾಜ್ಯವನ್ನು ವಿಸ್ತರಿಸಿದನು. ೧೮೫೭ರಲ್ಲಿ ಭಾರತ ಸ್ವಾತಂತ್ರ್ಯಸಂಗ್ರಾಮವು ವಿಫಲವಾದಾಗ ಬ್ರಿಟಿಷ ಅಧಿಕಾರಿಗಳು ನಡೆಸಿದ ಅಕೃತ್ಯಗಳನ್ನೂ ಹಿಂಸೆಯನ್ನೂ ವಿವರಿಸಿ ತೀರದು.

ಭಾರತೀಯರ ತನುಧನಗಳ ಜತೆಗೆ ಅವರ ಮನವೂ ಬ್ರಿಟಿಷರಿಗೆ ಮಾರುಹೋಗಿತ್ತು. ತಾವು ನ್ಯಾಯಮೂರ್ತಿಗಳೆಂದೂ ಭಾರತೋದ್ಧಾರದ ಸಲುವಾಗಿ ಅವತಾರವೆತ್ತಿರುವ ನರಪುರುಷರೆಂದೂ ಬ್ರಿಟಿಷರು ಈ ದೇಶೀಯರನ್ನು ನಂಬಿಸಿ ಮೋಹಗೊಳಿಸಿದ್ದರೆಂದರೆ ಬ್ರಿಟಿಷರ ರಾಜನೀತಿ ಶಕ್ತಿಯ ಪ್ರಭಾವವನ್ನು ಎಷ್ಟು ಹೊಗಳಿದರೂ ತೀರದು. ಬ್ರಿಟಿಷ ಸಾಮ್ರಾಜ್ಯವಾದಿಗಳು ಭಾರತಚರಿತ್ರೆಗೆಲ್ಲಾ ಬಣ್ಣಹಾಕಿ ಅಪಲಪಿಸುತ್ತಿರುವುದನ್ನು ಇನ್ನೂ ಬಿಟ್ಟಿಲ್ಲ. ದಿಕ್ಪ್ರದರ್ಶನಾರ್ಥ, ಈ ಅಪಲಾಪಗಳಲ್ಲಿ ಕೆಲವನ್ನು ಇಲ್ಲಿ ಉದಹರಿಸಬಹುದು. ಮಹಿಷಕ್ಕೆ ಕೊಂಬುಗಳು ಹೇಗೆ ಸಹಜವೋ ಹಾಗೆಯೇ ಹಿಂದೂದೇಶೀಯರಿಗೆ ಮೋಸವೂ ದೌರಾತ್ಮ್ಯವೂ ಸಹಜವಾಗಿವೆ. ಸುಳ್ಳು, ವಂಚನೆ, ಕಾಪಟ್ಯ, ವ್ಯಭಿಚಾರ, ಹೇಡಿತನ ಇವು ಇವರ ನೈಜವಾದ ಪರಮಧರ್ಮಗಳು. ಹಿಂದೂಗಳು ಜಾತಿಸಂಸ್ಥೆ ಎಂಬ ನರಕಕೂಪದಲ್ಲಿ ಬಿದ್ದು ಮಿಲಿಮಿಲಿಗುಟ್ಟುತ್ತ, ಕ್ಷಾತ್ರಬಲಶೂನ್ಯರಾಗಿರುವರು. ಮುಸಲ್ಮಾನರು ಉನ್ಮಾದಗ್ರಸ್ತರೂ ಲೋಕದ ಕ್ಷೇಮಕ್ಕೆ ಮೃತ್ಯುಸ್ವರೂಪರೂ ವಿದ್ಯಾವೈರಿಗಳೂ ಆದ ಚಂಡಾಲರು. ಹಿಂದಿನ ಭಾರತರಾಜರೆಲ್ಲರೂ ಅಧಮಾಧಮ ನೀಚರು. ಇವರಲ್ಲಿಯೂ ರಣಜಿತಸಿಂಗನೂ ಕ್ರೂರ ಚೋರಾಗ್ರಣಿಗಳು. ಪೇಷ್ವೆ ಇಮ್ಮಡಿ ಬಾಜೀರಾಯನು ಸುಳ್ಳುಗಾರನಾದ ದುಷ್ಟ ಹೇಡಿಯು. ಶಿವಾಜಿಯೂ ಅವನ ಮರಾಠರೂ ಪರಮ ನೀಚರಾದ ದರೋಡೆಕಳ್ಳರು. ಉಳಿದ ಹಿಂದೂರಾಜರು ಕಡುಕ್ರೂರಿಗಳಾದ ಕಟುಕರು. ಮುಸಲ್ಮಾನ ರಾಜರು ನರರಾಕ್ಷಸರು. ಹಿಂದೂ ಪ್ರಜೆಗಳಿಗೆ ಅವರ ಪೈಶಾಚಿಕ ಪರಿಪೀಡೆಯನ್ನು ತಪ್ಪಿಸಿ ದೇಶದಲ್ಲಿ ಶಾಂತಿಯನ್ನೂ

ಶಾಂತಿಯನ್ನೂ ಪುಷ್ಟಿಯನ್ನೂ ಪ್ರಗತಿಯನ್ನೂ ಸ್ಥಾಪಿಸುವ ಸಲುವಾಗಿ ದೇವರು ಬ್ರಿಟಿಷರನ್ನು ಸೃಷ್ಟಿಸಿದನು. ಬ್ರಿಟಿಷರು ಅವತಾರಪುರುಷರು. ಅವರು ಭರತಚಕ್ರೇಶರಾಗಬೇಕೆಂದು ವಿಧಿನಿರ್ದೇಶವಾಗಿತ್ತು. ಆದ್ದರಿಂದಲೇ ಅವರು ಕ್ರೀಡಿಸಿದ ಕಡೆಗಳಲ್ಲೆಲ್ಲಾ ಜಯಶೀಲರಾದರು. ಈ ವಿಜಯ ಸಾಧಕರಾದ ಕ್ಲೈವನೇ ಮೊದಲಾದವರು ಭಾರತೋದ್ಧಾರದ ಸಲುವಾಗಿ ಕೆಲವೇಳೆ ಧರ್ಮವನ್ನೂ ಅತಿಕ್ರಮಿಸಿದರು. ಆದರೆ ದೋಷವು ಅವರಿಗೆ ಎಂದಿಗೂ ಅಂಟಲಾರದು. ಆಯಾ ಸಂದರ್ಭದ ಅವಸರಪ್ರಮೇಯದಿಂದಲೂ, ಮಹಾನೀಚರಾದ ಒಂದೂ ದೇಶೀಯರೊಡನೆ ವ್ಯವಹರಿಸಬೇಕಾದ ದುರದೃಷ್ಟದಿಂದಲೂ, ದೈತ್ಯಾಧಮರಾದ ದೇಶೀಯ ರಾಜರ ಕೈಲಿ ಸಿಕ್ಕಿ ನರಳುತ್ತಿದ್ದ ಭಾರತೀಯರನ್ನುದ್ಧರಿಸುವ ಧರ್ಮಸಂಕಲ್ಪದಿಂದಲೂ, ಬ್ರಿಟಿಷರಲ್ಲಿ ಉಕ್ಕಿ ಹರಿಯುತ್ತಿರುವ ಪರಾಕ್ರಮದ ರಭಸಾಧಿಕ್ಯದಿಂದಲೂ, ಈ ರಾಜ್ಯಸ್ಥಾಪಕರು, ಸಾಮರ ಜನರು ಧರ್ಮವೆಂದು ಭ್ರಮಿಸುವ ಮಾರ್ಗವನ್ನು ಕೆಲವೇಳೆ ಮೀರಿ ಹೋಗಬೇಕಾಯಿತು. ಈಚೆಗೆ ಮಿಸ್ ಮೇಯೋ ಮುಂತಾದ ಕೆಲವರು ಇದಕ್ಕೆ ನೂರುಮಡಿ ಅಧಿಕವಾದ ದುರಾಭಾಷಗಳನ್ನು ಕಲ್ಪನೆ ಮಾಡಿರುವರು.

ಭಾರತ ಜನತೆಯ ಮನಸ್ಸು ಬ್ರಿಟಿಷರ ಕಡೆಗೆ ಒಲಿಯಲು ದೇಶದ ಪರಿಸ್ಥಿತಿಯು ಬಹುವಾಗಿ ಕಾರಣವಾಯಿತು. ಸೀಲಿ (Seeley) ಮೊದಲಾದ ಇತಿಹಾಸವಿದರು ಹೇಳುವಂತೆ, ಭಾರತ ಜನತೆಯು ತಮ್ಮ ದುಷ್ಟ ಪ್ರಭುಗಳ ದೌರ್ಬಲ್ಯಕ್ಕೂ ಹಿಂಸೆಗೂ ಅತ್ಯಾಚಾರಗಳಿಗೂ ಹೇಸಿ ಪರಕೀಯರಾದ ಬ್ರಿಟಿಷರನ್ನು ಪ್ರತ್ಯಕ್ಷಪರೋಕ್ಷ ಮಾರ್ಗಗಳಿಂದ ಪಕ್ಷೀಕರಿಸಿ ಅವರನ್ನು ಈ ದೇಶದ ಸಿಂಹಾಸನದಲ್ಲಿ ಕೂಡಿಸಿತು. ಭಾರತೀಯರು ಸರ್ವತ್ರ ಬ್ರಿಟಿಷರ ಸೇನೆಗೆ ಸೇರಿ ದೇಶಾಭಿಮಾನವನ್ನು ನಿರಾಕರಿಸಿ ತಮ್ಮ ದೇಶೀಯ ಪ್ರಭುಗಳ ಮೇಲೆ ತಾವೇ ಛಲದಿಂದ ಹೋರಾಡಿ ಸೋಲಿಸಿ ಬ್ರಿಟಿಷರಿಗೆ ಸಾಮ್ರಾಜ್ಯವನ್ನು ಸಂಪಾದಿಸಿಕೊಟ್ಟರು. ಬ್ರಿಟಿಷರು ದೇಶೀಯ ಸೈನ್ಯದ ಮೂಲಕವೇ ಈ ದೇಶವನ್ನೆಲ್ಲಾ ಗೆದ್ದುಕೊಂಡರು. ಇತರ ಪ್ರಜೆಗಳು ಸಹ ಕೊಡಗು ಮೊದಲಾದ ಕಡೆ ತಮಗೆ ದೇಶೀಯ ರಾಜರು ಬೇಕಿಲ್ಲವೆಂದು ನಿರಾಕರಿಸಿ ಬ್ರಿಟಿಷರಿಗೆ ಅಧೀನರಾದರು. ಪ್ರಜೆ

ಗಳು ತಮಗೆ ಸಹಾಯಕರಾಗಿ ನಿಲ್ಲುವುದಿಲ್ಲವೆಂದು ಅರಿತ ಕಡೆಗಳಲ್ಲೆಲ್ಲಾ, ಅಲ್ಲಿನ ರಾಜರುಗಳು, ಬ್ರಿಟಿಷರು ಹೇಳುವುದೇ ತಡ, ತಾವಾಗಿ ಅವರಿಗೆ ಸಾಮಂತರಾಗಿರಲು ಒಪ್ಪಿ, ಬ್ರಿಟಿಷ ಸೇನೆಯ ಬೆಂಬಲದಿಂದ ತಮ್ಮ ಪ್ರಜೆಗಳನ್ನು ನಿರಂಕುಶವಾಗಿ ಆಳಲು ಪ್ರಾರಂಭಿಸಿದರು. ಮುಸಲ್ಮಾನರ ಕಾಲದಲ್ಲಿ ಲೋಕವನ್ನು ಬೆರಗುಗೊಳಿಸತಕ್ಕ ಚಂಡಸಾಹಸವನ್ನು ತೋರ್ಪಡಿಸಿದ್ದ ರಾಜಪುತ್ರರು ಯುದ್ಧವಿಲ್ಲದೆ ಬ್ರಿಟಿಷರಿಗೆ ದಾಸರಾದರೆಂದರೆ ಬ್ರಿಟಿಷರ ಅದೃಷ್ಟಕ್ಕೆ ಏನು ಹೇಳಬೇಕು? ಅಂತಃಕಲಹಗಳೂ ದುಷ್ಟ ರಾಜ್ಯಭಾರವೂ ಮರಾಠರನ್ನೂ ಸಿಖರನ್ನೂ ನಾಶಪಡಿಸಿದವು.

ಬ್ರಿಟಿಷರು ಭಾರತ ಜನತೆಗೆ ತಾವು ಮಿತ್ರರೆಂದು ನಂಬಿಸಿ ದೇಶೀಯ ರಾಜರನ್ನು ತಾವು ಕುಣಿಸತಕ್ಕ ಯಂತ್ರಗಳಾಗಿ ಮಾಡಿಕೊಂಡರು. ಆದರೆ ಕ್ರಮಕ್ರಮವಾಗಿ ಭಾರತೀಯರ ವ್ಯಾಪಾರ, ಕೈಗಾರಿಕೆ, ಕುಶಲಕಲೆ, ಗ್ರಾಮವ್ಯವಸ್ಥೆ, ವಿದ್ಯಾಶಕ್ತಿ, ಸಂಪತ್ತುಗಳೆಲ್ಲಾ ಹಾಳಾದವು. ಬ್ರಿಟಿಷರ ನ್ಯಾಯಶಾಲೆಗಳು ಜನರ ವ್ಯಾವಹಾರಿಕ ಸ್ವಾತಂತ್ರ್ಯವನ್ನು ನಾಶಮಾಡಿದವು. ಜನರ ರಾಜಕೀಯ, ಆರ್ಥಿಕ, ಧಾರ್ಮಿಕ, ವಿದ್ಯಾಭ್ಯಾಸಿಕ ಶಕ್ತಿಗಳೆಲ್ಲಾ ಕ್ಷೀಣವಾದುವು. ಜನರು ದರಿದ್ರರಾಗಿ ಸತ್ತ ಹೆಣಕ್ಕೆ ಸಮಾನರಾದರು. ಸರ್ಕಾರದ ಉದ್ಯೋಗಗಳೆಲ್ಲವೂ ವಿದೇಶಿ ಅಧಿಕಾರಿಗಳ ಹಸ್ತವಾಗಿ ಭಾರತೀಯರು ಭೃತ್ಯ ಕೆಲಸದಲ್ಲಿ ನಿಯುಕ್ತರಾದರು. ಸಂಪತ್ತಿಗೆ ತವರುಮನೆಯಾಗಿದ್ದ ಈ ದೇಶವು ಈಗ ಬಡತನಕ್ಕೆ ತಾಯಿನಾಡಾಗಿದೆ. ಈ ಜನರ ನಿತ್ಯಜೀವನಕ್ಕೆ ಅತ್ಯಗತ್ಯ ಬೇಕಾಗಿರುವ ಬಟ್ಟೆಬರೆ, ದಾರ, ಕತ್ತರಿ, ಸೂಜಿ, ಮೊಳೆ, ಸಾಬು, ಔಷಧ, ಹಲಗೆಬಳಪ, ದೀಪ, ದೀಪದೆಣ್ಣೆ, ಬೆಂಕಿಕಡ್ಡಿ, ಇತ್ಯಾದಿ ದ್ರವ್ಯಗಳು ಸಹ ವಿದೇಶಿಯರಿಂದ ಇಲ್ಲಿಗೆ ಬರಬೇಕಾಗಿವೆ. ದೇಶದಲ್ಲಿ ಸಾವಿರಾರು ರಾಜ್ಯಗಳನ್ನು ಕಟ್ಟಿ ಮೆರೆಯುತ್ತಿದ್ದ ೩೦ ಕೋಟಿ ಭಾರತೀಯರು ಈಗ ಐದಾರು ಸಾವಿರ ಮೈಲುಗಳ ದೂರದಿಂದ ಬಂದು ಹೋಗುತ್ತಿರುವ ಮೂರು-ನಾಲ್ಕು ಸಾವಿರ ಬ್ರಿಟಿಷ ನೌಕರರಿಂದಲೂ ಎಪ್ಪತ್ತು ಸಾವಿರ ಸೈನಿಕರಿಂದಲೂ ಅತಿ ದರ್ಪದಿಂದ ಆಳಲ್ಪಡುತ್ತಿರುವರೆಂದರೆ ಇವರ ಅಧೋಗತಿಗೆ ಏನೆನ್ನಬೇಕು? ಲೋಕದ ಸಾಮ್ರಾಜ್ಯಗಳ ಇತಿಹಾಸದಲ್ಲಿ ಪರಾಧೀನತೆಯ ಪರಾಕಾಷ್ಠೆಯನ್ನು ಮುಟ್ಟಿದವರೆಂದರೆ

ಭಾರತೀಯರೇ ಆಗಿರುವರು. ಇಷ್ಟೊಂದು ಸಮಗ್ರವಾದ ಸಾಮ್ರಾಜ್ಯ ವ್ಯವಸ್ಥೆಯನ್ನು ಲೋಕವು ಇದುವರೆಗೆ ಕಂಡುಕೇಳಿದ್ದಿಲ್ಲ.

ಬ್ರಿಟಿಷರಿಗೆ ಸಾಮ್ರಾಜ್ಯವನ್ನು ಪ್ರಸಾದಿಸಿದ ಭಾರತಜನತೆಯು ಮನಸ್ಸು ಮಾಡಿದರೆ ಅದನ್ನು ಕಿತ್ತುಕೊಳ್ಳಬಲ್ಲುದೆಂದು ಸೀಲಿ ಮೊದಲಾದವರು ಹೇಳುವರು. ಈ ಜನತೆಯು ದೌರ್ಬಲ್ಯವು ಪರಾಧೀನತೆಯ ಕ್ಷೀಣತೆಯಿಂದಲೂ ವಿಮೋಚನೋದ್ದೇಶದಿಂದಲೂ ಬಹಳವಾಗಿ ಹೆಚ್ಚುತ್ತಾ ಹೋಯಿತು. ಆದರೆ ವಿದೇಶಿ ಪ್ರಭುಗಳು ಈ ಜನತೆಯ ಮತಧರ್ಮವಿಚಾರದಲ್ಲಿ ಕೈ ಹಾಕಿದರೆಂದು ಕೇಳಿದೊಡನೆಯೆ ಇದು ಕೆರಳಿಬಿದ್ದು ತನ್ನ ವಿರೋಧದಿಂದ ಪದಚ್ಯುತರಾಗಿದ್ದ ಹಲವು ದೇಶೀಯ ರಾಜರ ನೇತೃತ್ವದಲ್ಲಿ ೧೮೫೭ರಲ್ಲಿ ಬ್ರಿಟಿಷರ ಮೇಲೆ ಕೈಮಾಡಿತು. ಈ ಜನತೆಯ ಬಹುಭಾಗದವರು ಈ ಸಂಗ್ರಾಮಕ್ಕೆ ಸೇರದೆ ಬ್ರಿಟಿಷರಿಗೆ ಸಹಾಯ ಮಾಡಿದ್ದರಿಂದ ಬ್ರಿಟಿಷರು ಜಯಶೀಲರಾದರು. ಇದರಿಂದ ಭಾರತ ಸ್ವಾತಂತ್ರ್ಯದ ಸೊಲ್ಲು ಈ ದೇಶದಲ್ಲಿ ಅರ್ಧ ಶತಮಾನಕಾಲ ಉಡುಗಿ ಹೋದುದಲ್ಲದೆ, ಭಾರತ ಜನತೆಯ ಕ್ಷಾತ್ರಶಕ್ತಿಯು ಸಮೂಲವಾಗಿ ನಾಶಮಾಡಲ್ಪಟ್ಟಿತು. ಇಲ್ಲಿಂದ ಮುಂದೆ ಬ್ರಿಟಿಷರ ಮೇಲೆ ದೇಶದಲ್ಲಿ ಶಸ್ತ್ರಮಾರ್ಗವಾಗಿ ಯಾವ ಚಳವಳಿಯೂ ನಡೆಸಲು ದಾರಿ ಮುಚ್ಚಿಹೋಯಿತು. ವಿದೇಶಿ ಪ್ರಭುಗಳು ಈ ಜನತೆಯು ತಮಗೆ ಎದುರುಬೀಳದಂತೆ ಇಟ್ಟಿರಲು ಎಷ್ಟೇ ಯುಕ್ತಿಯನ್ನು ತೋರಿದರೂ, ವಿದ್ಯಾವಂತರ ರಾಜಕೀಯ ಚಳವಳಿಯಿಂದಲೂ, ಆರ್ಥಿಕ ಕ್ಷೀಣತೆಯ ದೆಸೆಯಿಂದಲೂ ಪರಾಧೀನತೆಯ ಬಾಧೆ ಮುಂದಟ್ಟಾದ್ದರಿಂದಲೂ ಭಾರತ ಜಾಗೃತಿ ಪಡೆದು ಸ್ವರಾಜ್ಯವನ್ನು ಬಯಸಿ ಅದಕ್ಕಾಗಿ ಹೆಣಗಾಡಲು ಪ್ರವರ್ತಿಸಿತು.

ಕ್ರಿ. ಶ. ೧೮೮೫ರಿಂದ ೧೯೨೦ರವರೆಗೂ ನಡೆದ ರಾಜಕೀಯ ಚಳವಳಿಯಲ್ಲಿ ೧೯೦೫ರವರೆಗಿನ ಘಟ್ಟವು " ಭವತಿ ಭಿಕ್ಷಾಂದೇಹಿ " ಎಂಬ ನೀತಿಯನ್ನು ಅನುಸರಿಸಿದ್ದ ಸುಧಾರಕರ ಯುಗವಾಗಿತ್ತು. ಬ್ರಿಟಿಷರು ಭಾರತೀಯರಿಗಿಂತಲೂ ಸರ್ವಾಂಶಗಳಲ್ಲೂ ಶ್ರೇಷ್ಠರೆಂದೂ, ಅವರನ್ನು ಅನುಕರಣ ಮಾಡಿ, ಅನುಸರಿಸಿ, ಅವರ ಅನುಗ್ರಹದಿಂದ ಮಾತ್ರವೇ ಮುಂದಕ್ಕೆ ಬರ

ಬೇಕೆಂದೂ ಈ ಯುಗದ ಮುಖಂಡರು ಭಾವಿಸಿ ಸುಧಾರಣೆಯ ಚಳವಳಿಯನ್ನು ಹೂಡಿದ್ದರು. ತಮ್ಮ ಬೇಡಿಕೆಗಳನ್ನು ಸರ್ಕಾರಕ್ಕೆ ಅರಿಕೆ ಮಾಡಲು ಕಾಂಗ್ರೆಸ್ ಸಭೆಯು ಹುಟ್ಟಿತು. ಪಾಶ್ಚಾತ್ಯ ವಿದ್ಯಾಭ್ಯಾಸವೂ ಕೈಗಾರಿಕೆಗಳೂ ಉಡುಗೆತೊಡುಗೆ ಆಚಾರಗಳೂ ದೇಶದಲ್ಲಿ ಪ್ರತಿಷ್ಠಿತವಾದವು. ಆದರೆ ಈ ಸುಧಾರಣಾ ಚಳವಳಿಯು ವಿದ್ಯಾವಂತ ಶ್ರೇಣಿಯವರನ್ನು ದಾಟಿ ದೇಶದ ಜನತೆಗೆ ಮುಟ್ಟಲು ಸಮರ್ಥವಾಗಿರಲಿಲ್ಲವಾದ್ದರಿಂದ ಅತಿ ದುರ್ಬಲವಾಗಿತ್ತು.

೧೯೦೫ರಿಂದ ೧೯೨೦ರವರೆಗೆ ಜನಾಂಗವಾದಿಗಳು ರಾಜಕೀಯ ಚಳವಳಿಗೆ ಯಾಜಮಾನ್ಯವನ್ನು ಪಡೆದು, ಸ್ವರಾಜ್ಯವೇ ದೇಶದ ಧ್ಯೇಯವೆಂದು ಸರ್ವತ್ರ ಸಾರಿ, ಕಾಂಗ್ರೆಸ್ಸಿನ ಭವತಿಭಿಕ್ಷಾಂದೇಹಿ ಪದ್ಧತಿಯನ್ನು ತಪ್ಪಿಸಿದರು. ಸರ್ಕಾರದವರು ಜನರ ಇಷ್ಟಕ್ಕೆ ವಿರುದ್ಧವಾಗಿ ವಂಗದೇಶವನ್ನು ವಿಭಜನೆ ಮಾಡಿದ್ದರಿಂದ ವಂಗಜನತೆಗೆ ಬ್ರಿಟಿಷರಲ್ಲಿದ್ದ ಅಭಿಮಾನ ಮೋಹವು ನಷ್ಟವಾಗಿ ಆ ಪ್ರಾಂತ್ಯದಲ್ಲಿ ಪ್ರಚಂಡ ಚಳವಳಿ ಎದ್ದಿತು. ಬಹುಕಾಲದಿಂದಲೂ ಮಹಾರಾಷ್ಟ್ರ ಜನತೆಯನ್ನು ಜಾಗೃತಿಗೊಳಿಸುತ್ತ ಬಂದಿದ್ದ ಲೋಕಮಾನ್ಯ ತಿಲಕರು ಈ ಸಮಯವನ್ನು ಸಾಧಿಸಿ ಅಖಿಲ ಭಾರತ ಜನತೆಯಲ್ಲೂ ಸ್ವರಾಜ್ಯಾಭಿಮಾನವನ್ನು ಕಲ್ಪಿಸಲು ಪ್ರಯತ್ನಪಟ್ಟರು. ಭಾರತೀಯರು ವಿದ್ಯೆ, ಅರ್ಥ, ರಾಜ್ಯಭಾರ ಮೊದಲಾದ ಸಕಲ ವಿಚಾರಗಳಲ್ಲೂ ಸ್ವಾವಲಂಬಿಗಳಾಗಬೇಕೆಂದು ಚಳವಳಿ ಹುಟ್ಟಿತು. ತತ್ಫಲವಾಗಿ, ರಾಷ್ಟ್ರೀಯ ಕೈಗಾರಿಕೆಯ ಸ್ಥಾಪನೆ, ಸ್ವದೇಶೀ ಪುರಸ್ಕಾರ, ವಿದೇಶೀ ಬಹಿಷ್ಕಾರ, ರಾಷ್ಟ್ರೀಯ ವಿದ್ಯಾಭ್ಯಾಸ, ಕಾಶಿ ಮತ್ತು ಅಲಿಘರ ವಿದ್ಯಾಪೀಠ ಸ್ಥಾಪನೆ ಈ ಸಂಬಂಧವಾದ ಚಳವಳಿಗಳು ತಲೆದೋರಿದುವು. ತಾಳ್ಮೆ ತಪ್ಪಿದ ಯುವಕರು ಹತ್ಯಾಸ್ತ್ರವನ್ನು ಅವಲಂಬಿಸಿ ದಾಂಧಲೆ ನಡೆಸಿದರು. ಸರ್ಕಾರದವರು ತಿಲಕ ಪಕ್ಷದವರನ್ನು ರಾಜದ್ರೋಹಿಗಳೆಂದು ಸೆರೆಗೆ ಹಾಕಿ, ಮಂದಪಕ್ಷದವರನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಪ್ರಯತ್ನಿಸಿ, ಮುಸಲ್ಮಾನರು ತಮಗೆ ಹಿಂದೂಗಳಿಗಿಂತಲೂ ಅಧಿಕಪ್ರಿಯರೆಂದು ಸಾರಿ, ನಾನಾವಿಧವಾಗಿ ಈ ಸ್ವರಾಜ್ಯ ಚಳವಳಿಯನ್ನು ಮುರಿಯಲು ಹವಣಿಸಿದರು.

೧೯೧೪ರಲ್ಲಿ ಆರಂಭಿಸಿದ ಐರೋಪ್ಯ ಯುದ್ಧದಿಂದ ಇಂಡಿಯಾ ದೇಶದಲ್ಲಿ ತುಂಬಾ ಜನಜಾಗೃತಿಯುಂಟಾಯಿತು. ಬ್ರಿಟಿಷ ಸರ್ಕಾರವು ಈ ದೇಶದಿಂದ ಯುದ್ಧಕ್ಕೆ ೧೫ ಲಕ್ಷ ಜನರನ್ನು ಕಳುಹಿಸಿ ೩೬೦ ಕೋಟಿ ರೂಪಾಯಿಯನ್ನು ವೆಚ್ಚಿಸಿತು. ಯುದ್ಧದ ದೆಸೆಯಿಂದ ಸರ್ಕಾರದ ಬಿಗಿಯೂ ತೆರಿಗೆಯೂ ದ್ರವ್ಯಗಳ ಬೆಲೆಯೂ ವಿಪರೀತ ಹೆಚ್ಚಿದವು. ಕ್ಷಾಮವು ತಲೆದೋರಿ ೧೯೧೮ರಲ್ಲಿ ಅನೇಕ ಜನರನ್ನು ನಷ್ಟಪಡಿಸಿತು. ೧೯೧೮-೧೯ರಲ್ಲಿ ಲೋಕವ್ಯಾಪಿಯಾಗಿದ್ದ ಶೀತಜ್ವರವು ಕೆಲ ತಿಂಗಳೊಳಗಾಗಿ ಇಲ್ಲಿ ಒಂದು ಕೋಟಿ ಜನರನ್ನು ಆಹುತಿ ತೆಗೆದುಕೊಂಡಿತು. ಯುದ್ಧಸಹಾಯಕ್ಕೆ ಪ್ರತಿಯಾಗಿ ಸ್ವರಾಜ್ಯವನ್ನು ಅನುಗ್ರಹಿಸುವುದಾಗಿ ಆಶೆ ತೋರಿಸುತ್ತಿದ್ದ ಸರ್ಕಾರದವರು ಜನರ ಇದ್ದಬಿದ್ದ ಸ್ವಾತಂತ್ರ್ಯವನ್ನೂ ಹರಣ ಮಾಡಲು ತಂದ ರೌಲೆಟ್ ಮಸೂದೆಯು ಜನರನ್ನು ಅತಿಯಾಗಿ ಕೆರಳಿಸಿತು. ದೇಶದ ಜನತೆಯನ್ನು ಸ್ವರಾಜ್ಯಯುದ್ಧಕ್ಕೆ ಹುರಿದುಂಬಿಸಲು ಯೋಗ್ಯ ಸನ್ನಿವೇಶವು ಒದಗಿತು. ಈ ಕಾರ್ಯವನ್ನು ಕೈಕೊಳ್ಳಲು ಸಮರ್ಥನಾದ ಒಬ್ಬ ಮಹಾವಿಭೂತಿಯು ಇದೇ ಕಾಲದಲ್ಲಿ ಮುಂದೆ ಬಂದನು.

೧೯೨೦ರಿಂದ ಮುಂದಿನ ಕಾಲವನ್ನು "ಸ್ವರಾಜ್ಯಯುದ್ಧಕಾಲ" ವೆನ್ನಬಹುದು. ಮಹಾತ್ಮಾ ಗಾಂಧಿಯವರು ದೇಶದ ಅಶಿಕ್ಷಿತ ಜನತೆಯನ್ನೂ ಕಾಂಗ್ರೆಸ್ಸಿಗೆ ವಶಪಡಿಸಿ, ಆ ಸಭೆಯನ್ನು ಸರ್ಕಾರಕ್ಕೆ ಸಮಾನವಾದ ಪ್ರತಿಪಕ್ಷವಾಗಿ ವೃದ್ಧಿಪಡಿಸಿ ಹೋರಾಡುತ್ತಿರುವರು. ಅಸ್ತ್ರಶಸ್ತ್ರ, ವಿದ್ಯೆ, ಸಂಪತ್ತು, ಅಭ್ಯಾಸ, ವ್ಯವಸ್ಥೆ ಮೊದಲಾದ ಯಾವುದೊಂದು ಉಪಪತ್ತಿಯನ್ನೂ ಹೊಂದಿಲ್ಲದ ಭಾರತದ ಬಡಜನತೆಯು ಲೋಕಾಶ್ಚರ್ಯಕರವಾಗಿ ಬ್ರಿಟಿಷರೊಡನೆ ಕಾದುತ್ತ ದಿನೇದಿನೇ ಪ್ರಬುದ್ಧವಾಗುತ್ತ ಬರುತ್ತಿದೆ. ೧೯೨೧ರ ಅಸಹಕಾರ ಚಳವಳಿಯು ಸಂಪೂರ್ಣವಾಗಿ ಜಯಪ್ರದವಾಗದಿದ್ದರೂ ಸ್ವರಾಜ್ಯಯುದ್ಧವು ಮಾತ್ರ ನಿಲ್ಲದೆ ಪ್ರತಿವರ್ಷವೂ ಹೊಸ ರೂಪವನ್ನೂ ಹೊಸ ಹುರುಪನ್ನೂ ಪಡೆಯುತ್ತ ಚಂಡಸಾಹಸದಿಂದ ನಡೆಯುತ್ತಿರುವದು. ೧೯೩೦ರಲ್ಲಿ ನಡೆದ ರಾಷ್ಟ್ರರಣದಲ್ಲಿ ಬ್ರಿಟಿಷರು ಜಯಿಸಲಾರದೆ ಸಂಧಿಪ್ರಸ್ತಾಪವನ್ನೆತ್ತಿ ತಲೆಬಾಗಿಸಬೇಕಾಯಿತು. ಈ ಸ್ವರಾಜ್ಯಯುದ್ಧವು ಇದುವರೆಗೂ ಜಯಪ್ರದವಾಗಿಲ್ಲ. ಹಿಂದೂ-ಮುಸಲ್ಮಾನರಿಗೂ

ದ್ವೇಷ, ತೀವ್ರಪಕ್ಷದವರಿಗೂ ಮಂದಪಕ್ಷದವರಿಗೂ ವಿರಸ, ಹಣಗಾರರಿಗೂ ಕೂಲಿಕಾರರಿಗೂ ವೈಷಮ್ಯ, ಕೃಷೀಕರಿಗೂ ಜಮೀನ್ದಾರರಿಗೂ ವೈರ, ಸಾಮಂತರಾಜರುಗಳಿಗೂ ಪ್ರಜಾಸ್ವಾತಂತ್ರ್ಯಕ್ಕೂ ವಿರೋಧ, ಬ್ರಾಹ್ಮಣರಿಗೂ ಬ್ರಾಹ್ಮಣೇತರರಿಗೂ ಕಲಹ, ಉತ್ತಮ ಜಾತಿಯವರಿಗೂ ಪಂಚಮರಿಗೂ ಅಸಮಾಧಾನ, ಅಲ್ಪಸಂಖ್ಯಾಗಣಗಳಾದ ಸಿಖ, ಕ್ರೈಸ್ತ, ಪಾರಸೀಕ, ಮಹಮ್ಮದೀಯರುಗಳಿಗೂ ಬಹುಸಂಖ್ಯಾಗಣಗಳಿಗೂ ದ್ವಂದ್ವ, ಕ್ಷಾತ್ರ ಸತ್ವಸಂಪನ್ನ ಜನಕುಲಗಳಿಗೂ ಕ್ಷಾತ್ರಸತ್ವಹೀನ ಜನಕುಲಗಳಿಗೂ ಭೇದ-ಭಾವ ಮೊದಲಾದ ವ್ಯತ್ಯಾಸಗಳಿಂದ ಮೂರನೆಯವರು ಲಾಭಪಡೆಯುತ್ತ ಭಾರತೀಯರಿಗೆ ಸ್ವರಾಜ್ಯವನ್ನು ತಪ್ಪಿಸಿರುವರು. ಆದರೆ ಭಾರತ ಜನತೆಯ ಸ್ವರಾಜ್ಯಾಭಿಮಾನವೂ ಸ್ವಾತಂತ್ರ್ಯೇಚ್ಛೆಯೂ ಈ ಪ್ರತಿಬಂಧಕಗಳನ್ನೆಲ್ಲಾ ನುಚ್ಚುನೂರಾಗಿ ಒಡೆದು ಧ್ವಂಸಮಾಡುತ್ತ ಬರುತ್ತಿವೆ. ಈ ಯುದ್ಧವು ೧೯೨೦ರಲ್ಲಿ ಅತ್ಯುಗ್ರರೂಪದಲ್ಲಿ ಹುಟ್ಟಿ ಅದ್ಯಾಪಿ ನಡೆಯುತ್ತಿದೆ.

ಈ ಜಾಗ್ರತಿಯು ಕೇವಲ ರಾಜಕೀಯ ಮಾತ್ರವಾದುದಾಗಿಲ್ಲ. ಧಾರ್ಮಿಕ ಮತ್ತು ಸಾಮಾಜಿಕ ವಿಚಾರಗಳಲ್ಲಿ ಸಹ ಜನರ ಮನೋಭಾವದಲ್ಲಿ ಪ್ರಳಯಸದೃಶವಾದ ಪರಿವರ್ತನೆಯುಂಟಾಗಿದೆ. ಭಾರತ ಸ್ತ್ರೀ ಜಾತಿಯು ದೇಶಸೇವೆಯಲ್ಲಿ ಪುರುಷರಿಗೆ ಸಮಾನವಾಗಿ ಕೆಲಸ ಮಾಡಲು ಪ್ರಾರಂಭಿಸಿದೆ. ಹಿಂದೀ ಭಾಷೆಯು ಈಗಲೇ ಜನಾಂಗ ಭಾಷೆಯಾಗಿ ಪರಿಣಮಿಸಿದೆ. ಸ್ವದೇಶೀ ವಸ್ತುಪುರಸ್ಕಾರವು ಜನರ ನಿತ್ಯ ವ್ರತವಾಗುತ್ತಿದೆ. ದೇಶಭಕ್ತಿಯೂ ಭಾರತ ದೇಶದ ಹೆಸರನ್ನು ಲೋಕದಲ್ಲಿ ಮುಂದೆ ತರುವ ಆಕಾಂಕ್ಷೆಯೂ ದೇಶದ ಜನತೆಯ ಜಡತನವನ್ನು ಹುಟ್ಟಡಗಿಸಬೇಕೆಂಬ ಛಲವೂ ಸರ್ವತ್ರ ರೂಢಮೂಲವಾಗುತ್ತಿವೆ. ರಾಮಕೃಷ್ಣ ಪರಮಹಂಸ, ವಿವೇಕಾನಂದ, ಮಹಾತ್ಮಾ ಗಾಂಧಿ, ಜಗದೀಶಚಂದ್ರ ಬಾಸು, ರಾಮನ್, ರಾಮಾನುಜಂ, ರವೀಂದ್ರನಾಥ, ಅವನೀಂದ್ರನಾಥ ಮೊದಲಾದವರ ಖ್ಯಾತಿಯು ಲೋಕದಲ್ಲಿ ಭರತಖಂಡದ ಪೂಜ್ಯತೆಯನ್ನು ಹೆಚ್ಚಿಸಿದೆ.

ಸಂಪೂರ್ಣ.

# ಪರಿಶಿಷ್ಟ.

## (೧) ನಾಮನಿಘಂಟು.

[ಈ ಗ್ರಂಥದಲ್ಲಿ ಉಪಯೋಗಿಸಿರುವ ಹೆಸರುಗಳ ಉಚ್ಚಾರಣೆ ಮತ್ತು ರೂಪನಿಷ್ಪತ್ತಿಯ ವಿಚಾರವಾಗಿ ಕೆಲ ಟಿಪ್ಪಣಿಗಳನ್ನು ಕೊಟ್ಟಿದೆ.]

Africa = ಆಫ್ರಿಕೆ—ಆಫ್ರಿ ಎಂಬ ಜನರ ದೇಶ.

Afganistan = ಅಫಘನಿಸ್ಥಾನ—ಸಾಉಲನ ಮಗ ಅಫಘನನ ಸಂತಾನದ ದೇಶ ಎಂದು ಕಥೆ. ಆದರೆ ನಿಜವಾದ ಮೂಲರೂಪ—ಅಯೋಘನ (Aoghan).

Aleppo = ಅಲೆಪ್ಪೊ (ಅರಬ)—ಹಲೆಬ್ (= ಹಾಲು) ಎಂಬುದರ ರೂಪಾಂತರ. ಹಲೆಬ ನಗರ.

Arab = ಓಬ್ರಿ, ಮೂಲರೂಪ—ಅರಬ್ ಅಥವಾ ಇರೆಬ್ = ಪಶ್ಚಿಮ, ವ್ಯಾಪಾರ, ವ್ಯಾಪಾರದ ಸರಕು.

Bagdad = ಬಗದಾದ = ಭಗ (= ದೇವರು) ಪುರ.

Bhutan = ಭೋಟಾಂತ—ಭೋಟ ದೇಶದ ಅಂತ್ಯಭಾಗ.

Basra = (ಮೂಲ) ಬಸ್ಸೋರ,

Bulgar = ಬುಲ್ಗಾರ—ವಲ್ಗ (Volga) ಎಂಬ ನದಿ ಹೆಸರಿನ ರೂಪಾಂತರ.

Burma = (ಮೂಲ) ಬ್ರಹ್ಮ.

Dalai Lama = ದಲಾಯಿ—ಸಮುದ್ರ, ಲಾಮ—ಗುರು. ವಿದ್ಯಾಸಾಗರನಾದ ಗುರುದೇವ.

Druses = (ಮೂಲ) ಅಲ್ ದುರುಜಿ (Al Duruzi) ಎಂಬವನ ಮತಾನುಯಾಯಿಗಳು.

Egypt= ಇಗುಪ್ತ. ಪ್ತಃ (Ptah) ಎಂಬ ದೇವತೆಯು, ಹಿಕು= ಗೃಹ. ನೀಲಕಂಠನ ಭಾರತ ವ್ಯಾಖ್ಯಾನದಲ್ಲಿ ಇಗುಪಥ ಎಂಬ ರೂಪವು ಕಂಡುಬರುವದು.

Japan= ಚೀಣಾ ಮೂಲರೂಪ. ನಿತ್-ಪೋನ್ (Nit-Pon)= (ನಿತ್—ಸೂರ್ಯ, ಪೋನ್—ಉದಯ) ಉದಯಿಸುವ ಸೂರ್ಯ. ಇದನ್ನು ಚೀಣರು ನಿ-ಪೆನ್ ಎಂದೂ ಮಂಗೋಲರು ಜಿ-ಪೆನ್ ಎಂದೂ ಉಚ್ಚರಿಸತೊಡಗಿದರು. ಜಿ-ಪೆನ್ ಎಂಬುದು ಕಡೆಯಲ್ಲಿ ಜಪಾನ್ ಎಂದಾಗಿದೆ, ಜಪಾನರು ಇನ್ನೂ ನಿಪ್ಪೋನ (Nippon) ಎಂದು ತಮ್ಮನ್ನು ಕರೆದು ಕೊಳ್ಳುತ್ತಿರುವರು.

Jew= ಜೇಕಬನ ನಾಲ್ಕನೆಯ ಮಗನಾದ ಯಹೂದ (ಜಹೂದ—ಜೂದ) ನ ಸಂತಾನರು.

Magyar= ಮಗದ (ಮೂಲ—Moger. Meger).

Mongol= ಮಂಗ್—ಧೀರ, ಧೀರಪುರುಷರು.

Osmanli } = ಅಥ್—ಮನ್ (Aihoman) ಎಂಬುದರ
Othoman } ರೂಪಾಂತರ.

Palestine= ಫ್ಲಿಸ್ತಿ ಎಂಬ ಜನರ ದೇಶ. ಫ್ಲಿಸ್ತ ಎಂಬುದು ಲಾಟೀನಿನಲ್ಲಿ ಪಾಲೆಸ್ಟೈನ್ ಎಂದಾಗಿದೆ.

Pathan= ಪಠಾಣ. ಪಖ್ತೂನ್ ಅಥವಾ ಪಷ್ತೂನ್ (ಏಕವಚನ)— ಪಖ್ತನ ಅಥವಾ ಪಷ್ತನ (ಬಹು)= ಪಷ್ತು ಅಥವಾ ಪಖ್ತು, ಭಾಷೆಯನ್ನಾಡತಕ್ಕವರು.

Portugal= ಗಲ್ಲಿಶ್ಯರ—ಗಲ್ಲ ಎಂಬ ರೇವುನಗರದಿಂದ ಈ ದೇಶದ ಹೆಸರು.

Russia= ಮೊದಲನೆಯ ಅಕ್ಷರಕ್ಕೆ ಋ ಉಚ್ಚಾರವಿದೆ. ಆದ್ದರಿಂದ ಇದು ಋಷಿಯ ಎಂದಾಗುವದು. ಋಷ್ಯಕ ಎಂದು ಇದರಿಂದ ಉದ್ಧರಿಸಿಕೊಳ್ಳಬಹುದು. ಫ್ರೆಂಚರು ಋಷೇ (Russe)

ಎನ್ನುವರು. ಮೂಲರೂಪ—ಫಿನ್ನ ಭಾಷೆಯ ರುಸ್ರೋಟ್ಸಿ (Ruost) ಅಥವಾ ರುಸ್ಸೋಟ್ಸಿ. ಇದರಿಂದ ರುಸ್ಸ ಅಥವಾ ರುಸ್ಸಕ ಎಂದೂ ಉಚ್ಚರಿಸಿಕೊಳ್ಳಬಹುದು.

Siberia = ಮೂಲ—ಒಂದೆ ರಾಜಧಾನಿಯಾಗಿದ್ದ ಶಿಬಿರ್ (Sibir) ಎಂಬುದರ ದೇಶ.

Siracen = ಸಾರಸೆನ. ಮೂಲ—ಷಾರ್ಕಿ (Sharki) = ಪ್ರಾಚ್ಯರು.

Slav = ಮೂಲಾರ್ಥ—ಪ್ರಸಿದ್ಧರು, ಪ್ರಖ್ಯಾತರು. ಈ ಅರ್ಥವುಳ್ಳ ಶ್ರವಸ್ ಎಂಬ ಸಂಸ್ಕೃತ ಪದವು ಈ ಹೆಸರಿಗೆ ಮೂಲವೆಂದು ಒಬ್ಬ ಪಂಡಿತನು ಹೇಳುತ್ತಾನೆ. ಆಗ ಇವರ ಹೆಸರು ಶ್ರವಸ ಎಂದಾಗುವುದು. ಮತ್ತೆ ಕೆಲವರು ಸ್ಲೋವೊ = ಭಾಷೆ ಎಂಬ ದರಿಂದ ಸ್ಲಾವ ಎಂದು ಉಚ್ಚರಿಸುವರು. ಶ್ಲವ ಎಂದು ಇಟ್ಟುಕೊಂಡರೆ ಉಭಯ ಮೂಲರೂಪಕ್ಕೂ ಅಳವಡುವುದು

Semitic = ಶೆಮ ಅಥವಾ ಶ್ಯಾಮನ ವಂಶೀಕರು.

Shogun = ಶೊ = ಸೇನಾಪತಿ, ಗುನ್ = ಸೇನೆ; ಶೋಗುನ = ಪ್ರಧಾನ ಸೇನಾಪತಿ.

Siam = ಶಯಾಮ (Sayama) ಎಂಬುದರ ರೂಪಾಂತರ.

Tajik = ಯುದ್ಧಕಾರ್ಯಕ್ಕಾಗಿ ಶಿಬಿರಗಳಲ್ಲಿ ವಾಸಿಸುತ್ತಿದ್ದವರು ತುರುಕರೆಂದೂ ಮನೆಯಲ್ಲಿ ಹಿಂದುಳಿದ ಜೋಡಿಗಳು ತಾಜಿಕರೆಂದೂ ಹೆಸರು ಪಡೆದರು. ವೃತ್ತಿ ಮತ್ತು ಗುಣಭೇದದಿಂದ ಈಗ ಜನಭೇದ ಹುಟ್ಟಿದೆ.

Tartar = ತಾತ (Tata) ಎಂಬುದು ಮಂಗೋಲರ ಅತಿ ಪ್ರಾಚೀನ ಹೆಸರು. ಅರ್ = ಜನ. ಗ್ರೀಕರು ತಮ್ಮ ಪುರಾಣ ಕಥೆಯಲ್ಲಿ ಬರುವ ಟಾರ್ಟರಸ್ ಎಂಬುವನ ಹೆಸರಿಗೆ ಹೋಲಿಸಿ ಇವರನ್ನು ಟಾರ್ಟರ್ ಎಂದು ಕರೆದರು. ಅನೇಕರು ತಾತರ್ ಎಂದೇ ಹೇಳುತ್ತಿರುವರು.

Tibet = ಬೋಟ ಎಂಬ ಹೆಸರು ಸಂಸ್ಕೃತದಲ್ಲಿದೆ. ಚೀನಾ ಭಾಷೆಯ ತಿಯು—ಬೋಟ (Tou-Bod) = ಉತ್ತರ ಬೋಟ ಎಂಬುದು ಟಿಬೆಟ್ ಎಂದಾಗಿದೆ. ನಾವು ಬೋಟ, ಬೋಟಕ ಎಂಬ ಹೆಸರುಗಳನ್ನೇ ಉಪಯೋಗಿಸಬಹುದು.

Turk = ಟರ್ಕಮಾನ. ಸಂಸ್ಕೃತದಲ್ಲಿ ಇದು ತುರುಷ್ಕ ಎಂದಾಗಿದೆ.

---

## (೨) ಆಧಾರ ಗ್ರಂಥಗಳು.

L. Stoddard—The New World of Islam 1921.

M. Herricon—Asia Reborn 1928.

Sykes—Persia Vol. II, 1925.

H. G. Franks—The Riddle of the Orient 1921.

M. Epstein (Ed.)—The Annual Register, New Series 1919-1929.

Woodhead (Ed.)—China Year Book 1923

G. P. Gorch—Nationalism 1920.

Prothers (Ed.)—Peace Hand Books (Foreign Office): Vol. XII China, Japan, Siam 1917.

Sir Edwin Pears—Life of Abdul Hamid 1917.

# ಶುದ್ಧಾಶುದ್ಧ ಪತ್ರ.

(ಸ್ವಯಂವ್ಯಕ್ತವಾದ ತಪ್ಪುಗಳನ್ನು ತಿದ್ದಲು ಪ್ರಯತ್ನಿಸಿರಿ).

| ಪುಟ | ಪಂಕ್ತಿ | ಅಶುದ್ಧ | ಶುದ್ಧ |
|---|---|---|---|
| ೨ | ೮ | ಐರೋಪ್ಯದಿಂಪ | ಐರೋಪ್ಯದಿಂದ |
| ೪ | ೩ | ಬಡೆದು | ಒಡೆದು |
| ೭ | ೬ | ಕಾಲನ್ನು | ಪಾಲನ್ನು |
| ೧೦ | ೨೦ | ಬೀನಾ | ಚೀನಾ |
| ೧೧ | ೨೨ | ಕಲೆಕಳಿಸಿ | ಹುರಿಗೊಳಿಸಿ |
| ೧೩ | ೧೦ | ತಮ್ಮ | ನಮ್ಮ |
| ,, | ೧೧ | ಪಮ್ಮದ | ವನ್ನು |
| ೨೦ | ,, | ಪ್ರಗತಿಕರದೂ | ಪ್ರಗತಿಪರರೂ |
| ೨೨ | ೩ | ಜಾಮೂಡ | ಜಾಮೀನ |
| ೨೩ | ೨೩ | ತಗಣಿ | ತಿಗಣೆ |
| ,, | ೨೫ | ಗಂಧಾಂತರ | ಗಂಡಾಂತರ |
| ೨೪ | ೩ | ಅಮ | ಅವು |
| ,, | ೬ | ಉಪಾಸನೆಯೋ | ಉಪಾಸನೆಯು |
| ೨೭ | ೭ | ಜನನ್ನು | ಜನಸಮೂಹವನ್ನು |
| ,, | ೨೪ | ತಲಾಕ್ | ತಲಾಖ್ |
| ,, | ೨೭ | ಜಮಾತ್ | ಜಮಾಲ್ |
| ೩೪ | ೩ | ಅಪರಿಪ್ಕೃತಾನೇ | ಅಪರಿಷ್ಕೃತಾನೇ |
| ೩೫ | ೧೧ | ಡೊಡೆದು | ಒಡೆದು |
| ೩೬ | ೪ | ಸಾಯುಕ | ಸಹಾಯಕ |
| ,, | ೯ | ಚತಿಚಿಕಿತ್ಸ | ಚಿಕಿತ್ಸ |
| ೩೯ | ೧೨ | ಮುಂದ | ಮುಂದೆ |

| ಪುಟ | ಪಂಕ್ತಿ | ಅಶುದ್ಧ | ಶುದ್ಧ |
|---|---|---|---|
| ೩೨ | ೨೦ | ಮುಂಡು | ಮುಕ್ತಿ |
| ,, | ೨೫ | ಸ್ಪೈಬುಲ್ಲಾ, ಸ್ಟೈಯುದ | ಫೈಬುಲ್ಲಾ, ಅಬ್ದುಲ್ಲಾ, ಸೈಯುದ |
| ೩೩ | ೨೦, ೨೨ | ಇಪಾಖಿ | ಇಲಾಕೆ |
| ೩೪ | ೧ | ಇಬೀನ | ಇಬಿನ್ |
| ,, | ೪ | ತಡೆ | ತಡೆ |
| ೩೬ | ೧೪ | ಕಪಮ | ಕುಲ |
| ,, | ೨೪ | ಬಾಬ | ಬಾಬು |
| ೩೮ | ೩ | ದಾಸ | ದಾಸ್ಯ |
| ,, | ೧೨ | ಜೇಟಿ | ಜೊತೆ |
| ೪೦ | ೧೩ | ಸಾತಂಗ | ಸಾಂತುಂಗ |
| ೪೧ | ೪ | ಮುಷ್ಕರ | ಮುಸ್ಕಿರ |
| ,, | ೨೫ | ಅಶ್ರಿತ | ಆಶ್ರಿತ |
| ,, | ೨೭ | ಸಲ್ಲಿಸುವರು | ಸಲ್ಲಿಸಿದ್ದರು |
| ೪೨ | ೧೦ | ಕಪಂಗಯುಷ್ಟು | ಕಪಂಗಯುಷ್ಟು |
| ೪೩ | ೯ | ಬಂಧು | ಬಂಧು |
| ೪೪ | ೩ | ಕ್ಷ್ಣಕ | ಕ್ಷ್ಣಕ್ಷ |
| ,, | ೧೫ | ಮಾತುತ್ತಿರುವವರು | ಮಾತುತ್ತಿದ್ದವರು |
| ೪೫ | ೧೧ | ಸಾಸಿಂಗ | ಸಾಂಕಿಂಗೆ |
| ,, | ೮ | ಪೇಕಾರ | ಹೆತಾಳು |
| ೪೮ | ೫ | ಕೌಬಿನ | ಕೌಬಿನ್ |
| ೫೧ | ೭ | ಶ್ರೀಮಯುದ | ಶ್ರೀಮಯುದ |
| ೫೩ | ೧೫ | ಸಮಂತಾಧಿಕಾರ | ಸಮ್ಯಾತಾಧಿಕಾರ |
| ೫೪ | ೧೨ | ಹೊಂದಿನ | ಹೊಂದಲು ಪಡದಿಸು |
| ೫೫ | ೨೦ | ಸಿಂಗಾಪುರ | ಸಿಂಗಪೂರ |
| ೫೬ | ೫ | ಸಂಘಗೆಳ್ಳು | ಸಂಘಗಳಲ್ಲಿ |

# ಶುದ್ಧಾಶುದ್ಧ ಪತ್ರ.

| ಪುಟ | ಪಂಕ್ತಿ | ಅಶುದ್ಧ | ಶುದ್ಧ |
|---|---|---|---|
| ,, | ೭ | ಸ್ವಾಂತ್ರ್ಯ | ಸ್ವಾತಂತ್ರ್ಯ |
| ೫೪ | ೧೦ | ಜೋಡಿಸಿದರು | ಜೋಡಿಸಿದರು |
| ೬೩ | ೧೩ | ಚಿತ್ರದ | ಚಿತ್ರಲ |
| ,, | ೬೩ | ಕಾಲ | ಕಾಲ |
| ೬೪ | ೩ | ಸಕಲವನೆ | ಸಕಲವರಿಗೂ |
| ,, | ೧೭ | ನಮ್ಮ | ನಿಮ್ಮ |
| ೬೭ | ೧೭ | ನಗರದಲ್ಲಿ | ನಗರದಲ್ಲೂ |
| ೭೧ | ೧೯ | ಸುದುವು | ಮೊದಲು |
| ೭೨ | ೪ | ಇಲಾಖೆಂಬು | ಇಲಾಖೆಯು |
| ,, | ೧೬ | ಮುಫತ್ | ಮುಫತ್ |
| ೭೭ | ೯ | ಯುಶಗತ | ಯೂಶತ |
| ೮೧ | ೧೪ | ಅಲ್ ಹಸ | ಅಲ್ ಹಸ |
| ೧೦೨ | ೨ | ಸಮದ | ಸಮುದ್ರ |
| ೧೦೪ | ೨ | ಕೆರಳಿಸಿ | ಕೆರಳಿಸಿ |